ದಸರಾ-೮೩

ನೆನಪಿನ ಸಂಚಿಕೆ





ಸೋಮನಾಥಪುರ ದೇವಾಲಯ

ದಸರಾ-೮೫, ದಸರಾ ಉತ್ಸವಗಳ ನೆನಪಿನ ಸಂಚಿಕೆ
ಸಂಪಾದಕ – ಶ್ರೀಕೃಷ್ಣ ಆಲನಹಳ್ಳಿ
ಪ್ರಕಾಶಕರು – ಕರ್ನಾಟಕ ಸರ್ಕಾರ

ದಸರಾ ನೆನಪಿನ ಸಂಚಿಕೆಯ ಸಮಿತಿ :

ಅಧ್ಯಕ್ಷರು : ಪಿ. ಪಿ. ಪ್ರಭು, ಐ.ಎ.ಎಸ್.

ಸಹ-ಅಧ್ಯಕ್ಷರು : ಪ್ರೊ. ಅ. ಸುಂದರ

ಸದಸ್ಯರು : ಕೆ. ಎಂ. ಶಿವಕುಮಾರ್. ಐ.ಎ.ಎಸ್.
ಹೆಚ್. ಶಿವರಾಮು
ವಿಜಯಕುಮಾರ್
ರಾಬಿನ್ ಮೋಸೆಸ್
ಡಾ. ಲಲಿತಮ್ಮ
ಆರ್ಯಾಂಭ ಪಟ್ಟಾಭಿ
ಡಾ. ಚಂದ್ರಶೇಖರ್
ಎಂ. ರಾಜು
ಮಂಟೆಲಿಂಗಯ್ಯ
ಚಿಕ್ಕರಾಮಯ್ಯ
ಎ. ಎಲ್. ಗೋಪಾಲಕೃಷ್ಣ
ಎ. ಎನ್. ಶ್ರೀನಿವಾಸಮೂರ್ತಿ

ಬೆಲೆ : ಐದು ರೂಪಾಯಿಗಳು

ವಿನ್ಯಾಸ : ರಾ. ಸೂರಿ

ಅಕ್ಷರ ಜೋಡಣೆ : ಮೈಸೂರು ವಿಶ್ವವಿದ್ಯಾಲಯ ಮುದ್ರಣಾಲಯ
ಮುದ್ರಣ : ಅಶ್ವಥ್ ಪ್ರಿಂಟರ್ಸ್, ಬೆಂಗಳೂರು

ಮುನ್ನುಡಿ :

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ನಮ್ಮ ಈ ಸುಂದರ ನಗರ ಮೈಸೂರು. ಇಲ್ಲಿನ ದಸರಾ ಉತ್ಸವಗಳು ಲೋಕ ವಿಖ್ಯಾತವಾದವಷ್ಟೇ ಅಲ್ಲ, ಇವು ನಮ್ಮ ಘನ ಸಂಸ್ಕೃತಿಯ ಪ್ರತೀಕಗಳು. ಮೈಸೂರಿನ ಹೆಸರೆತ್ತಿದರೆ ಸಾಕು-ತಟ್ಟನೆ ದಸರಾ ಉತ್ಸವಗಳ ಸಂಭ್ರಮ, ಸಡಗರಗಳು ಕಣ್ಣುಕಟ್ಟುತ್ತವೆ. ಬಹಳ ಕಾಲದಿಂದ ಮೈಸೂರ ಅರಸರು ಇದನ್ನು ವೈಭವದಿಂದ ಆಚರಿಸುತ್ತಾ ಬಂದಿದ್ದಾರೆ. ಇದಕ್ಕೂ ಮುಂಚೆ ವಿಜಯನಗರದ ಸುವರ್ಣ ದಿನಗಳಲ್ಲಿ ಈ ಹಬ್ಬ ವರ್ಣಿಸಲಾಗದಷ್ಟು ವಿಜೃಂಭಣೆಯಿಂದ ಆಚರಿಸುತ್ತಿದ್ದುದನ್ನು ನಾವು ಓದಿ ತಿಳಿದಿದ್ದೇವೆ.

ನವರಾತ್ರಿಯ ದಿನಗಳು ಬರುತ್ತಿದ್ದಂತೆ ಹಿಂದಿನ ಕಾಲದಲ್ಲಿ ಮೈಸೂರು ನಗರ ಒಂದು ಕಿನ್ನರಲೋಕವಾಗಿಬಿಡುತ್ತಿತ್ತು. ದೀಪಾಲಂಕೃತಗೊಂಡು ಜಗಜಗಿಸುವ ಅರಮನೆ, ಮಹಾರಾಜರ ದರ್ಬಾರು, ನೃತ್ಯ, ಸಂಗೀತ ಹಾಗೂ ಜಂಬೂಸವಾರಿಯ ಮನೋಹರ ಮೆರವಣಿಗೆ ಇತ್ಯಾದಿ–ಇವೆಲ್ಲಾ ದೇಶ ವಿದೇಶಗಳ ಜನರ ಮನಸ್ಸನ್ನು ಸೂರೆಗೊಳ್ಳುತ್ತಿದ್ದವು. ಮೈಸೂರು ಕಲೆ, ಸಾಹಿತ್ಯ ಮತ್ತು ಸಂಗೀತಗಳ ತವರುಮನೆಯಾಗಿತ್ತು. ಇದನ್ನು ಪರಿಪೂರ್ಣವಾಗಿ ಬೆಳೆಸಲು ಮೈಸೂರ ಒಡೆಯರು ಕೊಟ್ಟ ಪ್ರೋತ್ಸಾಹ ಅದ್ಭುತವಾದದ್ದು.

ಇದೆಲ್ಲಾ ಕೇವಲ ಗತ ಇತಿಹಾಸವಾಗಿ ಹೋಗಲು ಬಿಡದೆ ನಮ್ಮ ಕರ್ನಾಟಕ ಸರ್ಕಾರ ಇದನ್ನು ಪುನರುಜ್ಜೀವನಗೊಳಿಸಿದೆ. ದಸರಾ ಉತ್ಸವವನ್ನು ನಮ್ಮ ರಾಜ್ಯದ ನಾಡಹಬ್ಬವನ್ನಾಗಿ ಆಚರಿಸುತ್ತಿದೆ. ಈ ಸಂದರ್ಭದಲ್ಲಿ ಒಂದು ನೆನಪಿನ ಸಂಚಿಕೆಯನ್ನು ತರುತ್ತಿದ್ದೇವೆ. ಈ ಸಲದ ಈ ಸಂಚಿಕೆ ತುಂಬಾ ಅರ್ಥಪೂರ್ಣವಾಗಿದೆ. ಕರ್ನಾಟಕದ ನಾಡು-ನುಡಿ ಹಾಗೂ ಸಂಸ್ಕೃತಿಯ ಬಗ್ಗೆ ಕನ್ನಡದ ಪ್ರತಿಷ್ಠಿತ ಲೇಖಕರು ಬೆಲೆಯುಳ್ಳ ಲೇಖನಗಳನ್ನು ಬರೆದಿದ್ದಾರೆ. ಸಹೃದಯರು ಇದನ್ನು ಪ್ರೀತಿಯಿಂದ ಸ್ವಾಗತಿಸುವರೆಂದು ನಂಬಿದ್ದೇನೆ.

ಸಿ. ಮುನಿಸ್ವಾಮಿ
ವಿಭಾಗಾಧಿಕಾರಿಗಳು
ಅಧ್ಯಕ್ಷರು, ದಸರಾ ಉತ್ಸವ ಸಮಿತಿ

ಪರಿವಿಡಿ

ಮೈಸೂರು ಮಕ್ಕಳು

ಬಿ. ಎಂ. ಶ್ರೀಕಂಠಯ್ಯ

ನಿಮ್ಮ ನಾಡಾವುದು ?
ಮೈಸೂರು.
ನಿಮ್ಮೂರದಾವುದು ?
ಮೈಸೂರು.
ಕನ್ನಡದ ಕಣ್ಣದು,
ಮೈಸೂರು.
ನಾಲುಮಡಿ ಕೃಷ್ಣನ
ಮೈಸೂರು.

ಅಲ್ಲೆಲ್ಲಿ ನೋಡಿದರು ಬಾನಕರೆಯಲಿ ಹದುಗಿ ಕಾರಮುಗಿಲಂತಿಹುವು ಬೆಟ್ಟ ಹಬ್ಬಿ ;
ತೆರೆ ಎದ್ದು ಬಿದ್ದು ಬಹ ಬಯಲಲ್ಲಿ ಹಳ್ಳಿಗಳು, ತಾವರೆಯ ಕೆರೆ, ತೋಟ, ಹೊಲದ ಹಸುರು
ಕಾಡಿನಲಿ ನುಸಿಯುತ್ತ, ಕಲ್ಲಿನಲಿ ಮೊರೆಯುತ್ತ, ಮರಳಿನಲಿ ಸುಳಿಸುಳಿದು, ಸರಿಯ ದುಮುಕಿ
ಪಯಿರುಗಳ ಬದುಕಾಗಿ, ಹೊಳಲುಗಳ ಬೆಳಕಾಗಿ; ಕಣ್ಣುಗಳ ಬೆರಗಾಗಿ ಹರಿವ ಹೊನಲು.
ಅಲ್ಲಿ ಅಲೆ ಅಲೆಯಾಗಿ ಬಂದು, ನೆಲೆನೆಲೆಯಾಗಿ ನಿಂದು, ಹಲತೆರದಿಂದ ನುಡಿದು, ನಡೆದು,
ಕಡೆಗೆ ನಾಡೊಂದೆಂದು, ದೊರೆಯೊಬ್ಬ ನಮಗೆಂದು, ಬಾಳ ಬೆಲೆ ಹುದುವೆಂದು ಕಲಿತು, ಕಲೆತು,
ಜಾಣಿನಲಿ, ಚೆಲುವಿನಲಿ, ಸೊಗಸಿನಲಿ, ನಯದಲೌದಾರ್ಯದಲಿ, ಕಾರ್ಯದಲಿ ಕಳಶವೆನಿಸಿ,
ಮೆರೆಯುತಿಹ ಜನವ ನಾನೇನೆಂಬೆ, ಎಂತು ನಾ ಕನ್ನಡಿಗರೈಸಿರಿಯ ಬಣ್ಣಿಸುವೆನು.

ಚಿನ್ನದ ನಾಡದು,
ಮೈಸೂರು.
ಗಂಧದ ಗುಡಿಯದು,
ಮೈಸೂರು.
ವೀಣೆಯ ಬೆಡಗದು,
ಮೈಸೂರು.
ನಾಲುಮಡಿ ಕೃಷ್ಣನ
ಮೈಸೂರು.

ಅಲ್ಲೊಬ್ಬ ನಮಗಿಹನು ; ನಾಯಕನು, ಭಕ್ತಿಯಲಿ ನಿಲುನಿಲುಕಿ ಕಣ್ತುಂಬ ನೋಡುತಿರಲು,
ಆನೆಯಂಬಾರಿಯಲಿ ನಸುನಗೆಯನಿಕ್ಕೆಲಕೆ ಬೀರಿ, ಜನರಕ್ಕರೆಯನುಕ್ಕಿಸುವನು.
ಧೀರನಾತನು ; ತುಂಬುಗಾಂಭೀರ್ಯದಲಿ ಸತ್ಯವನೆ ಎತ್ತಿ ನಿಲಿಸುವನು ಪ್ರಜೆಯ ತಂದೆ ;
ಮರೆತಂ ತನ್ನನು ರಾಜ್ಯಸೇವೆಯಲಿ, ಸಲಿಸುವನು ಧರ್ಮವನು ರಾಜರ್ಷಿ ಕರ್ಮಯೋಗಿ.
ಬನ್ನಿ ಕೆಳೆಯರ, ನಮ್ಮ ಬಾಳಿಕೆಯ ಕಾಣಿಕೆಯನೊಪ್ಪಿಸುವ, ಕೈಕೊಳುವ ದೊರೆಯ ಗುರಿಯ:
ನೋಂಪಿಯಾತನದು—ತನ್ನರಮನೆಯ ಹಸಗೆಯ್ದು ಬೆಳಗಿದಂತೆಯೆ, ಬೆಳಗಿ ಊರ, ನಾಡ,

ಹಸಗೆಯ್ವ ಹೊಸಗೆಯ್ವೆನೆಂಬೊಲುಮೆ ; ನಾವೆಲ್ಲರಾ ನಾಯಕನ ದಳದಿ ದೀಕ್ಷೆಪಡೆದು,
ವಿೂರಿ ಬಳಸುವ ಬನ್ನಿ ಬುದ್ಧಿಯನು, ಶ್ರದ್ಧೆಯನು ಕನ್ನಡಿಗರೈಸಿರಿಯ ಬೆಳೆಯ ಬೆಳಸಿ,

ಬೆಳೆಯುವ ನಾಡದು,
ಮೈಸೂರು.
ಇಳೆಯ ಮಾದರಿಯದು,
ಮೈಸೂರು.
ಕನ್ನಡಿಗನುಸಿರದು,
ಮೈಸೂರು.
ನಾಲುಮಡಿ ಕೃಷ್ಣನ
ಮೈಸೂರು.



ನಾಲ್ವಡಿ ಕೃಷ್ಣರಾಜ ಒಡೆಯರು ಯುವರಾಜರ ಜೊತೆ

ಮೈಸೂರು ಅರಸುಮನೆತನ ನಡೆದುಬಂದ ದಾರಿ

ಶ್ರೀಕೃಷ್ಣ ಆಲನಹಳ್ಳಿ

ಆಗ ನಾನಿನ್ನೂ ತುಂಬ ಚಿಕ್ಕ ಹುಡುಗ. ಆದರೂ ಆ ದಿನಗಳ ನೆನಪು ಮನಸ್ಸಿನಲ್ಲಿ ಇನ್ನೂ ಹಸುರಾಗಿದೆ. ದಸರಾ ದಿನಗಳು ಹತ್ತಿರ ಬಂದವೆಂದರೆ ಸಾಕು, ನಮಗೆಲ್ಲ ಉತ್ಸಾಹವೋ ಉತ್ಸಾಹ. ನಮ್ಮ ಹಳ್ಳಿಯೆ ಏನು, ಮೈಸೂರಿನ ಸುತ್ತಮುತ್ತಲ ಹಳ್ಳಿ ಪಟ್ಟಣಗಳಲ್ಲೆಲ್ಲ ಎಲ್ಲಿಲ್ಲದ ಸಂಭ್ರಮ. ಆ ದಿನಗಳುದ್ದಕ್ಕೂ ಎಲ್ಲರ ನಡೆನುಡಿಯಲ್ಲಿ ಹೊಸ ಹುರುಪು, ಪುಟಿಯುತ್ತಿರುವ ಹುಮ್ಮಸ್ಸು. ಜಂಬೂಸವಾರಿಯ ಹಿಂದಿನ ರಾತ್ರಿಯೆ ನಮ್ಮ ಹಳ್ಳಿಯಲ್ಲಿ ಗಾಡಿಗಳನ್ನು ಕಟ್ಟುತ್ತಿದ್ದರು. ರಾತ್ರಿ ಪ್ರಯಾಣದುದ್ದಕ್ಕೂ ಗಾಡಿಗಳ ಮೆರವಣಿಗೆ, ಎತ್ತುಗಳ ಗಂಟೆಯ ಕಿಣಿ ಕಿಣಿನಾದ ಕಿವಿಗಳ ಮೇಲೆ ಬೀಳುತ್ತಿರುವಂತೆಯೆ ಅವ್ವನ ತೊಡೆಯ ಮೇಲೆ ತಲೆಯಿಟ್ಟು ನಾನು ನಕ್ಷತ್ರಗಳನ್ನು ಎಣಿಸುತ್ತಾ ಮಲಗಿರುತ್ತಿದ್ದೆ. ಮಾರನೆಯ ದಿನದ ದಸರಾ ಮೆರವಣಿಗೆಯ ಸಂಭ್ರಮದ ಕಲ್ಪನೆಯಿಂದ ಎಳೆಮನಸ್ಸು ರೋಮಾಂಚನಗೊಳ್ಳುತ್ತಿತ್ತು. ಹಾಗೇ ಯಾವಾಗ ನಿದ್ದೆ ಆವರಿಸುತ್ತಿತ್ತೊ ಗೊತ್ತಾಗುತ್ತಿರಲಿಲ್ಲ. ಬೆಳಗಿನ ಬಂಗಾಳಿ, ಪಕ್ಷಿಗಳ ಬಲಿ ಕಿವಿಗಳಿಗೆ ಕಚಗುಳಿಯಿಟ್ಟಂತೆ ಎಬ್ಬಿಸುತ್ತಿದ್ದವು. ಪೂರ್ವದಲ್ಲಿ ನೇಸರ ಕೆಂಪು ಕುಡಿಯೊಡೆಯುವ ಹೊತ್ತಿಗೆ ಗಾಡಿಗಳು ಮೈಸೂರು ತಲಪಿರುತ್ತಿದ್ದವು. ಅಲ್ಲೋ ಎಲ್ಲೆಲ್ಲೂ ಜನಗಳು. ಲೆಕ್ಕವಿಲ್ಲದಷ್ಟು ತಲೆಗಳು. ಅದೊಂದು ಅದ್ಭುತ ಪ್ರಪಂಚವೆನ್ನಿಸುತ್ತಿತ್ತು. ನನ್ನ ಎಳೆಕಲ್ಪನೆಯಲ್ಲಿ ರಂಗುರಂಗಾಗಿದ್ದ ಸ್ವರ್ಗದ ಒಂದು ಭಾಗ ಭೂಮಿಗೆ ಇಳಿದುಬಂದಿದೆಯೇನೊ ಎಂಬಂತೆ ಸುತ್ತಮುತ್ತಲೂ ಆಶ್ಚರ್ಯ ದಿಗ್ಭ್ರಮೆಗಳಿಂದ ನೋಡುತ್ತಿದ್ದೆ.

ಒಬ್ಬ ಬರಹಗಾರನಾಗಿ, ಮನಸ್ಸಿನಲ್ಲಿ ಚೆನ್ನಾಗಿ ಅಚ್ಚೊತ್ತಿರುವ ಎಳೆತನದ ನೆನಪುಗಳನ್ನು ಅನುಭವಗಳನ್ನು ಆಗಾಗ್ಗೆ ನೆನಪಿಸಿಕೊಳ್ಳುತ್ತಿರುತ್ತೇನೆ. ಅದರಲ್ಲೆಲ್ಲ ತುಂಬ ಹಚ್ಚು ಹಸುರಾಗಿರುವ ಚಿತ್ರವೆಂದರೆ ದಸರಾ ಮೆರವಣಿಗೆಯದು. ಜಾಜ್ವಲ್ಯಮಾನವಾಗಿ ಕಂಗೊಳಿಸುತ್ತಿದ್ದ ಮೈಸೂರು ಅರಮನೆಯದು. ನನ್ನ ಮಟ್ಟಿಗೆ ಆಗ ಜಂಬೂಸವಾರಿ ಅದಾವುದೋ ರಹಸ್ಯಲೋಕದಿಂದ ಇಳಿದುಬರುತ್ತಿರುವಂತಿತ್ತು. ಹಳ್ಳಿಯ ಬಂಧುವೊಬ್ಬ ಇಲ್ಲವೇ ಗೆಳೆಯನೊಬ್ಬನ ಹೆಗಲೇರಿ ಆ ದೃಶ್ಯಾವಳಿಯನ್ನು ಕಣ್ಣುಗಳಲ್ಲಿ ತುಂಬಿಕೊಳ್ಳಬೇಕಾದರೆ ಆಹಾ ಅದೆಂಥ ಅನುಭವ ! ಮೆರವಣಿಗೆಯ ಒಂದೊಂದು ಭಾಗ ಸಾಗಿಹೋಗಬೇಕಾದರೂ ಅದೇನೊ ಹಿಗ್ಗು, ಅದೇನನ್ನೊ ಸಾಧಿಸಿದ ತೃಪ್ತಿ ! ಇಡೀ ವೈಭವದ ಮೆರವಣಿಗೆಗೆ ಹೊನ್ನಕಲಸವಿಟ್ಟಂತೆ ವಿಜೃಂಭಣೆಯಿಂದ ಕಡೆಯಲ್ಲಿ ಬರುತ್ತಿದ್ದ ಪಟ್ಟದ ಆನೆ, ಅದರ ಮೇಲೆ ಚಿನ್ನದ ಅಂಬಾರಿಯಲ್ಲಿ ಕೈಜೋಡಿಸಿ ಕುಳಿತ ಮಹಾರಾಜರು-ಅದೇ ಮೆರವಣಿಗೆಯ ಉತ್ತುಂಗ ಶಿಖರ. ಜನ ಸ್ತಬ್ಧರಾಗಿ ತುದಿಗಾಲ ಮೇಲೆ ನಿಂತು ಉಸಿರು ಬಿಗಿ ಹಿಡಿದು ಇಣುಕಿ ಇಣುಕಿ ನೋಡಿ ಕೃತಾರ್ಥರಾದೆವೆಂದುಕೊಳ್ಳುತ್ತಿದ್ದರು. ಕಣ್ಣುಗಳಲ್ಲಿ ಆನಂದಬಾಷ್ಪ ಉದುರುತ್ತಿತ್ತು. ನನ್ನ ಕಣ್ಣುಗಳು ಸಹ ತೇವಗೊಳ್ಳುತ್ತಿದ್ದವೆಂದು ನೆನಪು. ಆ ದೃಶ್ಯ ಮತ್ತೆ ಕಾಣಲು ಇನ್ನೊಂದು ಇಡೀ ವರ್ಷ ಕಾಯಬೇಕಲ್ಲ ಅಂತ ಮನಸ್ಸಿನ ತುಡಿತ. ಆದರೇನು, ಅದಕ್ಕೂ ಸಿದ್ಧ !

ಅಕ್ಟೋಬರ್, ೧೯೭೦. ನವರಾತ್ರಿಯ ಸಂಭ್ರಮದ ಆಚರಣೆಗಳು ಇನ್ನೇನು ನಿಂತುಹೋಗುತ್ತವೆ, ನೂರಾರು ವರ್ಷಗಳಿಂದ ನಡೆದುಕೊಂಡಬಂದ ಸಂಪ್ರದಾಯ ಇನ್ನು ಇಲ್ಲವಾಗುತ್ತದೆ ಎಂಬ ಸುದ್ದಿ ಮುಟ್ಟಿತು. ನನ್ನ ಹಳ್ಳಿಗೆ ಸುಲಭವಾಗಿ ಚೇತರಿಸಿಕೊಳ್ಳಲಾರದಷ್ಟು ದಿಗ್ಭ್ರಮೆ. ಆಗ ನಾನು ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ. ದಸರಾ ರಜೆಗೆಂದು ಹಳ್ಳಿಗೆ ಹೋಗಿದ್ದಾಗ ಎಲ್ಲರ ಬಾಯಲ್ಲೂ ಅದೇ ಪ್ರಶ್ನೆ, ಎಲ್ಲರ ಮುಖದಲ್ಲೂ ಅದೇ ಕಾತುರ, ಅದೇ ಕಳವಳ ! ನವರಾತ್ರಿ ಹಬ್ಬದ ಸಂಭ್ರಮ, ದರ್ಬಾರು, ಜಂಬೂಸವಾರಿ ಇನ್ನು ಮೇಲೆ ಇರುವುದಿಲ್ಲವೆಂದು ನಾನು ವಿವರಿಸಿ ಹೇಳಿದಾಗ

ಕಣ್ಣೀರು ಅವರ ಕೆನ್ನೆ ತೋಯಿಸಿ ಇಳಿಯಿತು. ಕಣ್ಣುಗಳಲ್ಲಿ ನೋವಿನ ಛಾಯೆ—ಆ ಸಂದರ್ಭವನ್ನು ಹೇಗೆತಾನೆ ಮರೆಯಲಿ! ಸ್ವಾತಂತ್ರ್ಯ ಬಂದಾಗ ಸಂತಸಗೊಂಡ ನಮ್ಮ ಜನ ಅದರೊಟ್ಟಿಗೆ ಮಹಾರಾಜರ ಆಳ್ವಿಕೆ ನಿಂತುಹೋಗುತ್ತದೆಂಬ ಅಂಶವನ್ನು ಒಪ್ಪಲು ಸಿದ್ಧವಿರಲಿಲ್ಲ.

ಆದರೂ ಅನಂತರ ಹೇಗೊ ನವರಾತ್ರಿ ಸಮಾರಂಭ ಮತ್ತು ಮೆರವಣಿಗೆ ಆಚರಣೆಗಳು ಮುಂದುವರೆದವೆನ್ನಿ. ಆದರೆ ಸಮಾರಂಭಗಳ ಸ್ವರೂಪದಲ್ಲಿ ಕೆಲವಾರು ಬದಲಾವಣೆಗಳುಂಟಾದವು. ರಾಷ್ಟ್ರಾಧ್ಯಕ್ಷರು ಹೊರಡಿಸಿದ ಸುಗ್ರೀವಾಜ್ಞೆಯೊಂದರ ಪರಿಣಾಮವಾಗಿ ಐನೂರಕ್ಕು ಹೆಚ್ಚು ಮಂದಿ ರಾಜಮಹರಾಜರುಗಳು ಶ್ರೀಸಾಮಾನ್ಯರಾಗಿಹೋದರು. ಅದುವರೆಗೆ ಅವರು ಅನುಭವಿಸುತ್ತಿದ್ದ ಸವಲತ್ತುಗಳಿಗೆ ಇತಿಶ್ರೀ ಹಾಡಿದಂತಾಯಿತು. ಈ ಐತಿಹಾಸಿಕ ಬದಲಾವಣೆ ಬೇರೆ ಪ್ರದೇಶಗಳ ಜನತೆಯ ಮೇಲೆ ಯಾವ ಬಗೆಯ ಪರಿಣಾಮ ಬೀರಿತೊ ನಾನರಿಯೆ. ಆದರೆ ಹಳೆಯ ಮೈಸೂರು ಜನತೆಯ ಪಾಲಿಗಂತೂ ಇದೊಂದು ಚೇತರಿಕೊಳ್ಳಲಾರದ ಆಘಾತವಾಗಿತ್ತು. ತುಂಬ ಅಮೂಲ್ಯವಾದದ್ದೇನನ್ನೊ ಶಾಶ್ವತವಾಗಿ ಕಳದುಕೊಂಡ ಭಾವನೆ ಅವರದಾಗಿತ್ತು.

ಈ ನಾಡಿನ ಜನತೆ ಈಗಲೂ ಅರಸು ಮನೆತನದ ಬಗೆಗೆ ತಳೆದಿರುವ ಪ್ರೀತಿವಿಶ್ವಾಸಗಳನ್ನು ನೋಡಿದರೆ ನನಗೆ ತುಂಬ ಅಚ್ಚರಿ ಉಂಟಾಗುತ್ತದೆ. ನಮ್ಮ ಜನ ಮೈಸೂರಿನ ರಾಜಮನೆತನವನ್ನು ಕುರಿತಂತೆ ಇಟ್ಟಿರುವ ಶ್ರದ್ಧೆ ಮತ್ತು ಗೌರವಗಳ ಹಿನ್ನೆಲೆಯ ಬಗೆಗೆ ನಾನು ಸ್ವಲ್ಪ ಪ್ರಾಮಾಣಿಕವಾಗಿ ಯೋಚಿಸಲಾರಂಭಿಸಿದೆ. ಪಂಪರು ರಾಜಮನೆತನದ ಬಗೆಗೆ ಬರೆದ ನಾಟಕಗಳು ಹಾಗೂ ಈ ಸಂಬಂಧವಾದ ಇತರ ಕೆಲವು ಕೃತಿಗಳು ನನ್ನ ಕುತೂಹಲವನ್ನು ಕೆರಳಿಸಿದವು. ಈ ರಾಜವಂಶದಲ್ಲಿ ಯದುರಾಯರಿಂದ ಮೊದಲುಗೊಂಡು ಕಡೆಯ ರಾಜರಾದ ಜಯಚಾಮರಾಜ ಒಡೆಯರ್‌ರವರವರೆಗೆ ಇಪ್ಪತ್ತೈದು ಮಂದಿ ಮಹಾರಾಜರು 570 ವರ್ಷಗಳಷ್ಟು ಕಾಲ ಆಡಳಿತ ನಡೆಸಿರುವುದಾಗಿ ಕಂಡುಬರುತ್ತದೆ. ಈ ರಾಜಮನೆತನದ ಕೆಲವು ಮಂದಿ ಅರಸರು ತಮ್ಮ ಪಾಲಿಗೆ ಬಂದ ಅರಸೊತ್ತಿಗೆಯನ್ನು ಜನಗಳ ಹಿತಸಂರಕ್ಷಣೆಗಾಗಿ ಬಳಕೆ ಮಾಡಿದರು. ಮತ್ತೆ ಕೆಲವರು ನಿರಂಕುಶ ಪ್ರಭುಗಳಾಗಿ, ವಿಷಯಾಸಕ್ತರಾಗಿ ಅನೇಕ ಅಹಿತಕರವಾದ ಹಾಗೂ ಸಂದಿಗ್ಧವಾದ ಪರಿಸ್ಥಿತಿಗಳಿಗೆ ಕಾರಣರಾದರು. ಅನೇಕವೇಳೆ ಇನ್ನೇನು ಈ ಅರಸುಮನೆತನ



ಸುಟ್ಟುಹೋದ ಅರಮನೆಯ ಮಾದರಿ



ದಸರಾ ಮೆರವಣಿಗೆ

ಅಳಿದುಹೋಯಿತೇನೊ ಅನ್ನುವಷ್ಟರಲ್ಲಿ ಇದು ಮತ್ತೆ ಚಿಗುರೊಡೆದು ಬೆಳೆಯುತ್ತಲೆ ಹೋಯಿತು. ಈ ಪುನಶ್ಚೇತನ ಶಕ್ತಿ ನಿಜವಾಗಿಯೂ ಆಶ್ಚರ್ಯ ಉಂಟುಮಾಡುವುದಾಗಿತ್ತು.

ಮೈಸೂರು ಅರಸು ಮನೆತನದ ಚರಿತ್ರೆ ಅನೇಕ ರೋಚಕ ಘಟನೆಗಳಿಂದ ಕೂಡಿದೆ. ಪ್ರಾರಂಭವೇ ತುಂಬ ಕುತೂಹಲವನ್ನುಂಟು ಮಾಡುವಂತಿದೆ. ಮೈಸೂರಿಗೆ ಮೊದಲು 'ಹದಿನಾಡು' ಎಂಬ ಹೆಸರಿತ್ತು ಎನ್ನುತ್ತಾರೆ. ಈ ಪ್ರದೇಶದ ದೊರೆ ಕಾಲವಾಗಿ ಹೋಗಿದ್ದಾಗ ಕಾರುಗ ಹಳ್ಳಿಯ ಪಾಳೆಯಗಾರ ದೊರೆಯ ಮಗಳನ್ನು ತನ್ನೊಡನೆ ವಿವಾಹವಾಗುವಂತೆ ಒತ್ತಾಯಪಡಿಸಿದನೆಂತಲೂ ಆಗ ಉತ್ತರದ ಕಡೆಯಿಂದ (ದ್ವಾರಕೆಯಿಂದ) ಬಂದಂತಹ ಯದುರಾಯರು (ಸು. 1399–1423) ಆಕೆಯನ್ನು ಮದುವೆಯಾದರೆಂದು ಹೇಳಲಾಗಿದೆ. ಹೀಗೆ ಯದುರಾಯರು ಹದಿನಾಡು ಮತ್ತು ಕಾರುಗ ಹಳ್ಳಿಗೆ ದೊರೆಯಾದರು. ಈ ಸಂದರ್ಭದಲ್ಲಿ ಮಾರ್ಗದರ್ಶನ ಮಾಡಿದ ಜಂಗಮನೊಬ್ಬನ ಮೇಲಿನ ಗೌರವದಿಂದ ತಮ್ಮ ಹೆಸರಿನೊಡನೆ ಅವರು 'ಒಡೆಯರ್' ಎಂದು ಸೇರಿಸಿಕೊಳ್ಳುವ ಪರಿಪಾಟಿಯನ್ನು ಬೆಳೆಸಿದರೆಂಬ ಐತಿಹ್ಯವುಂಟು.

ಯದುರಾಯರಿಂದ ಹಿಡಿದು ಈ ರಾಜರವಂಶದಲ್ಲಿ ಏಳನೆಯವರಾದ ಬೋಳ ಚಾಮರಾಜ ಒಡೆಯರ್ (1572–76)ವರೆಗೆ ಹೇಳಿಕೊಳ್ಳುವಂಥ ಘಟನೆಗಳೇನೂ ನಡೆಯಲಿಲ್ಲ. ಮಕ್ಕಳಿಲ್ಲದ ಈ ದೊರೆ ಮೈಸೂರು ನಗರವನ್ನು ಮತ್ತು ಕೋಟೆಯನ್ನು ಕಟ್ಟಿಸಿದ. ಅನಂತರವೇ ಮೈಸೂರು ಒಂದು ಸಾಮ್ರಾಜ್ಯವಾಗಿ ಬೆಳಕಿಗೆ ಬಂದದ್ದು. ಈ ಅರಸು ವಿಜಯನಗರದ ದಂಡನಾಯಕನಾಗಿದ್ದ ರಾಮರಾಯನನ್ನು ಸೋಲಿಸಿ ಕಪ್ಪ ಸಲ್ಲಿಸುವ ಪದ್ಧತಿಗೆ ಇತಿಶ್ರೀ ಹಾಡಿದರು.

ಒಡೆಯರುಗಳ ಪೈಕಿ ಮೊದಲನೆ ರಾಜ ಒಡೆಯರ್ ತುಂಬ ಸಮರ್ಥರೆನಿಸಿಕೊಂಡವರು. ಅವರ ಕಾಲದಲ್ಲೇ ಮೈಸೂರು ಸಂಸ್ಥಾನದ ಘನತೆಗೌರವಗಳು ಎಲ್ಲೆಡೆಗಳಲ್ಲಿಯೂ ಮನೆಮಾತಾದದ್ದು. ಅವರು ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿಯಾಗಿದ್ದ ಶ್ರೀರಂಗರಾಯನನ್ನು ಸೋಲಿಸಿ ಅವನ ರತ್ನಖಚಿತವಾದ ಸಿಂಹಾಸನವನ್ನು ವಶಪಡಿಸಿಕೊಂಡರು. ಅದು ಇನ್ನೂ ಮೈಸೂರು ಅರಮನೆಯಲ್ಲಿ ಇದೆ. ಶ್ರೀರಂಗರಾಯನ ವಿಧವೆ ಮೈಸೂರು ಅರಸರಿಗೆ ಗಂಡು ಮಕ್ಕಳಾಗದಿರಲೆಂಬ ಶಾಪವನ್ನು ಕೊಟ್ಟಳೆಂಬ ಪ್ರತೀತಿ

ದಸರಾ ಹಬ್ಬ ಅದೇ ರೀತಿ, ವಾಸ್ತವವಾಗಿ ಹಾಗೆಯೆ ನಡೆಯುತ್ತಿದೆ. ಈ ರಾಜವಂಶದಲ್ಲಿ ಮಕ್ಕಳನ್ನು ದತ್ತುತೆಗೆದು ಕೊಳ್ಳುವ ಕ್ರಮ ತಪ್ಪದೆ ಜಾರಿಯಲ್ಲಿದೆ.

ಮೈಸೂರಿನ ಇತಿಹಾಸದಲ್ಲಿ ಕೆಲವು ಮಂದಿ ದಳವಾಯಿಗಳು ವಹಿಸಿದ ಪಾತ್ರ ಕುತೂಹಲಕಾರಿಯಾಗಿದೆ. ಹಿಗ್ಗದ ವಿಕ್ರಮರಾಯರು ಅವರಲ್ಲಿ ಒಬ್ಬ. ಇಮ್ಮಡಿ ರಾಜ ಒಡೆಯರ್‌ರವರಿಗೆ ವಿಷಪ್ರಾಶನ ಮಾಡಿಸಿದ ಈತ ಅನಂತರ ನಿರಂಕುಶಾಧಿಪತಿಯಾಗಿ ಆಡಳಿತ ನಡೆಸಿದ. ಇಂಥ ಸಂದಿಗ್ಧ ಕಾಲದಲ್ಲಿ ಮೈಸೂರು ಅರಸುಮನೆತನಕ್ಕೆ ವರದಾನವೇನೊ ಎಂಬಂತೆ ರಣಧೀರ ಕಂಠೀರವ ನರಸರಾಜ ಒಡೆಯರ್ (1638–1659) ಸಿಂಹಾಸನವನ್ನು ಅಲಂಕರಿಸಿದರು. ಶೂರ ಪರಾಕ್ರಮಿಯಾಗಿದ್ದ ಇವರು ತಮ್ಮ ಹಿರಿಯ ಇಮ್ಮಡಿ ರಾಜ ಒಡೆಯರ್ ಕೊಲೆಗೆ ಪ್ರತಿಯಾಗಿ ವಿಕ್ರಮರಾಯನನ್ನು ಹಿಡಿದು ಕೊಲ್ಲಿಸಿ ಸೇಡುತೀರಿಸಿಕೊಂಡರು. ಬಹಮನಿ ಸುಲ್ತಾನನ ದಂಡ ನಾಯಕನಾಗಿದ್ದ ರಣದುಲ್ಲಾಖಾನ್ ಸಹ ಇವರಿಂದ ಸೋಲನ್ನಪ್ಪಿದ. ಮುಮ್ಮಡಿ ಚಾಮರಾಜ್ ಒಡೆಯರ್‌ರವರ ರಾಣಿಯ ನೆನಪಿನಲ್ಲಿ ಇವರು 'ಬಂಗಾರದೊಡ್ಡಿ' ಕಾಲುವೆಯನ್ನು ತೊಡಿಸಿದರು.

1673–1704ರವರೆಗೆ ಚಿಕ್ಕದೇವರಾಜ ಒಡೆಯರ್ ಮೈಸೂರನ್ನು ಆಳಿದರು. ಅವರ ಖ್ಯಾತಿ ದೆಹಲಿಯನ್ನು ಮುಟ್ಟಿತ್ತು. ಔರಂಗಜೇಬ ಅವರಿಗೆ 'ಜಗದೇಕಮಲ್ಲ' ಎಂಬ ಬಿರುದನ್ನಿತ್ತಿದ್ದ. ಕನ್ನಡ ಸಾಹಿತ್ಯ ರಚನೆ ಪ್ರಸಾರಗಳಿಗೆ ಅನುಕೂಲಕರವಾದ ವಾತಾವರಣ ಅವರ ಕಾಲದಲ್ಲಿ ಮೂಡಿತು. ಸ್ವತಃ ದೊರೆಯೆ ಕವಿಯಾಗಿದ್ದು ಅನೇಕ ಕೃತಿಗಳನ್ನು ರಚಿಸಿದರು. ವಿಜಯನಗರ ಸಾಮ್ರಾಜ್ಯದ ಅಳಿದ ವೈಭವವನ್ನು ಮತ್ತೆ ಪ್ರತಿಷ್ಠಾಪಿಸಿದ ಕೀರ್ತಿ ಅವರಿಗೆ ಸಲ್ಲತಕ್ಕದ್ದು.

ಚಿಕ್ಕದೇವರಾಜ ಒಡೆಯರ ವೈಭವದ ಆಳ್ವಿಕೆಯ ಅನಂತರ ಮೈಸೂರು ಅರಸುಮನೆ ತನ ಸಾಕಷ್ಟು ಕಾಲ ಕಗ್ಗತ್ತಲಲ್ಲಿಯೇ ಉಳಿಯಬೇಕಾಯಿತು. ದಳವಾಯಿಗಳ ಆಡಳಿತ ಪಾತ್ರವನ್ನು ತನ್ನ ಕೈವಶ ಪಡಿಸಿಕೊಂಡ. 1782ರಲ್ಲಿ ಟಿಪ್ಪು ತಾನೇ ರಾಜನೆಂದು



ದರ್ಬಾರ್ ಸಭಾಂಗಣ



ಅಂಬಾ ವಿಲಾಸ

ಘೋಷಿಸಿಕೊಂಡ. ಈ ಆಪತ್ತಿನ ಸಮಯದಲ್ಲಿ ಮಹಾರಾಣಿ ಲಕ್ಷ್ಮಮ್ಮಣ್ಣಿ ವಹಿಸಿದ ಪಾತ್ರ ನಿಜಕ್ಕೂ ಮಹತ್ವಪೂರ್ಣವಾದದ್ದು ಮೈಸೂರು ರಾಜವಂಶದ ಆಳ್ವಿಕೆ ಅಳಿಯದಂತೆ ನೋಡಿಕೊಳ್ಳುವ ಸತತ ಪ್ರಯತ್ನ ಆಕೆಯದಾಗಿತ್ತು.

ಮೈಸೂರು ಅರಸುಗಳ ಚರಿತ್ರೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತ ಕಾಲ ಕುತೂಹಲಕಾರಿ ಘಟನೆಗಳಿಂದ ಕೂಡಿತ್ತು. ಐದು ವರ್ಷ ವಯಸ್ಸಿನ ಎಳೆಯ ರಾಜಕುಮಾರ ಪ್ರಾಪ್ತವಯಸ್ಕನಾಗುವವರೆಗೆ ದಿವಾನ್ ಪೂರ್ಣಯ್ಯನವರು ಆಡಳಿತದ ಮೇಲ್ವಿಚಾರಣೆಯನ್ನು ವಹಿಸಿಕೊಂಡರು (1799–1811). ಪೂರ್ಣಯ್ಯನವರು ಮೈಸೂರು ಅರಮನೆ ಮತ್ತು ಕೋಟೆಯನ್ನು ಮತ್ತೆ ಕಟ್ಟಿಸಿದರು. ಮೈಸೂರು ರಾಜ್ಯದ ರಾಜಧಾನಿಯಾಯಿತು. 1911ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಸಿಂಹಾಸನವನ್ನಲಂಕರಿಸಿದರು.

ಹತ್ತೊಂಬತ್ತನೆಯ ಶತಮಾನ ನಿಜಕ್ಕೂ ಒಂದು ಬಗೆಯ ಸಂಕ್ರಮಣ ಕಾಲವಾಗಿತ್ತು. ಮುಂದೆ ಬಹಳ ಕಾಲದವರೆಗೂ ಪ್ರಭಾವ ಬೀರುವಂತಹ ಅನೇಕ ಘಟನೆಗಳು ಈ ಕಾಲದಲ್ಲಿ ಜರುಗಿದ್ದವು. ಲಾರ್ಡ್‌ವಿಲಿಯಂ ಬೆಂಟಿಂಕ್ ಮೈಸೂರು ಸಂಸ್ಥಾನದ ಆಡಳಿತವನ್ನು ತಾನೆ ವಹಿಸಿಕೊಂಡಿದ್ದ. ಆಡಳಿತ ಸೂತ್ರವನ್ನು ಮರಳಿ ಪಡೆಯಲು ಭಗೀರಥ ಪ್ರಯತ್ನಗಳು ನಡೆದವು. ಕಡೆಗೆ ಜೂನ್ 16, 1867ರಂದು ಮೈಸೂರು ಸಂಸ್ಥಾನ ಮತ್ತೆ ಒಡೆಯರ ವಂಶಕ್ಕೆ ಬಂತು. ಆದರೆ ರಾಜಕುಮಾರ ಚಾಮರಾಜ ಒಡೆಯರ್ ಮತ್ತೆ ಪ್ರಾಪ್ತವಯಸ್ಕರಾಗುವವರೆಗೆ ಬ್ರಿಟಿಷರು ತಾವೇ ರಾಜ್ಯ ಆಳುತ್ತೇವೆಂಬ ನಿಬಂಧನೆಯನ್ನು ಹಾಕಿದರು. ಈ ಸಂದರ್ಭದಲ್ಲಿ ತೀರಾ ಅವ್ಯವಸ್ಥೆಗೆ ಗುರಿಯಾಗಿದ್ದ ಅರಮನೆ ವಹಿವಾಟುಗಳನ್ನು ಸರಿಪಡಿಸಲು ಬ್ರಿಟಿಷರು ಮೇಜರ್ ಎಲಿಯೆಟ್ ಹಾಗೂ ರಂಗಚಾರ್ಲು ಅವರನ್ನು ನೇಮಕ ಮಾಡಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ ದುಂದುಗಾರಿಕೆ ಸ್ವಭಾವದ ದೆಸೆಯಿಂದಾಗಿ ಅರಮನೆ ಸಾಲದ ಹೊರೆಗೆ ನಿಲುಕಿತ್ತು. ಅರಮನೆ ಸಾಲದ ಪಟ್ಟಿಯಂತೂ ತುಂಬ ಕುತೂಹಲಕಾರಿಯಾಗಿತ್ತು. ಉದಾಹರಣೆಗೆ, ಸೌದೆ ಸರಬರಾಜು ಮಾಡುವ ನಾಗಯ್ಯನಿಗೆ ರೂ. 5810.00 ; ಹೂವಾಡಿಗನಿಗೆ ಕೊಡಬೇಕಾದ ಬಾಬ್ತು ರೂ. 1125–00 ; ಹಣ್ಣಿನ ಅಂಗಡಿಗಳವರಿಗೆ ಕೊಡಬೇಕಾದ ಸಾಲ

ರೂ. 2000.00; ಅರಮನೆಗೆ ಸುಣ್ಣ ಒದಗಿಸಿದವರಿಗೆ ಕೊಡಬೇಕಾದ ಬಾಕಿ ರೂ. 7 ಆಣೆ 8—ಹೀಗೆ ಪಟ್ಟಿ ಬೆಳೆಯಿತು. ಈ ಸಮಯದಲ್ಲಿ ಅರಮನೆ ಆಸ್ತಿಪಾಸ್ತಿಗಳ ಪಟ್ಟಿಯೊಂದನ್ನು ತಯಾರಿಸಿ ಒಟ್ಟು ಆಸ್ತಿಯ ಮೌಲ್ಯ ರೂ. 33,79,691 ಆಣೆ 8 ಎಂದು ಅಂದಾಜು ಮಾಡಲಾಯಿತು. ಇದರಲ್ಲಿ ಸಿಂಹಾಸನ ಸೇರಿರಲಿಲ್ಲ. ಮಹಾರಾಜರ ಸಾಲವನ್ನು ಚುಕ್ತಾಮಾಡಲು ಬ್ರಿಟಿಷರು ರೂ. 12,50,460.00 ನೀಡಿದರು. ಮೇಜರ್ ಎಲಿಯಟ್ ಹಾಗೂ ರಂಗಾಚಾರ್ಲು ಹೇಗೋ ಮಾಡಿ ಅರಮನೆಯ ವಹಿವಾಟುಗಳನ್ನು ನಿಭಾಯಿಸಿದರು. ಅನಾವಶ್ಯಕವಾದ ಖರ್ಚುವೆಚ್ಚಗಳಿಗೆ ತಡೆಹಾಕಿದರು. ಕೃಷ್ಣರಾಜ ಒಡೆಯರ್ ಕಾಲದಲ್ಲಿ ರೂ. 16 ಲಕ್ಷಗಳಷ್ಟಿದ್ದ ಅರಮನೆ ಖರ್ಚು ರೂ. 8.5 ಲಕ್ಷಗಳಿಗೆ ಇಳಿಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಸಮರ್ಥರಲ್ಲವೆಂಬ ನೆಪವೊಡ್ಡಿ ಬ್ರಿಟಿಷರು ಮತ್ತೆ ರಾಜ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಬ್ರಿಟಿಷರ ಈ ಭೇದೋಪಾಯ ಹಾಗೂ ಚಾಣಾಕ್ಷತನಗಳು ಸಂಸ್ಥಾನದ ಜನತೆಯ ಸ್ವಾಭಿಮಾನಕ್ಕೆ ದೊಡ್ಡ ಪೆಟ್ಟು ಕೊಟ್ಟಿತು. ಆದರೆ ಸಂಸ್ಥಾನವನ್ನು ಮತ್ತೆ ಅರಸುಗಳಿಗೆ ಒಪ್ಪಿಸುವುದು ಉಚಿತವೆಂದು ಬ್ರಿಟಿಷರಿಗೆ ಮನವರಿಕೆಯಾಯಿತು. ಕಡೆಗೆ ಮಾರ್ಚಿ 25, 1881ರಂದು ಒಂಬತ್ತನೇ ಚಾಮರಾಜ ಒಡೆಯರ್‌ರವರು ರಾಜ್ಯಾಭಿಷೇಕ ಸಾಂಗೋಪಾಂಗವಾಗಿ ನೆರವೇರಿತು. ಕೇವಲ ಹದಿಮೂರು ವರ್ಷಗಳ ಕಾಲ ಮಾತ್ರ ರಾಜ್ಯವಾಳಿದ. ಚಾಮರಾಜ ಒಡೆಯರ್ ಮೈಸೂರು ಸಂಸ್ಥಾನ ಇಡೀ ನಾಡಿಗೆ ಆಕರ್ಷಕವೆನಿಸುವಂತೆ ಮಾಡಿದರು. ದಿವಾನ್ ರಂಗಚಾರ್ಯರ್ ಹಾಗೂ ದಿವಾನ್ ಕೆ. ಶೇಷಾದ್ರಿಐಯ್ಯರ್‌ರವರಂಥ ಸಮರ್ಥ ಆಡಳಿತಗಾರರ ನೆರವಿನಿಂದ ಅವರ ಕೆಲಸಸುಮವಾಯಿತು.

ಈ ಅವಧಿಯಲ್ಲಿ ಉಂಟಾದ ಮತ್ತೊಂದು ಮಹತ್ವಪೂರ್ಣವಾದ ಬೆಳವಣಿಗೆಯೆಂದರೆ ಜನತೆ ಮತ್ತು ಅರಸರು ಕ್ರಮೇಣ ಪ್ರಜಾಪ್ರಭುತ್ವ ಪದ್ಧತಿಯ ಕಡೆಗೆ ತಮ್ಮ ಒಲವನ್ನು ತೋರಿಸತೊಡಗಿದರು. ನಿರಂಕುಶ ಪ್ರಭುತ್ವದ ಅಪಾಯಗಳ ಬಗ್ಗೆ ಅರಸನಿಗೆ ಅರಿವಿತ್ತು. ಹಾಗಾಗಿ ಮಾರ್ಚಿ ೨೦. ೧೮೮೧ರಂದು ದೊರೆ ಇಡೀ ನಾಡಿನ ವ್ಯಾಪಾರಿಗಳ, ರೈತರ, ಶ್ರೀಸಾಮಾನ್ಯರ ಪ್ರತಿನಿಧಿಗಳ ಸಭೆ ಕರೆದು ಪ್ರಜಾಪ್ರತಿನಿಧಿ ಸಭೆಯೊಂದರ ರೂಪುರೇಷೆಗಳನ್ನು ಗೊತ್ತುಮಾಡಿದರು. ಜನತೆ ನೇರವಾಗಿ ಸರ್ಕಾರದೊಡನೆ ಸಂಪರ್ಕವನ್ನು ಪಡೆಯಲು ಇದು ಅತ್ಯುತ್ತಮವಾದ ಮಾರ್ಗವಾಗಿತ್ತು.

ಹುಟ್ಟುಹಬ್ಬದ ಮೆರವಣಿಗೆ



ಈ ಬಗೆಯ ಪದ್ಧತಿ ಇಡೀ ಭಾರತದಲ್ಲೇ ಮೊದಲನೆಯದಾಗಿತ್ತು. ಆದರೆ ಚಾಮರಾಜ ಒಡೆಯರ್ ತುಂಬುಜೀವನ ನಡೆಸುವ ಮೊದಲೇ ಸ್ವರ್ಗಸ್ಥರಾದುದು ವಿಧಿಯ ಘೋರ ಅಣಕವಾಗಿತ್ತು. ಅವರ ಆಡಳಿತ ಕಾಲದಲ್ಲಿ ಮೈಸೂರಿಗೆ ಭೇಟಿನೀಡಿದ್ದ ಮಾರ್ಕಸ್ ಲ್ಯಾನ್ಸ್‌ಡೌನ್ ಈ ರೀತಿಯಾಗಿ ಅವರ ಬಗೆಗೆ ಪ್ರಶಂಸೆಯ ಮಳೆ ಸುರಿಸಿದ್ದ—" ರಾಜ ಹಾಗೂ ಪ್ರಜೆಗಳ ನಡುವೆ ಇಲ್ಲಿರುವಂಥ ಅತ್ಯುತ್ತಮ ಮಧುರಬಾಂಧವ್ಯ ಇಡೀ ಭಾರತದ ಬೇರೆ ಯಾವ ಪ್ರಾಂತದಲ್ಲೂ ಕಂಡುಬರಲಾರದು." ಚಾಮರಾಜ ಒಡೆಯರ ಕಾಲದಲ್ಲಿ ಮೈಸೂರು ಅರಮನೆ ಸಂಗೀತ, ಸಾಹಿತ್ಯ ಮತ್ತು ಕಲೆಗಳಿಗೆ ನೆಲೆವೀಡಾಯಿತು. ಅರಮನೆ ತನ್ನದೇ ಆದ ನಾಟಕದ ತಂಡವನ್ನು ಸಹ ಹೊಂದಿತ್ತು. ಮಹಾರಾಜರು ತಾವೇ ಅನೇಕ ಇಂಗ್ಲಿಷ್ ನಾಟಕಗಳನ್ನು ಅನುವಾದ ಮಾಡಿಸಿ ಅಂದಿನ ನುರಿತ ಕಲಾವಿದರಿಂದ ಆಡಿಸಿದರು.

ಸ್ವಾಮಿವಿವೇಕಾನಂದರು ಸಹ ಚಾಮರಾಜೇಂದ್ರರ ಅತಿಥಿಗಳಾಗಿದ್ದರು. ಮಹಾರಾಜರ ನೆರವಿನಿಂದಲೇ ಅವರ ಧಾರ್ಮಿಕ-ಸಾಂಸ್ಕೃತಿಕ ಅಮೆರಿಕೆಯ ಯಾತ್ರೆ ಸಾಧ್ಯವಾದದ್ದು. ಚಾಮರಾಜೇಂದ್ರರು ಸ್ವರ್ಗಸ್ಥರಾದಾಗ ಅವರ ಮಗ ಕೃಷ್ಣರಾಜ ಒಡೆಯರ್ ಇನ್ನೂ ಹತ್ತುವರ್ಷದ ಬಾಲಕ. ಮಗ ಪ್ರಾಪ್ತವಯಸ್ಕನಾಗುವವರೆಗೆ ತಾಯಿಯೆ ಆಡಳಿತದ ಹೊಣೆಯನ್ನು ಹೊತ್ತು ನಿಭಾಯಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ನಿಜಕ್ಕೂ ಮೈಸೂರಿನ ನಿರ್ಮಾಪಕರು. ೧೮೯೫ರಲ್ಲಿ ಪಟ್ಟವನ್ನೇರಿದ ಅವರು ನಲವತ್ತೈದು ವರ್ಷಗಳ ಕಾಲ ಆಡಳಿತ ನಡೆಸಿ ಮೈಸೂರನ್ನು ಆದರ್ಶ ಸಂಸ್ಥಾನವನ್ನಾಗಿ ಮಾಡಿದರು. ಒಡೆಯರುಗಳಲ್ಲೆಲ್ಲ ತುಂಬ ಹಿರಿಯ ಜೀವವೆಂದರೆ ಅವರದು. ಅವರ ಆಡಳಿತ ಕಾಲದಲ್ಲಿ ಮೈಸೂರು ರಾಮರಾಜ್ಯವೆಂದೆನಿಸಿಕೊಂಡಿತ್ತು. ಅವರ ಕಾಲ ಒಡೆಯರ್ ಮನೆತನದ ಪಾಲಿಗೆ ಚಿನ್ನದ ಕಾಲ. ಸರಳ ಬದುಕನ್ನು ಸಾಗಿಸಿದ ಕೃಷ್ಣರಾಜರು ತಮ್ಮ ಕಾಲವನ್ನೆಲ್ಲ ಸಂಸ್ಥಾನದ ಏಳಿಗೆಗಾಗಿ ಮುಡಿಪಿಟ್ಟರು. ಮೈಸೂರು ಇಂದು ಪ್ರಪಂಚದ ಅತ್ಯಂತ ಸೊಬಗಿನ ನಗರಗಳಲ್ಲಿ ಒಂದೆಂದು ಹೆಸರು ಪಡೆದಿರುವ ಹಿನ್ನೆಲೆಯ ಕೀರ್ತಿ ಅದನ್ನು ಬೆಡಗುಗೊಳಿಸಿದ ಕೃಷ್ಣರಾಜ ಒಡೆಯರ್‌ರವರಿಗೆ ಸಲ್ಲಬೇಕು. ವಿಶ್ವವಿಖ್ಯಾತವಾದ ಮೈಸೂರು ಅರಮನೆಯ ನಿರ್ಮಾಣವಾದದ್ದು ಸಹ ಅವರ ಕಾಲದಲ್ಲೇ.

ವಿಶಾಲವಾದ ದರ್ಬಾರ್ ಹಾಲ್, ಆಕರ್ಷಕವಾದ ಅಂಬಾರಿಗಳು, ಕಲ್ಯಾಣಮಂಟಪ ಇವೆಲ್ಲ ಅರಮನೆಯ ಸೌಂದರ್ಯಕ್ಕೆ ಕಳಶ ಪ್ರಾಯವಾಗಿವೆ. ಕಲ್ಯಾಣಮಂಟಪದ ಗೋಡೆಯ ಮೇಲೆ ಬಣ್ಣದಲ್ಲಿ ಚಿತ್ರಿಸಿರುವ ' ಜಂಬೂಸವಾರಿ ' ತಪ್ಪದೆ ನೋಡಬೇಕಾದ ಕಲಾ ಕೃತಿಗಳಲ್ಲಿ ಒಂದು. ಕೃಷ್ಣರಾಜ ಒಡೆಯರ್‌ರವರ ಮದುವೆಯ ಸಂದರ್ಭದಲ್ಲಿ ಜಗನ್ಮೋಹನ ಅರಮನೆ ನಿರ್ಮಾಣಗೊಂಡಿತು. ಲಲಿತಮಹಲ್ ಅರಮನೆ ಹಾಗೂ ಬೆಟ್ಟದ ಮೇಲಿರುವ ರಾಜೇಂದ್ರವಿಲಾಸ್ ಅರಮನೆ ನಿರ್ಮಾಣವಾದದ್ದು ಅವರ ಕಾಲದಲ್ಲೇ. ವಾಸ್ತುಶಿಲ್ಪದ ಈ ಸೊಬಗಿನ ನಮೂನೆಗಳು ಮೈಸೂರಿನ ಸೌಂದರ್ಯ ಸಿರಿಗೆ ಕಲಶಪ್ರಾಯವಾಗಿದೆ.

ಕೃಷ್ಣರಾಜ ಒಡೆಯರ್‌ರವರು ಗಾಂಧೀಜಿ, ಮಾಲವೀಯ ಮುಂತಾದ ಮುಖಂಡರೊಡನೆ ಒಳ್ಳೆಯ ಸ್ನೇಹವನ್ನು ಇಟ್ಟುಕೊಂಡಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಬಗೆಗೆ ವ್ಯಯಕ್ತಿಕವಾಗಿ ಪ್ರೀತ್ಯಾದರಗಳನ್ನು ಹೊಂದಿದ್ದ ಏಕೈಕ ರಾಜರೆಂದರೆ ಪ್ರಾಯಶಃ ಅವರೊಬ್ಬರೆ. 1940ರಲ್ಲಿ ಅವರು ಕಾಲವಶರಾದಾಗ ಇಡೀ ಮೈಸೂರು ಸಂಸ್ಥಾನವೇ ಕಣ್ಣೀರಿನ ಕಡಲಿನಲ್ಲಿ ಮುಳುಗಿತು.

ನಾನು ಚಿಕ್ಕಂದಿನಲ್ಲಿ ನನ್ನ ಹಳ್ಳಿಯ ಬಂಧುಗಳೊಡನೆ ಗುಂಪಿನಲ್ಲಿ ಕಾತುರದಿಂದ ನಿಂತು ಕೈ ಮುಗಿದಿದ್ದ ಜಯಚಾಮರಾಜ ಒಡೆಯರ್ ಅವರು ಕೃಷ್ಣರಾಜ ಒಡೆಯರ ದತ್ತುಪುತ್ರ. 1940ರಲ್ಲಿ ಅವರು ಸಿಂಹಾಸನವನ್ನೇರಿದರು. ಭಾರತ ಗಣರಾಜ್ಯದಲ್ಲಿ ಮೈಸೂರು ಒಂದಾಗುವಂತೆ ಅವರು ಸ್ವಪ್ರೇರಣೆಯಿಂದಲೇ ಮುಂದಾದರು. ಆ ಮೂಲಕ 570 ವರ್ಷಗಳಷ್ಟು ದೀರ್ಘಕಾಲ ನಡೆದುಬಂದ ಅರಸುಮನೆತನದ ಆಡಳಿತ ಕೊನೆಗೊಂಡಿತು. ಆದರೂ ನನ್ನನ್ನು ಆಶ್ಚರಿಗೊಳಿಸುವ ವಿಚಾರವೇನೆಂದರೆ ಅರಸುಮನೆತನ ಈಗ ರಾಜ್ಯವಾಳುತ್ತಿಲ್ಲ, ಆದರೂ ಜನರ ಹೃದಯದಲ್ಲಿ ಅದು ಪಡೆದುಕೊಂಡಿರುವ ನಿಚ್ಚಳವಾದ ಪ್ರೀತಿವಿಶ್ವಾಸಗಳು ಅದೆಂಥ ಅಮೋಘ ವಾದುದು. ಇದರ ರಹಸ್ಯವನ್ನಂತೂ ನಾನರಿಯೆ !

ಶ್ರೀರಂಗಪಟ್ಟಣ

ಪ್ರೊ. ಬಿ. ಮುದ್ದಾಚಾರ್

ಶ್ರೀರಂಗಪಟ್ಟಣವು ಇತಿಹಾಸ ಪ್ರಸಿದ್ಧವಾದಸ್ಥಳ. ಇದರ ಪೂರ್ವೇತಿಹಾಸದ ಬಗ್ಗೆ ಸ್ಪಷ್ಟ ಪುರಾವೆಗಳಿಲ್ಲ. ಅದರ ಬೆಟ್ಟಗುಡ್ಡಗಳು ಎಷ್ಟು ಹಳೆಯವೋ ಅದರ ಇತಿಹಾಸವೂ ಅಷ್ಟೇ ಹಳೆಯದು. ರಾಮಾಯಣದ ಕಾಲದಲ್ಲೇ ಇದು ಪ್ರಸಿದ್ಧಿಗೆ ಬಂದಿತ್ತು. ಶ್ರೀರಾಮಚಂದ್ರನು ದಕ್ಷಿಣಾಭಿಮುಖವಾಗಿ ಹೋಗುವಾಗ ಶ್ರೀರಂಗಪಟ್ಟಣದ ಮೂಲಕವೇ ತೆರಳಿದನು. ಸ್ಥಳಪುರಾಣದ ಪ್ರಕಾರ ಪೂರ್ವದಲ್ಲಿ ಗೌತಮನೆಂಬ ಮಹರ್ಷಿಯು ಕಾವೇರಿ ನದಿಯ ದಡದಲ್ಲಿ ಆಶ್ರಮವನ್ನು ನಿರ್ಮಿಸಿಕೊಂಡು, ಆದಿರಂಗನನ್ನು ಪೂಜಿಸಿದುದರಿಂದ, ಇದಕ್ಕೆ ಗೌತಮ ಕ್ಷೇತ್ರವೆಂದು ಹೆಸರಿತ್ತೆಂದು ತಿಳಿದುಬರುತ್ತದೆ. ಮಹಾಭಾರತದ ಕಾಲದಲ್ಲಿಯೂ ಶ್ರೀರಂಗ ಪಟ್ಟಣ ಹೆಸರುವಾಸಿಯಾಗಿದ್ದಿತು. ಪಾಂಡವಪುರದ ಹತ್ತಿರವಿರುವ ಕುಂತಿಬೆಟ್ಟದಲ್ಲಿ ಪಾಂಡವರು ಸ್ವಲ್ಪಕಾಲ ಇದ್ದರೆಂದು ಐತಿಹ್ಯವಿದೆ.

ಕ್ರೈಸ್ತಯುಗದ ಆರಂಭದಲ್ಲಿ ಶಾತವಾಹನರು ಮೈಸೂರಿನ ಉತ್ತರ ಭಾಗದ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರೆಂದು ಗೊತ್ತಾಗುತ್ತದೆ. ಮಂಡ್ಯಜಿಲ್ಲೆಯ ಮಳವಳ್ಳಿಯಲ್ಲಿ ದೊರಕಿರುವ ಶಾಸನದ ಪ್ರಕಾರ ಶಾತವಾಹನರ ಪ್ರಭಾವ ಶ್ರೀರಂಗಪಟ್ಟಣದ ಮೇಲೆ ಇತ್ತೆಂದು ತಿಳಿದು ಬರುತ್ತದೆ. ಕ್ರಿ.ಶ. ಐದನೆಯ ಶತಮಾನದಲ್ಲಿ ಮೈಸೂರಿನ ಸಾರ್ವಭೌಮಾಧಿಕಾರವನ್ನು ಮೂರು ರಾಜವಂಶಗಳು ಪಡೆದಿದ್ದವು. ಉತ್ತರದ ಪೂರ್ವಕ್ಕೆ ಪಲ್ಲವರೂ, ಪಶ್ಚಿಮಕ್ಕೆ ಕದಂಬರೂ ಆಳ್ವಿಕೆ ನಡೆಸುತ್ತಿದ್ದರು. ದಕ್ಷಿಣ ಮತ್ತು ಮಧ್ಯಭಾಗವು ತಲಕಾಡಿನ ಗಂಗರವಶದಲ್ಲಿತ್ತು. ಮೂರು ಶತಮಾನಗಳ ಅನಂತರ ಗಂಗರು ದಕ್ಷಿಣದಲ್ಲೂ ರಾಷ್ಟ್ರಕೂಟರು ಉತ್ತರದಲ್ಲೂ, ಪಲ್ಲವರು ಪೂರ್ವದಲ್ಲೂ ಪ್ರಸಿದ್ಧರಾದರು.

ಗಂಗರಾಜನ ಗವರ್ನರ್ ಆಗಿದ್ದ ತಿರುಮಲಯ್ಯ ಎಂಬುವವನು ರಂಗನಾಥಸ್ವಾಮಿಯ ದೇವಾಲಯವನ್ನು ಕಟ್ಟಿಸಿ ಆ ಕ್ಷೇತ್ರಕ್ಕೆ ಶ್ರೀರಂಗಪುರವೆಂದು ನಾಮಕರಣ ಮಾಡಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ. ಶ. 1117ರಲ್ಲಿ ಹೊಯ್ಸಳ ವಿಷ್ಣುವರ್ಧನನು ರಾಮಾನುಜಾಚಾರ್ಯರಿಂದ ವೈಷ್ಣವ ಮತವನ್ನು ಸ್ವೀಕರಿಸಿ. ಅವರಿಗೆ ಕಾವೇರಿ ನದಿಯ ದಡದಲ್ಲಿದ್ದ ಅಷ್ಟ ಗ್ರಾಮಗಳನ್ನು ದತ್ತಿಕೊಟ್ಟಿದ್ದಲ್ಲದೆ, ಅವುಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಹೆಬ್ಬಾರರು ಅಥವಾ ಪ್ರಭುಗಳನ್ನು ನೇಮಕಮಾಡಿದನೆಂದು ಗೊತ್ತಾಗುತ್ತದೆ. 1120ರಲ್ಲಿ ವಿಷ್ಣುವರ್ಧನನ ಸಹೋದರ ಉದಯಾದಿತ್ಯನು ಶ್ರೀರಂಗಪಟ್ಟಣದ ಸುತ್ತಮುತ್ತ ದಟ್ಟವಾಗಿ ಹರಡಿದ್ದ ಕಾಡನ್ನು ಕಡಿದುಹಾಕಿ ಆ ಪ್ರದೇಶ ವಾಸಕ್ಕೆಯೋಗ್ಯವಾಗುವಂತೆ ಮಾಡಿದನು. 1336ರಲ್ಲಿ ಹಕ್ಕ ಬುಕ್ಕರೆಂಬ ಸಹೋದರರು ಉತ್ತರದಿಂದ ಮೇಲೇರಿಬರುತ್ತಿದ್ದ ಮುಸ್ಲಿಮರ ದಂಡಯಾತ್ರೆಯನ್ನು ತಡೆಗಟ್ಟುವುದಕ್ಕೂ ದಕ್ಷಿಣದಲ್ಲಿ ಹಿಂದೂ ಧರ್ಮವನ್ನು ರಕ್ಷಿಸುವುದಕ್ಕೂ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ವಿಜಯನಗರದ ಸಾಳುವ ವಂಶದ ನರಸ ನಾಯಕನು (1491–1503) ತನ್ನ ಅಧಿಕಾರವನ್ನು ಭದ್ರಪಡಿಸಿಕೊಂಡ ಮೇಲೆ ಒಂದನೇ ಸಾಳುವ ನರಸಿಂಹನು ಪೂರ್ಣ ಮಾಡದೆ ಬಿಟ್ಟು ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡನು. ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಅವಿಧೇಯತೆ ಯಿಂದ ನಡೆಯುತ್ತಿದ್ದ ಸಾಮಂತರನ್ನು ಅಡಗಿಸಿದನು. ಶ್ರೀರಂಗಪಟ್ಟಣದ ಕೋಟೆಯನ್ನು ವಶಪಡಿಸಿಕೊಂಡ ಅವನು ಉಮ್ಮತ್ತೂರು ನಾಯಕನನ್ನು ಸದೆಬಡಿದನು. ತುಳುವವಂಶಕ್ಕೆ ಸೇರಿದ್ದ ಕೃಷ್ಣದೇವರಾಯನು (1509–1529) ವಿಜಯನಗರದ ಅರಸುಗಳಲ್ಲೆಲ್ಲ ಅತಿ ಶ್ರೇಷ್ಠನು. ಸಿಂಹಾಸನವನ್ನೇರಿದನಂತರ ಅವನು ಉಮ್ಮತ್ತೂರು ಪಾಳೇಗಾರರ ಕಡೆ ತನ್ನ ಗಮನವನ್ನು

ಹರಿಸಿದನು. ಸಾಮ್ರಾಜ್ಯದ ಅಧಿಕಾರವನ್ನು ಉಲ್ಲಂಘಿಸಿ, ಗಂಗರಾಯು ಎಂಬುವವನು ಪೆನುಗೊಂಡೆಯನ್ನು ಆಕ್ರಮಿಸಿಕೊಂಡನು. ಪೆನುಗೊಂಡೆಗೆ ಸೈನ್ಯ ಸಮೇತನಾಗಿ ಧಾವಿಸಿದ ಕೃಷ್ಣದೇವರಾಯನು ರಂಗರಾಯನನ್ನು ಯುದ್ಧದಲ್ಲಿ ಸೋಲಿಸಿ, ಅವನನ್ನು ರಾಜಧಾನಿಯವರೆಗೂ ಅಟ್ಟಿಸಿಕೊಂಡು ಹೋದನು. ಅವನ ಮುಖ್ಯ ಕೇಂದ್ರಸ್ಥಳಗಳಾದ ಶ್ರೀರಂಗಪಟ್ಟಣ ಮತ್ತು ಉಮ್ಮತ್ತೂರು ಎರಡು ಕೋಟೆಗಳ ಮೇಲು ಮುತ್ತಿಗೆ ಹಾಕಿ ಸೆಳೆದನು. ಗಂಗರಾಯನು ಪ್ರಾಣ ಕಳೆದುಕೊಂಡನು. ಕೃಷ್ಣದೇವರಾಯ ಅವೆರಡು ಪ್ರದೇಶಗಳ ಮೇಲೆ ವಿಜಯಪತಾಕೆಯನ್ನು ಹಾರಿಸಿದನು. ವಶಪಡಿಸಿಕೊಂಡ ಪ್ರದೇಶಗಳಿಗೆ ಅವನು ಗವರ್ನರ್‌ಗಳನ್ನು ನೇಮಿಸಿದರು. ಬೆಂಗಳೂರಿನ ನಿರ್ಮಾಪಕ ಕೆಂಪೇಗೌಡ ಮತ್ತಿಬ್ಬರು ಗವರ್ನರ್‌ಗಳಾದರು.

ವಿಜಯನಗರದ ಅರಿವೀಡು ವಂಶಕ್ಕೆ ಸೇರಿದ ತಿರುಮಲ ಎಂಬುವವನು (1570–78) ಸಾಮ್ರಾಜ್ಯವನ್ನು ಮೂರು ಪ್ರಾಂತಗಳನ್ನಾಗಿ ವಿಂಗಡಿಸಿ, ಅವುಗಳಿಗೆ ತನ್ನ ಮಕ್ಕಳನ್ನು ವೈಸ್‌ರಾಯಿಗಳಾಗಿ ನೇಮಿಸಿದನು. ಪ್ರಾಂತಗಳನ್ನು ಭಾಷಾಧಾರದ ಮೇಲೆ ವಿಭಜಿಸಿದನು. ಹಿರಿಯಮಗ ಶ್ರೀರಂಗರಾಯನು ಆಂಧ್ರ ಪ್ರದೇಶದ ಜವಾಬ್ದಾರಿಯನ್ನು ವಹಿಸಿದನು. ಕನ್ನಡವೇ ಪ್ರಧಾನವಾಗಿದ್ದ ಪ್ರಾಂತಗಳನ್ನು ಒಟ್ಟುಗೂಡಿಸಿ ಅವುಗಳ ಮೇಲ್ವಿಚಾರಣ ಜವಾಬ್ದಾರಿಯನ್ನು ಎರಡನೆಯ ಮಗ ರಾಮರಾಯನಿಗೆ ವಹಿಸಲಾಯಿತು. ಮೂರನೇ ಮಗ ವೆಂಕಟಪತಿ ಚಂದ್ರಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತಮಿಳು ದೇಶವನ್ನು ಆಳಲು ಆರಂಭಿಸಿದನು. ಕನ್ನಡ ಪ್ರದೇಶಕ್ಕೆ ನೇಮಕಗೊಂಡ ರಾಮರಾಯನಿಗೆ ಶ್ರೀರಂಗಪಟ್ಟಣವೇ ರಾಜಧಾನಿಯಾಯಿತು. ಇಂತಹ ವಿಭಜನೆ ಸಾಧುವಾಗಿರಲಿಲ್ಲ. ತಿರುಮಲನ ಅನಂತರ ಎರಡನೇ ಶ್ರೀರಂಗರಾಯನು (1578–86) ಚಕ್ರವರ್ತಿಯಾದನು. ಅವನ ಅನಂತರ ವೆಂಕಟಪತಿರಾಯ (1586–1614) ಸಿಂಹಾಸನವನ್ನೇರಿದನಂ. ವೆಂಕಟಪತಿರಾಯನು ಚಕ್ರವರ್ತಿಯಾಗಿದ್ದಾಗ ಶ್ರೀರಂಗಪಟ್ಟಣದಲ್ಲಿ ರಾಮರಾಯನ ಮಗ ತಿರುಮಲ ಎಂಬುವವನು ವೈಸ್‌ರಾಯಿಯಾಗಿದ್ದನು. ಚಕ್ರವರ್ತಿ ಚಿಕ್ಕಪ್ಪನಿಗೂ ವೈಸ್‌ರಾಯ್ ಅವನ ಸಹೋದರನ ಮಗನಿಗೂ ಉತ್ತಮವಾದ ಬಾಂಧವ್ಯವಿರಲಿಲ್ಲ.

ವಿಜಯನಗರದ ಪತನಾನಂತರ ಅದರ ಕೀರ್ತಿ ಪ್ರತಿಷ್ಠೆಗಳನ್ನೂ, ಸಾಹಿತ್ಯ ಸಂಸ್ಕೃತಿಗಳನ್ನು ಕಾಪಾಡಲು ಹಾಗೂ ಜೀರ್ಣೋದ್ಧಾರ ಮಾಡಲು ಮುಂದೆ ಬಂದ ರಾಜ್ಯವೆಂದರೆ ಮೈಸೂರು. ಮೈಸೂರು ಒಡೆಯರು ಒಂದು ರೀತಿಯಲ್ಲಿ ವಿಜಯನಗರದ ಅರಸುಗಳ ಉತ್ತರಾಧಿಕಾರಿಗಳಂತೆಯೇ ಕಾಣುತ್ತಿದ್ದರು. ಅವರಲ್ಲಿ ಶೇಷ ದೊರೆಗಳಿದ್ದರು. ದೂರದರ್ಶಿತ್ವವುಳ್ಳ ದಿವಾನರುಗಳು ಮೈಸೂರಿನ ಕೀರ್ತಿಯನ್ನು ಹೆಚ್ಚಿಸಿದರು. ವಿಜಯನಗರಸಾಮ್ರಾಜ್ಯ ಅಳಿದುಹೋದ ಮೇಲೆ ನಿಜವಾಗಿಯೂ ಕರ್ನಾಟಕವನ್ನು ಕಳೆದು ಕೊಂಡಿತು ಎಂಬ ಕಲ್ಪನೆ ಅವರಲ್ಲಿ ಸುಸ್ಪಷ್ಟವಾಗಿತ್ತು.

ಮೈಸೂರು ಒಡೆಯರ ಆರಂಭದ ಚರಿತ್ರೆ ದಂತಕಥೆಗಳಿಂದ ಕೂಡಿದೆ. ಅವರ ಆಳ್ವಿಕೆ ನಿಜವಾಗಿಯೂ ಐತಿಹಾಸಿಕ ಬೆಳಕಿಗೆ ಬಂದುದು ರಾಜ ಒಡೆಯರ ಕಾಲದಲ್ಲಿ. ಕ್ರಿ. ಶ. 1578ರಲ್ಲಿ ಸಿಂಹಾಸನಕ್ಕೆ ಬಂದ ಅವರು ಸಾಯುವವರೆಗೆ (1617) ಸುಮಾರು



ಶ್ರೀರಂಗಪಟ್ಟಣದ ಕೋಟೆಯ ಬಾಗಿಲು

ನಲವತ್ತು ವರ್ಷಗಳ ಯಾವ ಅಡತಡೆ ಇಲ್ಲದೆ ರಾಜ್ಯಭಾರ ಮಾಡಿದರು. ತಮ್ಮ ಶಕ್ತಿ ಸಾಮರ್ಥ್ಯಗಳಿಂದಲೂ, ರಾಜಕೀಯ ಸ್ಥೈರ್ಯತೆಯಿಂದಲೂ ಅವರು ಅಧಿಕಾರದುರವನ್ನೇರಿದರು. ಕೇವಲ 33 ಹಳ್ಳಿಗಳಿಂದ ಕೂಡಿದ ಒಂದು ಸಣ್ಣ ಪಾಳೆಯಪಟ್ಟನ್ನು ಅವರು ಒಂದು ರಾಜ್ಯವನ್ನಾಗಿ ಮಾರ್ಪಡಿಸಿದರು. ವಿಜಯನಗರದ ವೈಸ್‌ರಾಯಿಯು ಶ್ರೀರಂಗಪಟ್ಟಣದಲ್ಲಿ ಇದ್ದರೂ ಕೂಡ ಅವರು ನೆರೆಹೊರೆಯ ರಾಜ್ಯಗಳ ಮೇಲೆ ಧಾಳಿ ಮಾಡಿ ಅವನ್ನು ಮೈಸೂರಿಗೆ ಸೇರಿಸಿಕೊಂಡರು. 1610ರಲ್ಲಿ ಅವರು ವಿಜಯನಗರದ ವೈಸ್‌ರಾಯಿಯನ್ನೇ ಓಡಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡರು. ಈ ಘಟನೆ ನಡೆದುಹೋದ ಮೇಲೆ ಒಡೆಯರಿಗೆ ಶ್ರೀರಂಗಪಟ್ಟಣವೇ ರಾಜಧಾನಿ ಆಯಿತು. 1799ರಲ್ಲಿ ಅದನ್ನು ಇಂಗ್ಲಿಷರು ಟಿಪ್ಪುವಿನಿಂದ ವಶಪಡಿಸಿಕೊಂಡರು. ಒಟ್ಟಿನಲ್ಲಿ 1610 ರಿಂದ 1799ರವರೆಗೆ ಶ್ರೀರಂಗಪಟ್ಟಣವು ಒಡೆಯರ್ ವಂಶಸ್ಥರಿಗೆ ರಾಜಧಾನಿಯಾಗಿತ್ತು. ರಾಜ್ಯವು ವಿಸ್ತರಿಸಿದಂತೆ ಅದರ ಆಡಳಿತವನ್ನು ನಡೆಸುವ ಹೊಣೆಗಾರಿಕೆಯೂ ಜಾಸ್ತಿಯಾಯಿತು. ಆಡಳಿತದ ಅನುಕೂಲತೆಗಾಗಿ ದಳವಾಯಿ ಮತ್ತು ಸರ್ವಾಧಿಕಾರಿ ಎಂಬ ಎರಡು ಹುದ್ದೆಗಳನ್ನು ನಿರ್ಮಿಸಲಾಯಿತು. ದಳವಾಯಿ ಸೈನ್ಯಾಧಿಪತಿಯಾಗಿದ್ದರೆ ಸರ್ವಾಧಿಕಾರಿ ಮುಖ್ಯ ಆಡಳಿತಗಾರನಾಗಿದ್ದನು. ರಾಜ ಒಡೆಯರು ಮೈಸೂರು, ಮೇಲುಕೋಟೆ ಮತ್ತು ಶ್ರೀರಂಗಪಟ್ಟಣಗಳಲ್ಲಿ ದೇವಾಲಯಗಳನ್ನು



ರಂಗನಾಥಸ್ವಾಮಿ ದೇವಾಲಯ



ಟಿಪ್ಪುವಿನ ಗೋರಿ

ಕಟ್ಟಿಸಿ ಅವುಗಳಿಗೆ ದಾನ ದತ್ತಿಗಳನ್ನು ನೀಡಿದರು. ಒಟ್ಟಿನಲ್ಲಿ ಶ್ರೀರಂಗಪಟ್ಟಣ ಅವರ ಆಳ್ವಿಕೆಯಲ್ಲಿ ಪ್ರಸಿದ್ಧಿಗೆ ಬಂದಿತು.

17ನೇ ಶತಮಾನದ ಪ್ರಸಿದ್ಧ ದೊರೆಗಳಲ್ಲಿ ಕಂಠೀರವ ನರಸರಾಜ ಒಡೆಯರು (1638–59) ಒಬ್ಬರು. ಶ್ರೀರಂಗಪಟ್ಟಣದ ರತ್ನ ಸಿಂಹಾಸನವನ್ನೇರಿದ ಅವರು ತಮ್ಮ ಮೊದಲಿನ ವರ್ಷದ ಆಳ್ವಿಕೆಯಲ್ಲೇ ಬಿಜಾಪುರದವರ ಧಾಳಿಯನ್ನು ಎದುರಿಸಬೇಕಾಯಿತು. 1639ನೇ ಜನವರಿ 18ರಂದು ಬಿಜಾಪುರದ ರಣದುಲ್ಲಾಖಾನ್ ಎಂಬುವವನು ಭಾರಿ ಸೈನ್ಯದೊಂದಿಗೆ ಧಾವಿಸಿ ಶ್ರೀರಂಗಪಟ್ಟಣದ ಕೋಟೆಯನ್ನು ಮುತ್ತಿದನು. ಅವನನ್ನು ಹಿಮ್ಮೆಟ್ಟಿಸಲಾಯಿತು. ಆದಾಗ್ಯೂ ರಣದುಲ್ಲಾಖಾನನು ಸ್ಥಳೀಯ ಪಾಳೇಗಾರರ ಸಹಾಯವನ್ನು ಪಡೆದು ಮತ್ತೆ ಆಕ್ರಮಣ ಮಾಡಿದನು. ಮೈಸೂರಿನವರು ರಾತ್ರಿಯಕಾಲ ನಡೆಸಿದ ಆಕ್ರಮಣಗಳು ಬಿಜಾಪುರ ದವರು ತತ್ತರಿಸಿ ಓಡಿಹೋಗುವಂತೆ ಮಾಡಿದವು. ಅಂತಿಮ ಧಾಳಿಯಲ್ಲಿ ಬಿಜಾಪುರದವರ ಕೈ ಮೇಲಾಯಿತು. ಕಂಠೀರವ ನರಸರಾಜರು 1639ನೇ ಜನವರಿ ತಿಂಗಳಿನಲ್ಲಿ ಕರಾರಿಗೆ ಸಹಿ ಹಾಕಿ. ಬಿಜಾಪುರದವರೊಂದಿಗೆ ಶಾಂತಿ ಒಪ್ಪಂದವನ್ನು ಮಾಡಿಕೊಂಡರು. ಇದರ ಪರಿಣಾಮವಾಗಿ ನರಸರಾಜರು ಜಗದೇವರಾಯನಿಂದ ಕಸಿದುಕೊಂಡಿದ್ದ ಪ್ರದೇಶಗಳನ್ನು ಕಳೆದುಕೊಂಡರು. ಒಟ್ಟಿನಲ್ಲಿ ಬಿಜಾಪುರದ ಸುಲ್ತಾನನು ಶ್ರೀರಂಗಪಟ್ಟಣದ ಮೇಲೆ ಎಂಟು ಧಾಳಿಗಳನ್ನು ವ್ಯವಸ್ಥೆಗೊಳಿಸಿ ಕಳುಹಿಸಿಕೊಟ್ಟನು ಇವೆಲ್ಲವನ್ನೂ ಹಿಮ್ಮೆಟ್ಟಿಸಿದ ಕೀರ್ತಿ ಮೈಸೂರು ಅರಸರಿಗೆ ಸೇರುತ್ತದೆ.

ಲಿಯೊನಾರ್ಡೊ ಪಿಸ್ಸಾಮಿ ಎಂಬ ಇಟಲಿಯ ಪ್ರವಾಸಿಯು 1647ರಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿಕೊಟ್ಟ. ಅದರ ವೈಭವವನ್ನು ಪ್ರಮುಖವಾಗಿ ವರ್ಣಿಸಿದ್ದಾನೆ. 60,000 ಸೈನಿಕರೊಡಗೂಡಿ ಬಂದ ಬಿಜಾಪುರದ ಆದಿಲ್‌ಶಾಹನ ಸೇನಾನಿ ಮುಸ್ತಫ್ ಖಾನನು ಶ್ರೀರಂಗಪಟ್ಟಣದ ಸಮೀಪದಲ್ಲಿ ಮೈಸೂರಿನವರಿಂದ ಪೆಟ್ಟು ತಿಂದು ಕಾಲಿಗೆ ಬುದ್ಧಿ ಹೇಳಿದನು ಎಂಬುದಾಗಿ ಆ ಪ್ರವಾಸಿ ತಿಳಿಸುತ್ತಾನೆ. 17ನೇ ಶತಮಾನದ ಮತ್ತೊಬ್ಬ ಪ್ರಸಿದ್ಧ ದೊರೆ ದೊಡ್ಡ ದೇವರಾಜ ಒಡೆಯರು (1659–72). ಮೈಸೂರು ರಾಜ್ಯವಿಸ್ತರಣ ನೀತಿಯನ್ನು ಮುಂದುವರಿಸಿದ ಅವನು ಮದುರೆ ನಾಯಕನನ್ನು ಸೋಲಿಸಿ, ಈರೋಡ್, ಧಾರಾಪುರಂ ಮತ್ತಿತರ ಪ್ರದೇಶಗಳನ್ನು ವಶಪಡಿಸಿಕೊಂಡನು. ಆಶ್ರಯವನ್ನು ಬೇಡಿಬಂದ ವಿಜಯನಗರದ ಚಕ್ರವರ್ತಿ ಶ್ರೀರಂಗರಾಯನು, ಕಂಠೀರವ ನರಸರಾಜರ ಆಸ್ಥಾನದಲ್ಲಿ ಸ್ವಲ್ಪ ಕಾಲವಿದ್ದು, ಅನಂತರ ಇಕ್ಕೇರಿಯ ಶಿವಪ್ಪನಾಯಕನ ಹತ್ತಿರ ಹೋಗಿ ಸಹಾಯ ಕೋರಿದನು. ಶ್ರೀರಂಗರಾಯನಿಗೆ ಸಹಾಯ ಮಾಡುವ ನೆಪದಲ್ಲಿ ಶಿವಪ್ಪನಾಯಕನು ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದನು. ದೊಡ್ಡದೇವರಾಜಒಡೆಯರು ಅವನನ್ನು ಯುದ್ಧದಲ್ಲಿ ಸೋಲಿಸಿ, ಅವನಿಂದ ಹಾಸನ, ಸಕ್ಕರೆ ಪಟ್ಟಣ ಮೊದಲಾದ ಪ್ರದೇಶಗಳನ್ನು ಕಿತ್ತುಕೊಂಡನು. ದೊಡ್ಡದೇವರಾಜರ ಆಳ್ವಿಕೆಯ ಕಾಲದಲ್ಲೇ ಮೈಸೂರಿಗೂ ಯೂರೋಪಿಯನ್ನರಿಗೂ ಸಂಬಂಧ ಕುದುರಿತು." ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳುವ ಉದ್ದೇಶದಿಂದ ಮೈಸೂರಿನ ರಾಜಧಾನಿ ಶ್ರೀರಂಗಪಟ್ಟಣಕ್ಕೆ ಫ್ರೆಂಚ್ ಪ್ರತಿನಿಧಿ ಪ್ಲಾಕಮ್ ಮತ್ತು ಡಲ್ಲನ್ ಎಂಬ ವೈದ್ಯ ಇಬ್ಬರೂ ಹೋಗಿದ್ದರು" ಎಂಬುದಾಗಿ ಇತಿಹಾಸ ತಜ್ಞ ಆರಮ್ ತಿಳಿಸುತ್ತಾರೆ.

ದೊಡ್ಡ ದೇವರಾಜರ ಉತ್ತರಾಧಿಕಾರಿಯಾಗಿ ಚಿಕ್ಕದೇವರಾಜ ಒಡೆಯರು (1672–1704) ಸಿಂಹಾಸನವನ್ನೇರಿದರು. ಮರಾಠರು, ಮೊಗಲರು ಮತ್ತು ಬಿಜಾಪುರದವರ ಮಧ್ಯೆ ನಡೆದ ತ್ರಿಕೋಣ ಸ್ಪರ್ಧೆಯಲ್ಲಿ ಚಿಕ್ಕದೇವರಾಜರು ಸಕ್ರಿಯವಾಗಿ ಭಾಗವಹಿಸಿದರು. 1677ರಲ್ಲಿ ಮರಾಠರ ನಾಯಕ ಶಿವಾಜಿಯು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕುವ ಉದ್ದೇಶದಿಂದ ಅಲ್ಲಿಗೆ



ಟಿಪ್ಪು ಸುಲ್ತಾನ್



ಟಿಪ್ಪು ಸತ್ತ ಸ್ಥಳ

ಬಂದನು. ಚಿಕ್ಕದೇವರಾಜರು ಮರಾಠರ ಸೈನ್ಯವನ್ನು ಸೋಲಿಸಿ, ಅಲ್ಲಿಂದ ಅವರನ್ನು ಓಡಿಸಿ, "ಅಪ್ರತಿಮ ವೀರ" ಎಂಬ ಬಿರುದನ್ನು ಗಳಿಸಿದರು. 1682ರಲ್ಲಿ ದಾದಜಿ, ಜೈತಜಿನ ಮತ್ತು ನಿಂಬಾಲ್ಕರ್ ಎಂಬ ಮರಾಠ ಸರದಾರರು ಶ್ರೀರಂಗಪಟ್ಟಣದ ಮೇಲೆ ಧಾಳಿಗರೆದರು. ಮೈಸೂರು ಸೈನ್ಯವು ಅವನನ್ನು ಯುದ್ಧದಲ್ಲಿ ಕೊಂದು, ಅವರ ಸೈನ್ಯವನ್ನು ದಿಕ್ಕಾಪಾಲಾಗಿ ಓಡಿಸಿತು. ಚಿಕ್ಕದೇವರಾಜರು ಮೂರುಲಕ್ಷ ರೂಪಾಯಿಗಳಿಗೆ ಬೆಂಗಳೂರನ್ನು ಖಾಸಿಂಖಾನ್ ಎಂಬುವವನಿಂದ ಪಡೆದರು, ಮೊಗಲ್ ಚಕ್ರವರ್ತಿ ಔರಂಗ್‌ಜೇಬನೊಂದಿಗೆ ಅವರು ಸ್ನೇಹ ಸಂಬಂಧವನ್ನಿಟ್ಟುಕೊಂಡಿದ್ದರು. 1699ರಲ್ಲಿ ಮೊಗಲ್ ಆಸ್ಥಾನಕ್ಕೆ ಕರಣಿಕ ಲಿಂಗಯ್ಯ ಎಂಬ ರಾಯಭಾರಿಯನ್ನು ಚಿಕ್ಕದೇವರಾಜರು ಕಳುಹಿಸಿದರು, ಮೈಸೂರು ರಾಯಭಾರಿಯನ್ನು ಗೌರವದಿಂದ ಬರಮಾಡಿ ಕೊಂಡ ಔರಂಗಜೇಬನು, ರಾಜನ ಕ್ಷೇಮ ಸಮಾಚಾರವನ್ನು ವಿಚಾರಿಸಿದುದಲ್ಲದೆ, ಅವರಿಗೆ "ರಾಜಾಜಗದೇವ್" ಎಂಬ ಬಿರುದನ್ನು ದಯಪಾಲಿಸಿ ಅವನನ್ನು ಬೀಳ್ಕೊಟ್ಟನು. ಇದರಿಂದ ಮೈಸೂರಿನ ಕೀರ್ತಿ ಉತ್ತರದ ಡೆಲ್ಲಿಯಲ್ಲಿಯೂ ಪಸರಿಸಿತು. ಯುದ್ಧಗಳು ಆಗಾಗ್ಗೆ ನಡೆಯುತ್ತಿದ್ದುದರಿಂದ ಚಿಕ್ಕದೇವರಾಜರು ಶ್ರೀರಂಗಪಟ್ಟಣದಲ್ಲಿ ಮದ್ದು ಗುಂಡುಗಳ ಮಳಿಗೆಗಳನ್ನು ಕಟ್ಟಿಸಿದರು, ಸೈನ್ಯಕ್ಕೆ ಅಲ್ಲಿ ತಕ್ಕ ತರಬೇತಿ ಕೊಡಿಸಲು ಏರ್ಪಾಡುಮಾಡಿದರು. ಕೋಟೆಯನ್ನು ದುರಸ್ತುಗೊಳಿಸಿದರು. ಶ್ರೀರಂಗಪಟ್ಟಣದ ಬಳಿ ಕಾವೇರಿ ನದಿಗೆ ಅಣೆಕಟ್ಟು ಕಟ್ಟಿಸಿ, ಚಿಕ್ಕದೇವರಾಜನಾಲೆ ಮತ್ತು ದೇವರಾಜನಾಲೆ ಎಂಬುದಾಗಿ ಎರಡು ನಾಲೆಗಳನ್ನು ತೋಡಿಸಿದರು. ಸಾಹಿತ್ಯ ಚರಿತ್ರೆಯಲ್ಲಿ ಚಿಕ್ಕದೇವರಾಜರ ಕಾಲ ಒಂದು ಸುವರ್ಣಯುಗ ಚಿಕ್ಕ ಉಪಾಧ್ಯಾಯ, ತಿಮ್ಮಕವಿ, ಮಲ್ಲರಸ, ತಿರುಮಲಾರ್ಯ, ಸಿಂಗರಾರ್ಯ, ಷಡಕ್ಷರಯ್ಯ, ಚಿಕ್ಕಣ್ಣ ಪಂಡಿತ, ಸಂಚಿಹೊನ್ನಮ್ಮ, ಶ್ರೀರಂಗಮ್ಮ ಮೊದಲಾದ ಶ್ರೇಷ್ಠ ಬರಹಗಾರರು ರಾಜಾಸ್ಥಾನದಲ್ಲಿ ಕಂಗೊಳಿಸುತ್ತಿದ್ದರು. ಚಿಕ್ಕದೇವರಾಜ ಒಡೆಯರು ಸ್ವತಃ ಬರಹಗಾರರಾಗಿದ್ದರು. ಈ ರೀತಿಯಲ್ಲಿ ಶ್ರೀರಂಗಪಟ್ಟಣ ಚಿಕ್ಕದೇವರಾಜರ ಕಾಲದಲ್ಲಿ ಒಂದು ಅದ್ವಿತೀಯ ಜ್ಞಾನಕೇಂದ್ರವಾಗಿ ಬೆಳೆಯಿತು.

ಔರಂಗಜೇಬನ ವಿದೇಶಾಂಗ ನೀತಿಯಲ್ಲಿ ಯಾವೊಂದು ಕಟ್ಟು ನಿಟ್ಟು ಇರಲಿಲ್ಲ. ಚಿಕ್ಕದೇವರಾಜರು ಮರಣಹೊಂದಿದ ಮೇಲೆ ಅವನು ಮೈಸೂರು ರಾಜ್ಯವನ್ನು ಧಾಳಿಮಾಡುವುದಕ್ಕಾಗಿ ಒಂದು ದೊಡ್ಡ ಮೊಗಲ್ ಸೈನ್ಯವನ್ನು ಕಳುಹಿಸಿಕೊಟ್ಟನು. 1705ರಲ್ಲಿ ಮೈಸೂರು ದೊರೆ ಮೊಗಲರಿಗೆ ಒಂದುಕೋಟಿ ಐವತ್ತುಲಕ್ಷ ರೂಪಾಯಿಗಳನ್ನು ಕೊಟ್ಟು ಶಾಂತಿ ಸಂಧಾನ ಮಾಡಿಕೊಂಡನು.

1754ರಲ್ಲಿ ಮತ್ತೆ ಮೊಗಲರು ಶ್ರೀರಂಗಪಟ್ಟಣದ ಕೋಟೆಗೆ ಲಗ್ಗೆ ಹಾಕಿದರು. [ಘನ ಒಂದು ಕೋಟಿ ರೂಪಾಯಿಯನ್ನು ಕೊಟ್ಟು ಧಾಳಿಕಾರರನ್ನು ಪೇಷ್ವೆ ಬಾಜೀರಾಯನು ಮೂರನೆಯ ವರ್ಷ ಕೋಟೆಗೆ ಮುತ್ತಿಗೆ ಹಾಕಿದನು.] ಕೋಟೆಯ ಬುರುಜುಗಳಿಂದ ಸಿಡಿಯುತ್ತಿದ್ದ ಮದ್ದು ಗುಂಡುಗಳನ್ನು ನೋಡಿ "ಅಯ್ಯೋ, ಇದು ಶ್ರೀರಂಗಪಟ್ಟಣವಲ್ಲ, ಫಿರಂಗಿ ಪಟ್ಟಣ" ಎಂದು ಗೋಳಿಡುತ್ತಾ ಪೇಷ್ವೆಯು ಬಂದದಾರಿಯನ್ನು ಹಿಡಿದನು. ಹೀಗೆ 18ನೇ ಶತಮಾನದ ಆದಿಭಾಗದಲ್ಲಿ ಮೊಗಲ್ ಮತ್ತು ಮರಾಠರ ಧಾಳಿಗಳಿಂದ ಮೈಸೂರು ತತ್ತರಿಸಿತು.

ಮುಂದೆ 1761ರ ವೇಳೆಗೆ ಹೈದರ್ ಆಲಿಯು ಪ್ರಾಬಲ್ಯಕ್ಕೆ ಬಂದನು. ಮೈಸೂರು ರಾಜರನ್ನು ಮೂಲೆಗೊತ್ತಿ ತಾನೇ ಆಡಳಿತ ನಡೆಸತೊಡಗಿದನು. ಇವನ ಮತ್ತು ಇವನ ಮಗ ಟಿಪ್ಪು–ಇವರ ಕಾಲದಲ್ಲಿಯೂ ಶ್ರೀರಂಗಪಟ್ಟಣವೇ ರಾಜಧಾನಿಯಾಗಿತ್ತು. ಹೈದರನು ಎರಡು ದಶಕಗಳ ಕಾಲ ರಾಜ್ಯವಾಳಿದನು. ಅವನು ದಂಗೆಕೋರ ಪಾಳೇಗಾರರನ್ನು ಅಡಗಿಸಿದುದಲ್ಲದೆ ನೈಜಾಂ, ಮರಾಠರು ಹಾಗೂ ಇಂಗ್ಲಿಷರ ವಿರುದ್ಧವೂ ಹೋರಾಟ ನಡೆಸಿದನು. ಬಿದನೂರು ರಾಜ್ಯವನ್ನು ವಶಪಡಿಸಿಕೊಂಡ ಹೈದರನು ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಬಿದನೂರಿಗೆ ವರ್ಗಾಯಿಸಲು ಯೋಚಿಸಿ, ಆ ಯೋಜನೆಯನ್ನು ಅಂತಿಮವಾಗಿ ಕೈ ಬಿಟ್ಟನು. ಅವನು ಕೋಟೆಯನ್ನು ದುರಸ್ತುಗೊಳಿಸಿದನು, ರಾಜ್ಯದ ಗಡಿಗಳನ್ನು ವಿಸ್ತರಿಸಿದನು, ಆಕ್ರಮಿಸಿಕೊಂಡ ಪ್ರದೇಶಗಳನ್ನು ಕ್ರೋಢೀಕರಿಸಿದನು ಮತ್ತು ಮೈಸೂರಿನ ಶ್ರೇಷ್ಠತೆಯನ್ನು ಭಾರತದ ಮೂಲೆಮೂಲೆಗೂ ಹರಡುವಂತೆ ಮಾಡಿದನು. ಭಾರತದ ದೇಶದ ಚರಿತ್ರೆಯಲ್ಲಿ ಅವನಿಗೆ ಶಾಶ್ವತ ಸ್ಥಾನವಿದೆ.

ಹೈದರನ ಮರಣಾನಂತರ ಟಿಪ್ಪು ಅಧಿಕಾರಕ್ಕೆ ಬಂದನು (1782–1799) ಈತನು ವೀರ, ಧೀರ, ರಣೋತ್ಸಾಹಿ ಇವನಿಗೆ ಇಂಗ್ಲಿಷರನ್ನು ಕಂಡರೆ ಆಗುತ್ತಿರಲಿಲ್ಲ. ಪ್ರಪಂಚದಲ್ಲಿ ತನಗೆ ಕಡುವೈರಿಗಳಿದ್ದರೆ ಅವರು ಇಂಗ್ಲಿಷರೇ ಎಂದು ಹೇಳುತ್ತಿದ್ದನು. ಈ ಗುಣ ತಂದೆ ಹೈದರನಿಂದ ಪಡೆದಿದ್ದು. ಇಂಗ್ಲಿಷರನ್ನು ಭಾರತದಿಂದಲೇ ಓಡಿಸಬೇಕೆನ್ನುವುದು ಟಿಪ್ಪುವಿನ ಹಟ. ಉತ್ತರ ಭಾರತದ ರಾಜಮಹಾರಾಜರು ಭಾರತದಲ್ಲಿ ಬ್ರಿಟಿಷರ ಮೂಲಸಂಕಲ್ಪವೇನು ಎಂಬುದನ್ನು ಚಿಂತಿಸದಿದ್ದ ಕಾಲದಲ್ಲಿ ಆದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡವನು ಟಿಪ್ಪು. ಒಂದು ರೀತಿಯಲ್ಲಿ ಹೇಳುವುದಾದರೆ ಭಾರತದ ಪ್ರಥಮ ಸ್ವಾತಂತ್ರ ಹೋರಾಟಗಾರ ಟಿಪ್ಪುವೇ ಎಂದು ಧಾರಾಳವಾಗಿ ಹೇಳಬಹುದು. ಮುಳ್ಳನ್ನು ಮುಳ್ಳಿನಿಂದಲೆ ತೆಗೆಯಬೇಕೆಂಬ ಅಭಿಪ್ರಾಯವನ್ನಿಟ್ಟುಕೊಂಡಿದ್ದ ಟಿಪ್ಪು ಫ್ರೆಂಚರ ಸಹಾಯವನ್ನು ನಿರೀಕ್ಷಿಸಿದನು. ಆದರೆ ಅವನ ಯೋಜನೆ ತಲೆಕೆಳಗಾಯಿತು. ಅವನು ಬ್ರಿಟಿಷರ ವಿರುದ್ಧ ಎರಡು ಯುದ್ಧ ಗಳನ್ನು ಕೈಗೊಂಡನು. ಮೊದಲನೆಯದು ಶ್ರೀರಂಗಪಟ್ಟಣದ ಕರಾರಿನೊಂದಿಗೆ (22 March 1792) ಮುಕ್ತಾಯಗೊಂಡಿತು. ಕೊನೆಯದು ಅವನ ಕೊನೆಯ ಉಸಿರಿನೊಂದಿಗೆ ಮುಕ್ತಾಯವಾಯಿತು. (4 ಮೇ 1799). ಅದೇ ವರ್ಷ ಬ್ರಿಟಿಷ್ ಸರ್ಕಾರವು ವರ್ಷಕ್ಕೆ 50,000 ರೂಪಾಯಿಗಳನ್ನು ಕೊಡಬೇಕೆಂದು ನಿರ್ಣಯಿಸಿ, ಶ್ರೀರಂಗಪಟ್ಟಣ ದ್ವೀಪವನ್ನು ಮೈಸೂರು ಅರಸರಿಗೆ ವರ್ಗಾಯಿಸಿತು. ಸುಮಾರು ಎರಡು ನೂರು ವರ್ಷಗಳ ಕಾಲ ರಾಜಧಾನಿಯಾಗಿ ಮೆರೆದ ಶ್ರೀರಂಗಪಟ್ಟಣ ಟಿಪ್ಪುವಿನ ಮರಣಾನಂತರ ತನ್ನ ಕಾಂತಿಯನ್ನು ಕಳೆದುಕೊಂಡಿತು.

ಟಿಪ್ಪು ಸ್ವಮತ ಭ್ರಾಂತ, ಹಿಂದೂಗಳ ಪೀಡಕ, ಸ್ವಜನ ಪಕ್ಷಪಾತಿ–ಹೀಗೆ ಹಲವಾರು ಆರೋಪಣೆಗಳು ಅವನ ಮೇಲಿವೆ. ಆದರೆ ಅವನ ಬಗ್ಗೆ ಇರುವ ಐತಿಹಾಸಿಕ ದಾಖಲೆಗಳನ್ನು ಪರಿಶೋಧಿಸಿದಾಗ ಆ ಅಭಿಪ್ರಾಯಗಳು ಸುಳ್ಳೆನಿಸುತ್ತವೆ. ಅವನು ಬ್ರಿಟಿಷರನ್ನು ವಿರೋಧಿಸಿದನು. ಅವರನ್ನು ದೇಶದಿಂದ ಓಡಿಸಬೇಕೆಂದು ಯೋಜನೆಗಳನ್ನು ರೂಪಿಸಿದನು. ಈ ಯೋಜನೆಯ ಯಶಸ್ಸಿಗೆ ತನ್ನಲ್ಲಿದ್ದ ಸಂಪತ್ಸಾಧನಗಳೆಲ್ಲವನ್ನೂ ಉಪಯೋಗಿಸಿದನು. ಆದರೆ ಅದು ಫಲಕಾರಿಯಾಗಲಿಲ್ಲ. ಅವನು ತನ್ನ ಪ್ರಜೆಗಳನ್ನು ಬಹುವಾಗಿ ಪ್ರೀತಿಸುತ್ತಿದ್ದನು. ದೇಶದ ಕಲ್ಯಾಣಕ್ಕಾಗಿ ಪ್ರಜೆಗಳ ಹಿತಸಾಧನೆಗಾಗಿ ಅವನು ವ್ಯಾಪಾರ, ವಾಣಿಜ್ಯ, ಕೈಗಾರಿಕೆ, ವ್ಯವಸಾಯಗಳಿಗೆ ಪ್ರೋತ್ಸಾಹ ನೀಡಿದನು. ಅವನ ಆಡಳಿತ ಸುಭದ್ರವಾಗಿತ್ತು. ಆಡಳಿತ ಪದ್ಧತಿಯಲ್ಲಿ ಪಾಶ್ಚಿಮಾತ್ಯ ತಂತ್ರ ಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡನು. ಅವನ ಹೊಸ ನೀತಿಯಿಂದಾಗಿ ಮೈಸೂರು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆಯಿತು. ಅವನು ವಾಣಿಜ್ಯ ವಿಭಾಗವನ್ನು ತೆರೆದನು ; ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿದನು : ದೇಶದ ವಿವಿಧ ಭಾಗಗಳಿಂದ ಕಲಾವಿದರನ್ನು ಬರಮಾಡಿಕೊಂಡು ಅವರಿಗೆ ಪ್ರೋತ್ಸಾಹ ನೀಡಿದನು : ನೌಕಾಬಲವನ್ನು ಹೆಚ್ಚಿಸಿದನು : ನ್ಯಾಯ, ಪಂಚಾಂಗ, ನಾಣ್ಯ—ಈ ಕ್ಷೇತ್ರಗಳಲ್ಲಿ ಸುಧಾರಣಾ ಕಾನೂನುಗಳನ್ನು ಜಾರಿಗೆ ತಂದನು. ಹಾಗೂ ಪ್ರಜೆಗಳ ಕ್ಷೇಮಾಭಿ ವೃದ್ಧಿಗಾಗಿ ಅಹೋರಾತ್ರಿ ದುಡಿದನು. ಅವನು ಹಿಂದೂಗಳನ್ನೂ ಅವರ ಸಂಸ್ಕೃತಿಯನ್ನು ಪೋಷಿಸಿದನು. 1791 ರಲ್ಲಿ ಧಾವಿಸಿಬರುತಿದ್ದ ಮರಾಠ ಸೈನ್ಯವು ಶೃಂಗೇರಿ ಮಠವನ್ನು ಸ್ವಲ್ಪ ಹಾನಿಗೊಳಿಸಿತು. ಶೃಂಗೇರಿಯ ಸ್ವಾಮಿಗಳು ಈ ವಿಷಯವನ್ನು ಟಿಪ್ಪುವಿನ ಗಮನಕ್ಕೆ ತಂದಾಗ, ಅವನು ನಿಟ್ಟುಸಿರುಬಿಟ್ಟು ಕೂಡಲೆ ಮಠವನ್ನು ದುರಸ್ತುಗೊಳಿಸಿ ಸ್ವಾಮೀಜಿಯು ಅಲ್ಲಿ ಇರುವಂತೆ ವ್ಯವಸ್ಥೆ ಮಾಡಿದನು. ಟಿಪ್ಪುವು ಶೃಂಗೇರಿ ಸ್ವಾಮಿಜಿಗೆ ಬರೆದ ಮೂವತ್ತು ಪತ್ರಗಳು ಟಿಪ್ಪುವು ಹಿಂದೂ ಸಂಘ

ಸಂಸ್ಥೆಗಳ ಬಗ್ಗೆ ಹೇಗೆ ನಡೆದುಕೊಳ್ಳುತ್ತಿದ್ದನು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಶೃಂಗೇರಿ ದೇವಾಲಯ, ಕಳಲೆ ಲಕ್ಷ್ಮೀಕಾಂತ ದೇವಾಲಯ, ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯ, ನಂಜನಗೂಡಿನ ಶ್ರೀಕಂಠದೇವಾಲಯ, ಶ್ರೀರಂಗಪಟ್ಟಣದಲ್ಲೇ ಇದ್ದ ಗಂಗಾಧರೇಶ್ವರ, ನರಸಿಂಹ ಮತ್ತು ರಂಗನಾಥ ದೇವಾಲಯಗಳು ಟಿಪ್ಪುವಿನಿಂದ ಅನೇಕ ಸೌಲಭ್ಯಗಳನ್ನು ಪಡೆದವು. ಟಿಪ್ಪುವು ಹಿಂದೂ–ಮುಸ್ಲಿಂ ಇಬ್ಬರಿಗೂ ಸರ್ಕಾರದಲ್ಲಿ ನೌಕರಿಗಳನ್ನು ನೀಡುತ್ತಿದ್ದನು. ಪೂರ್ಣಯ್ಯ, ಕೃಷ್ಣರಾವ್, ಶ್ಯಾಮ ಐಂಗಾರ್, ನರಸಿಂಗರಾವ್, ಶ್ರೀನಿವಾಸರಾವ್, ಅಪ್ಪಾಜಿರಾಮ್–ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಟಿಪ್ಪುವಿನ ಚರಿತ್ರೆಯನ್ನು ಅಧ್ಯಯನ ಮಾಡಿದ ಮಹಾತ್ಮಗಾಂಧಿಯವರು. "ಟಿಪ್ಪು ಹಿಂದೂ–ಮುಸ್ಲಿಂ ಏಕತೆಯ ಪ್ರತೀಕವಾಗಿದ್ದನು" ಎಂದು ಹೇಳಿ ಅವನ ಬಗ್ಗೆ ಗೌರವವನ್ನು ತೋರಿಸಿದ್ದಾರೆ.

ಶ್ರೀರಂಗಪಟ್ಟಣವನ್ನು ಸುತ್ತುವರಿದಿರುವ ಗಟ್ಟಿ ಕೋಟೆಯನ್ನು ಈಗಲೂ ನೋಡಬಹುದು. ವಿಶ್ವದಲ್ಲಿರುವ ಕೋಟೆ ಗಳಲ್ಲೆಲ್ಲ ಈ ಕೋಟೆ ಎರಡನೇ ಭದ್ರವಾದ ಕೋಟೆ ಎಂಬ ಹೆಸರನ್ನು ಗಳಿಸಿದೆ. ಟಿಪ್ಪುವಿನ ಅರಮನೆ ಎಂದು ಹೇಳುವ ಲಾಲ್‌ಮಹಲ್ ಸಂಪೂರ್ಣ ನಾಶವಾಗಿದೆ. ಖೈದಿಗಳನ್ನು ಕೂಡಿಡುತ್ತಿದ್ದ ಎರಡು ನೆಲಮಾಳಿಗೆ ಬಂದೀಖಾನೆಗಳಿವೆ. ಕೋಟೆಯ ಸುತ್ತ ಕಂದಕವಿದ್ದು ಅದರಲ್ಲಿ ಕಾವೇರಿ ನದಿಯ ನೀರು ತುಂಬುವಂತೆ ಮಾಡಲಾಗುತ್ತಿತ್ತು. ಕೋಟೆ ಒಳಗಡೆಯೇ ಇರುವ ಜುಮ್ಮಾ ಮಸೀದಿಯನ್ನು 1787ರಲ್ಲಿ ಟಿಪ್ಪು ಕಟ್ಟಿಸಿದನು. ಎರಡು ದೊಡ್ಡ ಮಿನಾರುಗಳಿದ್ದು ಅವುಗಳ ಒಳಗಿನಿಂದ ಮೇಲಕ್ಕೆ ಹತ್ತಿ ಹೋಗಲು ಮೆಟ್ಟಿಲುಗಳಿವೆ.

ಶ್ರೀರಂಗಪಟ್ಟಣದಲ್ಲಿರುವ ಗುಮ್ಮಟವನ್ನು (ಗುಂಬಜ್) ಹೈದರ್ ಆಲಿಯ ಅಪೇಕ್ಷೆಯಂತೆ ಟಿಪ್ಪು ಕಟ್ಟಿಸಿದನೆಂದು ಪ್ರತೀತಿ ಇದೆ. ಇಲ್ಲಿ ಹೈದರ್, ಅವನ ಪತ್ನಿ ಫಕ್ರುನ್ನೀಸಾ ಬೇಗಂ ಹಾಗೂ ಟಿಪ್ಪುಸುಲ್ತಾನರ ಸಮಾಧಿಗಳಿವೆ. ಹೊರಗಡೆ ಟಿಪ್ಪುವಿನ ಪಟ್ಟದ ರಾಣಿಯ ಮತ್ತು ಇತರ ವೀರರ ಸಮಾಧಿಗಳಿವೆ. ಇಲ್ಲಿನ ಬೃಹದಾಕಾರದ ಗುಮ್ಮಟ ಅಲಂಕಾರರಹಿತವಾದದ್ದು. ಕೈಸಾಲೆಯಲ್ಲಿ ರುವ ಕಪ್ಪುಕಂಬಗಳು ಅತಿನುಣುಪಾಗಿ ಬಹು ಆಕರ್ಷಣೀಯವಾಗಿದ್ದು ಬಾಗಿಲುಗಳು ದಂತದ ಕುಶಲ ಕೆತ್ತನೆ ಕೆಲಸಗಳಿಂದ ಕೂಡಿವೆ. ಶ್ರೀರಂಗಪಟ್ಟಣದ ಕೋಟೆ ಹೊರಗಡೆ ಕಾವೇರಿಯ ಉತ್ತರ ದಿಕ್ಕಿನ ಶಾಖೆಗೆ ಹೊಂದಿಕೊಂಡಂತೆ ಒಂದು ವಿಶಾಲ ತೋಟದ ಮಧ್ಯೆ ಇರುವ ಟಿಪ್ಪು ಕಟ್ಟಿಸಿದ (1784) ದರಿಯಾ ದೌಲತ್ (ಬೇಸಗೆ ಅರಮನೆ) ಸುಂದರವಾದದು. ಈ ಅರಮನೆ ಚಿತ್ರಕಲೆಯ ಆಗರ ದರಿಯಾದೌಲತ್ ಅಂದರೆ ಸಮುದ್ರ ಸಂಪತ್ತು ಎಂದರ್ಥ ಟಿಪ್ಪು ಸಮುದ್ರದವರೆಗೆ ರಾಜ್ಯ ವಿಸ್ತರಿಸಿದ ನೆನಪಿಗೆ ಇದನ್ನು ನಿರ್ಮಿಸಿದನೆಂದು ಪ್ರತೀತಿ. ಇಲ್ಲಿ ಟಿಪ್ಪು ರಾಯಭಾರಿಗಳನ್ನೂ ಮುಖ್ಯ ಅತಿಥಿಗಳನ್ನೂ ಸಂದರ್ಶಿಸುತ್ತಿದ್ದನು. ದರಿಯಾ ದೌಲತ್ ಕಟ್ಟಡ ಎತ್ತರವಾದ ಚೌಕನೆ ಜಗತಿಯ ಮೇಲೆ ನಿರ್ಮಿತವಾಗಿದೆ. ದಪ್ಪನಾದ ಕಮಲದಾಕಾರದ ಮರದ ಕಂಬಗಳೂ ಅರೆಗೋಲಾ ಕೃತಿಯ ಕಮಾನುಗಳೂ ಅದರ ಸೌಂದರ್ಯವನ್ನೂ ಹೆಚ್ಚಿಸಿವೆ. ಇಲ್ಲಿನ ಗೋಡೆಗಳ ಹೊರಗಡೆ ಆಗಿನ ಕಾಲದ ಪ್ರಮುಖ ಘಟನೆ ಗಳನ್ನೂ, ಯುದ್ಧಗಳನ್ನೂ, ಸಮಕಾಲೀನ ರಾಜರನ್ನು ಸೂಚಿಸುವ ವರ್ಣಚಿತ್ರಗಳನ್ನು ಬರೆಸಲಾಗಿದೆ. ಒಳಗಿನ ಗೋಡೆಗಳ, ಕಂಬಗಳ ಮತ್ತು ಛಾವಣಿಗಳಲ್ಲಿ ವಿವಿಧ ವರ್ಣದಿಂದಲೂ ಚಿನ್ನದ ಮುಲಾಮಿನಿಂದಲೂ ರಚಿತವಾದ ಎಲೆ, ಬಳ್ಳಿ, ಹೂ, ಮೃಗ ಪಕ್ಷಿಗಳು ನಿಸರ್ಗಸಹಜವಾಗಿವೆ. ಈ ಭಿತ್ತಿಚಿತ್ರಗಳನ್ನು 1719ರ ಸುಮಾರಿನಲ್ಲಿ ಬಿಡಿಸಿರಬಹುದೆಂದು ತಿಳಿದು ಬರುತ್ತದೆ. ಶ್ರೀರಂಗಪಟ್ಟಣ ಬ್ರಿಟಿಷರ ವಶವಾದ ಮೇಲೆ ವೆಲ್ಲಸ್ಲಿ ಇಲ್ಲಿ ವಾಸಿಸುತ್ತಿದ್ದನು. ಡಾಲ್ ಹೌಸಿಯು ಇದನ್ನು ಸಂದರ್ಶಿಸಿದಾಗ ಮಾಸಿ ಹೋಗಿದ್ದ ಚಿತ್ರಗಳನ್ನು ಮತ್ತೆ ಹೊಸದಾಗಿ ಚಿತ್ರಿಸಿದಂತೆ ತಿಳಿದು ಬರುತ್ತದೆ. 1959ರಲ್ಲಿ ದರಿಯಾ ದೌಲತ್ ಅರಮನೆಯನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಲಾಯಿತು.

ಹಳೆಮತದ ಕೊಳೆಯುಳ್ಳ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿಹೋಗಲಿ: ಬರಲಿ ವಿಜ್ಞಾನ ಬುದ್ಧಿ.
ವೇದಪ್ರಮಾಣತೆಯ ಮರುಮರೀಚಿಕೆಯಲ್ಲಿ
ನೀರರಸಿ ಕೆಡದಿರಲಿ ಸ್ವಾತಂತ್ರ್ಯಸಿದ್ಧಿ.
ತರುಣರಿರ, ಎದ್ದೇಳಿ! ಎಚ್ಚರಗೊಳ್ಳಿ! ಬಾಳಿ! — ಕುವೆಂಪು

ಮೈಸೂರಿನಲ್ಲಿ ಪ್ರಜಾಪ್ರಭುತ್ವದ ಪ್ರಾರಂಭ

ಪ್ರೊ. ಎಚ್ಚೆಸ್ಕೆ

ಮಹಾರಾಜರ ಆಳ್ವಿಕೆಯ ಮೈಸೂರು ಸಂಸ್ಥಾನ ಅನೇಕ ದೃಷ್ಟಿಗಳಿಂದ ಇಡೀ ಭಾರತಕ್ಕೇ ಆದರ್ಶಪ್ರಾಯವಾಗಿತ್ತು. ಇಡೀ ವಿಶ್ವದಲ್ಲೇ ಜಲವಿದ್ಯುತ್ತಿನ ಉತ್ಪಾದನೆ ಆರಂಭವಾದ್ದು ಮೈಸೂರಿನಲ್ಲೇ ಮೊದಲು. ಶಿವನಸಮುದ್ರದಿಂದ ಕೋಲಾರದ ಚಿನ್ನದ ಗಣಿಗೆ ತಂತಿಯ ಮೂಲಕ ವಿದ್ಯುತ್ತನ್ನು ಸಾಗಿಸಿದ್ದೂ ಒಂದು ವಿಕ್ರಮವೇ. ಆ ಕಾಲದಲ್ಲಿ ವಿಶ್ವದಲ್ಲಿ ಬೇರೆಲ್ಲೂ ಇಷ್ಟು ದೂರ ವಿದ್ಯುತ್ತನ್ನ ಸಾಗಿಸುವ ವ್ಯವಸ್ಥೆ ಇರಲಿಲ್ಲ.

ಮೈಸೂರಿನಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯ ದೇಶೀಯ ಸಂಸ್ಥಾನಗಳಲ್ಲೇ ಮೊದಲನೆಯದು. ಮೈಸೂರಿನ ವಿಶ್ವವಿದ್ಯಾನಿಲಯದಿಂದ ಹೊರಬಂದ ಪ್ರಪ್ರಥಮ ಮಹಿಳಾ ಪದವೀಧರೆ ಇಡೀ ಭಾರತದಲ್ಲೇ ಪ್ರಥಮ ಮಹಿಳೆ. ಕುಟುಂಬ ಯೋಜನೆಯ ಚಿಕಿತ್ಸಾಲಯವನ್ನಾರಂಭಿಸಿದ ಪ್ರಥಮ ಸರ್ಕಾರ ಮೈಸೂರಿನದೇ.

ಭಾರತದ ಬೇರಾವ ಸಂಸ್ಥಾನದಲ್ಲೂ ಆ ದಿಕ್ಕಿನಲ್ಲಿ ಇನ್ನೂ ಯೋಜನೆಯನ್ನೇ ಹರಿಸದಿದ್ದ ಕಾಲದಲ್ಲಿ ಮೈಸೂರಿನಲ್ಲಿ ವಿಧಾನಸಭೆ ಪ್ರಾರಂಭವಾಯಿತೆಂಬುದೂ ಹೆಮ್ಮೆಯ ಸಂಗತಿಯೇ. ಪ್ರಜೆಗಳ ಕೈಗೆ ಅಧಿಕಾರ ಕೊಡುವ, ಸಂಸ್ಥಾನದ ಆಗುಹೋಗುಗಳನ್ನು ಕುರಿತ ವಿಚಾರಗಳಲ್ಲಿ ಪ್ರಜಾಪ್ರತಿನಿಧಿಗಳೂ ತೊಡಗುವಂತೆ ಮಾಡುವ ಪ್ರಥಮ ಪ್ರಯತ್ನ ನಡೆದದ್ದು ಮೈಸೂರಿನಲ್ಲೇ. ಇದೆಲ್ಲಾ ಸಾಧ್ಯವಾದ್ದು ಮುಖ್ಯವಾಗಿ ಮೈಸೂರನ್ನಾಳಿದ ಉದಾರದೃಷ್ಟಿಯ ಮಹಾರಾಜರುಗಳಿಂದಾಗಿ, ಆಡಳಿತ ಸೂತ್ರವಹಿಸಿದ್ದ ದಿವಾನರುಗಳಿಂದಾಗಿ ಹಾಗು ಜನರಲ್ಲಿ ಬೆಳೆಯುತ್ತಿದ್ದ ಜಾಗೃತಿಯಿಂದಾಗಿ.

ಮೈಸೂರಿನಲ್ಲಿ ಪ್ರಜಾಪ್ರಭುತ್ವದ ಮೊದಲ ಹೆಜ್ಜೆಗಳನ್ನು ಗುರುತಿಸಲು ನಾವು ಒಂದು ಶತಮಾನಕ್ಕೂ ಹಿಂದಿನ ದಿನಗಳಿಗೆ ಮಾನಸಿಕವಾಗಿ ಜಿಗಿಯಬೇಕು. ಟೀಪುವಿನ ಪತನಾನಂತರ ಒಡೆಯ ವಂಶದ ಮುಮ್ಮಡಿ ಕೃಷ್ಣರಾಜ ಒಡೆಯರ ಕೈಗೆ ಬಂದಿದ್ದ ಕುಗ್ಗಿದ ಮೈಸೂರಿನ ಆಡಳಿತವನ್ನು ಬ್ರಿಟಿಷರು ಮತ್ತೆ ವಹಿಸಿಕೊಂಡಿದ್ದರು. ಇಲ್ಲಿ ಬ್ರಿಟಿಷ್ ಮುಖ್ಯ ಕಮಿಷನರನ ಆಡಳಿತ ಸ್ಥಾಪನೆ ಮಾಡಿದ್ದರು. ದೇಶಿಯರಿಗಿದ್ದ ನಾಮ ಮಾತ್ರ ಅಧಿಕಾರವನ್ನೂ ಬ್ರಿಟಿಷರು ಹೀಗೆ ಕಿತ್ತುಕೊಂಡರೆಂದು ಜನಕ್ಕೆ ಅಸಮಾಧಾನವಾಗಿತ್ತು. ಅರಸರ ಪರವಾಗಿಯೂ ಬ್ರಿಟಿಷರಿಗೆ ಆಗಿಂದಾಗ್ಗೆ ಮನವಿಗಳು ಹೋಗುತ್ತಲೇ ಇದ್ದವು. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಅಲ್ಲದಿದ್ದರೂ ಅವರ ದತ್ತು ಮಗನಾದ ಚಾಮರಾಜ ಒಡೆಯರ ಕೈಗೆ 1881ರ ಮಾರ್ಚ್ 25 ರಂದು ಅಧಿಕಾರ ದತ್ತವಾಯಿತು. ಸಿ. ರಂಗಚಾರ್ಲು ದಿವಾನರಾಗಿ ನೇಮಕವಾದರು.

ಚಾಮರಾಜ ಒಡೆಯರು ಅಧಿಕಾರಕ್ಕೆ ಬಂದ ನಾಲ್ಕು ದಿನಗಳ ಅನಂತರ, ಮಾರ್ಚ್ 29ರಂದು, ಮೈಸೂರು ನಗರದಲ್ಲಿ ಒಂದು ಮಹಾಸಭೆ ಸೇರಿತ್ತು. ಅದೊಂದು ಐತಿಹಾಸಿಕ ಸಭೆ. ಸಂಸ್ಥಾನದ ಎಲ್ಲಾ ಕಡೆಯಿಂದ ಆ ಸಭೆಗೆ ರೈತಮುಖಂಡರೂ ವರ್ತಕಪ್ರಮುಖರೂ ಇತರ ಗಣ್ಯರೂ ಆಹ್ವಾನಿತರಾಗಿದ್ದು ಅಲ್ಲಿ ಉಪಸ್ಥಿತರಿದ್ದರು. ಸಂಸ್ಥಾನದ ಆಡಳಿತ ವಿಚಾರದಲ್ಲಿ ಪ್ರಜೆಗಳು ಪಾಲ್ಗೊಳ್ಳುವಂತೆ ಮಾಡುವುದು ಹೇಗೆಂಬುದನ್ನು ಕುರಿತು ಸಮಾಲೋಚನೆ ನಡಸುವುದು ಆ ಸಭೆ ಕರೆದಿದ್ದರ ಉದ್ದೇಶ. ದಿವಾನರ ಅಧ್ಯಕ್ಷತೆಯ ಆ ಸಭೆಯ ತೀರ್ಮಾನ ಚರಿತ್ರಾರ್ಹವಾದ್ದು. ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆಯಾಗಬೇಕೆಂಬ ಅಭಿಪ್ರಾಯ ಅಂದು ವ್ಯಕ್ತಪಟ್ಟಿತ್ತು.

ಸರ್ಕಾರದ ಅಭಿಪ್ರಾಯವಾದರೂ ಅದೇ ಆಗಿತ್ತು. ಬ್ರಿಟಿಷರಿಂದ ವಾಪಸು ಪಡೆದ ತಮ್ಮ ಸಂಸ್ಥಾನದ ಆಡಳಿತ ಇಡೀ ಭಾರತಕ್ಕೇ ಮಾದರಿಯದಾಗಿರಬೇಕೆಂದು ಮಹಾರಾಜರ ಆಕಾಂಕ್ಷೆ. ಪ್ರಜೆಗಳ ಆಶೋತ್ತರಗಳ ಅರಿವಾದಾಗಲೇ ಆಡಳಿತ ಸಮರ್ಪಕ ಎಂಬುದು ಅವರಿಗೆ ಮನವರಿಕೆಯಾಗಿತ್ತು. ಮುಖ್ಯ ಕಮಿಷನರ ಆಡಳಿತವಿದ್ದಾಗಲೇ ಈ ಬಗ್ಗೆ ಇಷ್ಟಷ್ಟು ಚಿಂತನೆ ನಡೆದಿತ್ತೆಂದು ಕಾಣುತ್ತದೆ. ಚಾಮರಾಜ ಒಡೆಯರಿಗೆ ರಾಜ್ಯಭಾರವನ್ನು ವಹಿಸಿಕೊಡುವ ಕಾಲದಲ್ಲಿ ಮುಖ್ಯ ಕಮಿಷನರ್ ಆಗಿದ್ದ ಜೆ. ಡಿ. ಗೋರ್ಡನ್ 1881ರ ಫೆಬ್ರುವರಿ 10ರಂದು ಬ್ರಿಟಿಷ್ ಸಂಸತ್ತಿಗೆ ಒಂದು ಪತ್ರ ಬರೆದಿದ್ದ. ಬ್ರಿಟನ್ನಿನಲ್ಲಿರುವ ಮಾದರಿಯಲ್ಲಿ ಪ್ರಜಾಪ್ರಭುತ್ವ ಸರ್ಕಾರವನ್ನು ಮೈಸೂರಿನಲ್ಲೂ ಸ್ಥಾಪಿಸಬೇಕೆಂಬುದು ಅವನ ಪತ್ರದ ಅಭಿಪ್ರಾಯ. ಆದರೆ ಮೈಸೂರಿನಲ್ಲಿರಲಿ, ಬ್ರಿಟಿಷ್ ಭಾರತದಲ್ಲೇ ಪ್ರಜಾಪ್ರತಿನಿಧಿಗಳ ಸಭೆಯೊಂದನ್ನು ಸ್ಥಾಪಿಸುವ ವಿಚಾರವಾಗಿ ಬ್ರಿಟನ್ನು ಇನ್ನೂ ತೀರ್ಮಾನ ತೆಗೆದುಕೊಂಡಿರಲಿಲ್ಲ. 1857ರ ಬಂಡಾಯದಿಂದ ಭಾರತದ ಜನರ ಕ್ರೋಧ ಅಸಮಾಧಾನಗಳು ಎಷ್ಟು ತೀವ್ರವಾಗಿವೆಯೆಂಬುದು ಬ್ರಿಟನ್ನಿಗೆ ಮನವರಿಕೆಯಾಗಿತ್ತಾಗಲಿ, ಆಡಳಿತ ವಿಚಾರದಲ್ಲಿ ಪ್ರಜೆಗಳು ಬಾಯಿ ಹಾಕುವಂತೆ ಅವಕಾಶ ನೀಡಲು ಅದು ಇನ್ನೂ ಹಿಂದೆಗೆಯುತ್ತಿತ್ತು. ಅಂಥ ಕಾಲದಲ್ಲೇ ಮೈಸೂರಿನ ರಾಜ್ಯಭಾರ ಚಾಮರಾಜ ಒಡೆಯರ ಕೈಗೆ ಬಂದದ್ದು. ಆ ಸಮಯದಲ್ಲೇ ಅವರು ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನಾರಂಭಿಸುವ ವಿಚಾರವಾಗಿ ಕ್ರಮ ತೆಗೆದುಕೊಂಡಿದ್ದು, ಆ ಬಗ್ಗೆ ಪ್ರಜಾಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸಿದ್ದು. ಗೋರ್ಡನನ ಉದಾರ ದೃಷ್ಟಿ, ದಿವಾನ್ ರಂಗಚಾರ್ಲು ಅವರ ಸಮಯ ಪ್ರಜ್ಞೆ, ಪ್ರಜಾನುರಾಗಿಯಾಗಿ ರಾಜ್ಯಭಾರ ನಡಸಬೇಕೆಂಬ ಮಹಾರಾಜರ ಆಕಾಂಕ್ಷೆ, ಇವು ಮೂರೂ ಮುಪ್ಪುರಿಗೊಂಡದ್ದರ ಫಲವೇ ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆಯ ತೀರ್ಮಾನ.

ಈ ಸಭೆಯ ಆಶಯವನ್ನು ಕಾರ್ಯಗತಗೊಳಿಸುವ ಮೊದಲ ಹೆಜ್ಜೆಯೆಂದರೆ ಅದೇ ವರ್ಷ ಆಗಸ್ಟ್ 25ರಂದು ಹೊರಡಿಸಲಾದ ಆದೇಶ. ಸಂಸ್ಥಾನದ ಆಡಳಿತಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳು ಹಿಂದಣ ಸರ್ಕಾರದ ಅಭಿಪ್ರಾಯಗಳು ಹಾಗೂ ಉದ್ದೇಶವನ್ನು ಜನರು ಚೆನ್ನಾಗಿ ಅರಿಯಬೇಕು ಮೆಚ್ಚಬೇಕು, ಅವರಿಗಾಗಿಯೇ ಇವನ್ನು ಜಾರಿಗೊಳಿಸುತ್ತಿದೆಯೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ಉದ್ದೇಶದ ಸಾಧನೆಯಲ್ಲಿ ಮೊದಲ ಪ್ರಯತ್ನವಾಗಿ ಪ್ರಜಾಪ್ರತಿನಿಧಿಸಭೆಯನ್ನಾರಂಭಿಸಲಾಗುತ್ತಿದೆ. ವರ್ಷಕ್ಕೊಮ್ಮೆ ದಸರೆಯ ಅನಂತರ ಇದರ ಅಧಿವೇಶನ ಮೈಸೂರಿನಲ್ಲಿ ನಡೆಯತಕ್ಕದ್ದು. ಸಂಸ್ಥಾನದ ಎಲ್ಲ ಕಡೆಗಳಿಂದ ವರ್ತಕರ ಹಾಗೂ ಬೇಸಾಯ ಮಾಡುವ ಜಮೀನುದಾರರ ಪ್ರತಿನಿಧಿಗಳು ಸೇರತಕ್ಕದ್ದು. ಹಿಂದಿನ ವರ್ಷದ ಆಡಳಿತದ ಫಲಿತಾಂಶಗಳನ್ನೂ ಬರಲಿರುವ ವರ್ಷದ ಕಾರ್ಯಕ್ರಮಗಳನ್ನೂ ದಿವಾನರು ಅವರ ಮುಂದೆ ಇಡುತ್ತಾರೆ. ಇದರಿಂದ ಪ್ರಜೆಗಳೂ ಸರ್ಕಾರವೂ ನೇರವಾಗಿ ಪರಸ್ಪರ ಅರಿತುಕೊಳ್ಳುವುದು ಸಾಧ್ಯವಾಗುತ್ತದೆ. ಜನರ ಹಿತವೂ ಸರ್ಕಾರದ ಹಿತವೂ ಒಂದೇ ಎಂಬುದು ಮನವರಿಕೆಯಾಗುತ್ತದೆ. ಹೀಗೆಂದು ಆ ಆದೇಶದಲ್ಲಿ ಹೇಳಲಾಗಿತ್ತು.

ಪ್ರಜಾಪ್ರತಿನಿಧಿ ಸಭೆಯ ಮೊದಲ ಅಧಿವೇಶನ ಸೇರಿದ್ದು 1881ರ ಅಕ್ಟೋಬರ್ 7 ರಂದು. ದಿವಾನರೇ ಅದರ ಅಧ್ಯಕ್ಷರು. ಹಿಂದಿನ ವರ್ಷದ ಆಡಳಿತದ ಫಲಿತಾಂಶಗಳನ್ನೂ ಬರಲಿರುವ ವರ್ಷದ ಕಾರ್ಯಕ್ರಮವನ್ನೂ ದಿವಾನರಿಂದ ತಿಳಿಯುವುದರ ಜೊತೆಗೆ, ಸಭೆಗೆ ಇನ್ನೂ ಹಲವು ಕಾರ್ಯಭಾರಗಳನ್ನು ಆಗಿಂದಾಗ್ಗೆ ಗೊತ್ತುಪಡಿಸಲಾಯಿತು. ಸಾರ್ವಜನಿಕ ಹಿತದೃಷ್ಟಿಯಿಂದ ಅಭಿಪ್ರಾಯಗಳು ಹಾಗೂ ಸಲಹೆಗಳನ್ನು ಮಂಡಿಸುವುದು ಜನತೆಯ ಕುಂದು ಕೊರತೆಗಳನ್ನು ಸರ್ಕಾರಕ್ಕೆ ತಿಳಿಸುವುದು ಹಾಗೂ ಅವುಗಳ ನಿವಾರಣೆಗಾಗಿ ಯತ್ನಿಸುವುದು, ಆಡಳಿತ ಕಲಾಪಗಳನ್ನು ಗಮನಿಸಿ ಯುಕ್ತವಾದ ಟೀಕೆ ಮಾಡುವುದು—ಒಟ್ಟಿನಲ್ಲಿ ಜನತೆಯ ಬೇಕು ಬೇಡಗಳನ್ನೂ ಆಶಯಗಳನ್ನೂ ಸಂಪೂರ್ಣವಾಗಿ ಅಭಿವ್ಯಕ್ತಿಗೊಳಿಸುವುದು. ಇವು ಇದರ ಕೆಲವು ಕಾರ್ಯಭಾರಗಳು. ಸರ್ಕಾರಕ್ಕೆ ಮನವಿ ಸಲ್ಲಿಸುವುದು, ದೂರು ನೀಡುವುದು—ಇವಿಷ್ಟೇ ಸದಸ್ಯರ ಕಾರ್ಯಭಾರಗಳಲ್ಲ ಎಂಬುದನ್ನು ವಿಶದಪಡಿಸಲಾಯಿತು. ಜನರ ಅಭಿಪ್ರಾಯ ನಿರೂಪಣೆಗೆ ಅವಕಾಶ ನೀಡುವುದು ಉದ್ದೇಶ. ಆದರೆ ಆಡಳಿತದ ಮೇಲೆ ಯಾವುದೇ ಬಗೆಯ ಹತೋಟಿಯ ಅಧಿಕಾರ ಅದಕ್ಕೆ ಇರಲಿಲ್ಲ. ಅಂತೆಯೇ ಸಂಸ್ಥಾನದ ಸಂವಿಧಾನ, ಮಹಾರಾಜರ ಅಧಿಕಾರ ಮುಂತಾದ ವಿಚಾರಗಳೂ ಅದರ ಚರ್ಚೆಯ ವ್ಯಾಪ್ತಿಗೆ ಒಳಪಡುವಂತಿರಲಿಲ್ಲ. ಅದರ ಪ್ರತಿನಿಧಿಗಳಾದರೂ ಇಡೀ ಜನತೆಯಿಂದ ಆಯ್ಕೆಯಾದವರಾಗಿರಲಿಲ್ಲ. ಅವರು ಕೇವಲ ಸ್ಥಿತಿವಂತರ ಪ್ರತಿನಿಧಿಗಳು. ಸ್ಥಳೀಯ ಮಂಡಲಿಗಳು ತಮ್ಮಿಂದಲೇ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಿದ್ದವು. ಪ್ರತಿ ತಾಲ್ಲೂಕಿನಿಂದಲೂ ಒಬ್ಬೊಬ್ಬರು ನೆಲದೊಡೆಯರನ್ನು—ಅವರ ಜನಪ್ರಿಯತೆಯನ್ನೂ ಪ್ರಭಾವವನ್ನೂ ಗಮನಿಸಿ ಆಯಾ ಜಿಲ್ಲಾಧಿಕಾರಿಗಳು ಆರಿಸುತ್ತಿದ್ದರು. ಅವರ ಜೊತೆಗೆ ಜಿಲ್ಲೆಗೆ ಇಬ್ಬರು ಮೂವರು ವರ್ತಕರನ್ನೂ ಆರಿಸಲಾಗುತ್ತಿತ್ತು. ಸಭೆಯಲ್ಲಿ ಹಾಜರಾತಿ ಕಡ್ಡಾಯವಾಗಿರಲಿಲ್ಲ. ದಸರೆಯ ಅನಂತರ ಸಭೆಯ ಅಧಿವೇಶನ ಸೇರುತ್ತಿದ್ದದ್ದರಿಂದ ದಸರೆಗೆ ಬಂದವರು ಅಧಿವೇಶನಕ್ಕೂ ಇದ್ದು ಹೋಗುತ್ತಿದ್ದರು.

ಜಿಲ್ಲಾಧಿಕಾರಿಗಳು ಪ್ರತಿನಿಧಿಗಳನ್ನಾರಿಸುವ ಅಧಿಕಾರವನ್ನು ಅಮಲ್ದಾರರಿಗೆ ವಹಿಸಿಕೊಡುತ್ತಿದ್ದದ್ದುಂಟು. ಅಮಲ್ದಾರರು ತಮ್ಮ

ತಾಲ್ಲೂಕಿನ ಪ್ರಮುಖರನ್ನು ತಾಲ್ಲೂಕು ಕಛೇರಿಯಲ್ಲಿ ಸೇರಿಸುತ್ತಿದ್ದರು. ಅಮಲ್ದಾರರ ಭಾಷಣದ ಅನಂತರ ಪ್ರತಿಯೊಬ್ಬರಿಗೂ ಒಂದೊಂದು ಚೀಟಿ ಕೊಡಲಾಗುತ್ತಿತ್ತು. ಅದರಲ್ಲಿ ಅವರು ತಮಗೆ ಇಷ್ಟವಾದ ಇಬ್ಬರ ಹೆಸರುಗಳನ್ನು ಬರೆದು ಕೊಡುತ್ತಿದ್ದರು. ಯಾರಿಗೆ ಹೆಚ್ಚು ಮತ ಬಂದಿದೆಯೋ ಅಂಥ ಇಬ್ಬರನ್ನು ಅಮಲ್ದಾರರು ಆರಿಸುತ್ತಿದ್ದರು.

ಪ್ರತಿನಿಧಿಗಳ ಅರ್ಹತೆ, ಸಭಾಕಲಾಪಗಳ ವಿಧಾನ ಇವುಗಳನ್ನು ಕುರಿತ ಉಚಿತ ನಿಯಮಗಳು ಕ್ರಮೇಣ ರೂಪುಗೊಂಡವು. ಪ್ರತಿನಿಧಿಗಳಾಗುವವರಿಗೆ ಆಸ್ತಿಯ ಅರ್ಹತೆಯನ್ನು ನಿಗದಿಪಡಿಸಿದ್ದು 1887ರಲ್ಲಿ. ಜಿಲ್ಲಾಧಿಕಾರಿಗಳೇ ಪ್ರತಿನಿಧಿಗಳನ್ನಾರಿಸಬೇಕೇ ವಿನಾ ಆ ಅಧಿಕಾರವನ್ನು ಅಮಲ್ದಾರರಿಗೆ ವಹಿಸಬಾರದೆಂಬ ನಿಯಮ ಮರುವರ್ಷ ಬಂತು. ಸದಸ್ಯರ ಅಧಿಕಾರವಧಿ ಮೂರು ವರ್ಷಗಳೆಂದು ನಿಗಧಿಮಾಡಿದ್ದು 1894ರಲ್ಲಿ. ಉಪ ತಾಲ್ಲೂಕುಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲಾದ್ದು 1914ರಲ್ಲಿ. ಚುನಾವಣೆಗೆ ನಿಲ್ಲಬಯಸುವವರು ತಮ್ಮ ಉಮೇದುವಾರಿಕೆಯನ್ನು ಚುನಾವಣೆಗೆ ಒಂದು ತಿಂಗಳು ಮುಂಚೆ ಅಮಲ್ದಾರರಿಗೆ ಬರಹದ ಮೂಲಕ ತಿಳಿಸಬೇಕು ಎಂಬ ನಿಯಮ 1915ರಲ್ಲಿ ಬಂತು.

ಪ್ರಜಾಪ್ರತಿನಿಧಿ ಸಭೆಯ ಕಲಾಪಗಳನ್ನು ನಿಬಂಧಿಸುವ ಪ್ರಯತ್ನ ಮೊದಮೊದಲು ನಡೆದಿರಲಿಲ್ಲ. ಸಭಾಸದರು ದಿವಾನರ ಭಾಷಣವನ್ನು ಕೇಳುತ್ತಿದ್ದರು. ಆಮೇಲೆ ಸದಸ್ಯರು ತಂತಮ್ಮ ಅಭಿಪ್ರಾಯಗಳನ್ನೂ ಅಹವಾಲುಗಳನ್ನೂ ಮಂಡಿಸುತ್ತಿದ್ದರು. ಪ್ರಥಮ ಅಧಿವೇಶನದಲ್ಲೇ ಸಭೆಯ ಕಲಾಪಗಳ ಬಗ್ಗೆ ಕೆಲವು ನಿಯಮಗಳ ಅವಶ್ಯಕತೆ ಸ್ಪಷ್ಟವಾಯಿತು. ಯಾವನೇ ಸದಸ್ಯ ಪ್ರತ್ಯೇಕ ಹೇಳಿಕೆ ನೀಡಬೇಕೆಂದು ಬಯಸುವ ಸಂದರ್ಭ ಬಿಟ್ಟು ಉಳಿದಂತೆ ಪ್ರತಿ ಜಿಲ್ಲೆಯ ಸದಸ್ಯರೂ ತಮ್ಮ ಪರವಾಗಿ ಮಾತಾಡಲು ತಮ್ಮಿಂದ ಒಬ್ಬಿಬ್ಬರನ್ನು ನಾಮಕರಣ ಮಾಡಬೇಕೆಂದು ಆದೇಶ ನೀಡಲಾಯಿತು. 1887ರಲ್ಲಿ ಕಲಾಪಗಳ ನಿರ್ವಹಣೆಗಾಗಿ ಕೆಲವು ಸರಳ ಸೂತ್ರಗಳನ್ನು ರೂಪಿಸಲಾಯಿತು. ಪ್ರತಿ ಜಿಲ್ಲೆಯ ಸದಸ್ಯರೂ ಒಟ್ಟಾಗಿ ಸೇರಿ ಚರ್ಚಿಸಬೇಕಾದ ವಿಷಯಗಳನ್ನು ನಿರ್ಣಯಿಸಿ, ತಮ್ಮ ಪರವಾಗಿ ಯಾರು ಮಾತಾಡಬೇಕೆಂಬುದನ್ನೂ ತೀರ್ಮಾನಿಸುತ್ತಿದ್ದರು. ಸಭೆಯಲ್ಲಿ ಯಾವ ಕ್ರಮದಲ್ಲಿ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದನ್ನು ನಿರ್ಣಯಿಸುತ್ತಿದ್ದವರು ದಿವಾನರು. ಪ್ರತಿ ತಾಲ್ಲೂಕಿನ ಸದಸ್ಯರೂ ತಾವು ಮುಂದಿಡ ಬಯಸುವ ವಿಷಯಗಳನ್ನು ಪಟ್ಟಿಮಾಡಿ ಜಿಲ್ಲಾಧಿಕಾರಿಗಳಿಗೆ ಕಳಿಸಬೇಕೆಂಬ ನಿಯಮ 1890ರಲ್ಲಿ ಬಂತು. ಅವುಗಳ ಮೇಲೆ ತನ್ನ ಟಿಪ್ಪಣಿಗಳೊಂದಿಗೆ ಜಿಲ್ಲಾಧಿಕಾರಿ ಅವನ್ನು ಸರ್ಕಾರಕ್ಕೆ ಕಳಿಸುತ್ತಿದ್ದರು. ಸಭೆಯಲ್ಲಿ ಮತಗಳ ಎಣಿಕೆಯಿಂದ ಯಾವುದೇ ವಿಷಯದ ಬಗ್ಗೆ ತೀರ್ಮಾನವಾಗಬೇಕೆಂದು ಸದಸ್ಯರು ಆಗಾಗ್ಗೆ ಅಪೇಕ್ಷಿಸುತ್ತಿದ್ದದ್ದುಂಟು. 1893ರಲ್ಲಿ ಈ ವಿಷಯ ದೀರ್ಘವಾಗಿ ಚರ್ಚೆಗೆ ಒಳಗಾಯಿತು. ಯಾವುದೇ ಪ್ರಶ್ನೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಸಭೆಗೆ ಅಧಿಕಾರವಿಲ್ಲ. ಆದ್ದರಿಂದ ಮತ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಆಗ ದಿವಾನರಾಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್ ರೂಲಿಂಗ್ ಕೊಟ್ಟರು. ಅದರ ಮೇಲೆ ಮಾತಾಡುವುದುಂಟೆ ?

ಪ್ರಜಾಪ್ರತಿನಿಧಿ ಸಭೆಗೆ ಎಷ್ಟರ ಮಟ್ಟಿನ ಅಧಿಕಾರವಿತ್ತು ಎಂಬುದು ಇದರಿಂದ ನಮಗೆ ಗೊತ್ತಾಗುತ್ತದೆ. ಆದರೂ ಸಭೆ ನಿರರ್ಥಕವಾಗಿರಲಿಲ್ಲ. ಆಗಿನ ಕಾಲದಲ್ಲಿ ಪ್ರತಿನಿಧಿಗಳೆನಿಸಿಕೊಂಡವರನ್ನು ಸೇರಿಸಿ ಅವರ ಅಭಿಪ್ರಾಯ ಕೇಳುವುದೇ ಒಂದು ಸಾಹಸದ ಮಾತಾಗಿತ್ತು. ಬ್ರಿಟಿಷ್ ಭಾರತದ ವಿದ್ಯಮಾನಗಳ ದೃಷ್ಟಿಯಲ್ಲಿ ಇದೊಂದು ಸಾಧನೆಯೇ ಎನ್ನಬೇಕು. ಪ್ರತಿನಿಧಿ ಸಭೆಯ ಸದಸ್ಯರು ಮೇಲಿಂದ ಮೇಲೆ ತಮ್ಮ ಹಕ್ಕಿನ ಬಗ್ಗೆ ಪ್ರಶ್ನೆ ಎತ್ತುತ್ತಲೇ ಬಂದರು. ಕೆಲವು ಮುಖ್ಯ ವಿಚಾರಗಳ ಬಗ್ಗೆ ಸಭೆಯ ಒಟ್ಟು ಅಭಿಪ್ರಾಯವೇನು ಎಂಬುದನ್ನು ಪರವಿರೋಧ ಮತಗಳ ಎಣಿಕೆಯ ಮೂಲಕ, ತಿಳಿಯುವ ಪದ್ಧತಿ 1907ರಲ್ಲಿ ಜಾರಿಗೆ ಬಂತು. ಸಭೆಯ ಕಲಾಪಗಳು ಹೆಚ್ಚು ಅರ್ಥಪೂರ್ಣವಾಗುವಂತೆ ಮಾಡಲು ನಿಯಮಗಳು ಕ್ರಮೇಣ ಜಾರಿಗೆ ಬಂದವು.

ಪ್ರಜಾಪ್ರತಿನಿಧಿ ಸಭೆ ಸಮರ್ಪಕವಾಗಿ ಮುಂದುವರಿಯುತ್ತಿದೆಯೆಂಬ ತೃಪ್ತಿ ಆಗಿನ ದಿವಾನರಿಗೂ ಮಹಾರಾಜರಿಗೂ ಇತ್ತು. ನಿಮ್ಮ ಚರ್ಚೆಗಳು ವಾಸ್ತವದೃಷ್ಟಿಯಿಂದ ಕೂಡಿವೆ, ಚರ್ಚೆಗಳ ಬೌದ್ಧಿಕಮಟ್ಟ ಉನ್ನತವಾದ್ದಾಗಿದೆ. ನೀವು ವಿವೇಕದಿಂದ ನಡೆದುಕೊಳ್ಳುತ್ತಿದ್ದೀರಿ ಎಂದು ದಿವಾನರೇ 1890ರಲ್ಲಿ ಸಭೆಯ ಮುಂದೆ ಭಾಷಣ ಮಾಡುತ್ತ ತಿಳಿಸಿದರು. 1903ರಲ್ಲಿ ಮಹಾರಾಜರೂ ತೃಪ್ತಿ ವ್ಯಕ್ತಪಡಿಸಿದರು. ವರ್ಷಕ್ಕೊಮ್ಮೆ ಸೇರುವ ಬದಲು ಸಭೆಯ ಎರಡು ಅಧಿವೇಶನಗಳು ನಡೆಯುವಂತೆ 1916ರಲ್ಲಿ ಏರ್ಪಾಡಾಯಿತು. ಒಂದು ದಸರಾ ಅಧಿವೇಶನವಾದರೆ ಇನ್ನೊಂದು ಬಜೆಟ್ ಅಧಿವೇಶನ. ಅದು ಮಹಾರಾಜರ ವರ್ಧಂತಿಯ ಸಮಯದಲ್ಲಿ ಸೇರುತ್ತಿತ್ತು. ಪ್ರಶ್ನೆಗಳ ಪರಿಶೀಲನೆ ನಡೆಸಲು ಸಮಿತಿಗಳನ್ನು ನೇಮಿಸುವ ಪದ್ಧತಿ ಜಾರಿಗೆ ಬಂದದ್ದು 1917ರಲ್ಲಿ. ಉಪಯುಕ್ತವಾಗುವ ರೀತಿಯಲ್ಲಿ ಪ್ರತಿನಿಧಿ ಸಭೆಯ ಮುಂದೆ ಸಲಹೆಗಳನ್ನೂ ಮಂಡಿಸಲು ಈ ಸಮಿತಿಪದ್ಧತಿಯಿಂದ ಸಹಾಯವಾಯಿತು. ಹೀಗೆ ಸಭೆಯ ವ್ಯಾಪ್ತಿ ಹಾಗೂ ಉಪಯುಕ್ತತೆಗಳು ಕ್ರಮೇಣ ಬೆಳೆದವು. ಪ್ರತಿನಿಧಿ ಸಭೆಯನ್ನು ಅಧಿನಿಯಮವೊಂದರ ಮೂಲಕ ಸ್ಥಾಪಿಸಲಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ವಿಚಾರ. ಇದು ಜನ್ಮತಳೆದದ್ದು ಸರ್ಕಾರದ ಆದೇಶದಿಂದ. ಆದ್ದರಿಂದ ಅಗತ್ಯ

ಕಂಡುಬಂದಂತೆಲ್ಲ ಸರ್ಕಾರದ ಆಡಳಿತಾತ್ಮಕ ಆದೇಶಗಳ ಮೂಲಕ ಇದರ ಅಧಿಕಾರ, ಹೊಣೆ ಹಾಗೂ ವ್ಯಾಪ್ತಿಗಳನ್ನು ವಿಸ್ತರಿಸುತ್ತ ಹೋಗಲಾಯಿತು. ಹೀಗೆ ಪ್ರಜಾಪ್ರತಿನಿಧಿ ಸಭೆ ಒಂದು ಜೀವಂತ ವಿಕಸನಶೀಲ ವ್ಯವಸ್ಥೆಯಾಗಿ ಬೆಳೆಯಿತೆನ್ನಬಹುದು.

ಮೈಸೂರಿನ ಪ್ರಜಾಪ್ರಭುತ್ವ ಪದ್ಧತಿಯ ವಿಕಾಸದ ಇತಿಹಾಸದಲ್ಲಿ 1907 ಇನ್ನೊಂದು ಪ್ರಮುಖ ವರ್ಷ. ಆಗ ನ್ಯಾಯವಿಧಾಯಕ ಸಭೆ ಎಂಬ ಇನ್ನೊಂದು ಸದನ ಆರಂಭವಾಯಿತು. ಇಂದು ನಾವು ಕಾಣುತ್ತಿರುವ ದ್ವಿಸದನ ವ್ಯವಸ್ಥೆ ಮೈಸೂರು ಸಂಸ್ಥಾನದಲ್ಲಿ ಆಗಲೇ ಜಾರಿಗೆ ಬಂದಿತೆನ್ನಬೇಕು. ಹೀಗೆಂದರೆ ಇವೆರಡೂ ಸದನಗಳ ಅಧಿಕಾರಗಳೂ ಕಲಾಪಗಳೂ ಇಂದಿನ ದ್ವಿಸದನಗಳನ್ನೇ ಹೋಲುತ್ತವೆಯೆಂದು ಭಾವಿಸಬಾರದು, ಪ್ರಜಾಪ್ರತಿನಿಧಿ ಸಭೆಯು ಬಜೆಟ್ ಹಾಗೂ ದಸರಾ ಅಧಿವೇಶನಗಳಲ್ಲಿ ಏನೇನು ಕಲಾಪಗಳು ನಡೆಯಬೇಕೆಂಬುದು 1907ರ ವೇಳೆಗೆ ಹೆಚ್ಚು ಕಡಿಮೆ ನಿಗದಿಯಾಗಿತ್ತೆನ್ನಬಹುದು. ಅಧ್ಯಕ್ಷರ ಆರಂಭದ ಭಾಷಣ ಮತ್ತು ಆಯ-ವ್ಯಯ ಮಂಡನೆ, ಪ್ರಶ್ನೋತ್ತರ, ಸರ್ಕಾರಿ ವ್ಯವಹಾರ, ಆಯವ್ಯಯದ ಮೇಲೆ ಚರ್ಚೆ ಹಾಗೂ ನಿರ್ಣಯಗಳು, ಮನವಿಗಳು, ಇತರ ವಿಷಯಗಳು—ಇವು ಆಯವ್ಯಯ ಅಧಿವೇಶನಕ್ಕೆ ಗೊತ್ತುಮಾಡಿದ ಕಲಾಪಗಳು. ದಸರಾ ಅಧಿವೇಶನವೂ ದಿವಾನ್–ಅಧ್ಯಕ್ಷರ ಭಾಷಣದೊಂದಿಗೆ ಆರಂಭ. ಅದರಲ್ಲೂ ಪ್ರಶ್ನೋತ್ತರ, ಸರ್ಕಾರಿ ವ್ಯವಹಾರ, ಚರ್ಚೆ ಮತ್ತು ಮನವಿ ಹಾಗೂ ನಿರ್ಣಯಗಳು ಇದ್ದವು. ಆದರೆ ಪ್ರಜಾಪ್ರತಿನಿಧಿ ಸಭೆಯ ಜೊತೆಗೆ, ಸ್ಥಳೀಯ ವಿದ್ಯಮಾನಗಳ ಹಾಗೂ ಅಗತ್ಯಗಳ ಅರಿವುಳ್ಳ ಅನುಭವಿಗಳಾದ ಸಾರ್ವಜನಿಕರ ನೆರವು ಶಾಸನ ನಿರ್ಮಾಣಕಾರ್ಯದಲ್ಲಿ ಸರ್ಕಾರಕ್ಕೆ ದೊರಕುವಂತೆ ಅಂಥವರ ಸದಸ್ಯತ್ವವುಳ್ಳ ನ್ಯಾಯವಿಧಾಯಕ ಸಭೆ 1907ರಲ್ಲಿ ಸ್ಥಾಪಿತವಾಯಿತು. ದಿವಾನರು ಹಾಗೂ ಅವರ ಆಡಳಿತ ಮಂಡಲಿಯ ಸದಸ್ಯರಲ್ಲದೆ 10 ರಿಂದ 15 ಮಂದಿಯ ವರೆಗೆ ಸದಸ್ಯರನ್ನೊಳಗೊಂಡ ಈ ಸಭೆಯಲ್ಲಿ ನಾಮಕರಣ ಸದಸ್ಯರ ಪೈಕಿ ಕನಿಷ್ಠ ಮೂರನೆಯ ಎರಡರಷ್ಟು ಸದಸ್ಯರು ಅಧಿಕಾರೇತರರಾಗಿರಬೇಕು ಎಂದು ನಿಬಂಧಿಸಲಾಯಿತು. ಈ ಅಧಿಕ ಸದಸ್ಯರ ಕನಿಷ್ಠ ಹಾಗೂ ಗರಿಷ್ಠ ಸಂಖ್ಯೆಗಳನ್ನು 10 ಮತ್ತು 15 ರಿಂದ 15 ಮತ್ತು 21ಕ್ಕೆ 1914ರಲ್ಲಿ ಏರಿಸಲಾಯಿತು. 1919ರಲ್ಲಿ ಗರಿಷ್ಠ ಸಂಖ್ಯೆ 30ಕ್ಕೆ ಏರಿತು. ಜಿಲ್ಲಾ ಪೌರಸಭೆಗಳು ಹಾಗೂ ಪ್ರಜಾಪ್ರತಿನಿಧಿ ಸಭೆಯಿಂದ ಆಯ್ಕೆಯಾದವರೂ ಈ ಸಂಖ್ಯೆಯಲ್ಲಿ ಸೇರಿದ್ದರು. ಕ್ರಮೇಣ ಇದರ ಸದಸ್ಯ ಸಂಖ್ಯೆ ಏರುತ್ತಲೇ ಹೋಯಿತು.

ಪ್ರಜಾಭಿಪ್ರಾಯವನ್ನರಿಯುವುದು, ಆಡಳಿತದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡುವುದು, ಆಯವ್ಯಯ ಮಂಡಿಸಿ ಚರ್ಚಿಸುವುದು ಮುಂತಾದವು ಪ್ರಜಾಪ್ರತಿನಿಧಿ ಸಭೆಯ ಕಾರ್ಯಭಾರಗಳಾದರೆ, ಕಾನೂನು ಹಾಗೂ ನಿಯಮ ನಿಬಂಧನೆಗಳನ್ನು ರಚಿಸುವುದು ನ್ಯಾಯವಿಧಾಯಕ ಸಭೆಯ ಮುಖ್ಯ ಕಾರ್ಯಭಾರವಾಗಿತ್ತು. ಆದರೆ ಯಾವ ವಿಷಯವನ್ನು ಚರ್ಚಿಸಬೇಕೆಂಬುದು ದಿವಾನರ ಒಪ್ಪಿಗೆಗೆ ಸಂಬಂಧಿಸಿದ ಪ್ರಶ್ನೆಯಾಗಿತ್ತು. ಉಭಯಸದನಗಳೂ ಕೆಲವು ವಿಷಯಗಳನ್ನು ಚರ್ಚಿಸುವಂತಿರಲಿಲ್ಲ. ರಾಜಮನೆತನ. ಬ್ರಿಟಿಷರೊಂದಿಗೆ ಮಹಾರಾಜರ ಸಂಬಂಧ, ಬ್ರಿಟಿಷರೊಂದಿಗೂ ಇತರ ರಾಜ್ಯಗಳೊಂದಿಗೂ ಮಾಡಿಕೊಂಡ ಕೌಲುಗಳು, ಒಪ್ಪಂದಗಳು ಇತ್ಯಾದಿ ವಿಷಯಗಳು ಉಭಯ ಸದನಗಳಿಂದ ಹೊರಗು. ಆಯವ್ಯಯದ ಬಗ್ಗೆ ಚರ್ಚೆ ನಡಸುವ ಅಧಿಕಾರವು ಶಾಸನಸಭೆಗೆ 1923ರಲ್ಲಿ ದತ್ತವಾಯಿತಾದರೂ ಅದರ ನಿರ್ಣಯಗಳು ಸಾಮಾನ್ಯವಾಗಿ ಶಿಫಾರಸ್ಸಿನ ರೂಪದವಾಗಿರುತ್ತಿದ್ದವು. ಆದರೆ ಯಾವುದೇ ಹಣ ಮಸೂದೆಯ ಬಗ್ಗೆ ನ್ಯಾಯವಿಧಾಯಕ ಸಭೆಯ ಮತವನ್ನು ಸರ್ಕಾರ ಸಾಮಾನ್ಯವಾಗಿ ತಳ್ಳಿಹಾಕುವಂತಿಲ್ಲವೆಂಬ ನಿಬಂಧನೆ ಜಾರಿಗೆ ಬಂತು. ಸರ್ಕಾರ ತನ್ನ ವಿಶೇಷ ಅಧಿಕಾರ ಚಲಾಯಿಸಿ ಅದನ್ನು ನಿವಾರಿಸಿಕೊಳ್ಳಬಹುದಿತ್ತು. ಒಟ್ಟಿನಲ್ಲಿ ರಾಜ್ಯದಲ್ಲಿ ರಾಜಕೀಯ ಪ್ರಜ್ಞೆ ಬೆಳೆದಂತೆ, ಭಾರತದ ಸ್ವಾತಂತ್ರ್ಯ ಆಂದೋಲನ ತೀವ್ರವಾದಂತೆ ನ್ಯಾಯವಿಧಾಯಕ ಸಭೆ ಹಾಗೂ ಪ್ರಜಾ ಪ್ರತಿನಿಧಿ ಸಭೆಗಳಲ್ಲಿ ಇವುಗಳ ಪ್ರತಿಧ್ವನಿ ಕೇಳತೊಡಗಿತು. ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಗಬೇಕೆಂಬ, ಜನಗಳ ಕೈಗೆ ನಿಜವಾದ ಅಧಿಕಾರ ದೊರಕಬೇಕೆಂಬ ಬೇಡಿಕೆಗಳಿಗೆ ಈ ಸಭೆಗಳು ವೇದಿಕೆಗಳಿಗಾಗಿ ಪರಿಣಮಿಸಿದವು.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಮೈಸೂರಿನಲ್ಲೂ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ತೀವ್ರವಾಯಿತು. ಮಹಾರಾಜರು ಜನಾಭಿಪ್ರಾಯಕ್ಕೆ ಮಣಿದು ಜನಪ್ರಾತಿನಿಧ್ಯವಿರುವ ಸರ್ಕಾರ ಸ್ಥಾಪನೆಗೆ ಒಪ್ಪಿಕೊಂಡರು. ವಿಧಾನ ಮಂಡಲದ ಎಂದರೆ ಪ್ರಜಾ ಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಭೆಯ—ಅಧಿಕಾರ ಹಾಗೂ ಕಲಾಪಗಳಲ್ಲೂ ಅವುಗಳ ರಚನೆಯಲ್ಲಿ ಮೂಲಭೂತ ಬದಲಾವಣೆಗಳು ಅಗತ್ಯವಾದವು. 1947ರಲ್ಲಿ ಈ ಉದ್ದೇಶದಿಂದ ಮೈಸೂರು ಸಂಸ್ಥಾನಕ್ಕೆ ಒಂದು ಸಂವಿಧಾನ ಸಭೆ ರಚಿತವಾಯಿತು. ಇಡೀ ಭಾರತಕ್ಕೆ ಸಂಬಂಧಿಸಿದಂತೆ ಸಂವಿಧಾನ ರಚಿಸಲು ದೆಹಲಿಯಲ್ಲಿ ಸಭೆ ರೂಪಿತವಾಗಿತ್ತು. ಹಳೆಯ ಪ್ರಜಾಪ್ರತಿನಿಧಿ ಸಭೆಯೂ ನ್ಯಾಯವಿಧಾಯಕ ಸಭೆಯೂ ವಿಸರ್ಜನೆಗೊಂಡವು. ಸಂವಿಧಾನವನ್ನು ರೂಪಿಸಲು ರಾಜ್ಯದಲ್ಲಿ ರಚನೆಯಾಗಿದ್ದ ಸಭೆಯೇ 1949ರ ಡಿಸೆಂಬರ್ 15ರಂದು ಹೊಸವಿಧಾನ ಸಭೆಯಾಗಿ ಮಾರ್ಪಾಡುಗೊಂಡಿತು. ಭಾರತ ಗಣರಾಜ್ಯದ ಸಂವಿಧಾನ ಜಾರಿಗೆ ಬಂದ ಮೇಲೆ 1952ರಲ್ಲಿ ಇಡೀ ದೇಶಕ್ಕೆ ಸಂಬಂಧಿಸಿದಂತೆ ಚುನಾವಣೆಗಳು ನಡೆದಾಗ ಮೈಸೂರಿನಲ್ಲೂ ಚುನಾವಣೆಗಳು

ಬಳಿಕ ಹೊಸ ವಿಧಾನಸಭೆ ಅಸ್ತಿತ್ವಕ್ಕೆ ಬಂತು. ಅದರಂತೆ ವಿಧಾನ ಪರಿಷತ್ತು ಸ್ಥಾಪಿತವಾಯಿತು. ವಿಶಾಲ ಮೈಸೂರು ರಾಜ್ಯವಾಗಿ ಕರ್ನಾಟಕ ರಾಜ್ಯ ರೂಪುಗೊಂಡಿದ್ದು 1956ರಲ್ಲಿ.

ನೂರು ವರ್ಷಗಳ ಹಿಂದೆ ಆರಂಭವಾದ ಪ್ರಜಾಪ್ರಭುತ್ವ ಪದ್ಧತಿಯ ಪ್ರಯೋಗ ಪೂರ್ಣವಾಗಿ ವಿಕಾಸಗೊಳ್ಳಲು ಮುಕ್ಕಾಲು ಶತಮಾನವೇ ಬೇಕಾಯಿತು. ಆದರೆ ಆಗ ಈ ಪ್ರಕ್ರಿಯೆಯನ್ನಾರಂಭಿಸಿದ ಅಂದಿನ ಮಹಾರಾಜರ ಹಾಗೂ ಆಡಳಿತಗಾರರ ದೂರದೃಷ್ಟಿಯನ್ನು ನಾವು ಮೆಚ್ಚಿಕೊಳ್ಳಲೇಬೇಕು. ಪ್ರಬುದ್ಧ ಜನಾಭಿಪ್ರಾಯದಿಂದಾಗಿ ಅದು ಬೇಗ ಪೂರ್ಣವಾಗಿ ವಿಕಾಸಗೊಂಡಿತು.

ಅಖಂಡ ಕರ್ಣಾಟಕ :
ಅಲ್ತೊ ನಮ್ಮ ಬೂಟಾಟದ ರಾಜಕೀಯ ನಾಟಕ !
ಇಂದು ಬಂದು ನಾಳೆ ಸಂದು
ಹೋಹ ಸಚಿವ ಮಂಡಲ
ರಚಿಸುವೊಂದು ಕೃತಕವಲ್ತೊ
ಸಿರಿಗನ್ನಡ ಸರಸ್ವತಿಯ
ವಜ್ರಕರ್ಣಕುಂಡಲ !
ಅಖಂಡ ಕರ್ಣಾಟಕ :
ಅಲ್ತೊ ನಮ್ಮ ನಾಲ್ಕುದಿನದ ರಾಜಕೀಯ ನಾಟಕ !
ನೃಪತುಂಗನೆ ಚಕ್ರವರ್ತಿ !
ಪಂಪನಲ್ಲಿ ಮುಖ್ಯ ಮಂತ್ರಿ !
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರ :
ಸರಸ್ವತಿಯೆ ರಚಿಸಿದೊಂದು
ನಿತ್ಯ ಸಚಿವ ಮಂಡಲ,
ತನಗೆ ರುಚಿರ ಕುಂಡಲ !

ಕುವೆಂಪು

ಜಗನ್ಮೋಹನ ಚಿತ್ರಶಾಲೆ

ಪಿ. ಆರ್. ತಿಪ್ಪೇಸ್ವಾಮಿ

ಮೈಸೂರು ಉದ್ಯಾನಗಳ ನಗರ. ಜೊತೆಗೆ ಕಲಾ ಕೇಂದ್ರ ಕೂಡ. ಇಲ್ಲಿ ನಿಸರ್ಗ ಸೌಂದರ್ಯವೂ ಮಾನವ ಕಲಾಕೃತಿಯೂ ಹದವಾಗಿ ಬೆರೆತಿವೆ. ಚಿತ್ರಕಲೆ ವಾಸ್ತುಶಿಲ್ಪಗಳ ತವರೂರು ಇದು. ಇದಕ್ಕೆ ಹಳೆಯ ರಾಜವಂಶದ ಆಸಕ್ತಿ ಪ್ರೋತ್ಸಾಹಗಳು ಕಾರಣ. ಮೈಸೂರಿನ ಕಲಾತಾಣಗಳ ಪೈಕಿ ಜಯಚಾಮರಾಜೇಂದ್ರ ಕಲಾಸಂಗ್ರಹಾಲಯವೂ ಒಂದು. ಸುಪ್ರಸಿದ್ಧ ಜಗನ್ಮೋಹನ ಅರಮನೆಯಲ್ಲಿ ನೆಲೆಗೊಂಡಿರುವ ಈ ಕಲಾಶಾಲೆಗೆ ಹಿಂದೆ ಜಗನ್ಮೋಹನ ಚಿತ್ರಶಾಲಾ ಎಂದೇ ಹೆಸರಿತ್ತು. ಜಗನ್ಮೋಹನ ಅರಮನೆ ಇರುವುದು ಅರಮನೆಯ ಕೋಟೆಯ ಪಶ್ಚಿಮ ದಿಕ್ಕಿನ ಮಹಾದ್ವಾರಕ್ಕೆ ಎದುರಾಗಿ. ಸುಂದರವಾದ ಈ ಅರಮನೆ ಪ್ರತಿದಿನವೂ ಅಸಂಖ್ಯಾತ ಪ್ರವಾಸಿಗಳನ್ನು ಆಕರ್ಷಿಸುತ್ತಿದೆ.

ಕನ್ನಡ ಕಲಾಪ್ರಜ್ಞೆ ಇಂದಿಗೂ ಜೀವಂತವಾಗಿ ಬದುಕಿರುವುದಕ್ಕೆ ಈ ಚಿತ್ರಾಲಯವೂ ಒಂದು ಸಾಕ್ಷಿ. ಈ ಕಲಾಗಾರ ಮೈಸೂರು



ಜಗನ್ಮೋಹನ ಅರಮನೆ



ರವಿವರ್ಮ

ಸಂಸ್ಥಾನದ ರಾಜಮಹಾರಾಜರ ಸತತ ಪ್ರಯತ್ನದ ಫಲ. ಶ್ರೇಷ್ಠಮಟ್ಟದ ಚಿತ್ರಶಿಲ್ಪ ಕಲಾಕೋವಿದರಿಂದ ರಚಿತವಾದ ಅತ್ಯುತ್ತಮ ಚಿತ್ರಗಳ ಮತ್ತು ಶಿಲ್ಪಕೃತಿಗಳ ಸಂಗ್ರಹಗಳಿಂದಾಗಿ ಇದು ಅದ್ವಿತೀಯವೆನಿಸಿವೆ. ಮುಮ್ಮಡಿ ಕೃಷ್ಣರಾಜ ಒಡೆಯರವರು 1891ರಲ್ಲಿ ಈ ಅರಮನೆಯನ್ನು ಕಟ್ಟಿಸಿದರು. ಇಲ್ಲಿರುವ ಒಂದು ಶಿಲಾಶಾಸನ ಹೀಗೆ ಹೇಳುತ್ತದೆ—

"ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ 1784ನೇ ದುರ್ಮತಿ ಸಂವತ್ಸರದ ಆಶ್ವೀಜ ಶುದ್ಧ 10 ಭಾನುವಾರಕ್ಕೆ ಸರಿಯಾಗಿ ಸಬ್ 1891ನೇ ಅಕ್ಟೋಬರ್ ತಾ: 13ರಲ್ಲು. ಆಳಿದ ಮಹಾಸ್ವಾಮಿಯವರಿಂದ ನಿರ್ಮಾಣ ಮಾಡಿಸಲ್ಪಟ್ಟ ಖಾಸಾ ಜಗನ್ಮೋಹನ ಮಹಲು."

ಈ ಮಹಲು ಎರಡು ಉಪ್ಪರಿಗೆಗಳಿಂದ ಕೂಡಿದೆ. ತಳಭಾಗದಲ್ಲಿ ನಾಲ್ಕು ವಿಶಾಲವಾದ ಹಜಾರಗಳುಂಟು. ಪ್ರತಿಯೊಂದು ಹಜಾರಕ್ಕೂ ಅಂಟಿಕೊಂಡಂತೆ ಎರಡು ಕೋಣೆಗಳು ಎಡಬಲ ಭಾಗಗಳಲ್ಲಿ. ಮೊದಲ ಮತ್ತು ಎರಡನೆಯ ಉಪ್ಪರಿಗೆಗಳಲ್ಲಿ ಅನುಕ್ರಮವಾಗಿ ಮೂರು ಮತ್ತು ಎರಡು ಹಜಾರಗಳೂ ಅವಕ್ಕೆ ಸೇರಿದಂತೆ ಕಿರಿಯ ಕೋಣೆಗಳೂ ಇವೆ. ಮುಮ್ಮಡಿ ಭೂಪರ

ಕಾಲದಲ್ಲೇ ಚಿತ್ರಿಸಲಾದ ಭಿತ್ತಿಚಿತ್ರಗಳನ್ನು ಎರಡನೆಯ ಉಪ್ಪರಿಗೆಯ ಮೂರು ಕೋಣೆಗಳಲ್ಲಿ ಕಾಣಬಹುದು. ಮೊದಲ ಉಪ್ಪರಿಗೆಯ ನೆಲದ ಭಾಗವನ್ನು ಮರದಿಂದ ಅಳವಡಿಸಲಾಗಿದೆ. ಅಂದಿಗೆ ಅದು ನೃತ್ಯಾಲಯವಾಗಿದ್ದಿತು. ಅಲ್ಲಿ ಮುಮ್ಮಡಿಯವರು ನೃತ್ಯವನ್ನೂ, ಸಂಗೀತವನ್ನೂ ವೀಕ್ಷಿಸುತ್ತಿದ್ದರಂತೆ.

ನಮ್ಮ ರಾಜರಿಗೆ ದೇಶವಿದೇಶಗಳಿಂದ ಉಡುಗೊರೆಯಾಗಿ ಬಂದ ಹಾಗೂ ಅವರು ಉಪಯೋಗಿಸಿದ ಅಪೂರ್ವ ಕಲಾವಸ್ತುಗಳನ್ನೆಲ್ಲ ಒಂದೆಡೆ ಕಲೆಹಾಕಲಾಗುತ್ತಿತ್ತು. ಈ ಸಂಗ್ರಹವೇ ಕಾಲಕ್ರಮದಲ್ಲಿ ಜಗನ್ಮೋಹನ ಅರಮನೆಯ ಕಲಾವಸ್ತುಗಳ



ನಿಕೊಲಾಯ್ ರೋರಿಚ್



ಎಸ್. ಎಂ. ಸೂಫಿ

ಸಂಗ್ರಹಾಲಯುವಾಗಿ ಮಾರ್ಪಾಡಾಯಿತು. 1915ರ ಸುಮಾರಿಗೆ ಇದನ್ನು ನಾಲ್ವಡಿ ಕೃಷ್ಣರಾಜ ಒಡೆಯುರ ಸವಿ ನೆನಪಿಗಾಗಿ ವ್ಯವಸ್ಥೆಗೊಳಿಸಲಾಯಿತು. ಶ್ರೀ ಬಾಲರಾಜ ಅರಸ್ ಅವರು ಈ ಸಂಗ್ರಹಾಲಯುದ ಮೇಲ್ವಿಚಾರಕರಾಗಿದ್ದವರಲ್ಲಿ ಮೊದಲಿಗರು. ಅನಂತರ ಜನಾಬ್ ಷಾ ಎಂಬುವರು ವಸ್ತು ಸಂಗ್ರಹಾಲಯಕ್ಕೆ ಶ್ರೀ ನಾಲ್ವಡಿಯುವರ ಆದೇಶದಂತೆ ಚಿತ್ರಗಳನ್ನು ಸೇರಿಸಿದರು. ಇವರಿಂದಾಗಿ ಇದಕ್ಕೆ ಜಗನ್ಮೋಹನ ಚಿತ್ರಶಾಲೆ ಎಂಬ ಹೆಸರು ನಿಂತಿತು. ದೇಶೀಯು ಕಲಾವಿದರ ಕಲಾಕೃತಿಗಳ ಜೊತೆಗೆ ದೇಶ ವಿದೇಶಗಳ ಕಲಾವಿದರು ರಚಿಸಿದ ಕಲಾವಸ್ತುಗಳಿಗೂ ಇಲ್ಲಿ ಎಡೆಕೊಡುವದರ ಮೂಲಕ ಇದಕ್ಕೆ 1924ರಲ್ಲಿ ಅಖಿಲಭಾರತ ವ್ಯಾಪ್ತಿಯುನ್ನು ದೊರಕಿಸಿಕೊಡಲಾಯಿತು.

1932 ರಿಂದ 1937ರ ತನಕ ವರ್ಷಂ ಪ್ರತಿ ಅನೇಕ ಉತ್ತಮ ಚಿತ್ರಗಳನ್ನು ಕೊಳ್ಳಲಾಯಿತು. ಮ್ಯಾಕಾಲ್‌ಫಿ ಅವರು ಕನ್ನಡ ಕಲಾವಿದ ದಿ: ಕೆ. ವೆಂಕಟಪ್ಪನವರ ಸಹಾಯುದಿಂದ ಈ ಸಂಗ್ರಹಾಲಯುವನ್ನು ಸುವ್ಯವಸ್ಥೆಗೊಳಿಸಿ ಚಿತ್ರಪಟಗಳನ್ನು ಮತ್ತೆ ವಿನೂತವಾಗಿ ಜೋಡಿಸಿ ಪ್ರದರ್ಶಿಸಿದರು. ತಿರುವಾಂಕೂರಿನ ಲಲಿತಕಲಾ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಜೇಮ್ಸ್ ಎಚ್. ಕೇನ್ಸ್ ಅವರು ಜಗನ್ಮೋಹನ ಚಿತ್ರಶಾಲೆಯು ಅಧಿಕಾರಿಗಳಾಗಿದ್ದ ಸರ್ದಾರ್ ಮದನಗೋಪಾಲರಾಜ ಅರಸರ ಸಹಯೋಗವಲ್ಲಿ 1942ರಲ್ಲಿ ಪುನಃ ಕಲಾಕೃತಿಗಳನ್ನು ಓರಣವಾಗಿ ಜೋಡಿಸಿ ಹೊಸರೂಪ ತಂದರು. ಅಲ್ಲದೆ ಅವರ ಸಂಪಾದಕತ್ವದಲ್ಲಿ ಚಾರಿತ್ರಕ ವ್ಯಕ್ತಿಗಳ ರೂಪಚಿತ್ರಗಳ ಕ್ಯಾಟಲಾಗನ್ನೂ ಹೊರತರುವಂತಾಯಿತು.

ಈ ಚಿತ್ರಶಾಲೆಯುಲ್ಲಿ ಹೈದರ್, ಟಿಪ್ಪು ಮತ್ತು ಇಂಗ್ಲಿಷ್ ಅಧಿಕಾರಿಗಳ ಅನೇಕ ಚಿತ್ರಗಳೂ ಇದ್ದವು. ಅವುಗಳನ್ನೆಲ್ಲಾ 1942 ರಲ್ಲಿ ಶ್ರೀರಂಗಪಟ್ಟಣದ ಬಳಿ ಕಾವೇರಿ ನದಿಯು ತೀರದ ಸ್ಕಾಟ್ ಬಂಗಲೆಯುಲ್ಲಿ ಪ್ರದರ್ಶಿಸಲಾಯಿತು. ಅಲ್ಲಿ ಚಾರಿತ್ರಿಕ ಹಿರಿಮೆಗೆ ತಕ್ಕಂತೆ ಚಿತ್ರಗಳನ್ನು ಜೋಡಿಸಲಾಯಿತು. ಶ್ರೀರಂಗಪಟ್ಟಣದಲ್ಲಿ 1817ರಲ್ಲಿ ಮುಖ್ಯ ಸೈನ್ಯಾಧಿಕಾರಿಯಾಗಿದ್ದವನು ಸ್ಕಾಟ್. 1950 ರಲ್ಲಿ ಚಿತ್ರಗಳನ್ನೆಲ್ಲ ಮತ್ತೆ ಜಗನ್ಮೋಹನ ಚಿತ್ರಾಲಯಕ್ಕೆ ತರಲಾಯಿತು.

ಮೈಸೂರು ದಸರಾ ಕಲಾಪ್ರದರ್ಶನದಲ್ಲಿ ಉತ್ತಮ ಬಹುಮಾನಗಳಿಸಿದ ಚಿತ್ರಗಳನ್ನೂ ಹಲವಾರು ವರ್ಷಗಳ ಕಾಲ ಚೆನ್ನರಾಜ ಅರಸ್ ಅವರ ಕಾಲದಲ್ಲಿ ಕೊಳ್ಳಲಾಯಿತು. ಅವರು 1946 ರಲ್ಲಿ ಚಿತ್ರಶಾಲೆಯ ಮೇಲ್ವಿಚಾರಕರಾಗಿದ್ದಾಗ, 1946 ರಲ್ಲಿ ಪುನಃ ಕಲಾಕೃತಿಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ ಸುಂದರವಾಗಿ ಜೋಡಿಸಲಾಯಿತು. ಇದರಿಂದಾಗಿ ಭಾರತದ ಚಿತ್ರಕಲೆಯ ವಿವಿಧ ಶೈಲಿಗಳ ಚಿತ್ರಗಳನ್ನು ಕ್ರಮವಾಗಿ ವೀಕ್ಷಿಸುವ ಅವಕಾಶವನ್ನು ಕಲ್ಪಿಸಿದಂತಾಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ ವಿವಾಹ ಮಹೋತ್ಸವಕ್ಕಾಗಿ 1900 ರಲ್ಲಿ ಸಭಾಂಗಣವನ್ನು ನಿರ್ಮಿಸಿ ಇದನ್ನು ವಿಸ್ತರಿಸಲಾಯಿತು.



ಹಳ್ದಂಕರ್



ಅಲ್ಲಿಂದೀಚೆಗೆ ಇಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಗಳೂ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭಗಳೂ ಅನೇಕ ವರ್ಷಗಳು ಜರುಗುತ್ತ ಬಂದುವು. 1902 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಲಾರ್ಡ್ ಕರ್ಜನ್‌ರೊಂದಿಗೆ ಇಲ್ಲಿ ದರ್ಬಾರು ನಡೆಸಿದ್ದರು.

ಹೀಗೆ ಈಗ ಜಗನ್ಮೋಹನ ಅರಮನೆ ತನ್ನದೇ ಆದ ಇತಿಹಾಸ ಹೊಂದಿ ವೈಭವದಿಂದ ಮೆರೆದಿರುವುದರ ಜೊತೆಗೆ ಅಮೂಲ್ಯವಾದ ಮತ್ತು ಆಶ್ಚರ್ಯಕರವಾದ ಕಲಾಕೃತಿಗಳ ಸಂಗ್ರಹಾಲಯುವಾಗಿ ಹೆಸರಾಯಿತು. ಈ ಎಲ್ಲಾ ಕಲಾಕೃತಿಗಳನ್ನೂ ಈ ಸಭಾಂಗಣದ ಹಿಂಬದಿಯ ಮಹಲಿನಲ್ಲಿ ಅಳವಡಿಸಲಾಗಿದೆ. ಅವುಗಳಲ್ಲಿ ಬಹುಪಾಲು ನಮ್ಮ ಕನ್ನಡಕ್ಕೆ ಕೀರ್ತಿಯನ್ನು ತಂದ ಅರಸರ ಮನೆತನಕ್ಕೆ ಸೇರಿದವಾಗಿವೆ. ಈ ಕಲಾನಗರಕ್ಕೆ ಹಾಗೂ ಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿದ ರಾಜರಲ್ಲಿ ಮುಮ್ಮಡಿ ಹಾಗೂ ನಾಲ್ವಡಿ ಕೃಷ್ಣರಾಜರನ್ನು ಯಾವ ಕನ್ನಡಿಗನೂ ಮರೆಯುವಂತಿಲ್ಲ. ಇವರ ಕಾಲದಲ್ಲಿ ಈ ಚಿತ್ರಶಾಲೆಗೆ ಅತ್ಯಂತ ಹೆಚ್ಚಿನ ಪ್ರೋತ್ಸಾಹ ಬೆಂಬಲ ದೊರೆಯಿತು.

ತಮ್ಮ ಆಳ್ವಿಕೆಯಲ್ಲಿ ವಜ್ರಮಹೋತ್ಸವವನ್ನೂ ಆಚರಿಸಿ ವೈಭವವಾಗಿ ರಾಜ್ಯಭಾರ ಮಾಡಿದ ಮುಮ್ಮಡಿ ಕೃಷ್ಣರಾಜರು ಸಾಹಿತ್ಯ ಕಲಾಪ್ರೇಮಿಗಳಾಗಿ ಉದಾರ ಪ್ರೋತ್ಸಾಹವಿತ್ತಿದ್ದರು. ಅದರಲ್ಲೂ ಕನ್ನಡ ವರ್ಣಕಲೆಗೆ ಹೆಚ್ಚು ಪುರಸ್ಕಾರ ದೊರೆಯಿತು. ಅವರ ಕಾಲದಲ್ಲಿ ಕನ್ನಡದ ಚಿತ್ರಕಾರರು ಹಲವಾರು ಕೃತಿ ರಚಿಸಿದರು. ಜಗನ್ಮೋಹನ ಬಂಗಲೆಯ ಎರಡನೆಯ ಉಪ್ಪರಿಗೆಯ ಭಿತ್ತಿ ಚಿತ್ರಗಳು ಕೆಲವು ಅವರ ಕಾಲದ ಚಿತ್ರಕಾರರಲ್ಲಿ ಶಿಕಾರಿಪುರದ ಚಿತ್ರಕಾರ ಮನೆತನದ ತಿಪ್ಪಯ್ಯ, ಮೈಸೂರಿನ ಕೊಂಡಯ್ಯ, ವೀರಣ್ಣ, ಯಲ್ಲಪ್ಪ, ದುರ್ಗದ ವೆಂಕಟಪ್ಪ ಮುಂತಾದವರು ಮುಖ್ಯರಾದವರು. ಇವರ ಅನೇಕ ಚಿತ್ರಗಳು ಈಗಲೂ ನಿನ್ನೆ ಮೊನ್ನೆ ರಚಿಸಿದಂತೆ ಚಿರನೂತನವಾಗಿವೆ.

ಕನ್ನಡದ ಚಿತ್ರಶೈಲಿಯನ್ನು ಮೆರೆಯುವ ಈ ಭಿತ್ತಿಚಿತ್ರಗಳನ್ನು ಗಮನಿಸುವುದು ಇಲ್ಲಿ ಮುಖ್ಯ. ಎರಡನೆಯ ಉಪ್ಪರಿಗೆಯ ಮೂರು ಕೋಣೆಗಳ ಗೋಡೆಗಳಲ್ಲಿ ವರ್ಣಮಯವಾಗಿವೆ. ಎಲ್ಲಿ ನೋಡಿದರಲ್ಲಿ ಮುಮ್ಮಡಿ ಪ್ರಭುಗಳ ಆಳ್ವಿಕೆಯ ಸಂಕೇತದ ಚಿತ್ರಗಳೇ ಹೇರಳವಾಗಿದೆ. ಮುಮ್ಮಡಿಯವರ ವಂಶವೃಕ್ಷ ಎಲೆಯಾಕಾರದಲ್ಲಿ ಚಿತ್ರಿತವಾಗಿದೆ. ಆದಿ ಯುವರಾಜರಿಂದ

ಮುಮ್ಮಡಿಯವರವರೆಗೆ ಮೈಸೂರು ಅರಸರ ವಂಶಾವಳಿಯನ್ನು ನಿರ್ದೇಶಿಸುವ 'ಸಂತಾನಾಂಬುಜ', ವಿಜಯ ದಶಮಿಯಂದು ಆರು ಆನೆಗಳನ್ನು ಕಟ್ಟಿದ ರಥದಲ್ಲಿ ಮುಮ್ಮಡಿಯ ಜಂಬೂಸವಾರಿಯ ಚಿತ್ರ, ಅಲ್ಲದೆ ಕಿತ್ತೂರು, ಗೊತ್ತಗಾಲ, ಚಟ್ನಹಳ್ಳಿಗಳಲ್ಲಿ ನಡೆದ ಹುಲಿ ಶಿಕಾರಿ, ಚಾಮರಾಜನಗರದ ಕಾಡಿನಲ್ಲಿ ಪಟ್ಟದಾನೆಯಾದ 'ಕೆಂಪನಂಜಯ್ಯ'ನನ್ನು ಓಡಿದ ದೃಶ್ಯ, ರಾಜರು ಚದುರಂಗ ದಾಟವನ್ನು ಆಡುತ್ತಿರುವ ದೃಶ್ಯ, ಅನೇಕ ಸುಂದರಿಯರೊಂದಿಗೆ ಮುಮ್ಮಡಿಯವರು ಆಚರಿಸುವ ವಸಂತೋತ್ಸವದ ದೃಶ್ಯ–ಇವೇ ಮುಂತಾದ ಭಿತ್ತಿಚಿತ್ರಗಳಿವೆ. ಮುಮ್ಮಡಿಯವರ ಎಡಬಲ ಭಾಗಗಳಲ್ಲಿ ರಾಜ ಮತ್ತು ಅಧಿಕಾರಿಗಳು ಅಲ್ಲದೆ ಪೇಶ್ವೆಗಳು, ರಣಜಿತ್‌ಸಿಂಗ್, ನಾನಾಫಡ್ನವೀಸ್ ಕೊಡಗಿನ ವೀರರಾಜ, ತಂಜಾವೂರಿನ ರಾಜರುಗಳು ಇತರ ನವಾಬರನೇಕರ ಸ್ವಾಭಾವಿಕವಾದ ರೂಪ ಚಿತ್ರಗಳನ್ನು ಬಿಡಿಸಲಾಗಿದೆ.



ಗಂಧದ ಕೆತ್ತನೆ ಚಿತ್ರಪಟ



ಇಷ್ಟೇ ಅಲ್ಲದೆ ಪ್ರಸನ್ನ ಪಾರ್ವತಿ, ದುರದುಂಡಿ, ಸರ್ವಮಂಗಳಾ, ಜಗದಾಂಬಾ, ಪುಟ್ಟಚಾಮುಂಡಿ, ವರಚಾಮುಂಡಿ, ಚೆಲುವೆ ಚಾಮುಂಡಿಯರೆಂಬ ಪಟ್ಟದ ಹಸುಗಳನ್ನೂ, ವಿಜಯ ಎಂಬ ಪಟ್ಟದ ಕುದುರೆಯನ್ನೂ ಸರ್ವಚಿತ್ತರಂಜನಿ, ಸರ್ವಾಂಗ ಸುಂದರಿ—ಮೋಹಕ ಕನ್ಯೆಯರೂ ಅಲ್ಲಿ ಚಿತ್ರಿತವಾಗಿದ್ದಾರೆ. ತಾರೀಖು : 3–8–1886ರಲ್ಲಿ ಶಿಕಾರಿಪುರದ ತಿಪ್ಪಯ್ಯ ಎಂಬ ಕಲಾವಿದ ಕಾಗದದ ಮೇಲೆ ಕಪ್ಪು ಶಾಯಿಯಲ್ಲಿ ಬಹು ಸೂಕ್ಷ್ಮವಾಗಿ ಬಿಡಿಸಿದ "ಭೀಷ್ಮಾರ್ಜುನರ ಕಾಳಗ"ದ ಸುಂದರ ಚಿತ್ರ ಈ ಸಂಗ್ರಹಾಲಯದಲ್ಲೇ ಅಪರೂಪವಾದುದು. ದೇಶೀಯ ಮೂಲವರ್ಣಗಳನ್ನು ಈ ಚಿತ್ರಗಳಲ್ಲಿ ಕಾಣಬಹುದು. ಹಲವು ಚಿತ್ರಗಳಲ್ಲಿ ಬೂಟ ಕುಸುರಿನ ಕೆಲಸದ ಜೊತೆಗೆ ಸ್ವರ್ಣರೇಖೆಯ ಲೇಪನವನ್ನೂ ಕಾಣಬಹುದಾಗಿದೆ. ಇವು ರಚಿತವಾಗಿ ಅನೇಕ ವರ್ಷಗಳಾಗಿದ್ದರೂ ತಮ್ಮ ಪ್ರಕಾಶವನ್ನು ಕಳೆದುಕೊಳ್ಳದೆ ಶೋಭಿಸುತ್ತಿವೆ. ಹೆಚ್ಚಾಗಿ ಅವುಗಳೆಲ್ಲಾ ಪೂಜಾಚಿತ್ರಗಳಾದುದರಿಂದ ಚಿತ್ರಕಾರರ ಹೆಸರು ಕೆಲವು ಕೃತಿಗಳಲ್ಲಿ ಕಂಡುಬರುವುದಿಲ್ಲ. ಕಲಾವಿದರಿಗೆ ರಾಜರಲ್ಲಿ ಎಂಥ ಭಕ್ತಿ ಇದ್ದಿತೆಂಬುದಕ್ಕೆ ಒಂದು ಚಿತ್ರದಲ್ಲಿ ಕಾಣುವ ಬರಹವನ್ನು ಗಮನಿಸಬಹುದು. ಮುಮ್ಮಡಿಯವರ ಚಿತ್ರಪಟದಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಪಾಗಚಾರಕನಾದ ಕೊಂಡಯ್ಯನು ಬರೆದು ಒಪ್ಪಿಸಿದ್ದು ಎಂದಿದೆ. ಈ ಚಿತ್ರ ತಳಭಾಗದ ಮೊದಲ ಕೋಣೆಯಲ್ಲಿದೆ. ಇವೇ

ಶೈಲಿಯ ಮತ್ತೊಂದು ಹೆಸರಿಸಬಹುದಾದ ಕೃತಿ ಇಲ್ಲಿದೆ. "ಶಿವ" ಎಂಬ ಎರಡು ಕನ್ನಡ ಅಕ್ಷರಗಳನ್ನೇ ರೇಖೆಯಾಗಿ ಬಳಸಿ ಮುಮ್ಮಡಿ ಭೂಪರು ಸಿಂಹಾಸನಾರೂಢನರಾಗಿರುವಂತೆ ಚಿತ್ರಿಸಿರುವುದು ಅತ್ಯಮೋಘವೆನಿಸುತ್ತದೆ. ಇದನ್ನು ವೀಕ್ಷಿಸಲು ಭೂತಕನ್ನಡಿಯೇ ಬೇಕು. ಅಲ್ಲಿ ಇದರ ವ್ಯವಸ್ಥೆಯೂ ಇದೆ.

ಮುಮ್ಮಡಿಯವರ ಅನಂತರ ಬಂದ ಚಾಮರಾಜರ ಕಾಲದ ಪ್ರಮುಖ ಕಲಾವಿದರಲ್ಲಿ ಕೆ. ವೆಂಕಟಪ್ಪನವರ ತಾತಂದಿರಾದ ದುರ್ಗದ ವೆಂಕಟಪ್ಪನವರೂ ಒಬ್ಬರಾಗಿದ್ದರು. ಇವರು ರಚಿಸಿದ ಚಿತ್ರಗಳನ್ನು ಇಲ್ಲಿ ಕಾಣಬಹುದು.

ನಾಲ್ವಡಿ ಕೃಷ್ಣರಾಜ ಒಡೆಯರು ಎಲ್ಲ ಕಲೆಗಳನ್ನೂ ಪ್ರೋತ್ಸಾಹಿಸುತ್ತಿದ್ದರು. ಅವರ ಕಾಲದಲ್ಲಿ ಗಾಂಧೀಜಿ ಒಮ್ಮೆ ಮೈಸೂರು ರಾಜ್ಯವನ್ನು ರಾಮರಾಜ್ಯವೆಂದು ಶ್ಲಾಘಿಸಿದ್ದುಂಟು. ಚಿತ್ರಕಲೆಗಂತೂ ಅವರು ನೀಡಿದ ಪ್ರೋತ್ಸಾಹ ಅಗಾಧ. ಈ ಒಡೆಯರ ಕಾಲದಲ್ಲಿ ಇತ್ತ ಕಲಾ ಪ್ರೋತ್ಸಾಹದಿಂದಾಗಿ ಒಳನಾಡು ಹಾಗೂ ಹೊರನಾಡುಗಳಿಂದ ಕಲಾಕೋವಿದರು ರಾಜಾಶ್ರಯ ಪಡೆದು ಕಲಾಸೇವೆ ಸಲ್ಲಿಸಿದ್ದಾರೆ. ಇವರ ಕಾಲದಲ್ಲಿ ಪಾಶ್ಚಾತ್ಯ ತಂತ್ರದ ಕೃತಿಗಳನೇಕವು ಬೆಳಕು ಕಂಡಿವೆ. ಅವನ್ನು ಬಹುಪಾಲು ಪಾಶ್ಚಾತ್ಯ ಕಲಾವಿದರು ಹಾಗೂ ನಮ್ಮ ಕಲಾವಿದರನೇಕರು ರಚಿಸಿದ್ದಾರೆ. ರಾಜಾಶ್ರಯ ಪಡೆದು ಹೊರನಾಡಿನ ಕಲಾವಿದರಲ್ಲಿ ಜರ್ಮನಿಯ ಜೆರಾರ್ಡ್‌ಟ್, ಇಂಗ್ಲೆಂಡಿನ ಸ್ಟರ್ಲನ್, ಶಿಲ್ಪಿ ಕೋಲಿಟಿನ್ ವೆಕ್ಸ್‌ಸ್ಲರ್ ಅಲ್ಲದೆ ತಿರವಾಂಕೂರಿನ ರಾಜಾ ರವಿವರ್ಮ ಅವರ ಸೋದರ ರಾಮವರ್ಮ ಮುಂತಾದವರ ಬೆಲೆಬಾಳುವ ಅಪೂರ್ಣ ತೈಲವರ್ಣದ ಬೃಹದಾಕಾರದ ಚಿತ್ರಗಳನ್ನು ನಾವು ಇಲ್ಲಿ ನೋಡಬಹುದಾಗಿದೆ. ಅಲ್ಲದೆ ಲೋಕವಿಖ್ಯಾತವಾದ ರಷ್ಯಾ ದೇಶದ ನಿಕೋಲಾಸ್ ರೋರಿಚ್‌ರಿಂದ ಕೊಂಡ ಕೆಲವು ಚಿತ್ರಗಳನ್ನು ಈ ಕಲಾಗಾರದಲ್ಲಿ ಒಂದು ಕೋಣೆಯಲ್ಲಿ ಪ್ರದರ್ಶಿಸಲಾಗಿದೆ. ರಜಪೂತ್, ಮೊಗಲ್, ಬಂಗಾಳಿ ಮುಂತಾದ ಶೈಲಿಯ ಅನೇಕ ಉತ್ತಮ ಕೃತಿಗಳನ್ನೂ ದಸರಾ ಕಲಾ ಪ್ರದರ್ಶನದಿಂದ ಕೊಂಡು ಈ ಕಲಾ ಭಂಡಾರಕ್ಕೆ ಸೇರಿದ್ದು ಇವರ ಕಾಲದಲ್ಲೇ. ಅಜೀಜ್, ಕೆ. ಕೇಶವಯ್ಯ, ಕೆ. ವೆಂಕಟಪ್ಪ ಮುಂತಾದ ಕನ್ನಡ ಕಲಾವಿದರೂ ಇವರ ಆಶ್ರಯದಲ್ಲಿದ್ದು ಉತ್ತಮ ಕೃತಿಗಳನ್ನು ನೀಡಿದ್ದಾರೆ. ಇದರಿಂದಾಗಿ ನಮ್ಮ ಕಲಾವಿದರು ಇತರರೊಂದಿಗೆ ಸರಿದೊರೆಯಾಗಿ ನಿಂತಿದ್ದಾರೆ.

ಇಲ್ಲಿಯ ಕಲಾಕೃತಿಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು. ತೈಲ ಹಾಗೂ ಜಲವರ್ಣದ ಚಿತ್ರಗಳಲ್ಲಿ ರೂಪಸಾದೃಶ್ಯದ ಕೃತಿಗಳೂ, ವಸ್ತುನಿಷ್ಠ ಚಿತ್ರಗಳೂ, ಪ್ರಕೃತಿ ದೃಶ್ಯಗಳೂ ಹಸ್ತಿದಂತದಲ್ಲಿ ಗಂಧದ ಮರದಲ್ಲಿ ಅಮೃತ ಶಿಲೆಯಲ್ಲಿ ಕೆತ್ತಿದ ಕರಕೌಶಲ್ಯದ ವಿವಿಧ ಸುಂದರ ವಸ್ತುಗಳೂ ಕತ್ತಿ, ಗುರಾಣಿ, ಫಿರಂಗಿ ಮೊದಲಾದ ಯುದ್ಧ ಸಾಮಗ್ರಿಗಳೂ, ಕಲಾವಸ್ತುಗಳೂ ಹಿಂದಿನ ಕಾಲದ ವಸ್ತ್ರಾಭರಣಗಳೂ ಸುಗಂಧದ್ರವ್ಯ ಸಂಗ್ರಹ ವಸ್ತುಗಳೂ ವಿವಿಧ ರೂಪದ ನಾನಾ ಸಂಗೀತ ವಾದ್ಯಗಳೂ—ಇಂಥ ಇನ್ನೂ ಹಲವು ಬಗೆಯ ವಸ್ತುಗಳೂ ಬೇರೆ ಬೇರೆ ಕೋಣೆಗಳಲ್ಲಿ ಪ್ರದರ್ಶಿತವಾಗಿದೆ.

ಕಲಾಸಂಗ್ರಹಾಲಯದ ಕೆಳಭಾಗದ ಹನ್ನೊಂದು ಕೋಣೆಗಳಲ್ಲಿ ಮತ್ತು ಮೊದಲ ಉಪ್ಪರಿಗೆಯ 8 ಕೋಣೆಗಳಲ್ಲಿ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. 1961ರಲ್ಲಿ ಬಿ. ವೆಂಕಟಾಚಲಂ ಅವರು ಕಲಾವಿದ ಶ್ರೀ ರಾಮನರಸಯ್ಯನವರ ಸಹಕಾರದಿಂದ ಕಲಾ ಸಂಗ್ರಹಾಲಯದ ಕೃತಿಗಳನ್ನು ಮತ್ತೆ ಜೋಡಿಸಿ ಪ್ರದರ್ಶಿಸಿದರು.

ಈ ಕಲಾ ಶಾಲೆಯಲ್ಲಿ ಒಮ್ಮೆ ಹೊಕ್ಕು ಹೊರಬಂದಾಗ, ನಮ್ಮ ದೃಷ್ಟಿಗೆ ಬಿದ್ದು ಸದಾ ನೆನಪು ತರುವ ಚಿತ್ರಗಳಲ್ಲಿ ಬೊಂಬಾಯಿಯ ಎಸ್.ಜಿ. ಹಲ್‌ದಂಕರ್‌ರ ಬೆಳಗುವ ದೀಪವಿಡಿದು ನಿಂತ ಗರತಿಯ ಚಿತ್ರ ಪ್ರಮುಖವಾದುದು. ಇದು ಜನಪ್ರಿಯತೆಗಳಿಸಿದೆ. ಡಾ : ಅಬನೀಂದ್ರನಾಥ ಠಾಕೂರರ ಶಿಷ್ಯರಾದ ಕೆ. ವೆಂಕಟಪ್ಪನವರ ಭಾರತೀಯ ಶೈಲಿಯ ನಾಲ್ಕು ಚಿತ್ರಗಳಲ್ಲಿ 'ವೀಣಾ ಹುಚ್ಚ' ಮತ್ತು "ಮಹಾ ಶಿವರಾತ್ರಿ" ಬಹು ಪ್ರಸಿದ್ಧ ಕೃತಿಗಳು ಇವುಗಳನ್ನು ಯುವರಾಜರು 1924ರಲ್ಲೇ ವೆಂಕಟಪ್ಪನವರಿಂದ ಕೊಂಡಿದ್ದರು. ಕ್ರಮೇಣ ಇವು ಚಿತ್ರಶಾಲೆಗೆ ಬಂದವು. ಇವರ ಸೂಕ್ಷ್ಮ ಕುಸುರಿನ ಕಲೆಗಾರಿಕೆ ವರ್ಣ ಸಂಯೋಜನೆ ಅಪ್ರತಿಮವಾದುದು. ಪಾಶ್ಚಾತ್ಯ ಶೈಲಿಯ 'ಮಹಾ ಶಿವರಾತ್ರಿ' ಚಿತ್ರದಲ್ಲಿ ಕಲಾವಿದರು ತಮ್ಮತನವನ್ನು ವ್ಯಕ್ತಪಡಿಸಿದ್ದಾರೆ.

ಇವುಗಳ ಜೊತೆಗೆ ರಾಜಾ ರವಿವರ್ಮನ ಬೃಹದಾಕಾರದ ಚಿತ್ರಗಳನ್ನೂ ಯಾರೂ ಮರೆಯುವಂತಿಲ್ಲ. ಇವರು ಪಾಶ್ಚಾತ್ಯ ಸಂಪ್ರದಾಯದಲ್ಲಿ ಹೆಸರಾದ ಭಾರತದ ಖ್ಯಾತ ಕಲಾವಿದರು. ಇವರು ರಚಿಸಿದ 16 ಪೌರಾಣಿಕ ಹಾಗೂ ಚಾರಿತ್ರಿಕ ತೈಲವರ್ಣ ಚಿತ್ರಗಳು ಎಂಥವರ ಹೃದಯವನ್ನೂ ಸೆಳೆಯದಿರವು. ಎರಡನೆಯ ಉಪ್ಪರಿಗೆಯ ಹಿಂಬದಿಯ ಹಜಾರದಲ್ಲಿರುವ ಇವನ ಚಿತ್ರಗಳಲ್ಲಿ—ಬೆಳದಿಂಗಳ ಮೋಹಿನಿ; ಮಲಬಾರ್ ಹೆಣ್ಣು, ಹಾಲು ಕುಡಿಯುವ ಮಗು, ದಾನ ಮಾಡುವ ಸ್ತ್ರೀ. ರಾಮನ ಸಾಗರ ದರ್ಪಹರಣ, ಕೀಚಕನ ಮನೆಯತ್ತ ಸಾಗಿರುವ ದ್ರೌಪದಿ ಸೈರಂಧ್ರಿ, ಪತ್ರಲೇಖೆ, ಶಕುಂತಲೆ, ಮತ್ಸ್ಯಗಂಧಿ, ಹಂಸಗೀತೆ.

ರಾವಣ ಜಟಾಯುವಧೆ, ಇಂದ್ರಜಿತು ವಿಜಯ, ರಾಮಪಟ್ಟಾಭಿಷೇಕ ಮುಂತಾದವು ಅಮೋಘವಾಗಿವೆ. ಹರಿಶ್ಚಂದ್ರ ತನ್ನ ಮಡದಿ ಮಕ್ಕಳನ್ನು ಮಾರುವ ದೃಶ್ಯದ ಚಿತ್ರವನ್ನು ಮಾತ್ರ ರಾಮವರ್ಮ ರಚಿಸಿದ್ದಾನೆ.

ನಾವು ಮೊದಲು ಚಿತ್ರಶಾಲೆಯ ಎಡಭಾಗದ ಮಹಾದ್ವಾರವನ್ನು ಹೊಕ್ಕು ಅಲ್ಲಿ ನಿಂತಾಗ ಅಲ್ಲಿಯ ತೂಗುದೀಪಗಳಿಗೆ ಬೆರಗಾಗುತ್ತೇವೆ. ಮುಮ್ಮಡಿಯವರ ಹುಟ್ಟುಹಬ್ಬದ ಮತ್ತು ಚಾಮರಾಜರ ದಸರಾ ಮೆರವಣಿಗೆಯ ಚಿತ್ರಗಳೂ ಇಲ್ಲಿವೆ. ನಾಲ್ವಡಿಯವರ ದರ್ಬಾರು ಚಿತ್ರವೂ ಮನಸೆಳೆಯುತ್ತದೆ. ಅಲ್ಲಿ ಬೆಳ್ಳಿಯ ಮೇಲೆ, ಗಾಜಿನ ಮೇಲೆ ರಚಿತವಾದ ಚಾರಿತ್ರಿಕ ಸನ್ನಿವೇಶಗಳ ಉಬ್ಬಚ್ಚಿನ ಚಿತ್ರಗಳಿವೆ.

ಈ ಸಭಾಂಗಣದ ನಡುವೆ ರೇಷ್ಮೆಯ, ಮೈಕಾದ (ಕಾಗೆಬಂಗಾರದ) ಜಪಾನ್ ಕೃತಿಗಳಿವೆ. ಅದರ ಪಕ್ಕದಲ್ಲಿ ಹೈದರ್ ಟಿಪ್ಪುಗಳಿಗೆ ಸೇರಿದ ಲಿಥೋ ಹಾಗೂ ಛಾಯಾ ಚಿತ್ರಗಳನ್ನೂ ಕಾಣುತ್ತೇವೆ. ಜೊತೆಯಲ್ಲಿ ಮೈಸೂರು, ಹೈದರಾಬಾದು, ತಿರುವಾಂಕೂರು, ಮುಂತಾದ ಅರಸರ ಛಾಯಾಚಿತ್ರಗಳೂ ಅಲ್ಲಿವೆ. ಅಲ್ಲಿ ಒಂದು ಕಪ್ಪಾದ ಫಿರಂಗಿ ಇರಿಸಲಾಗಿದೆ. ಅದು ಹಿಂದೆ ಶ್ರೀರಂಗಪಟ್ಟಣದ ಗಂಜಾಂನಲ್ಲಿ ಫಿರಂಗಿ ಕಾರ್ಖಾನೆಯಲ್ಲಿ ತಯಾರಾದುದು. ಅದರ ಮೇಲೆ ಸರ್ಕಾರಿ ಹೈದರ್ 1222 ಮೊದಲ ಕಾರ್ಖಾನೆ ಎಂಬರ್ಥ ಬರುವಂತೆ ಪರ್ಶಿಯನ್ ಭಾಷೆಯಲ್ಲಿ ಕೊರೆಯಲಾಗಿದೆ.

ಇವಿಷ್ಟನ್ನೂ ನೋಡಿದ ಬಳಿಕ ಮೊದಲ ಎರಡು ಒಳಾಂಗಣಕ್ಕೆ ಬಂದರೆ ಅಲ್ಲಿ ನಮ್ಮ ರಾಜರುಗಳ ಬೃಹದಾಕಾರದ ತೈಲವರ್ಣದ ಚಿತ್ರಗಳನ್ನೂ ಹಲವು ಅದ್ಭುತ ಶಿಲೆಯಲ್ಲಿನ ಅರ್ಧ ದೇಹಾಕೃತಿಗಳನ್ನೂ ಕಾಣುವೆವು. ಜೊತೆ ಜೊತೆಯಾಗಿ ಕನ್ನಡ ಕಲಾವಿದರು ರಚಿಸಿರುವ ರೂಪಚಿತ್ರಗಳೂ ಇವೆ. ಪ್ರಸಿದ್ಧ ಆಂಗ್ಲ ಚಿತ್ರಕಾರ ಸ್ಟರ್ಲಿಂಗನು 1853 ರಲ್ಲಿ ಚಿತ್ರಿಸಿದ ಮುಮ್ಮಡಿಯವರೊಡನೆ ಇಂಗ್ಲಿಷರ ದರ್ಬಾರು ಚಿತ್ರ ಬಹು ಸೊಗಸಾಗಿದೆ. ಚಿತ್ರಕಾರ ತನ್ನನ್ನು ಆ ಚಿತ್ರದಲ್ಲಿ ರೂಪಿಸಿಕೊಂಡಿರುವುದು ಒಂದು ವೈಶಿಷ್ಟ್ಯ. ಮತ್ತೊಂದು ಒಳಾಂಗಣಕ್ಕೆ ಬಂದಾಗ ಖ್ಯಾತ ಚಿತ್ರಕಾರರಾಗಿದ್ದ ವ್ಯಕಸ್ಲರ್ ಮತ್ತು ಜರಾಲ್ವಿನರು ರಚಿಸಿದ ನಾಲ್ವಡಿಯವರ ಚಿತ್ರಗಳೂ ಅಮೋಘವಾಗಿವೆ. ಉಡವಿಲ್‌ನೆಂಬ ಚಿತ್ರಕಾರ ಚಾಮರಾಜ ಒಡೆಯರ ಹುಟ್ಟುಹಬ್ಬದ ಮೆರವಣಿಗೆಯ ಚಿತ್ರವನ್ನು ರಚಿಸಿದ್ದಾನೆ. ಕನ್ನಡ ಚಿತ್ರಕಾರ ವೆಂಕಟಸುಬ್ಬಯ್ಯನು ಚಾಮರಾಜರ ಪಟ್ಟಾಭಿಷೇಕದ ಚಿತ್ರವನ್ನು ರಚಿಸಿದ್ದಾನೆ. ಇವರೇ ಅಲ್ಲದೆ ಅಜೀಜ್, ಕೆ. ಕೇಶವಯ್ಯ, ನಾಗರಾಜು, ಎಸ್. ರಾಮನರಸಯ್ಯ ಮುಂತಾದವರು ರಾಜರುಗಳ ಚಿತ್ರಗಳನ್ನು ಬರೆದಿದ್ದಾರೆ. 1900 ರಲ್ಲಿ ನಡೆದ ನಾಲ್ವಡಿ ಅವರ ವಿವಾಹಮಹೋತ್ಸವದ ಚಿತ್ರವನ್ನು ವ್ಯಕಸ್ಲರನು ತುಂಬ ಶ್ರಮದಿಂದ ಸ್ವಾಭಾವಿಕವಾಗಿ ರೂಪಿಸಿದ್ದಾನೆ. ಈ ಎಲ್ಲ ಚಿತ್ರಗಳನ್ನೂ ಅಲ್ಲಿ ವೀಕ್ಷಿಸಬಹುದು.

ಕೆಳಗಿನ ಮೂರನೆಯ ಒಳಾಂಗಣದಲ್ಲಿ ಪಾಶ್ಚಾತ್ಯ ತಂತ್ರದ ಅನೇಕ ತೈಲವರ್ಣ ಚಿತ್ರಗಳಿವೆ. ಗಾಜಿನ ಕಲಾವಸ್ತುಗಳಿವೆ. ಮಣ್ಣಿನ ಪ್ರತಿಮೆಗಳಿವೆ. ಆನೆಗಳನ್ನು ಹಿಡಿಯುವ ಖೆಡ್ಡದ ಮೂರು ಚಿತ್ರಗಳನ್ನು ರಾಮವರ್ಮನು ರಚಿಸಿದ್ದಾನೆ. ಸೈನ್ಯಾಧಿಪತಿ ಸ್ಕಾಟ್, ರೆಂಬ್ರಾಂಟ್, ಗ್ಲಾಡಸ್ಟನ್, ಜೇಮ್ಸ್‌ಗೋರ್ಡನ್ ಮತ್ತು ವೆಲ್ಲೆಸ್ಲಿ ಮುಂತಾದವರ ರೂಪಚಿತ್ರಗಳಿವೆ. ವಿಶ್ವವಿಖ್ಯಾತ ಕಲಾವಿದರಾದ ಟಿಶಿಯನ್, ಮೊಜಿನರ ಚಿತ್ರಗಳೂ ಇವೆ. ರೆಂಬ್ರಾಂಟರ ಚಿತ್ರಗಳನ್ನು ನಮ್ಮ ಕಲಾವಿದ ಪಾವಂಜೆಯವರು ಸ್ವಾಭಾವಿಕವಾಗಿ ನಕಲು ಮಾಡಿದ್ದಾರೆ. ಇವೂ ಇಲ್ಲಿವೆ.

ಈ ಒಳಾಂಗಣಕ್ಕೆ ಲಗತ್ತಿಸಿರುವ ಸಮಯ ಸುಮಾರು ಏಳು ಕೋಣೆಗಳಲ್ಲಿ ರೋರಿಕರ ಚಿತ್ರಗಳನ್ನೂ, ರಜಪೂತ, ಮೊಗಲ್ ಶೈಲಿಯ, ಮೈಸೂರು ದಿವಾನರ, ಕನ್ನಡ ಶೈಲಿಯ ಚಿತ್ರಗಳನ್ನು ಕಾಣುತ್ತೇವೆ. ರೋರಿಕ ಚಿತ್ರಗಳ ಕೋಣೆಯಲ್ಲಿ ಹಿಮಾಲಯ, ಲಡಾಕ್ ಪ್ರದೇಶದ ಸುಂದರ ಆರು ಪ್ರಕೃತಿ ಚಿತ್ರಗಳನ್ನೂ ಪ್ರದರ್ಶಿಸಲಾಗಿದೆ. ರಜಪೂತ ಮತ್ತು ಮೊಗಲ್ ತಂತ್ರದ 36 ಚಿತ್ರಗಳನ್ನೂ ಹಿಂಬದಿಯ ಕೋಣೆಯಲ್ಲಿ ಇರಿಸಲಾಗಿದೆ.

ಕೆಳಗಡೆಯ ಮೊದಲ ಪಜಾರದ ಬಲಕೋಣೆಗೆ ಬಂದು ಅಲ್ಲಿನ ಮೆಟ್ಟಿಲುಗಳನ್ನು ಏರಿ ಮೇಲುಪ್ಪರಿಗೆಗೆ ಹೋಗುವಾಗ 15 ಜಲವರ್ಣದ ನಿಸರ್ಗ ಚಿತ್ರಗಳನ್ನೂ ಕಾಣುತ್ತೇವೆ. ಮೊದಲ ಉಪ್ಪರಿಗೆಯಲ್ಲಿ 110 ಜಲವರ್ಣದ ಚಿತ್ರಗಳಿವೆ. ಲಕ್ನೋ, ಗುಜರಾತ್, ಮದರಾಸು, ಆಂಧ್ರ, ಶಾಂತಿನಿಕೇತನ, ನವದೆಹಲಿ, ಕಲ್ಕತ್ತ, ಕೇರಳ, ಅಜ್ಮೀರ್, ಬೆಂಗಳೂರು ಮತ್ತು ಮೈಸೂರು ಮುಂತಾದ ಕಡೆಯ ಪ್ರಖ್ಯಾತ ಕಲಾವಿದರಿಂದ ರಚಿತವಾದ ವಸ್ತುಗಳು ಅವು ಚಾರಿತ್ರಿಕ ಸಂಯೋಗ ಚಿತ್ರಗಳೇ ಹೆಚ್ಚು. ಅವುಗಳಲ್ಲಿ ಕೆಲವು ಪ್ರಕೃತಿ ಚಿತ್ರಗಳು. ವೆಂಕಟಪ್ಪನವರ ಐದು ಚಿತ್ರಗಳಿಗೆ ಒಂದು ಕೋಣೆ ವಿನ್ಯಾಸಲಾಗಿದೆ. ಅಲ್ಲಿ ಬಂಗಾಳ ಶೈಲಿಯ ಭಾರತೀಯ ಸಂಪ್ರದಾಯದ ಚಿತ್ರಗಳು ಕೆಲವಿವೆ. ಶಾಂತಿನಿಕೇತನದ ಗಗನೇಂದ್ರನಾಥ ಠಾಕೂರರ, ಅಬನೀಂದ್ರನಾಥ ಠಾಕೂರರ, ಬ್ಯಾನರ್ಜಿಯವರ ಹಾಗೂ ಕಲ್ಕತ್ತದ ಪ್ರಮೋದ ಕುಮಾರ್ ಚಟರ್ಜಿಯವರಿಂದ ರೂಪಿತವಾದ ಚಿತ್ರಗಳವು. ಮೈಸೂರು ಕಲಾವಿದರ ಕೃತಿ

ಗಳಿಗೇ ಒಂದು ಪ್ರತ್ಯೇಕ ಕೋಣೆ ಉಂಟು. ಅಲ್ಲಿ ಕೇಶವಯ್ಯ, ಸುಬ್ರಹ್ಮಣ್ಯರಾಜು, ಹನುಮಯ್ಯ, ಸುಬ್ಬಕೃಷ್ಣ, ವೀರಪ್ಪ, ನಾಗರಾಜು, ರಾಮನರಸಯ್ಯ, ರಾಮಚಂದ್ರ, ತಿಪ್ಪೇಸ್ವಾಮಿ, ಸೂಫಿ, ಆಚಾರ್ಯ, ಸೀತಾರಾಂ, ಕಾಳಪ್ಪ, ಮುಂತಾದವರ ಕೃತಿಗಳಿವೆ. ಪರ್ಷಿಯಾ ಸಂಪ್ರದಾಯದಲ್ಲಿ ಚಿತ್ರರಚಿಸುವ ಲಕ್ನೋವಿನ ರಹಮಾನ್ ಜುಗ್ತಾಯದ 9 ಚಿತ್ರಗಳು ಬೇರೊಂದು ಕೋಣೆಯಲ್ಲಿವೆ. ಇವಿಷ್ಟನ್ನೂ ನೋಡಿ ಕೊನೆಯಲ್ಲಿ ರಾಜಾರವಿವರ್ಮನ 19 ಕೃತಿಗಳನ್ನು ನೋಡುವ ಭಾಗ್ಯ ನಮ್ಮದಾಗುತ್ತದೆ.

ಅನಂತರ ಎರಡನೆಯ ಉಪ್ಪರಿಗೆಯ ರಂಗಮಹಲ್‌ಗೆ ಬರುವಾಗ ಹಂತಗಳ ಕೋಣೆಯ ಗೋಡೆಯಲ್ಲಿ ತೂಗುವ 16 ಜಲವರ್ಣ ಕೃತಿಗಳನ್ನು ಮರೆಯುವಂತಿಲ್ಲ. ರಂಗಮಹಲಿಗೆ ಕಾಲು ಇಟ್ಟೊಡನೆ ವಿವಿಧ ಸಂಗೀತ ವಾದ್ಯಗಳನ್ನೂ ನೋಡುತ್ತೇವೆ. ಅದರ ಪಕ್ಕದ ಸಭಾಂಗಣದಲ್ಲಿನ ಭಿತ್ತಿಗಳೆಲ್ಲಾ ಕರ್ನಾಟಕ ಶೈಲಿಯ ಚಿತ್ರಗಳಿಂದ ತುಂಬಿ ಹೋಗಿವೆ. ಅಲ್ಲದೆ ಅಲ್ಲಿ ರಾಜರುಗಳು ವಿನೋದ ವಾಗಿ ಆಟವಾಡುತ್ತಿದ್ದ ವೃತ್ತಾಕಾರದ ರಟ್ಟಿನ ಚಿತ್ರಗಳಿವೆ. ಇವೆಲ್ಲಾ ಗಂಜೀಫ್ ಚಿತ್ರಗಳು. ನಾನಾ ದೇವ ದೇವಿಯರ, ಆಯುಧ ಗಳ ಸೂಕ್ಷ್ಮ ಚಿತ್ರಗಳನ್ನೂ ಅವುಗಳಲ್ಲಿ ಚಿತ್ರಿಸಲಾಗಿದೆ.
ಇವೆಲ್ಲವನ್ನೂ ನೋಡಿ ಉಪ್ಪರಿಗೆಯಿಂದ ಕೆಳಭಾಗದ ಹಿಂಬದಿಯ ನಾಲ್ಕನೆ ಗಾಜಿನ ಪಡಸಾಲೆಗೆ ಬಂದಾಗ ಅಲ್ಲಿಯೂ ಅನೇಕ ಕಲಾತ್ಮಕವಾದ ಕಂಚಿನ, ಹಿತ್ತಾಳೆಯ, ತಾಮ್ರದ, ಗಂಧದ, ದಂತದ ವಸ್ತುಗಳನ್ನು ಕಾಣುತ್ತೇವೆ. ಇಲ್ಲಿಯ ಕೆಲವು ಅಪರೂಪದ ಕರಕುಶಲ ವಸ್ತುಗಳನ್ನು ಹೆಸರಿಸಬಹುದು. ತಂಜಾವೂರಿನ ಕಡೆಯ ತಾಮ್ರದ ತಟ್ಟೆಯೊಂದರಲ್ಲಿ ಮಹಾಭಾರತದ ದೃಶ್ಯವನ್ನೇ ಉಬ್ಬಚ್ಚಿನಲ್ಲಿ ಕೊರೆಯಲಾಗಿದೆ. ಇಲ್ಲಿ ದ್ರೌಪದಿಯ ಕಲ್ಯಾಣ, ಪಗಡೆಯಾಟ, ಅಶ್ವಮೇಧಯಾಗ, ಭೀಮ ದುರ್ಯೋಧನರ ಕಾಳಗ, ಕರ್ಣಾರ್ಜುನರ ಯುದ್ಧ ಬಹು ಸೊಗಸಾಗಿ ರೂಪಿತವಾಗಿವೆ. ಜೊತೆಗೆ ಅನೇಕ ಹಿತ್ತಾಳೆಯ ದೇವಾಲಯ ಗಳನ್ನು ಕಾಣುತ್ತೇವೆ.

ದಂತದ ಕೃತಿಗಳಲ್ಲಿ ಆನೆ, ಕುದುರೆ, ಜಿಂಕೆ, ನಾಯಿ, ಕೊಕ್ಕರೆ, ಹಸು, ಎಮ್ಮೆ ಮುಂತಾದ ಪ್ರಾಣಿ ಪಕ್ಷಿಗಳನ್ನು ಬೀಸಣಿಗೆ, ದುರ್ಬೀನು, ಫಿರಂಗಿ, ಭರಣಿ, ಪಗಡೆ ಆಟದ ವಸ್ತುಗಳು ಎತ್ತಿನಗಾಡಿ, ವೇಣುಗೋಪಾಲ, ಚಾಮುಂಡೇಶ್ವರಿ, ಶ್ರೀರಾಮ- ಮುಂತಾದ ದೇವರ ಮೂರ್ತಿಗಳನ್ನು ಪಲ್ಲಕ್ಕಿ, ಕೈಗನ್ನಡಿ, ಬಾಚಣಿಗೆ, ಸೀರಣಿಗೆಗಳನ್ನೂ ನೋಡಬಹುದಾಗಿದೆ. ವಿವಿಧ ಹಾಗೂ ಸುವರ್ಣವರ್ಣಗಳಲ್ಲಿ ತೆಳುವಾದ ದಂತದ ಫಲಕದ ಮೇಲೆ ಮೈಸೂರಿನ ಸುಂದರಯ್ಯನವರು ಮುಮ್ಮಡಿಯವರ ರೂಪ ಚಿತ್ರವನ್ನೂ ಬಿಡಿಸಿದ್ದಾರೆ.

ಬಾಚಣಿಗೆಗಳ ಎಡಬಲ ಮೈಗಳಲ್ಲಿ ರಾಮರಾವಣರ ಯುದ್ಧ, ರಾವಣ ಕೈಲಾಸದಲ್ಲಿನ ಸೋಲು, ಗಜೇಂದ್ರ ಮೋಕ್ಷ, ಶೇಷಶಯನ, ಮಾರ್ಕಂಡೇಯ, ಶ್ರೀರಾಮನ ವಾನರ ಸಭೆ ಮುಂತಾದವು ಅತ್ಯಂತ ಕುಸುರಿನ ಕೆಲಸವಾಗಿ ಮೆರೆಯುತ್ತಿವೆ. ಒಂದು ಕೈಗನ್ನಡಿಯಲ್ಲಿ ಇಡೀ ಕಾಡುಪ್ರಾಣಿಗಳ ವಿಶ್ವವನ್ನೇ ಸೃಷ್ಟಿಸಲಾಗಿದೆ. ತಾಂಡವನೃತ್ಯ, ಶ್ರೀ ರಾಮಪಟ್ಟಾಭಿಷೇಕ ಮೋಹಕ ಕೃತಿಗಳಾಗಿವೆ. ಅಕ್ಕಿಕಾಳಿನಲ್ಲಿ ಎಂಥ ಸೂಕ್ಷ್ಮ ಕಲೆಗಾರಿಕೆ ? ಸೀಸೆಯಲ್ಲಿ ಮಂದಹಾಸದಲ್ಲಿ ಕುಳಿತ ರಾಜಪ್ರತಿಮೆ, ದಶಾವತಾರ. ನವಿಲು ಮುಂತಾದವೂ ಅಲ್ಲದೆ ಒಂದೊಂದು ಅಕ್ಕಿಕಾಳಿನ ಮೇಲೂ ಶಿವಾಜಿ, ಗಾಂಧಿ, ಕೃಷ್ಣ, ಈಶ್ವರ, ಲಕ್ಷ್ಮೀ, ಸರಸ್ವತಿ, ತಾಜಮಹಲ್, ನವಿಲುಗಳನ್ನು ವರ್ಣಗಳಲ್ಲಿ ಚಿತ್ರಿಸಲಾಗಿದೆ. ಇದನ್ನು ರಚಿಸಿದ ಕೀರ್ತಿ ಕೃಷ್ಣಗಿರಿಯ ವೈದ್ಯನಾಥನದು. ಗಂಧದಲ್ಲಿ ಸೀತಾಪಂಚವಟಿ, ಕೃಷ್ಣನ ಜಲಕ್ರೀಡೆಗಳನ್ನು ಸೊರಬದ ಸಿದ್ದಾಪುರದ ತಮ್ಮಣ್ಣ ರಚಿಸಿದ್ದಾನೆ, ಅಹಲ್ಯಾ ಶಾಪವಿಮೋಚನೆ, ಭಗವದ್ಗೀತೆ. ಚಾಮುಂಡೇಶ್ವರಿ ಚತುರ್ಮುಖಬ್ರಹ್ಮ ಕೃತಿಗಳನ್ನು ಸೊರಬದ ಗುಡಿಗಾರ ಮಾನಪ್ಪ ಮುಂತಾದವರು ರಚಿಸಿದ್ದಾರೆ. ಈಶ್ವರ, ವಿಷ್ಣು, ಬ್ರಹ್ಮ ಮೊದಲಾದ ನೇಪಾಳದ ಕೃತಿಗಳು ನವರತ್ನದಲ್ಲಿ ರಚಿತವಾಗಿವೆ.

ಜಗನ್ಮೋಹನ ಬಂಗಲೆಯ ಹಿಂಬದಿಯ ಹಳೆಯ ಕೋಣೆಗಳಲ್ಲಿ ಅಮೃತಶಿಲೆಯ ಮೈಸೂರು ಅರಮನೆಯ ಮಾದರಿಯೊಂದಿದೆ. ಅಲ್ಲಿ ಅನೇಕ ಮರದ ಮೂರ್ತಿಗಳ ಮರದ ಪೆಟ್ಟಿಗೆ ನೋಡಲು ಆಶ್ಚರ್ಯಕರವಾಗಿವೆ. ಲಾರ್ಡ್‌ಡಾಲಹೌಸಿ ಮೈಸೂರು ಅರಸರಿಗೆ ಕಳುಹಿಸಿದ, ಟಿಪ್ಪುವಿನ ಮಡದಿಯ ಮರದ 'ಮೇಜ಼' ಒಂದು ಇಲ್ಲಿದೆ. ನಮ್ಮ ರಾಜರು ಉಪಯೋಗಿಸಿದ ನೂರಾರು ಬಗೆಯ ವಿವಿಧಾಕಾರಗಳ ಕಲಾತ್ಮಕ ಕೈ ಬೆತ್ತಗಳ ಜೊತೆಗೆ ಚಾಮುಂಡಿ ದೇವಿಯ ರಥದ ಮಾದರಿಯೂ ಒಂದಿದೆ. ರಾಜರು ಉಪಯೋಗಿಸಿದ ಕಾಶ್ಮೀರಿ ಶಾಲುಗಳು, ಕತ್ತಿಗಳು, ಗುರಾಣಿಗಳು, ಬಂದೂಕುಗಳು, ಆಯುಧಗಳೂ. ಗಂಟೆಗಳೂ ಇಲ್ಲಿ ಕಾಣಿಸು ತ್ತವೆ. ಇದರ ನೆರೆಯ ಕೋಣೆಯಲ್ಲಿ ಪೂಜಾಮಂದಿರ, ಅದರ ಭಿತ್ತಿಗಳಲ್ಲಿ ಅನೇಕ ಶಾಸ್ತ್ರೀಯ ರೀತಿಯ ದೇವರುಗಳನ್ನು ಚಿತ್ರಿಸ ಲಾಗಿದೆ.

ಮೈಸೂರು ನಗರದ ಆಕರ್ಷಣೆಯಲ್ಲಿ ಜಗನ್ಮೋಹನ ಚಿತ್ರಶಾಲೆಗೆ ಮುಖ್ಯಸ್ಥಾನ ಸಲ್ಲಬೇಕು. ಅನೇಕ ವರ್ಷಗಳ ಸತತ ಪ್ರಯತ್ನ

ನಿಂದ ಅಪೂರ್ವವಾದ ಸಂಗ್ರಹಾಗಾರವಿದ್ದು ಕಲಾಭಿಮಾನಿ ಪ್ರೇಕ್ಷಕರ ಮನಸ್ಸುಗಳನ್ನು ಇದು ಸೂರೆಗೊಳ್ಳುತ್ತಾ ಬಂದಿದೆ. ಕನ್ನಡಿಗ ಹಾಗೂ ಕನ್ನಡೇತರ ವಿಖ್ಯಾತ ಕಲಾವಿದರ ಅಪೂರ್ವ ಕಲಾಕೃತಿಗಳು ಎಲ್ಲಿಯಾದರೂ ನೋಡಲು ದೊರೆಯುವುದು. ಈ ಕಲಾಶಾಲೆ ಪ್ರಾಚೀನ ಹಾಗೂ ಅರ್ವಾಚೀನ ಕಲಾ ಕೇಂದ್ರವಾಗಿ ಇನ್ನೂ ಅಭಿವೃದ್ಧಿ ಪಡೆಯಬಹುದಾಗಿದೆ ಎಂದು ಅನಿಸುತ್ತದೆ.

ಮಳೆಯು ನಾಡ ತೊಯ್ಯುತಿರೆ,
ಮಿಂಚಿಗಿರುಳು ಬೆದರುತಿರೆ,
ಗೂಡ ಮುದ್ದುಗೊಲ್ಲನೆಡೆಯೊಳೊಂದು ಹಣತೆ ಮಿನುಗುತಿರೆ,
ಮುದವದೊಂದು ಮೊಳೆವುದು,
ಬಗೆಯ ಕಣ್ಣು ತೆರೆವುದು.

ಹಿಂದೆ ಸೆರೆಗೆ ಸಿಲುಕುತ,
ಕಂಸಭಯಕೆ ನಡುಗುತ,
" ಹಡೆದ ಕೂಸು ಬಾಳ್ವುದೆಂತು ! " ಎನುತ ತ-ಲ್ಲಣಿಸುತ
ನೊಂದ ಪಿತರ ಚಿತ್ರವ
ಕಾಂಬೆ, ಕೃಷ್ಣನುದಯವ.


— ಪು. ತಿ. ನರಸಿಂಹಾಚಾರ್


ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತರು

ಎಚ್. ಎಮ್. ಚನ್ನಯ್ಯ

ಕನ್ನಡ ನಾಲ್ಕು ಬಾರಿ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ.

ಒಬ್ಬ ಲೇಖಕನ ಮಹತ್ವ ಅವನು ಪಡೆದಿರುವ ಪ್ರಶಸ್ತಿಗಳ ಮೇಲೆ ನಿರ್ಧಾರಿತವಾಗುವುದಿಲ್ಲ, ಅದು ಅವನು ಬರೆದ ಕೃತಿಗಳ ನಿಜವಾದ ಸಾಹಿತ್ಯಕ ಮೌಲ್ಯದ ಮೇಲೆ ನಿರ್ಧಾರಿತವಾಗುತ್ತದೆ.





ಜ್ಞಾನಪೀಠ ಪ್ರಶಸ್ತಿ ಪಡೆದ ನಾಲ್ವರು ಕನ್ನಡದ ಲೇಖಕರೂ ಉನ್ನತ ಪ್ರತಿಭೆಯುಳ್ಳವರಾಗಿದ್ದಾರೆ. ಅವರಿಗೆ ಯಾವ ಪ್ರಶಸ್ತಿಗಳೂ ಬರದೇಹೋಗಿದ್ದರೂ, ಶ್ರೇಷ್ಠ ಲೇಖಕರಾಗಿ ಅವರಿಗಿರುವ ಮಹತ್ವ ಕಿಂಚಿತ್ತೂ ಕಡಿಮೆಯಾಗುತ್ತಿರಲಿಲ್ಲ.


ಕುವೆಂಪು (ಕೆ. ವಿ. ಪುಟ್ಟಪ್ಪ) ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಮೊದಲ ಮಹತ್ವದ ಕವಿ. ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಈ ಪ್ರಶಸ್ತಿ ದೊರಕಿತು. ಅದರ ವಸ್ತು ರಾಮಾಯಣದ ಪ್ರಸಿದ್ಧ ಕಥೆಯೇ ಆದರೂ, ಅದು ಆಧುನಿಕ ಯುಗಪ್ರಜ್ಞೆಯನ್ನೊಳಗೊಂಡು ಮೂಡಿದ ಮಹಾಕೃತಿಯಾಗಿದೆ. ಕುವೆಂಪುರವರೆ ಒಂದೆಡೆ ಹೇಳುತ್ತಾರೆ: "ಸರ್ವಧರ್ಮಗಳ ಸಾರವಾದ ಉದಾರ 'ದರ್ಶನ'ವೊಂದನ್ನು ಗಂಟುಕಟ್ಟಿಕೊಂಡು ಬಾಳಬೇಕು." "ಪೂರ್ಣದೃಷ್ಟಿಯಿಂದಲೆ ಶ್ರೇಯಸ್ಸು. ಪೂರ್ಣದೃಷ್ಟಿಯೆ ನಿಜವಾದ, ಶಾಶ್ವತವಾದ, ಸರ್ವೋತ್ಕೃಷ್ಟವಾದ 'ದರ್ಶನ' ; ಅಂಥ 'ದರ್ಶನ'ದಲ್ಲಿ ವಿಜ್ಞಾನ, ರಾಜಕೀಯ, ಮತತತ್ತ್ವ, ಕಲೆ ಎಲ್ಲವೂ ಅಂಗಗಳಾಗಿರುತ್ತವೆ ; ಅಂಶಗಳಾಗಿರುತ್ತವೆ ; ಸಮನ್ವಿತಗಳಾಗಿರುತ್ತವೆ ; ಶ್ರೇಷ್ಠನಾದ ಕವಿಗೆ ಅಂಥ 'ದರ್ಶನ'ವಿರಬೇಕು." ಈ ಮಾತುಗಳು ಕನ್ನಡದಲ್ಲಿ ಕುವೆಂಪುರವರಿಗೇ ಹೆಚ್ಚು ಅನ್ವಯವಾಗುತ್ತವೆ. 'ಶ್ರೀ ರಾಮಾಯಣ ದರ್ಶನಂ' ಈ 'ದರ್ಶನ'ವನ್ನು ಪ್ರತಿಮಿಸುವ ಮಹಾಕೃತಿಯಾಗಿದೆ. ಈ 'ಪೂರ್ಣದೃಷ್ಟಿ'ಯೇ ಈ ಕಾವ್ಯದ ಆಗಲೇ ಪ್ರಸಿದ್ಧವಾದ ವಸ್ತುವಿಗೆ 'ಹೊಸ ಸತ್ವ' ತಂದುಕೊಟ್ಟಿರುವಂಥದು.

ಕುವೆಂಪು 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಎಂಬ ಎರಡು ಕಾದಂಬರಿಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ಪ್ರಪ್ರಥಮಬಾರಿಗೆ, ಈ ಕಾದಂಬರಿಗಳ ಮೂಲಕ ಮಲೆನಾಡಿನ ಜೀವನ ತನ್ನೆಲ್ಲ ಜಟಿಲತೆಗಳೊಂದಿಗೆ ಸಮಗ್ರವಾಗಿ ಚಿತ್ರಣಗೊಂಡಿತು. ಒಂದು ಸಾಮಾಜಿಕ ಸಂದರ್ಭದಲ್ಲಿ, ಈ ಕಾದಂಬರಿಗಳು ಸಮಾಜದ ವಿವಿಧ ವರ್ಗಗಳ ವಿರೋಧಾತ್ಮಕ ಸಂಬಂಧಗಳನ್ನು ಸಮಗ್ರವಾಗಿ ಚಿತ್ರಿಸುತ್ತವೆ. ಇವು ಅವರ ಗದ್ಯಮಹಾಕಾವ್ಯಗಳಾಗಿವೆ.

ಕುವೆಂಪು ಅವರು ಭಾವಗೀತೆಗಳ ಹಲವಾರು ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಅವರ ಪ್ರಕೃತಿಗೀತೆಗಳು ಮತ್ತು ಆಧ್ಯಾತ್ಮಗೀತೆಗಳಿಗೆ ಕನ್ನಡದಲ್ಲಿ ವಿಶಿಷ್ಟ ಸ್ಥಾನವಿದೆ. ಮುಕ್ತ ಛಂದಸ್ಸನ್ನು ಬಳಸಿ ನಾಟಕಗಳನ್ನು ಬರೆದ ಮೊದಲಿಗರಲ್ಲಿ ಅವರೂ ಒಬ್ಬರು. ಸುಮಾರು ಎಪ್ಪತ್ತು ಕೃತಿಗಳನ್ನು ಕುವೆಂಪು ರಚಿಸಿದ್ದಾರೆ. ಅವುಗಳಲ್ಲಿ ಜೀವನ ಚರಿತ್ರೆಗಳು, ಸಾಹಿತ್ಯ ವಿಮರ್ಶೆ, ಆತ್ಮಚರಿತ್ರೆ, ವೈಚಾರಿಕ ಲೇಖನಗಳೂ ಸೇರಿವೆ.

ಅಂಬಿಕಾತನಯದತ್ತ (ದ. ರಾ. ಬೇಂದ್ರೆ) ಕನ್ನಡದ ಶ್ರೇಷ್ಠ ಭಾವಗೀತೆಗಳನ್ನು ಬರೆದ ಕವಿಯಾಗಿದ್ದಾರೆ. ಕರ್ಣಾಟಕದಾದ್ಯಂತ ಅವರ ಭಾವಗೀತೆಗಳು ಜನಪ್ರಿಯವಾಗಿವೆ. ಅವರ ಉತ್ತರ ಕರ್ಣಾಟಕದ ಭಾಷೆಯಲ್ಲಿ ಸೃಷ್ಟಿಯಾದ ಕವಿತೆಗಳ ಗೇಯತೆ ಓದುಗರನ್ನು ಸಮ್ಮೋಹನಗೊಳಿಸುವಂಥದು. ಕವಿ, ಆ ಭಾಷೆಯ ಕಸುವನ್ನು ಅರ್ಥಪೂರ್ಣವಾಗಿ ಕಾವ್ಯಸೃಷ್ಟಿಯಲ್ಲಿ ತೊಡಗಿಸುತ್ತಾರೆ.

ಅವರ 'ನಾಕು ತಂತಿ' ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ದೊರೆಯಿತು. ಈ ಕವನ ಸಂಕಲನದಲ್ಲಿರುವ ಕವಿತೆಗಳು, ಬೇಂದ್ರೆಯವರ ಕಾವ್ಯದ ಎರಡನೆಯ ಮಜಲಿಗೆ ಸೇರಿದಂಥವು. ಹೊಸ ಹೊಸ ಲಯವಿನ್ಯಾಸಗಳನ್ನು ಬೇಂದ್ರೆಯವರು ತಮ್ಮ ಈ ಕಾಲದ ಕವಿತೆಗಳಲ್ಲಿ ಪ್ರಯೋಗ ಮಾಡಿದರು. ಈ ವಿಚಾರದಲ್ಲಿ ಮುಖ್ಯವಾಗಿ ಅವರು ನಡೆಸಿದ ಪ್ರಯೋಗವೆಂದರೆ, ವೇದ ಸೂಕ್ತಗಳ ಛಂದಸ್ಸನ್ನು ತಮ್ಮ ಕಾವ್ಯರಚನೆಯಲ್ಲಿ ಬಳಸಿದ್ದು. ಅಂಥ ಹಲವಾರು ಕವನಗಳು ಈ ಸಂಕಲನದಲ್ಲಿವೆ. ಅಲ್ಲದೆ ಬೇಂದ್ರೆಯವರ ಈ ಮಜಲಿನ ಕಾವ್ಯ ತಾತ್ತ್ವಿಕವಾಗಿ, ಅರವಿಂದರ 'ಪೂರ್ಣಯೋಗ'ವನ್ನು ಹಿನ್ನೆಲೆಯಾಗಿ ಉಳ್ಳದ್ದು. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ಕವನಗಳು 'ಎಸೋಟರಿಕ್' ಆಗುತ್ತವೆ. ಆದರೆ, ಅವರ ಮೊದಲಿನ ಕಾವ್ಯದಲ್ಲಿ ಕಂಡುಬರುವ ಭಾಷೆಯ ಮೇಲಿನ ಹಿಡಿತ, ಇಲ್ಲೂ ಸುವ್ಯಕ್ತವಾಗಿದೆ. ಅಂಬಿಕಾತನಯದತ್ತರ ಕಾವ್ಯವನ್ನು ಇತರ ಭಾಷೆಗಳಿಗೆ ಅನುವಾದಿಸುವುದು ಕಷ್ಟಸಾಧ್ಯ. ಏಕೆಂದರೆ ಅವರ ಕಾವ್ಯ ಭಾಷೆಯಲ್ಲಿ ಸಂಭವಿಸಿದ್ದು.





ಬೇಂದ್ರೆ, ಅರವತ್ತಕ್ಕೆ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 'ಗರಿ', 'ಸಖೀಗೀತ', 'ಕಾಮಕಸ್ತೂರಿ', 'ಗಂಗಾವತರಣ'—ಇವು ಅವರ ಮಹತ್ವದ ಕವನ ಸಂಕಲನಗಳಲ್ಲಿ ಕೆಲವು. ಅವರು ಕೆಲವು ನಾಟಕಗಳನ್ನೂ ವಿಮರ್ಶೆಯನ್ನೂ ಬರೆದಿದ್ದಾರೆ.

ಕೆ. ಶಿವರಾಮ ಕಾರಂತರು ಕನ್ನಡದ ವಾಸ್ತವವಾದಿ ಸಾಮಾಜಿಕ ಕಾದಂಬರಿಗಳನ್ನು ಬರೆದವರಲ್ಲಿ ಅಗ್ರಗಣ್ಯರು. ಅವರ ಕಾದಂಬರಿಗಳು ಜೀವನದ ವೈಲಕ್ಷಣ್ಯಗಳನ್ನು ಸ್ವಾಭಾವಿಕವಾಗಿ ಚಿತ್ರಿಸುತ್ತವೆ. ಜೀವನಕ್ಕೆ ಹತ್ತಿರವಾದ ಆ ಚಿತ್ರಣಗಳು ಸೂಕ್ಷ್ಮವಾಗಿ ವಾಸ್ತವಿಕವಾಗಿರುತ್ತವೆ. ಕಾರಂತರು ಏನನ್ನೂ ಪ್ರಜ್ಞಾಪೂರ್ವಕವಾಗಿ ಕಲೆಯಾಗಿಸುವ ಪ್ರಯತ್ನದಲ್ಲಿ ತೊಡಗುವುದಿಲ್ಲ. ಕಣ್ಣಿಗೆ ಕಂಡಂತೆ ಜೀವನವನ್ನು ಚಿತ್ರಿಸುವುದು ಕಾರಂತರ ರೀತಿ. ಆದರೆ, ಅವರ ಕಾದಂಬರಿಗಳು ಜೀವನವನ್ನು ವಾಸ್ತವಿಕವಾಗಿ ಚಿತ್ರಿಸಿದರೂ, ಅಲ್ಲೊಂದು ವಿಶಿಷ್ಟವಾದ ಆಯ್ಕೆಯಿರುವುದರಿಂದ, ಅವು 'ನ್ಯಾಚುರಲಿಸ್ಟಿಕ್' ಆಗುವುದಿಲ್ಲ.

ಕಾರಂತರು ಒಬ್ಬ ವಿಚಾರವಾದಿ. ಅವರಿಗೆ ಕಲೆಗಿಂತ ಜೀವನ ದೊಡ್ಡದು. ತಮ್ಮ ಭಾಷಣಗಳಲ್ಲಿ, ಲೇಖನಗಳಲ್ಲಿ ಅವರು ವೈಚಾರಿಕ ದೃಷ್ಟಿಯನ್ನು ಮತ್ತೆ ಮತ್ತೆ ಪ್ರತಿಪಾದಿಸುತ್ತಾರೆ. ಅವರೊಬ್ಬ ಹವ್ಯಾಸಿ ಚಿತ್ರಕಾರರೂ ಹೌದು. ಯಕ್ಷಗಾನವನ್ನು ಆಧುನಿಕರಿಗೆ ಪರಿಷ್ಕರಿಸುವ ಪ್ರಯತ್ನವನ್ನೂ ಮಾಡಿದ್ದಾರೆ.

ಅವರ "ಮೂಕಜ್ಜಿಯ ಕನಸುಗಳು" ಕಾದಂಬರಿಗೆ. ಜ್ಞಾನಪೀಠ ಪ್ರಶಸ್ತಿ ದೊರೆಯಿತು. ಅವರ ಕಾದಂಬರಿಗಳಲ್ಲಿ ಇದು ಒಂದು ವಿಶಿಷ್ಟ ಕಾದಂಬರಿಯಾಗಿದೆ. ಕಾರಂತರೆ ಕಾದಂಬರಿಯ ಪೀಠಿಕೆಯಲ್ಲಿ ಹೇಳುವಂತೆ. ಅದರಲ್ಲಿ ನಾಯಕಿಯಾಗಲಿ. ನಾಯಕನಾಗಲಿ ಇಲ್ಲ. ಆದರೆ. ಮೂಕಜ್ಜಿ ಅಲ್ಲಿ ಕೇಂದ್ರಪಾತ್ರವಾಗಿದ್ದಾಳೆ. ಈ ಪಾತ್ರವನ್ನು ಕಾದಂಬರಿಕಾರರು ವಾಸ್ತವಿಕವಾಗಿ ಚಿತ್ರಿಸುವುದರೊಂದಿಗೆ ಅದನ್ನು ಪ್ರತೀಕಾತ್ಮಕವನ್ನಾಗಿಯೂ ಮಾಡಿದ್ದಾರೆ. ಜೀವನದ ಮೂಲಭೂತ ವಿಷಯಗಳಾದ ಹುಟ್ಟು. ಬದುಕು. ಸಾವು. ಇವುಗಳನ್ನು ಅವಳ ಪಾತ್ರದ ಪ್ರಜ್ಞೆಯ ಮೂಲಕ ಅನ್ವೇಷಿಸುತ್ತದೆ. ಕಾದಂಬರಿ. ಸಾಂಪ್ರದಾಯಿಕವಾದ ಪರಿಸರದಲ್ಲಿ

ಹುಟ್ಟಿ ಬೆಳೆದವಳಾದರೂ, ಅವಳು ತನ್ನ ಸುತ್ತಮುತ್ತಲಿನ ಆಗುಹೋಗುಗಳನ್ನು ವಿಭಿನ್ನ ರೀತಿಯಲ್ಲಿ ಗಮನಿಸುವ, ವ್ಯಾಖ್ಯಾನಿಸುವ ಒಳದೃಷ್ಟಿಯುನ್ನುಳ್ಳವಳಾಗಿದ್ದಾಳೆ.

ಕಾರಂತರು ಸುಮಾರು ನೂರಾ ಐವತ್ತು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸುಮಾರು ಮುವ್ವತ್ತಾರು ಕಾದಂಬರಿಗಳು. ಅವರು ಕಲೆಯನ್ನು ಕುರಿತು, ವಿಜ್ಞಾನವನ್ನು ಕುರಿತು, ರಾಜಕೀಯ–ಇತ್ಯಾದಿ ಹಲವಾರು ವಿಷಯಗಳ ಮೇಲೆ ಕೃತಿ ರಚಿಸಿದ್ದಾರೆ. 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಚೋಮನದುಡಿ', 'ಅಳಿದ ಮೇಲೆ'–ಅವರ ಮುಖ್ಯ ಕಾದಂಬರಿಗಳಲ್ಲಿ ಕೆಲವಾಗಿವೆ.

ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್) ಕನ್ನಡದ ಧೀಮಂತ ಲೇಖಕರಲ್ಲಿ ಒಬ್ಬರು. ಕನ್ನಡ ಸಾಹಿತ್ಯವನ್ನು ತಮ್ಮ ಸಣ್ಣಕಥೆಗಳು, ಕಾದಂಬರಿ, ನಾಟಕಗಳು, ಕಾವ್ಯ ಮತ್ತು ಸಾಹಿತ್ಯ ವಿಮರ್ಶೆಯಿಂದ ಶ್ರೀಮಂತಗೊಳಿಸಿದ್ದಾರೆ. ಆದರೆ, ಅವರು ಮುಖ್ಯವಾಗಿ ಸಣ್ಣಕಥೆಗಳ ಲೇಖಕರು ಎಂದೇ ಖ್ಯಾತನಾಮರು. ಕನ್ನಡದಲ್ಲಿ ಸಣ್ಣಕಥೆಗಳನ್ನು ಬರೆದವರಲ್ಲಿ ಅವರು ಮೊದಲಿಗರು. ಜೀವನದ ಎಲ್ಲ ಮಗ್ಗುಲಗಳೂ ಅವರ ಸಣ್ಣಕಥೆಗಳಿಗೆ ವಸ್ತು ಆಗಿವೆ. ಅವರು ಕಥೆ ಹೇಳುವುದರಲ್ಲಿ ನಿಷ್ಣಾತರು. ಅವರ ಶೈಲಿ ಆಡಂಬರಗಳಿಲ್ಲದೆ ಸರಳವಾದದ್ದು. ಅವರ 'ನವರಾತ್ರಿ' ವಿಶಿಷ್ಟ ಕೃತಿಯಾಗಿದೆ. ಅದರಲ್ಲಿ ಸರಳ ರಗಳೆಯ ಮುಕ್ತಛಂದಸ್ಸಿನಲ್ಲಿ ಕಥೆಗಳನ್ನು ಹೇಳಲಾಗಿದೆ. ಅದು, ಚಾಸರನ 'ಕ್ಯಾಂಟರ್‌ಬರಿ ಟೇಲ್ಸ್' ಮಾದರಿಯಲ್ಲಿ ರಚಿತವಾದ ಕೃತಿ. ಅವರ 'ಯಶೋಧರಾ' ಮತ್ತು 'ಕಾಕನಕೋಟೆ' ಉತ್ತಮ ನಾಟಕಕೃತಿಗಳಾಗಿವೆ.

ಅವರ ವಿವಾದಾತ್ಮಕ ಕಾದಂಬರಿ 'ಚಿಕವೀರರಾಜೇಂದ್ರ'ಕ್ಕೆ ಜ್ಞಾನಪೀಠ ಪ್ರಶಸ್ತಿ ದೊರೆಯಿತು. ಈ ಕಾದಂಬರಿ ಪ್ರಕಟವಾದ ಹೊಸದರಲ್ಲೇ ವಿವಾದಗಳನ್ನೆಬ್ಬಿಸಿತ್ತು. ಸಾಹಿತ್ಯಕ ಕಾರಣಗಳಿಗಾಗಿ ಕೆಲವರು ಅದನ್ನು ಉತ್ತಮ ಕೃತಿಯಲ್ಲ ಎಂದರೂ, ಮುಖ್ಯವಾಗಿ ಅಸಾಹಿತ್ಯಕ ಕಾರಣಗಳಿಗಾಗಿಯೆ ಅದನ್ನು ಆಗ ತೆಗಳಲಾಗಿತ್ತು. ಅದಕ್ಕೆ ಈ ಪ್ರಶಸ್ತಿ ಬಂದಾಗ ಮತ್ತೆ ಕೆಲವರು ಆಕ್ಷೇಪಣೆಗಳನ್ನೆತ್ತಿದರು. ಆಗ, ಜ್ಞಾನಪೀಠ ತನ್ನ ಮೊದಲ ಪ್ರಕಟಣೆಯನ್ನು ಬದಲಾಯಿಸಿ, ಮಾಸ್ತಿಯವರ ಒಟ್ಟು ಸಾಧನೆಗಾಗಿ ಅದನ್ನು ಕೊಟ್ಟಿರುವುದಾಗಿ ಪ್ರಕಟಿಸಿತು. ಈ ಕಾದಂಬರಿಯನ್ನು ಚಾರಿತ್ರಿಕ ಕಾದಂಬರಿ ಎಂದು ಪರಿಗಣಿಸಿದರೆ, ಅದರಲ್ಲಿ ಅನೇಕ ಗಂಭೀರವಾದ ನ್ಯೂನತೆಗಳಿರುವುದೇನೊ ನಿಜ. ಆದರೆ, ಮಾಸ್ತಿಯವರ ಒಟ್ಟು ಸಾಧನೆಯನ್ನು ಗಮನಿಸಿದಾಗ, ಅವರು ಜ್ಞಾನಪೀಠ ಪ್ರಶಸ್ತಿಗೆ ಖಂಡಿತ ಅರ್ಹರಾಗಿದ್ದಾರೆ.

ಈ ನಾಲ್ವರು ಕನ್ನಡದ ಹಿರಿಯ ಸಾಹಿತಿಗಳು ತಮ್ಮ ಕೃತಿಗಳಿಂದ, ಕರ್ನಾಟಕಕ್ಕೆ ಅಷ್ಟೇ ಅಲ್ಲ ಇಡೀ ಭಾರತಕ್ಕೇ ಹೆಮ್ಮೆ ತಂದು ಕೊಡಬಲ್ಲ ಸತ್ತ್ವದಿಂದ ಕೂಡಿದವರಾಗಿದ್ದಾರೆ.

ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೊ ಆದರಿಚ್ಛೆ ಹಾದಿ
ಇದಕು ಹರಿದತ್ತ ಬೀದಿ.

ಇದ ನೋಡಿ ನಾನು ನೆನೆವೆನಿಂದು—
ಇಂಥ ನೆಳಲೇನು ಗಾಂಧಿಯೆಂದು !
ಹರಿದತ್ತ ಹರಿಯ ಚಿತ್ತ
ಈ ಧೀರ ನಡೆವನತ್ತ.

ಪು. ತಿ ನರಸಿಂಹಾಚಾರ್

ಕನ್ನಡ ಸಾಹಿತ್ಯ—ನಿನ್ನೆ ಮತ್ತು ಇಂದು

ಎಲ್. ಎಸ್. ಶೇಷಗಿರಿರಾವ್

ಕಳೆದ ಎರಡು ದಶಕಗಳ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವವನಿಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಪ್ರಯೋಗ ಸಮೃದ್ಧಿ. ಯಶಸ್ಸಿನ ಪ್ರಮಾಣ, ಸಾಹಿತ್ಯವನ್ನೂ ಮಹತ್ವದ ಬಿಡಿ ಕೃತಿಗಳನ್ನೂ ಕುರಿತಂತೆ ನಡೆಯುವ ಚರ್ಚೆಯ ವ್ಯಾಪ್ತಿ ಮತ್ತು ಆಳ, ಸಾಹಿತ್ಯಕ ಪತ್ರಿಕೆಗಳ ಕೊಡುಗೆ–ಇವು ಎದ್ದು ಕಾಣುತ್ತವೆ. ಸೃಜನಶೀಲ ಪ್ರತಿಭೆ ಬೆಳೆಯಲು ನೆರವಾಗುವ ವಾತಾವರಣ ಇದು. ಉರುಳುತ್ತ ಸಾಗಿದ ವರ್ಷಗಳಲ್ಲಿ ಹೊಸ ಪ್ರತಿಭೆ ಬೆಳಕಿಗೆ ಬಂದದ್ದಷ್ಟೇ ಅಲ್ಲ, ಆಗಲೆ ಹೆಸರು ಗಳಿಸಿದ್ದ ಸಾಹಿತಿಗಳೂ ಹೊಸ ಆಯಾಮಗಳನ್ನು ಪಡೆದುಕೊಳ್ಳುವುದು ಸಾಧ್ಯವಾಯಿತು. ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ, ಯಶವಂತ ಚಿತ್ತಾಲ, ನಿಸಾರ್ ಅಹಮದ್, ಪೂರ್ಣಚಂದ್ರ ತೇಜಸ್ವಿ. ಚಂದ್ರಶೇಖರ ಕಂಬಾರ ಮತ್ತು ಶ್ರೀಕೃಷ್ಣ ಆಲನಹಳ್ಳಿ ಕೆಲವರ ಹೆಸರುಗಳನ್ನು ಮಾತ್ರ ಹೇಳುತ್ತಿದ್ದೇನೆ (ಇವರು ಬೇರೆಬೇರೆ ಪೀಳಿಗೆಗಳವರು)–ಇಪ್ಪತ್ತು ವರ್ಷಗಳಲ್ಲಿ ಹೇಗೆ ಬೆಳೆದಿದ್ದಾರೆ ಇವರೆಲ್ಲ !

ಇಪ್ಪತ್ತು ವರ್ಷಗಳ ಕೆಳಗೆ ನವ್ಯ ಒಂದು ಪಂಥವಾಗಿ ಬಹು ಚಟುವಟಿಕೆಯಿಂದಿತ್ತು, ಪ್ರಭಾವ ಪಡೆದಿತ್ತು. ನಿಜ, ಶಿವರಾಮ ಕಾರಂತ, ಕುವೆಂಪು, ದೇವುಡು ನರಸಿಂಹ ಶಾಸ್ತ್ರಿ, ವ್ಯಾಸರಾಯ ಬಲ್ಲಾಳ, ಎಸ್.ಎಲ್. ಭೈರಪ್ಪ, ತ. ರಾ. ಸು. ಮೊದಲಾದ ಹಲವರು ಪ್ರಮುಖ ಸಾಹಿತಿಗಳು ಈ ಪಂಥದಾಚೆ ಬರೆಯುತ್ತಿದ್ದರು : ಆದರೆ ತರುಣದಲ್ಲಿ, ಅದರಲ್ಲೂ ತುಂಬಾ ವಿದ್ಯಾವಂತರಲ್ಲಿ ಬಹುಮಂದಿ ನವ್ಯಕ್ಕೆ ನಿಷ್ಠರಾಗಿದ್ದವರು. ಈ ಇಪ್ಪತ್ತು ವರ್ಷಗಳಲ್ಲಿ, ಮೊದಲು ಬಂಡಾಯ, ಅನಂತರ ದಲಿತ, ಸ್ಪಷ್ಟವಾದ ಮತ್ತು ಆಕ್ರಮಣಕಾರಿ ಎನ್ನಬಹುದಾದ ಮಾರ್ಗಗಳನ್ನು ಪಡೆದ ವಿಶಿಷ್ಟ ಪಂಥಗಳಾಗಿ ನಿಂತಿವೆ. ಇದರ ಒಂದು ಒಳ್ಳೆಯ ಪರಿಣಾಮ ಎಂದರೆ ಆಧುನಿಕ ಕಾಲದ ಮತ್ತು ಹಿಂದಿನ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಹೊಸ ರೀತಿಗಳಲ್ಲಿ ಅಭ್ಯಾಸ ಮಾಡಿರುವುದು, ಮಹತ್ವದ ರೀತಿಯಲ್ಲಿ ಅವುಗಳಿಗೆ ಮತ್ತೆ ಬೆಲೆ ಕಟ್ಟಿರುವುದು. ರೂಪವಿಮರ್ಶೆ, ಸಮಾಜ ಶಾಸ್ತ್ರೀಯ ವಿಮರ್ಶೆ ಇವು ಬೇರು ಬಿಟ್ಟಿವೆ.

ಎಲ್ಲ ಚರ್ಚೆಗಳು, ವಾದವಿವಾದಗಳು ಮತ್ತು ಸವಾಲುಗಳ ನಡುವೆ ಹೊಸ ಬರಹಗಾರರು ಪ್ರಭಾವಗಳಿಂದ ಮುಕ್ತರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ, ಹಿಂದಿನ ಬರಹಗಾರರು ಹೊಸ ಎತ್ತರಗಳನ್ನು ಮುಟ್ಟಿದ್ದಾರೆ, ಚಿಪ್ಪು ಕಳಚಿ ಹೊಸ ರೂಪವನ್ನು ಧಾರಣೆ ಮಾಡಿ ಹೊಸ ಆಯಾಮಗಳನ್ನು ದಕ್ಕಿಸಿಕೊಳ್ಳಲು ಅವರು ಹಿಂದೆಗೆದಿಲ್ಲ. ಆದರೆ ಇದನ್ನು ನಾವು ಗಮನಿಸಬೇಕು. ಕೆ. ಎಸ್. ನರಸಿಂಹಸ್ವಾಮಿಯವರಂತೆ ಕೆಲವರು ಸ್ಪಷ್ಟವಾಗಿ ಗುರುತಿಸಬಹುದಾದ ಘಟ್ಟಗಳಲ್ಲಿ ಮಾರ್ಪಾಡು ಹೊಂದಿದರು. ಬೆಳೆದರು ; ಶಿವರಾಮ ಕಾರಂತರಂತೆ ಕೆಲವರು ಹೊಸ ಮಾರ್ಗಗಳನ್ನು ತಂತ್ರಗಳನ್ನೂ ಅಡಗಿಸಿಕೊಂಡರು. ಮೂಲತಃ ಅವರು ಮೊದಲಿದ್ದಂತೆಯೆ ಉಳಿದರು, ಆದರೆ ಹೊಸ ಅಲೆಗಳಿಗೆ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಿದರು.

ಕಾದಂಬರಿಯಿಂದ ಪ್ರಾರಂಭಿಸಬಹುದು. ಈ ಅವಧಿಯಲ್ಲಿ ಕಾರಂತರಿಗೂ ಮಾಸ್ತಿಯವರಿಗೂ ಜ್ಞಾನಪೀಠ ಪ್ರಶಸ್ತಿ ಬಂದಿತು. ಕಾರಂತರಿಗೆ ಪ್ರಶಸ್ತಿಯನ್ನು ತಂದುಕೊಟ್ಟ 'ಮೂಕಜ್ಜಿಯ ಕನಸುಗಳ'ನ್ನು ಕಾದಂಬರಿ ಎಂದೇ ಕಟ್ಟುನಿಟ್ಟಾಗಿ ಕಂಡರೆ ಅದು ಅತೃಪ್ತಿಯನ್ನು ಮೂಡಿಸುತ್ತದೆ ; ಮಾನವನ ಸಮಗ್ರ ಇತಿಹಾಸವನ್ನು ಒಬ್ಬ ಮುದುಕಿಯ ಮನಸ್ಸಿನ ಮೂಲಕ ಕಾಣುವ ಪ್ರಯತ್ನ ಇದು. ಆಕೆ ವಿಶಿಷ್ಟಳಾದ ಮುದುಕಿ ; ಅವಳ ಮನಸ್ಸು ಕೋಮಲ, ಅವಳು ವಿವೇಕಿ ಆದರೂ ಕಾದಂಬರಿಯ ರೂಪಕ್ಕೆ ಹೊರಿಸುವ ಭಾರದಿಂದಾಗಿ ಅದು ಬಿರಿಯುವಂತೆ ಕಾಣುತ್ತದೆ. ಇದು ಮಹಾಕಾದಂಬರಿ ಎನ್ನುವುದಕ್ಕಿಂತ ಅಸಾಧಾರಣ ಕಾದಂಬರಿ

ಎನ್ನಬಹುದು. ಚದುರಂಗರು ಇಪ್ಪತ್ತು ವರ್ಷಕಾಲ ಕಾದಂಬರಿಯನ್ನೆ ಬರೆದಿರಲಿಲ್ಲ. ಅವರ 'ವೈಶಾಖ' (1980) ಮಹತ್ವದ ಕೃತಿ ಎನ್ನಿಸಿತು. ಅವನತಿಗೊಳಗಾದ ಗ್ರಾಮೀಣ ಸಮಾಜವೊಂದನ್ನು ಇಲ್ಲಿ ವಿವರವಿವರವಾಗಿ ಪುನಸ್ಸೃಷ್ಟಿಸುತ್ತಾರೆ, ಆಷಾಢ ಭೂತಿತನ ಮತ್ತು ಕಾರ್ಯರ್ಗಳ ಈ ಸಮಾಜದಲ್ಲಿ, ಹಳ್ಳಿಯಲ್ಲಿ ತೀರ ಕೆಳಗಿನವನೆನ್ನಿಸಿದ ಲಕ್ಕನೇ ಮಾನವೀಯವಾಗಿ, ನೀತಿವಂತನಾಗಿ ಕಾಣುತ್ತಾನೆ. ನೈತಿಕವಾಗಿ ಊನಗೊಂಡ ಸಮಾಜದಲ್ಲಿ ನಡೆಯುವ ಗಾಢವಾದ ಮಾನವೀಯ ಕಥೆಯ ವೃತ್ತಾಂತದಲ್ಲಿ ಚದುರಂಗರು ಸ್ಫುಟವಾದ ಚಿತ್ರಗಳನ್ನೂ ಸ್ಮರಣೀಯ ಸಂಕೇತಗಳನ್ನೂ ಹೆಣೆಯುತ್ತಾರೆ; ಮೇಲೇರುತ್ತಿರುವ ಪಕ್ಷಿ, ಹಿಂಸೆ ಮಾಡಿ ಹಾವನ್ನು ಕೊಲ್ಲುವ ಇರುವೆಗಳ ಗುಂಪು, ಕೋಟೆ–ಪ್ರತಿಯೊಂದೂ ಸಂಕೇತವಾಗುತ್ತದೆ, ಪ್ರತಿಯೊಂದರಲ್ಲಿ ಒಂದು ಸ್ಮರಣೀಯ ಅನುಭವ ಹರಳುಗಟ್ಟುತ್ತದೆ. ನನ್ನ ದೃಷ್ಟಿಯಲ್ಲಿ ಡಾಕ್ಟರ್ ಅನಂತಮೂರ್ತಿಯವರ 'ಭಾರತೀಪುರ' ಸೋಲುತ್ತದೆ, ಆದರೂ ಮುಖ್ಯವಾದ ಕಾದಂಬರಿ ನಿಂತನೀರಾದ; ಊತಕ್ಕೊಳಗಾದ ಭಾರತದ ಸಮಾಜದ ಅವನತಿಯ ಮೂಲವನ್ನು ಕಾಣುವ ಮತ್ತು ನಿಷ್ಫಲ ಪ್ರಯತ್ನದ ದುಃಖದ ಚಿತ್ರವನ್ನು ಮೂಡಿಸುವ ಪ್ರಯತ್ನ ಇದು. ಇದರ ದೌರ್ಬಲ್ಯವೆಂದರೆ ಇದರ ನಾಯಕನೇ; ಅವನು ಉಕ್ಕಿನ ಮನುಷ್ಯ ಎನಿಸುವುದಿಲ್ಲ, ಹವ್ಯಾಸೀ ಕ್ರಾಂತೀಕಾರ ಎನಿಸುತ್ತದೆ. ಅನಂತಮೂರ್ತಿಯವರ ಪೀಳಿಗೆ ಕನ್ನಡಕ್ಕೆ ಹಲವರು ಸಮರ್ಥ ಕಾದಂಬರಿಕಾರರನ್ನು ನೀಡಿತು; ಡಾಕ್ಟರ್ ಎಸ್. ಎಲ್. ಭೈರಪ್ಪ, ಡಾಕ್ಟರ್ ಶಾಂತಿನಾಥ ದೇಸಾಯಿ, ಪಿ. ಲಂಕೇಶ್ ಮತ್ತು ಯಶವಂತ ಚಿತ್ತಾಲ ಇವರಲ್ಲಿ ಕೆಲವರು ಭೈರಪ್ಪನವರ ಪಾತ್ರಗಳಿಗೆ ಸ್ಪಷ್ಟವಾದ ಅಭಿಪ್ರಾಯಗಳು, ವಿಚಾರಧಾರೆಗಳು ಉಂಟು ಅವಕ್ಕೆ ಅನುಗುಣವಾಗಿ ಅವು ನಡೆಯುತ್ತವೆ. ಈ ದೃಷ್ಟಿಯಿಂದ 'ಗೃಹಭಂಗ' ಅವರ ಪ್ರಾತಿನಿಧಿಕ ಕಾದಂಬರಿ ಎನ್ನುವಂತಿಲ್ಲ. ಆದರೆ ಅವರ ಶ್ರೇಷ್ಠ ಕಾದಂಬರಿಗಳಲ್ಲಿ ಅದು ಒಂದು. ಅವನತಿಗೊಳಗಾದ ಸಂಸಾರ ಒಂದಕ್ಕೆ ಸೇರಿದ ಅಕ್ಷರ ತಿಳಿಯದ ಹೆಣ್ಣು, ಮನುಷ್ಯವರ್ಗಕ್ಕಿಂತ ಕೆಳಗಿನ ವರ್ಗಕ್ಕೆ ಸೇರಿದ ವ್ಯಕ್ತಿಯನ್ನು ಗಂಟು ಹಾಕಿಕೊಂಡಿರುವ, ಅಜ್ಞಾನಿ ಒರಟದ ಕ್ರೌರ್ಯಕ್ಕೆ ಸಿಕ್ಕುಬಿದ್ದಿರುವ ಹೆಣ್ಣು ತನ್ನ ಮಕ್ಕಳ ಉಳಿವಿಗಾಗಿ ಹೋರಾಡುತ್ತ ಪ್ರಕೃತಿಯ ಒಂದು ಶಕ್ತಿಯೇ ಆಗಿಬಿಡುತ್ತಾಳೆ. ಜೀವನ ಪರವಾದ ಶಕ್ತಿಗಳ ಕ್ರಿಯಾವಿಧಾನವನ್ನು ಬಿತ್ತರಿಸುವ ಈ ಕಾದಂಬರಿ ಒಂದು ರೀತಿಯಲ್ಲಿ ಗಾಢವಾಗಿ 'ನೈತಿಕ' ವಾದದ್ದು. ಭೈರಪ್ಪನವರ 'ಪರ್ವ' ಓದುಗರಿಗೆ ಒಂದು ಸವಾಲು. ಇದು 'ಮಹಾಭಾರತ'ದ ಪೌರಾಣಿಕ ಸಾಮಗ್ರಿಯನ್ನು ವಾಸ್ತವಿಕವಾಗಿ ಕಾಣುವ ಪ್ರಯತ್ನ. "ಧರ್ಮ ಆ ಮಹಾಕಾವ್ಯದ ವಸ್ತುವಾದರೆ, ಕಾದಂಬರಿ ಮನುಷ್ಯರ ನಡುವಣ ಸಂಬಂಧಗಳ ಅದರಲ್ಲಿಯೂ ಗಂಡು–ಹೆಣ್ಣಿನ ಸಂಬಂಧದ ಜಟಿಲ ಸಮಸ್ಯೆಯ ಸುತ್ತ ಬೆಳೆಯುತ್ತದೆ. ಈ ಸಮಸ್ಯೆಯನ್ನು ಮಾನವೀಯವಾಗಿ ಬಿಡಿಸದಿದ್ದುದರ ಫಲವಾಗಿ ಒಂದು ಇಡೀಸಮಾಜವೇ ಒಡೆದು ಹೋಗುತ್ತಿರುವುದನ್ನು ಅದು ಚಿತ್ರಿಸುತ್ತದೆ. ಪೌರಾಣಿಕ ಸಾಮಗ್ರಿಗೆ ವಾಸ್ತವಿಕ ಮನೋಧರ್ಮದಿಂದ ರೂಪಕೊಡುವುದೆಂದರೆ ಒಂದು ಉಡುಪನ್ನು ತೆಗೆದು ಮತ್ತೊಂದನ್ನು ತೊಡಿಸಿದಂತಲ್ಲ, ಪೌರಾಣಿಕ ಸ್ವರೂಪವನ್ನು ಕಳಚುವುದರಿಂದ ಸಾಮಗ್ರಿಯ ಸ್ವರೂಪವೇ ಮಾರ್ಪಡುತ್ತದೆ; ಭೈರಪ್ಪನವರ ಕಾದಂಬರಿಗೆ ವಿಮರ್ಶಕರು ಸಹಜವಾಗಿಯೇ ತೀರ ಭಿನ್ನಭಿನ್ನವಾದ ರೀತಿಗಳಲ್ಲಿ ಪ್ರತಿಕ್ರಿಯೆ ತೋರಿಸಿದ್ದಾರೆ. ಆದರೂ ಇದು ಇತ್ತೀಚಿಗಿನ ವರ್ಷಗಳಲ್ಲಿ ಬಹು ಬಲವಾದ ಸವಾಲಾದ ಕಾದಂಬರಿಗಳಲ್ಲಿ ಒಂದು ಎನ್ನುವುದರಲ್ಲಿ ಅನುಮಾನವಿಲ್ಲ. ನನಗೆ ನೆನಪಿರುವಂತೆ ನವ್ಯದ ಮಾಂತ್ರಿಕ ವೃತ್ತದಲ್ಲೇ ಉಳಿದ ಒಬ್ಬರೇ ಕಾದಂಬರಿಕಾರರು ಶಾಂತಿನಾಥ ದೇಸಾಯಿ. ಪ್ರತಿ ಕಾದಂಬರಿಯಲ್ಲಿ ಅವರು 'ಅಸ್ತಿತ್ವದ ಸನ್ನಿವೇಶ'ವನ್ನು ('ಎಕ್ಸಿಸ್ಟೆನ್ಸಿಯಲ್ ಸಿಚ್ಯುಯೇಷನ್' ಅನ್ನು) ವಿಶ್ಲೇಷಿಸುತ್ತ, ಮಾನವೀಯ ಸಂಬಂಧಗಳನ್ನೂ ಮಾನವನ ಹೊಣೆಯನ್ನು ಸೃಜನಶೀಲ ಬಾಳನ್ನೂ ಸೃಜನಾತ್ಮಕ ಕಲೆಯನ್ನು ಶೋಧಿಸುತ್ತ ನಡೆದಿದ್ದಾರೆ. ಲಂಕೇಶ್, ಚಿತ್ತಾಲ ಮತ್ತು ಪೂರ್ಣಚಂದ್ರ ತೇಜಸ್ವಿ ವಿಶಿಷ್ಟರೀತಿಯಲ್ಲಿ ಬೆಳೆದಿದ್ದಾರೆ. ಈ ಇಪ್ಪತ್ತು ವರ್ಷಗಳಲ್ಲಿ. ಲಂಕೇಶರ 'ಮುಸ್ಸಂಜೆಯ ಕಥಾಪ್ರಸಂಗ' ಅವರ 'ಬಿರುಕಿ'ನಿಂದ ತೀರ ವಿಭಿನ್ನವಾದದ್ದು 'ಮುಸ್ಸಂಜೆ'ಯ ತಂತ್ರ 'ಬದುಕಿ'ನ ತಂತ್ರದಷ್ಟೇ ವಿಶಿಷ್ಟ, ಆದರೆ ಅಷ್ಟು ಆಡಂಬರದ್ದಲ್ಲ. ಒಂದು ಗ್ರಾಮೀಣ ಸಮಾಜದಲ್ಲಿ ಕೆಲಸಮಾಡುವ ಶಕ್ತಿಗಳ ವಿಶ್ಲೇಷಣೆ ಹೆಚ್ಚು ಗಮನ ಸೆಳೆಯದೆಯೇ ಇಲ್ಲಿ ನಡೆಯುತ್ತದೆ, ಈ ವಿಶ್ಲೇಷಣೆಯಲ್ಲಿ ರಾಜಕೀಯ ಮತ್ತು ಸಾಮಾಜಿಕ ಕಾಳಜಿ ಉಂಟು, ಆದರೆ ಮನುಷ್ಯರ ರಾಗದ್ವೇಷಗಳು, ಸಂತೋಷ ದುಃಖಗಳು ಮುನ್ನೆಲೆಯಲ್ಲೆ ನಿಲ್ಲುತ್ತವೆ. ಚಿತ್ತಾಲರ 'ಶಿಕಾರಿ' ಯೂರೋಪಿನ ಪ್ರಸಿದ್ಧ ಕಾದಂಬರಿಕಾರರ ಕಾಫ್ಕನ ಕೃತಿಗಳನ್ನು ನೆನಪಿಗೆ ತರುತ್ತದೆ. ನಾಯಕ ಸಿಕ್ಕುಬಿದ್ದಿರುವ ಸನ್ನಿವೇಶದಲ್ಲಿ ವಿಲಿವಿಲಿ ಒದ್ದಾಟ. ವಿಫಲ ಪ್ರಯತ್ನ ಅಷ್ಟೇ ಸಾಧ್ಯ, ಇದರಿಂದ ಪಾರಾಗುವಂತೆಯೇ ಇಲ್ಲವೆನ್ನುವಂತೆ ತೋರುತ್ತದೆ. ಆದರೆ ಇದು ಕ್ರೌರ್ಯದ ಅಧ್ಯಯನವೂ ಹೌದು. ಬೇರಾವ ಕನ್ನಡ ಕಾದಂಬರಿಯೂ ಇದರಂತೆ ನಮ್ಮನ್ನು ಕುತ್ತಿಗೆ ಕೊಯ್ಯುವ ಸ್ಪರ್ಧೆಯ ವ್ಯವಹಾರ ಜಗತ್ತಿಗೆ ಕೊಂಡೊಯ್ಯಲಾರದು. ಇದರಲ್ಲಿ ದೀರ್ಘವಾದ ಆತ್ಮಶೋಧನೆಯೂ ಉಂಟು, ಆದರೆ ಈ ಆತ್ಮಶೋಧನೆ ಕಡೆಗೆ ಚಕ್ರವ್ಯೂಹದಿಂದ ಹೊರಕ್ಕೆ ಹೊಯ್ಯುತ್ತದೆ. ತೇಜಸ್ವಿ ಸ್ಪಷ್ಟವಾಗಿ, ದೃಢವಾಗಿ ನವ್ಯವನ್ನು ನಿರಾಕರಿಸಿದರು. ಅವರ 'ಕರ್ವಾಲೊ' ಹಲವು ಸ್ತರಗಳಲ್ಲಿ ಕೆಲಸಮಾಡುತ್ತದೆ. ಮೇಲಿನ ಸ್ತರದಲ್ಲಿ ಅದು ಜೀವ ವಿಜ್ಞಾನಿಯೊಬ್ಬನ ತುಂಬಾ ಕುತೂಹಲ ಕರವಾದ ಅನ್ವೇಷಣೆಯ ಕಥೆ. ಒಂದು ಸಣ್ಣ ಸಮುದಾಯದ ವ್ಯಾಪಾರವ್ಯವಹಾರಗಳಲ್ಲಿ ಒಳನೋಟಗಳನ್ನೂ ಅದು ಕೊಡುತ್ತದೆ. ಜೊತೆಗೆ ಜೀವವಿಜ್ಞಾನಿ ಕೈಗೊಂಡಿರುವ ಅನ್ವೇಷಣೆ ಸದಾ ನಮ್ಮ ಕಣ್ಣೆದುರಿಗಿರುತ್ತದೆ, ಇದರಿಂದ ಮನುಷ್ಯನ ಜೀವನ ಮತ್ತು ಸಮು

ಜೀವದ ಜೀವನವನ್ನು ಕೋಟ್ಯಾಂತರ ವರ್ಷಗಳ (ಸುಮಾರು 6,00,00,00,000 ವರ್ಷಗಳ) ಹಿನ್ನೆಲೆಯಲ್ಲಿ ಕಾಣುತ್ತೇವೆ. ಇಲ್ಲಿ ಈ ಅನ್ವೇಷಣೆಯು ತುದಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಅಳಿದೇ ಹೋಗಿರುವ ಜೀವಿಯೊಂದು, ಮತ್ತೊಂದು ತುದಿಯಲ್ಲಿ ಅತ್ಯಂತ ವಿಕಸಿತ ಜೀವಿಯಾದ ಮನುಷ್ಯ ಕಾದಂಬರಿಯು ಕೊಡುವ ಅನುಭವ ತುಂಬಾ ಸಂಕೀರ್ಣವಾದದ್ದು.

ಅನೇಕ ಮಂದಿ ತರುಣ ಕಾದಂಬರಿಕಾರರು ಆಗಲೇ ಹೆಸರುಗಳಿಸಿದ್ದಾರೆ. ಇಬ್ಬರನ್ನು ಈ ಯುವಪೀಳಿಗೆಯ ಪ್ರತಿನಿಧಿಗಳೆಂದು ಇಲ್ಲಿ ಹೆಸರಿಸುತ್ತಿದ್ದೇನೆ. ಶ್ರೀ ಕೃಷ್ಣ ಆಲನಹಳ್ಳಿ, ತಮ್ಮ ಮೊದಲನೆಯ ಕಾದಂಬರಿ 'ಕಾಡು'ವಿನಲ್ಲಿ ಒಂದು ಗ್ರಾಮೀಣ ಸಮುದಾಯದಲ್ಲಿನ ಸ್ಪರ್ಧೆಗಳನ್ನು ಲೈಂಗಿಕ ಬಯಕೆಯ ಆವೇಶವನ್ನು ಒಬ್ಬ ಬಾಲಕನ ಕಣ್ಣಿನಿಂದ ನೋಡಿದರು. ಕಾಡಿನಂತೆಯೇ ರಹಸ್ಯಮಯವಾದ ಬಾಳಿನ ರಹಸ್ಯವನ್ನು ಮೂಡಿಸಿದರು. "ಪರಸಂಗದ ಗೆಂಡೆತಿಮ್ಮ"ದ ಮೂಲಕ ಅವರು 'ಭುಜಂಗಯ್ಯನ ದಶಾವತಾರಗಳಿ'ಗೆ ಬಂದಿದ್ದಾರೆ. (ನಾಯಕನ ಹೆಸರು, ಭುಜಂಗಯ್ಯ, ಹಾವನ್ನು ಸೂಚಿಸುವುದು ಅರ್ಥವತ್ತಾಗಿದೆ. ಈ ಜಗತ್ತಿನಲ್ಲಿ ಹಲವಾರು ಬಗೆಯ ವಿಷಯುಗಳು ಕೆಲಸಮಾಡುತ್ತಿವೆ.) ಇದು ಸಾಮಾನ್ಯಮನುಷ್ಯನ ಮಹಾಕಾವ್ಯ. ಒಬ್ಬ ಸರಳನಾದ, ಸಾಮಾನ್ಯನಾದ ಮನುಷ್ಯನ ಜೀವವು ಪರಿಪಕ್ವತೆಯನ್ನು ಸಾಧಿಸಿರುವುದನ್ನು ಇಲ್ಲಿ ಕಾಣುತ್ತೇವೆ. ಕಾದಂಬರಿಯ ಶಿಖರ ಒಂದು ಸಾಂಕೇತಿಕ ದೃಶ್ಯದಲ್ಲಿ; ಇಲ್ಲಿ ಭುಜಂಗಯ್ಯ ಹಾವುಕಡಿದ ಒಬ್ಬಮನುಷ್ಯನ ಗಾಯದಿಂದ ವಿಷವನ್ನು ಹೊರಕ್ಕೆಳೆಯುತ್ತಾನೆ, ಆ ಮನುಷ್ಯನಾದರೋ ಭುಜಂಗಯ್ಯನ ಹೆಂಡತಿಯ ಮೇಲೆ ಅತ್ಯಾಚಾರ ಮಾಡಿದವನು. ಭುಜಂಗಯ್ಯ ಸಾಯುತ್ತಾನೆ. ಬಂಡಾಯ ಮತ್ತು ದಲಿತ ಚಳುವಳಿಗಳೆರಡೂ ಏಳುಬೀಳುಗಳನ್ನು ಕಂಡಿವೆ; ತಮ್ಮ ವಿಚಾರರೀತಿಯ ಅಡಿಪಾಯವನ್ನು ವಿಸ್ತರಿಸಿಕೊಂಡು, ಪ್ರತಿಭಟನೆಯ ದಾಖಲೆಗಳನ್ನಷ್ಟೇ ಸೃಷ್ಟಿಸದೆ ಒಳ್ಳೆಯ ಸಾಹಿತ್ಯವನ್ನು ಸೃಷ್ಟಿಸಲು ಅವು ಪ್ರಯತ್ನಿಸುತ್ತಿವೆ. ಈ ಪಂಥಗಳ ಅತ್ಯುತ್ತಮ ಕೊಡುಗೆ ದೇವನೂರು ಮಹಾದೇವರ 'ಒಡಲಾಳ.' ಇದರಲ್ಲಿ ಹೊರನೋಟಕ್ಕೆ ದೋಷ ಕಾಣುವುದಿಲ್ಲ. ಆದರೆ ಅದು ಶೋಷಣೆ ಮತ್ತು ದಾರಿದ್ರ್ಯಗಳ ಭಯಂಕರ ಚಿತ್ರ. ಅದು ಶತಮಾನಗಳ ಹಸಿವಿನ ಚಿತ್ರ. ಕಾದಂಬರಿಯು, ಶತಮಾನಗಳ ದಬ್ಬಾಳಿಕೆಯೂ ನಾಶಮಾಡಲಾರದ ಬಾಳಿನ ಪ್ರೀತಿ ಮತ್ತು ಶಕ್ತಿಯ ಮೂಲಗಳನ್ನು ಸೂಚಿಸುತ್ತದೆ. ವೃತ್ತಾಂತದಲ್ಲಿ ಸ್ನೇಹಮಯ ಹಾಸ್ಯ ಬೆರೆತಿದೆ; ನಾವು ಪಾತ್ರಗಳೊಂದಿಗೆ ತಾದಾತ್ಮ್ಯ ಪಡೆಯುವುದು ಮತ್ತು ಅವುಗಳಿಂದ ದೂರ ನಿಲ್ಲುವುದು ಎರಡೂ ಈ ಹಾಸ್ಯದಿಂದ ಸಾಧ್ಯವಾಗುತ್ತದೆ.

ಡಾಕ್ಟರ್ ಮಾಸ್ತಿವೆಂಕಟೇಶ ಅಯ್ಯಂಗಾರ್ಯರಿಗೆ ಅವರ ಒಟ್ಟು ಸಾಹಿತ್ಯಸೇವೆಗೂ ಮತ್ತು ಅವರ ಐತಿಹಾಸಿಕ ಕಾದಂಬರಿ 'ಚಿಕವೀರ ರಾಜೇಂದ್ರ'ಕ್ಕೂ ಸೇರಿದಂತೆ ಜ್ಞಾನಪೀಠ ಪ್ರಶಸ್ತಿದೊರೆಯಿತು. ಕೌತುಕದ ಸಂಗತಿ ಎಂದರೆ ಜ್ಞಾನಪೀಠವೇ ನೀಡುವ ಮೂರ್ತಿದೇವಿ ಪ್ರಶಸ್ತಿಯೂ ಒಂದು ಐತಿಹಾಸಿಕ ಕಾದಂಬರಿಗೆ ದೊರೆಯಿತು. ಇದು ಸಿ. ಕೆ. ನಾಗರಾಜರಾಯರ "ಪಟ್ಟಮಹಾದೇವಿ ಶಾನ್ತಲದೇವಿ." ಇದು ಕಳೆದುಹೋದ ಒಂದು ಯುಗದ ಪುನರ್ ಸೃಷ್ಟಿ ಮಾತ್ರವಲ್ಲ, ಒಂದು ಚೇತನದ ಯಾತ್ರೆಯ ದರ್ಶನವೂ ಹೌದು. ಮೊದಲನೆಯ ಅಧ್ಯಾಯದಲ್ಲಿ ನಾವು ಕಾಣುವ ಲವಲವಿಕೆಯ ಪುಟ್ಟಹುಡುಗಿ ನಮ್ಮ ಕಣ್ಣೆದುರಿಗೇ ಮುಕ್ತಜೀವ ಆಗುತ್ತಾಳೆ. ಮತ್ತೊಂದು ಶ್ರೇಷ್ಠ ಐತಿಹಾಸಿಕ ಕಾದಂಬರಿ ತ. ರಾ. ಸುಬ್ಬರಾಯರ 'ದುರ್ಗಾಸ್ತಮಾನ'. ಬಾಲಕನೊಬ್ಬನನ್ನು ಇದ್ದಕ್ಕಿದ್ದಂತೆಯೆ ವಿಧಿಯು ಕರೆದು ಸಿಂಹಾಸನದ ಮೇಲೆ ಕೂಡಿಸುತ್ತದೆ: ಅವನು ಹೊರಜಗತ್ತಿನ ಯುದ್ಧಗಳ ಬಿರುಗಾಳಿಗೂ ಒಳಜಗತ್ತಿನ ರಾಗಗಳ ಬಿರುಗಾಳಿಗೂ ಸಿಕ್ಕಿಕೊಳ್ಳುತ್ತಾನೆ. ಇದೊಂದು ಶ್ರೇಷ್ಠವಾದ ಐತಿಹಾಸಿಕ ಕಾದಂಬರಿ, ಶ್ರೇಷ್ಠವಾದ ಮಾನವೀಯ ಕಥೆ. ಮಾಸ್ತಿವೆಂಕಟೇಶ ಅಯ್ಯಂಗಾರ್ಯರು ಸಣ್ಣ ಕತೆಯನ್ನು ಬಾಳಿಗೆ ಸಮಗ್ರ ಪ್ರತಿಕ್ರಿಯೆಯನ್ನಾಗಿ ಮಾಡಿದರು. ಅನಂತಮೂರ್ತಿಯವರ 'ಸೃಷ್ಟಿ'ಯಲ್ಲಿ ಅದು ಬಾಳಿನ ಮತ್ತು ಮಾನವ ಸ್ವಭಾವದ ಶೋಧನೆಯಾಯಿತು. ಇಲ್ಲಿ ಪಾತ್ರದ ಸ್ವಭಾವವೆಂದರೆ ಸ್ಪಷ್ಟವಾದ ಗುಣಗಳು. ಬೇರೆ ಬೇರೆ ಪ್ರಮಾಣದಲ್ಲಿ ಬೆರೆತು ಆದ ಮೊತ್ತವಲ್ಲ, ಬಾಳಿನಲ್ಲಿ ಈ ಗುಣಗಳು ಇಂತಹ ಸಂದರ್ಭದಲ್ಲಿ ಹೇಗೆ ಪ್ರಕಟವಾಗುತ್ತವೆ ಎಂದು ಹೇಳುವಂತಿಲ್ಲ. ಸ್ವಭಾವವೆಂಬುದು ಶಕ್ತಿಗಳ ಮತ್ತು ಒತ್ತಡಗಳ ಸೂಕ್ಷ್ಮ ಸಮತೋಲನ. ಅನಂತಮೂರ್ತಿ ಸಣ್ಣಕತೆಗೆ ಹೊಸ ಆಯಾಮ ಕೊಟ್ಟರು, ಅದರ ಹೊಸ ಸಾಧ್ಯತೆಗಳನ್ನು ತೋರಿಸಿದರು. ವರ್ಷಗಳು ಕಳೆದಂತೆ ಸಂಕೇತಗಳನ್ನು ಹೆಚ್ಚು ಸೂಕ್ಷ್ಮವಾಗಿ ಬಳಸುತ್ತ ಬಂದಿದ್ದಾರೆ. 'ನವಿಲುಗಳು' ಅಂತಹ ಕತೆ ಬಾಳನ್ನು ಗ್ರಹಿಸುವ ಪ್ರಕ್ರಿಯೆಯನ್ನೆ ಹಿಡಿದು ನೋಡುತ್ತದೆ. ಅನಂತಮೂರ್ತಿಗಳಂತೆ ಪಾತ್ರಗಳನ್ನೇ ಅತ್ಯಂತ ಜಟಿಲ ಸನ್ನಿವೇಶಗಳಲ್ಲಿ ಇಟ್ಟುನೋಡುವ ಕತೆಗಾರರು ವಿರಳ. ಕತೆ ಏಕಕಾಲದಲ್ಲಿ ಪ್ರಜ್ಞೆಯ ಶೋಧನೆಯೂ ಆಗುತ್ತದೆ, ಬಾಳಿನ ಅನುಭವದ ದ್ವಂದ್ವದ ಶೋಧನೆಯೂ ಆಗುತ್ತದೆ. ಇವುಗಳೊಂದಿಗೆ ಹೋಲಿಸಿದರೆ ಲಂಕೇಶರ ಕತೆಗಳು ಇನ್ನೂ ಸರಳ, ಆದರೆ ಸಾಮಾಜಿಕ ಕಾಳಜಿಗಳು ಇನ್ನೂ ಪ್ರಬಲ. ಯಶವಂತ ಚಿತ್ತಾಲರ ಪ್ರಾರಂಭದ ಕತೆಗಳಲ್ಲಿ ಕಂಡದ್ದು ಅದ್ಭುತ ಕಥನ ಕೌಶಲ; ಕತೆಯಲ್ಲಿ ಪ್ರತಿಯೊಂದನ್ನು ಮೊದಲೇ ನೀಟಾಗಿ ಲೆಕ್ಕ ಹಾಕಿದ್ದು ಪ್ರತಿ ವಿವರವೂ ತನ್ನ ಸ್ಥಾನಕ್ಕೆ ಸೇರಿಕೊಳ್ಳುತ್ತದೆ. ಆದರೆ 'ಕತೆಯಾದವಳು ಹುಡುಗಿ' ಸಂಗ್ರಹದಲ್ಲಿ ಕಾಣುವ ಚಿತ್ತಾಲರೇ ಬೇರೆ. ಅವರ ಕಾದಂಬರಿಗಳಲ್ಲಿ ಇರುವಂತೆಯೇ ಇಲ್ಲಿಯೂ ಶೋಷಣೆ. ಕ್ರೌರ್ಯ ಮತ್ತು ಸಾವು ಅವರ ಮುಖ್ಯ ಕಾಳಜಿಗಳು (ಒಮ್ಮೊಮ್ಮೆ

ಮೂರೂ ಹೆಣೆದು ಕೊಳ್ಳುತ್ತವೆ, ಈ ಸಂಗ್ರಹದ ಮೊದಲನೆಯ ಕತೆಯಲ್ಲಿ ಕಾಣುವಂತೆ.) ಶೋಷಣೆ ಮತ್ತು ಕ್ರೌರ್ಯಗಳ ಸುಳಿಯಲ್ಲಿ ಸಿಕ್ಕು ಸಾವಿನ ನೆರಳಿನಲ್ಲಿ ಉಸಿರಾಡುತ್ತಿರುವವರ ಬಾಳಿನಲ್ಲೂ ಮಾನವೀಯ ಮೌಲ್ಯಗಳನ್ನು ಅವರ ಕತೆಗಳು ಕಾಣಿಸುತ್ತವೆ. ಇದೊಂದು ಗೂಢವಾದ ಅನುಭವ. ಲಂಕೇಶರಂತೆ ತೇಜಸ್ವಿಯವರಿಗೂ ಶ್ರೇಣಿಗಳಿಂದ ಕೂಡಿದ ವ್ಯವಸ್ಥೆಯಲ್ಲಿ ನಡೆಯುವ ಶೋಷಣೆಯಲ್ಲಿ ಆಸಕ್ತಿ, ಅವರ ಪ್ರತಿಭಟನೆ ಬರಿಯ ರೋಷವಲ್ಲ. ಅವರ ಕತೆ ವ್ಯವಸ್ಥೆಯ ರೀತಿಗಳನ್ನು ಹೆಜ್ಜೆಹೆಜ್ಜೆಯಾಗಿ ಬಿಡಿಸುತ್ತದೆ. ಬೊಳುವಾರು ಮಹಮದ ಕುಂಞ ಅವರ 'ದೇವರುಗಳ ರಾಜ್ಯದಲ್ಲಿ' ಮನುಷ್ಯರೇ ಮನುಷ್ಯರನ್ನು ಎಷ್ಟು ನಿರ್ದಯವಾಗಿ ನಡೆಸಿಕೊಳ್ಳುತ್ತಾರೆ ಎನ್ನುವುದನ್ನೂ ಮುಸ್ಲಿಮರ ಸಮಾಜದಲ್ಲಿ ಕುರುಡುನಂಬಿಕೆ ಮತ್ತು ಪಟ್ಟಭದ್ರ ಆಸಕ್ತಿಗಳು ನಡೆಸುವ ಹಾವಳಿಯನ್ನೂ ತೋರಿಸುತ್ತದೆ. ದೇವನೂರು ಮಹಾದೇವ ಒಂದು ಸಣ್ಣಕತೆಯಲ್ಲೂ ಶತಶತಮಾನಗಳ ಶೋಷಣೆಯನ್ನು ಸೂಚಿಸಬಲ್ಲರು. ಅವರ ಬರಹವು ವಿಷಯಗಳ ವಸ್ತುನಿಷ್ಠ ವೃತ್ತಾಂತದಂತೆ ತೋರುತ್ತದೆ. ಆದರೆ ಅದಕ್ಕೆ ಹರಿತವಾದ ಅಂಚಿದೆ.

ನಾವು ಕಾವ್ಯಕ್ಕೆ ತಿರುಗುವ ಮುನ್ನ ಕತೆ ಕಾದಂಬರಿಗಳಲ್ಲಿ ಲೇಖಕಿಯರ ಸಾಧನೆಯನ್ನು ಗುರುತಿಸಬೇಕು. ಈ ಶತಮಾನದ ಐದನೆಯ ದಶಕದಲ್ಲಿ ತ್ರಿವೇಣಿ ಅಪೂರ್ವ ವಿಜಯವನ್ನು ಸಾಧಿಸಿದರು. ಜನಪ್ರಿಯತೆಯನ್ನು ಪಡೆದರು. ಅನಂತರದ ದಿನಗಳಲ್ಲಿ ಅನೇಕ ಮಂದಿ ಲೇಖಕಿಯರು ಪುರುಷರೊಂದಿಗೆ ಜನಪ್ರಿಯತೆಯಲ್ಲಿ ಸ್ಪರ್ಧಿಸಿದ್ದಾರೆ. ಅವರ ಬರಹದ ಗುಣಮಟ್ಟದ ವಿಷಯ ತೀಕ್ಷ್ಣವಾದ ವಿವಾದದಲ್ಲಿದೆ. ಆದರೆ ಈಗುಣ ಅವರಲ್ಲಿ ಕೆಲವರಾದರೂ ಗಂಡಸರೊಂದಿಗೆ ಹೋಲಿಕೆ ಎಂದರೆ ಅಳುಕಬೇಕಾಗಿಲ್ಲ. ವಿಮರ್ಶಕರಿಂದ ರಿಯಾಯಿತಿ ಬೇಡಬೇಕಾಗಿಲ್ಲ. ಎಂ. ಕೆ. ಇಂದಿರಾ ಅವರ 'ತಗ್ಗಿನಮನೆ ಸೀತೆ' ಎಂಬತ್ತು ವರ್ಷಗಳ ಹಿಂದಿನ ಮಲೆನಾಡಿನ ಜೀವನವನ್ನು ಪುನರ್ ಸೃಷ್ಟಿಸುತ್ತದೆ. ಇಲ್ಲಿ ಭಾಷೆಗೊಂದು ಅಪೂರ್ವ ಲವಲವಿಕೆಯಿದೆ, ಇದು ನಿತ್ಯಜೀವನದ ಭಾಷೆಗೆ ತುಂಬ ಸಮೀಪವಾಗಿದೆ. ಅನುಪಮ ನಿರಂಜನರ 'ಕೊಳಚೆಕೊಂಪೆ ಧಣಿಗಳು' ನಮ್ಮನ್ನು ಮಧ್ಯಮ ವರ್ಗದ ಕುಟುಂಬ ಜೀವನದ ಮಾಮೂಲು ವಿಷಯದಾಚೆ ಕರೆದೊಯ್ಯುತ್ತದೆ. ಒಂದು ಕೊಳಚೆಪ್ರದೇಶದ ಜೀವನವನ್ನು ಚಿತ್ರಿಸುತ್ತದೆ, ಲೇಖಕಿಯರ ಕಾದಂಬರಿಗಳಲ್ಲಿ ಇದ್ದೇ ಇರುತ್ತದೆ ಎಂದು ನಾವು ನಿರೀಕ್ಷಿಸುವ ಅತಿ ಭಾವುಕತೆ ಇಲ್ಲಿಲ್ಲ. ಕಾದಂಬರಿ ಸೌಮ್ಯವಾಗಿ ಆಶಾಭಾವನೆಯನ್ನು ಪ್ರಕಟಿಸುತ್ತದೆ, ವೀಣಾಶಾಂತೇಶ್ವರರು ಗಂಡಸಿನ ಯಜಮಾನಿಕೆಯ ಸಮಾಜದಲ್ಲಿ ಹೆಂಗಸಿನ ಸ್ಥಿತಿಯಲ್ಲಿ ಆಸಕ್ತಿ ತೋರಿಸುತ್ತಾರೆ. ಆದರೆ ಮನಸ್ಸಿನ ವ್ಯಾಪಾರಗಳಲ್ಲಿ ಅವರಿಗಿರುವ ಆಸಕ್ತಿ ಕತೆಗಳಿಗೆ ಆಳವನ್ನು ವೈಶಿಷ್ಟ್ಯವನ್ನು ತಂದು ಕೊಡುತ್ತದೆ. ವೈದೇಹಿಯವರ "ಅಂತರಂಗದ ಪುಟಗಳು" ಸಂಗ್ರಹದ ಕತೆಗಳ ಕ್ರಿಯೆ ಸಾಮಾನ್ಯವಾಗಿ ನಡೆಯುವುದು ದಕ್ಷಿಣ ಕನ್ನಡದಲ್ಲಿ, ಕೆಳಮಧ್ಯಮ ವರ್ಗದ ಮತ್ತು ಬಡವರ ವರ್ಗದ ಬಾಳಿನಲ್ಲಿ ಹುದುಗಿರುವ ಕತ್ತುಹಿಸುಕುವ ಒತ್ತಡಗಳನ್ನು ಮತ್ತು ಇವುಗಳಿಂದ ಆಗುವ ದುರಂತವನ್ನು ಅವರು ಚಿತ್ರಿಸುತ್ತಾರೆ. ಮಾನವ ಸಂಬಂಧಗಳ ಜಟಿಲತೆಯನ್ನು ಅವರು ತೋರಿಸುತ್ತಾರೆ. "ಭೂತ" ಕತೆಯಲ್ಲಿನ ಪಾರ್ವತಿಯಂತಹ ಪಾತ್ರದ ಸೃಷ್ಟಿಯೇ ಒಂದು ಸಾಧನೆ ಎನ್ನಬೇಕು.

ಕೆಲವೇ ವರ್ಷಗಳ ಕೆಳಗೆ ಕನ್ನಡ ಸಣ್ಣ ಕತೆಯು ಶಕ್ತಿ ಉಡುಗಿತು ಎನ್ನುವಂತಿತ್ತು. ಈಗ ಅದು ಪುನಃಶ್ಚೇತನ ಪಡೆದ ಮಾಧ್ಯಮ ದಿವಾಕರ, ನಾ. ಡಿಸೋಜ ಮತ್ತು ಜಯಂತ ಕಾಯ್ಕಿಣಿ ಯವರಂತಹ ತರುಣರೂ ಅದನ್ನು ಹೊಸ ಉದ್ದೇಶಗಳಿಗೆ ಹೊಂದಿಸಿಕೊಳ್ಳುತ್ತಿದ್ದಾರೆ. ಶ್ರೀಮತಿ ಸಾರಾ ಅಬೂಬಕರರು ಬೆಳಕಿಗೆ ಬಂದದು, ಒಂದು ವಿಶಿಷ್ಟ ಸಂಗತಿ. ಅನುಭವದಿಂದ ನೇರವಾಗಿ ಚಿಮ್ಮಿದ ಸರಳವಾದ ಬರಹ ನಮ್ಮಲ್ಲಿ ವಿರಳ, ನಾವೆಲ್ಲ ಅಷ್ಟು ಪ್ರಜ್ಞಾಪೂರ್ವಕ ಬರಹಗಾರರಾಗಿ ಬಿಟ್ಟಿದ್ದೇವೆ. ಆದರೆ ಶ್ರೀಮತಿ ಸಾರಾ ಅಬೂಬಕರರು ವೃತ್ತಾಂತದಲ್ಲಿನ ಸಂಯಮ ಮತ್ತು ಗಾಢವಾದ ಮಾನವೀಯ ಅನುಕಂಪದಿಂದ ಅನುಭವದ ಸರಳ ನಿರೂಪಣೆಯಿಂದ ಸಾಹಿತ್ಯವನ್ನು ಸೃಷ್ಟಿಸುತ್ತಿದ್ದಾರೆ.

ಕೆಲವು ವರ್ಷಗಳ ಕೆಳಗೆ ಕಾವ್ಯವು ಒದುಗರಿಲ್ಲದೆ ಬಾಡಿ ಹೋಗಬಹುದು ಎಂದು ಕಾಣುತ್ತಿತ್ತು. ಆದರೂ ಅದು ಉಳಿದುಕೊಂಡಿದೆ. ಪ್ರತಿ ವರ್ಷ ಸುಮಾರು ಐವತ್ತು ಸಂಗ್ರಹಗಳು ಪ್ರಕಟವಾಗುತ್ತಿವೆ. ಡಾಕ್ಟರ್ ರಾಮಚಂದ್ರಶರ್ಮರಂತಹ ಕವಿಗಳು ನವ್ಯ ಸಂಪ್ರದಾಯದಲ್ಲಿಯೇ ಉಳಿದು ಬೆಳೆದಿದ್ದರೆ, ಇತರರು ಹೊಸ ಹಾದಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಗೋಪಾಲಕೃಷ್ಣ ಅಡಿಗರ ನವ್ಯ ಘಟ್ಟ ಆತ್ಮಶೋಧನೆಯ ಹೊಸ ಯುಗವನ್ನೆ ಉದ್ಘಾಟಿಸಿತು. ಅವರ ಈಚಿನ ಕಾವ್ಯವು ಆತ್ಮಶೋಧನೆಯೊಂದಿಗೆ ಪ್ರಬಲವಾದ ಸಾಮಾಜಿಕ ಕಾಳಜಿಗಳನ್ನು ಸೃಷ್ಟಿಯ ಪ್ರಕ್ರಿಯೆಯ ಶೋಧನೆಯನ್ನೂ ಸೇರಿಸಿಕೊಂಡಿದೆ. ಸೃಷ್ಟಿಯ ಪ್ರಕ್ರಿಯೆಯ ಸ್ವರೂಪವೇ ರಾಮಚಂದ್ರಶರ್ಮರ ಇತ್ತೀಚಿಗಿನ ಸಂಗ್ರಹ 'ಮಾತು–ಮಾಟ'ದಲ್ಲಿ ಒಂದು ಸುನೀತಮಾಲೆಯ ವಿಷಯ, ಶರ್ಮರು ಕಾಮದ ಶಕ್ತಿಯನ್ನು ತೆರೆದ ಮನಸ್ಸಿನಿಂದ ಗುರುತಿಸುವುದು ಮತ್ತು ಪ್ರತಿ ಮನುಷ್ಯನ ಪ್ರತ್ಯೇಕ ಅಸ್ತಿತ್ವದ ಸಮಸ್ಯೆಯಲ್ಲಿ ಆತ್ಯಾಸಕ್ತಿ ಇವುಗಳಿಂದ

ಶರ್ಮರು ಇಂಗ್ಲಿಷ್ ಕವಿ ಯೇಟ್ಸನನ್ನು ನೆನಪಿಗೆ ತರುತ್ತಾರೆ. ನೇರ ಹೇಳಿಕೆಯನ್ನು ಆದಷ್ಟು ಕಡಿಮೆ ಮಾಡಿ, ಬರಿಯ ಭಾಷೆ ಮುಟ್ಟಲಾರದ್ದನ್ನು ಪ್ರತಿಮೆ-ಪ್ರತೀಕಗಳ ಹೆಣಿಗೆಯಿಂದ ಮುಟ್ಟಲು ಅವರು ಪ್ರಯತ್ನಿಸುತ್ತಾರೆ.

ಪ್ರಾಯಶಃ ಇಂದು ಅತ್ಯಂತ ಕುತೂಹಲವನ್ನುಂಟುಮಾಡುವ ಕವಿ ಕೆ. ಎಸ್. ನರಸಿಂಹಸ್ವಾಮಿ. ಸಂಪೂರ್ಣ ಸಮರ್ಪಣೆಯುಳ್ಳ, ಸುಖವಾದ ಸಂಸಾರದ ಆತ್ಮೀಯತೆಯಲ್ಲಿ ಸಾಫಲ್ಯವನ್ನೂ ಕಾಣುವ ದಾಂಪತ್ಯಪ್ರೇಮವನ್ನು ಹಾಡಿ ಹೊಗಳುತ್ತ ಕಾವ್ಯರಚನೆ ಪ್ರಾರಂಭಿಸಿದವರು ಅವರು. ಈಗಲೂ ಅವರ ಕಾವ್ಯದಲ್ಲಿ ಗಾಢವಾದ ರಾಗಗಳಿಲ್ಲ, ಆವೇಶದ ನೆರಳು ಅವರ ಬಳಿ ಸುಳಿಯುವುದಿಲ್ಲ. ಅವರ ತೆರೆದ ಬಾಗಿಲು (1976) ಹದಿನಾರು ವರ್ಷಗಳ ಮೌನದನಂತರ ಬಂದಿತು. ರಾಬರ್ಟ್ ಫ್ರಾಸ್ಟ್, ಕವನವು "ಖುಷಿಯಲ್ಲಿ ಪ್ರಾರಂಭವಾಗಿ ವಿವೇಕದಲ್ಲಿ ಮುಕ್ತಾಯವಾಗುತ್ತದೆ" ಎಂದ, ಈ ವರ್ಣನೆ ನರಸಿಂಹಸ್ವಾಮಿಯವರ ಕಾವ್ಯಕ್ಕೆ ಒಪ್ಪುತ್ತದೆ. ಬಾಳು ಮತ್ತು ಮಾನವ ಅಂತಃಕರಣ ಇವು ಅತ್ಯಮೂಲ್ಯ ಎನ್ನುವ ಭಾವನೆ ಎಲ್ಲ ಕವನಗಳಲ್ಲಿ ತುಂಬಿಬರುತ್ತದೆ. ಬಡತನ, ಅನಾಮಧೇಯತೆ, ಕಡೆಗೆ ಸಾವು ಸಹ ಎಲ್ಲ ಈ ಕಾವ್ಯದ ಜಗತ್ತಿನಲ್ಲಿವೆ. ಆದರೆ ಸೌಮ್ಯ ಬೆಳಕೊಂದು ಎಲ್ಲೆಡೆ ಹಬ್ಬಿದೆ. ನೋವು, ಸಾವಿನ ಚಿಂತೆ ಎಲ್ಲ ವಿವೇಕದ ಸೌಮ್ಯ ಬೆಳಕಿನಲ್ಲಿ ಮಿಂದಿವೆ. ಜಿ. ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿ ಇಬ್ಬರೂ ರೊಮ್ಯಾಂಟಿಸಿಸಂನಿಂದ ಬಾಳಿನ ಒಂದು ಸಂಕೀರ್ಣ ದರ್ಶನಕ್ಕೆ ಸಾಗಿಬಂದಿದ್ದಾರೆ. ಶಿವರುದ್ರಪ್ಪನವರ ಕವಿತೆಯಲ್ಲಿ ಈಗ ಮೊದಲಿಗಿಂತ ಮಾನವರ ನೋವು ಮತ್ತು ಸಾಮಾಜಿಕ ಅನ್ಯಾಯಗಳ ಅರಿವಿದೆ, ಕ್ರಾಂತಿಕಾರಕ ಬೆಳಕು ಕಣ್ಣನ್ನು ಸೆಳೆಯುತ್ತದೆ. ಕಣವಿಯವರ ಕಾವ್ಯದಲ್ಲಿ ಬಾಳ ಪ್ರೀತಿ ಒಂದು ನಯವಾದ ಸ್ವಭಾವದಲ್ಲಿ ಬೆರೆಯುತ್ತದೆ, ಜಗತ್ತಿನಲ್ಲಿನ ಅನ್ಯಾಯವನ್ನೂ ಮರೆಯುವುದಿಲ್ಲ. ವಿಷಣ್ಣತೆ ತರುವ ಈ ಅರಿವು ಉಂಟೇ ಉಂಟು ಒಮ್ಮೊಮ್ಮೆ ಇದು ಕಾವ್ಯದಲ್ಲಿ ವಿಡಂಬನೆಯನ್ನು ಪ್ರಚೋದಿಸುತ್ತವೆ. ಆದರೂ ನಯ ಪ್ರಧಾನವಾಗಿ ಉಳಿಯುತ್ತದೆ. ಬಂಡಾಯದ ಧ್ವನಿ ಏನೂ ಇಲ್ಲ.

ಬಂಡಾಯ ಮತ್ತು ದಲಿತ ಪಂಥಗಳು ನಮಗೆ ಚಂದ್ರಶೇಖರ ಪಾಟೀಲ ಮತ್ತು ಸಿದ್ದಲಿಂಗಯ್ಯನವರಂತಹ ಕವಿಗಳನ್ನು ಕೊಟ್ಟಿವೆ. ಮೊದಲ ನೋಟಕ್ಕೆ ಪಾಟೀಲರ ಕಾವ್ಯ ಬರಿಯ ವಿಡಂಬನೆ, ಚಾತುರ್ಯ, ಚಾಟುನುಡಿ ಅಷ್ಟೇ, ಎಲ್ಲ ಬೌದ್ಧಿಕ, ಟೀಕೆಯತ್ತ ಒಲವು ಎಂದೇ ಎನ್ನಿಸುತ್ತದೆ. ಆದರೆ ಇನ್ನೊಬ್ಬನಿಗಾಗಿ ತುಡಿಯುವ ಮನಸ್ಸು ಒಳಪ್ರವಾಹವಾಗಿ ಇದ್ದೇ ಇದೆ. ಇಲ್ಲಿ ಭಾಷೆ ರಸೋದ್ದೀಪಕವಲ್ಲ, ಸ್ಪಷ್ಟವಾದದ್ದು, ಹರಿತವಾದದ್ದು. ಸಿದ್ದಲಿಂಗಯ್ಯ ಕವಿಯಾಗಿ ಬೇಗ ಪಕ್ವಗೊಂಡರು. ಇಂದು ಬರೆಯುತ್ತಿರುವ ಕವಿಗಳಲ್ಲಿ ಶಕ್ತಕವಿಗಳೆನ್ನಬಹುದಾದ ಕೆಲವೇ ಕೆಲವರಲ್ಲಿ ಅವರೊಬ್ಬರು ; ತಮ್ಮ ರೋಷಕ್ಕೆ ಕಡಿವಾಣ ಹಾಕಲು ಕಲಿತದ್ದರಿಂದ ಅವರ ಕಾವ್ಯ ಈಗ ಮೂರ್ತವಾಗಿದೆ. ಮನಸ್ಸಿನಾಳಕ್ಕೆ ಇಳಿದು ನಾಲಗೆಯಲ್ಲಿ ಕುಣಿಯುವ ಶಕ್ತಲಯಗಳನ್ನು ಅವರು ನಿರ್ಮಿಸುತ್ತಾರೆ. ಮಾತನಾಡುವವನ ರಕ್ತ, ಮೂಳೆಗಳಿಗೇ ಇಳಿದ ಯಾತನೆ ಕೊಡುವ ನೋವಿದೆ ಈ ಕವನಗಳಲ್ಲಿ, ಈ ನೋವು ಮಾತಿಗೆ ಶಕ್ತಿ.

ಯಾವ ಪಂಥಕ್ಕೂ ಸೇರದ ಆದರೆ ಮುಖ್ಯರಾದ ಹಲವರು ಕವಿಗಳಿದ್ದಾರೆ. ಅವರ ಪ್ರತಿನಿಧಿಯಾಗಿ ನಿಸಾರ್ ಅಹಮದರನ್ನು ಹೆಸರಿಸುತ್ತಿದ್ದೇನೆ. ಅವರ ಪ್ರಾರಂಭದ ಕವನ ಅದರ ಕೌಶಲ, ಮನಸ್ಸಿನಲ್ಲಿ ನಿಲ್ಲುವಂತಹ ಮಾತುಗಾರಿಕೆಯ ಅಚ್ಚು ಚಿತ್ರಗಳ ಸಂಪತ್ತು ಇವುಗಳಿಂದ ಸಂತೋಷಕೊಡುತ್ತಿತ್ತು, ಈಗ ಅದಕ್ಕೆ ಗಾಢವಾದ ಕಾಳಜಿಗಳು ಬಂದಿವೆ—ಉದಾಹರಣೆಗೆ, ಬೇರೆ ಬೇರೆ ಸಂಸ್ಕೃತಿಗಳ ಸೆಳೆತಗಳು, ಸಾವಿನ ಅನಿವಾರ್ಯತೆ, ('ಅನಾಮಿಕ ಆಂಗ್ಲರು' ಸಂಗ್ರಹಕ್ಕೆ ಅವರು ಬರೆದಿರುವ ದೀರ್ಘಮುನ್ನುಡಿ ಓದಿ ನೋಡಬೇಕಾದಂತಹದು.) ಎ. ಕೆ. ರಾಮಾನುಜನ್ ಕನ್ನಡದಲ್ಲಿ ವಿಶಿಷ್ಟ ಕವಿ, ಅವರಂತೆ ಇನ್ನೊಬ್ಬರಿಲ್ಲ ಎನ್ನಿಸುವ ಕವಿ. ಭಾವುಕ-ಬೌದ್ಧಿಕ ಪರಿಣಾಮಗಳ ಸೋಂಕಿಲ್ಲದೆ ಒಂದು ಅನುಭವವನ್ನು ಮಾತಿನಲ್ಲಿಪರಿಪೂರ್ಣವಾಗಿ, ನಿಷ್ಕೃಷ್ಟವಾಗಿ ಸೆರೆ ಹಿಡಿಯುವುದೇ ಅವರ ಮುಖ್ಯ ಕಾಳಜಿ ಎನ್ನುವಂತೆ ತೋರುತ್ತದೆ; ಅವರ ವಿನಾ ಬೇರಾರೂ ಹೆಜ್ಜೆ ಹಾಕಲಾಗದ ದಾರಿಯನ್ನು ಅವರು ಆರಿಸಿಕೊಂಡರು. ನವ್ಯರು ಉದ್ದೇಶಪೂರ್ವಕವಾಗಿ ದೂರವಿಟ್ಟ ಭಾವಗೀತೆಗೆ ಹಿಂದಿರುಗುವ ಕಾವ್ಯವನ್ನು ನಾವು ಗುರುತಿಸಬೇಕು. ಡಾಕ್ಟರ್ ಲಕ್ಷ್ಮೀನಾರಾಯಣಭಟ್ಟ, ಎಚ್. ಎಸ್. ವೆಂಕಟೇಶಮೂರ್ತಿ ಇವರು ಹೊಸ ಛಂದಸ್ಸುಗಳ ಪ್ರಯೋಗ ಮಾಡಿದ್ದಾರೆ. ನವೋದಯದ ಕವಿಗಳಂತೆ ಕಾವ್ಯಕ್ಕೆ ಸಂಗೀತದ ಅಂಶವನ್ನು ತಂದುಕೊಳ್ಳುವ ಪ್ರಯತ್ನ ಮಾಡಿದ್ದಾರೆ, ಆದರೆ ಕಾವ್ಯಾಂಶ ನುಸುಳದಂತೆ ಕಾವ್ಯಕ್ಕೆ ಸಂಗೀತದ ಅಂಶವನ್ನು ತಂದು ಕೊಳ್ಳುವ ಪ್ರಯತ್ನ ಮಾಡಿದ್ದಾರೆ, ಆದರೆ ಕಾವ್ಯಾಂಶ ನುಸುಳದಂತೆ ಎಚ್ಚರಿಕೆ ವಹಿಸಿದ್ದಾರೆ. ನಮ್ಮ ತರುಣ ಕವಿಗಳಲ್ಲಿ ಅತ್ಯಂತ ಲವಲವಿಕೆ ಕಾಣುವುದು ಬಿ. ಆರ್. ಲಕ್ಷ್ಮಣರಾಯರಲ್ಲಿ ; ಭಾಷೆ ಮತ್ತು ಲಯಗಳ ಮೇಲಿನ ಅವರ ಹಿಡಿತ ಅವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿದೆ.

ಕನ್ನಡ ಕಾವ್ಯದ ಇತ್ತೀಚಿಗಿನ ವರ್ಷಗಳ ಚರಿತ್ರೆಯಲ್ಲಿನ ಒಂದು ಕೌತುಕದ ಅಂಶವನ್ನು ಗುರುತಿಸಬೇಕು. ಆಧುನಿಕ ಯುಗದ ಮೊದಲ ಮಹಾಕಾವ್ಯವನ್ನು ಡಾಕ್ಟರ್ ಕೆ. ವಿ. ಪುಟ್ಟಪ್ಪನವರು ಕೊಟ್ಟರು. ಅನಂತರ ಮಹಾಕಾವ್ಯ ಹಲವರು ಕವಿಗಳ ಮನಸ್ಸನ್ನು

ಆಕರ್ಷಿಸಿದಂತೆ ಕಾಣುತ್ತದೆ. ಕಳೆದ ಎರಡು ಮೂರು ವರ್ಷಗಳಲ್ಲಿ ಡಾಕ್ಟರ್ ಗೋಕಾಕರ 'ಭಾರತ ಸಿಂಧುರಶ್ಮಿ' ಪ್ರೊಫೆಸರ್ ಎಸ್. ಎಸ್. ಭೂಸನೂರುಮಠದ 'ಭವ್ಯ ಮಾನವ' ಪ್ರಕಟವಾಗಿವೆ.

ಈ ಲೇಖನದಲ್ಲಿ ಕಾದಂಬರಿ–ಕಥಾ ಸಾಹಿತ್ಯ ಮತ್ತು ಕಾವ್ಯಗಳಲ್ಲಿನ ಎಲ್ಲ ಪ್ರಮುಖ ಬರಹಗಾರರ ಹೆಸರುಗಳನ್ನು ಹೇಳುವ ಪ್ರಯತ್ನವೂ ಇಲ್ಲ, ಅಂತಹ ಪ್ರಯತ್ನವಿದ್ದಿದ್ದರೆ ನ. ಮೊಗಶಾಲೆ, ಬರಗೂರು ರಾಮಚಂದ್ರಪ್ಪ, ಎಚ್. ಎಸ್. ಶಿವಪ್ರಕಾಶ, ಮಾಲತಿ ಪಟ್ಟಣಶೆಟ್ಟಿ, ಸುಮತೀಂದ್ರ ನಾಡಿಗ, ಹೇಮಾ ಮೊದಲಾದ ಹಲವಾರು ಸಾಹಿತಿಗಳ ವಿಷಯ ಬರೆಯಬೇಕಾಗಿತ್ತು. ಈಚಿಗಿನ ಕನ್ನಡ ಸಾಹಿತ್ಯದ ವೈವಿಧ್ಯ ಶ್ರೀಮಂತಿಕೆಗಳನ್ನು ಸೂಚಿಸುವ ಪ್ರಯತ್ನವನ್ನಷ್ಟೆ ಇಲ್ಲಿ ಮಾಡಿದೆ. ಈ ಎಲ್ಲ ಸೃಜನ ಕಾರ್ಯದ ಹಿಂದೆ, ಸಾಹಿತ್ಯ ಮತ್ತು ಒಂದು ಪ್ರಧಾನವಾದ ಮತ್ತು ಹೊಣೆಗಾರಿಕೆಯ ಚಟುವಟಿಕೆ ಎಂಬ ಅರಿವು ಇದೆ. ಸಾಹಿತ್ಯ ವನ್ನು ಕುರಿತು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಡೆದಿರುವಷ್ಟು ಗಂಭೀರವಾದ ಚರ್ಚೆ ಮತ್ತು ವಾದವಿವಾದ ಅದರ ಹಿಂದಿನ ಒಂದು ನೂರು ವರ್ಷಗಳಲ್ಲಿ ನಡೆದಿರಲಿಲ್ಲ.

ಜಾತಿಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ.
ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ;
ಸೇರಿಕೊಳಿ, ಕೂಡಿಕೊಳಿ, ಮುನ್ನುಗ್ಗುವ ಸಾಲಿಗೆ,
ಕತ್ತಲೊಡನೆ ಹೂಡಿದ ಈ ಉತ್ಸಾಹದ ದಾಳಿಗೆ;
ಕೂಡಿಸಿರೆದೆ ಕೊರಲುಗಳನು ಹೊಸಬಾಳಿನ ಹಾಡಿಗೆ:
ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ;
ನಾವು ಮನುಜರು !
ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು,
ನಾವು ನವವಿಧಾತರು!

ಎಂ. ಗೋಪಾಲಕೃಷ್ಣ ಅಡಿಗ

ಸಮಕಾಲೀನ ಕನ್ನಡ ರಂಗಭೂಮಿ

ಡಿ. ಆರ್. ನಾಗರಾಜ್

ಈ ಹೊತ್ತಿನ ಕನ್ನಡ ರಂಗಭೂಮಿಗೆ ಏನಾಗಿ ಹೋಗಿದೆ ? ಹಿಂದಿಗಿಂತ ಹೆಚ್ಚಾಗಿ ಉತ್ಸಾಹಿ ನಿರ್ದೇಶಕರಿದ್ದಾರೆ, ನಿಜ. ಹೆಚ್ಚು ತಂಡಗಳು ಕೂಡಾ ಇವೆ. ಕರ್ನಾಟಕದ ಅನೇಕ ಪಟ್ಟಣಗಳಲ್ಲಿ ಹವ್ಯಾಸಿ ರಂಗ ಚಟುವಟಿಕೆ ಜೋರಾಗಿಯೇ ನಡೆಯುತ್ತಿದೆ. ಇಷ್ಟಾದರೂ ಕನ್ನಡ ನಾಟಕ ಪ್ರತಿಭೆ ಇಂದು ತನ್ನ ಚೈತನ್ಯಪೂರ್ಣ ಸ್ಥಿತಿಯಲ್ಲಿ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಅಂದರೆ ಈಚೆಗೆ ಯಾವ ಶಕ್ತಿಶಾಲೀ ನಾಟಕವೂ ಬಂದಿಲ್ಲ ಎಂದರ್ಥ. ಕೆಲವು ಶಕ್ತ ರಂಗ ಪ್ರಯೋಗಗಳನ್ನು ಮಾತ್ರ ಕಾಣುತ್ತಿದ್ದೇವೆ. ಈಗ ನಮ್ಮಲ್ಲಿ ಎಂಥಾ ' ಪ್ರತಿಭಾವಂತರಿದ್ದಾರೆ ' ಎಂದರೆ, ಇವರು ರೈಲ್ವೆ ವೇಳಾಪಟ್ಟಿಯನ್ನು ಕೂಡಾ ರಂಗರೂಪಕ್ಕೆ ತರಬಲ್ಲರು. ರಂಗಪ್ರಯೋಗ ಇಷ್ಟು ಸಲೀಸಾಗಿಬಿಟ್ಟಾಗ ಸಹಜನಾಟಕ ಮಂಕಾಗಿಬಿಡುತ್ತದೆ ? ತನ್ನ ಎತ್ತರಗಳನ್ನು ಕಳೆದುಕೊಳ್ಳುತ್ತದೆ. ತೀರಾ ದುರ್ಬಲರಾದ ನಾಟಕಕಾರರು ಹುಟ್ಟಿಕೊಳ್ಳುತ್ತಾರೆ. ಇಂಥ ಸ್ಥಿತಿಯ ಹಿನ್ನೆಲೆಯಲ್ಲಿರುವ ರಂಗಪ್ರಯೋಗದ ಮಾದರಿಗಳನ್ನು ನೋಡಿದಾಗ ರಿಯಲಿಸ್ಟ್ ಶೈಲಿಯ ರೋಗಗ್ರಸ್ಥ ಸ್ಥಿತಿಯಲ್ಲಿ ನಮ್ಮ ರಂಗಭೂಮಿ ಇದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ರಿಯಲಿಸ್ಟ್ ರೂಪವೇ ಹಾಗೆ. ತನ್ನ ಅತ್ಯುತ್ತಮ ಸ್ಥಿತಿಯಲ್ಲಿದ್ದಾಗಲೇ ಅದು ಚೆಂದ. ಮುದಿಯಾದಾಗ ಅದು ಮೂಳೆ ಚಕ್ಕಳ ಬಿಟ್ಟುಕೊಂಡು ಎದೆ ಎಲುಬುಗೂಡಾಗಿ ಕಣ್ಣು ಹೋಗಿ ಬೆನ್ನು ಬಾಗಿಬಿಡುತ್ತದೆ.

ರಿಯಲಿಸ್ಟ್ ರಂಗಭೂಮಿಯ ರೋಗಗ್ರಸ್ಥ ಸ್ಥಿತಿ ಎಂದರೇನು ಎಂಬುದನ್ನು ಒಂದಿಷ್ಟು ಬಿಡುವಾಗಿ ನೋಡಬಹುದು. ನನ್ನ ಪ್ರಕಾರ ಅದರ ರೋಗ ಲಕ್ಷಣ ಹೀಗಿದೆ. ಕೃತಿಯೊಂದರ ಬಿಡಿ ದೃಶ್ಯ ಮತ್ತು ಒಟ್ಟು ಬಂಧದ ನಡುವೆ ಸಾವಯವ ಸಂಬಂಧ ತಪ್ಪಿ ಹೋಗುತ್ತದೆ. ಇಲ್ಲಿ ನಿರ್ದೇಶಕ ಪ್ರತಿಯೊಂದು ಬಿಡಿ ದೃಶ್ಯವನ್ನು ಕುಸುರಿ ಕೆಲಸಮಾಡಿ ಪೂರ್ಣಗೊಳಿಸಲು ಯತ್ನಿಸುತ್ತಾನೆ. ಪ್ರತಿಯೊಂದು ದೃಶ್ಯವನ್ನೂ ತೀವ್ರವಾಗಿಸುವ ಪ್ರಯತ್ನದಲ್ಲಿ, ಸುಂದರವಾಗಿಸುವ ಪ್ರಯತ್ನದಲ್ಲಿ ಕೃತಿಯ ಒಟ್ಟು ಬಂಧ ತೋಪಾಗಿ ಹೋಗುತ್ತದೆ, ಪ್ರೇಕ್ಷಕನನ್ನು ತಕ್ಷಣ ಹಿಡಿಯಬೇಕು ಎಂಬ ಹತಾಶೆ ಮೊದಲ ದೃಶ್ಯಗಳ ನಿರ್ವಹಣೆಯಲ್ಲಿ ಒಡೆದುಕಾಣುತ್ತದೆ. ಒಂದು ಕ್ಷಣ ನಿಂತವರನ್ನು ಹಾಗೇ ಗಿರಾಕಿಗಳನ್ನಾಗಿಸುವ ಪ್ರಯತ್ನ ಮಾಡುವ ಫುಟ್‌ಪಾತ್ ವ್ಯಾಪಾರಿಯ ಹಾಗೆ, ಕೃತಿಯ ಒಳ ವಿವರಗಳು ಇಲ್ಲಿ ಮುಖ್ಯವಾಗುವುದಿಲ್ಲ ಅಥವಾ ಅವು ಇರುವುದೇ ಇಲ್ಲ. ಎಲ್ಲವೂ ಮೇಲೆ ಮೇಲೆಯೇ ತೇಲುತ್ತಿರಬೇಕು. ಈ ಹಿನ್ನೆಲೆಯಲ್ಲಿ ನನಗೆ ತಕ್ಷಣ ನೆನಪಾಗುತ್ತಿರುವುದು ಸಿ. ಜಿ. ಕೃಷ್ಣಸ್ವಾಮಿಯವರ ಪ್ರಯೋಗಗಳು. 'ಒಡಲಾಳ'ದ ನಾಟಕ ರೂಪವನ್ನೇ ಇಲ್ಲಿ ವಿಶ್ಲೇಷಿಸಬಹುದು. ಮೂಲಕಥೆಯಲ್ಲಿ ತುಂಬ ಸೂಕ್ಷ್ಮವಾದ ಒಂದು ಸಾಮಾಜಿಕ ಪ್ರಕ್ರಿಯೆಯ ಮಂಡನೆ ಇದೆ. ದಲಿತರ ಸಾಮಾಜಿಕ ಚಲನೆಯ ಪ್ರಕ್ರಿಯೆ ಅದು. 'ಒಡಲಾಳ' ಕಥೆಯ ಪ್ರಾದೇಶಿಕ ಪರಿಸರದಲ್ಲಿ ಸ್ಥಳೀಯ ಮೇಲು ಜಾತಿಯವರ, ಅಂದರೆ ಲಿಂಗಾಯತರ ಹೋಟೆಲಿಗೆ ಒಂದು ಸಾಮಾಜಿಕ ಮಹತ್ವ ಇದೆ. ಹೋಟೆಲಿನ ಪ್ರವೇಶ ಇಲ್ಲಿ ಒಂದು ಮುಖ್ಯವಾದ ಹೋರಾಟದ ಕಣ. ಲಿಂಗಾಯತರ ಹೋಟೆಲಿನಲ್ಲಿ ಸಮಾನ ಹಕ್ಕು ಪಡೆಯುವುದು ಅವರ ಒಟ್ಟು ಒಡೆತನಕ್ಕೊಂದು ಸವಾಲು. ಆದರೆ. ಕೃಷ್ಣಸ್ವಾಮಿ ಅವರನ್ನು ಒಬ್ಬ ದಕ್ಷಿಣ ಕನ್ನಡ ವ್ಯಕ್ತಿಯನ್ನಾಗಿ ಮಾಡಿದ್ದರು, ಸಮಾನ ಹಕ್ಕನ್ನೂ ನೀಡಿಬಿಟ್ಟಿದ್ದರು. ಸಾಮಾಜಿಕ ಚಲನೆಯ [Social Mobility] ಪ್ರಕ್ರಿಯೆಯನ್ನು ಹೇಳುವ ಕಲೆಯಲ್ಲಿ ಅದು ತಾತ್ವಿಕವಾಗಿ ಕೊನೆಯ ಹಂತ. ಅದನ್ನು ಮೊದಲೇ ಮಾಡಿದ್ದರಿಂದ ಕೃತಿಯ ಸಾವಯುವ ಪ್ರಕ್ರಿಯೆಯೇ ಛಿದ್ರವಾದಂತಾಯಿತು ಎಂಬುದು ನನ್ನ ವಾದ. ಆ ದೃಶ್ಯದಲ್ಲಿ ಪೋಲೀಸ್‌ನವನು ಹೊಸದಾಗಿ ಬಂದ ಸಬ್ ಇನ್ಸ್‌ಪೆಕ್ಟರನಿಗೆ (ಅವನು ಯಾರೆಂದು ಗೊತ್ತಿಲ್ಲದೆ) ಬಾಯಿಗೆ ಬಂದ ಹಾಗೆ ಮಾತನಾಡುವುದರಲ್ಲಿರುವ

ತಮಾಷೆ ತೋರಿಸಲು ಇದು ಬಂದಿದೆ. ಕಡೆಗೆ ಅವನೇ ಪೋಲೀಸ್ ಇನ್ಸ್‌ಪೆಕ್ಟರ್ ಎಂದು ಗೊತ್ತಾದಾಗ ಉಂಟಾಗುವ ಎಫೆಕ್ಟಿನ ಕಡೆಗೆ ಗಮನವಿರುವ ಗಿಮಿಕ್ ಇದು. ಈ ಒಂದು ಬಿಡಿ ದೃಶ್ಯದ ಪರಿಣಾಮ–ನಿರ್ದೇಶಕ ಕೃತಿಯ ಒಟ್ಟು ಬಂಧಕ್ಕೆ ನಿರ್ದೇಶಕರು ಪಂಚರ್ ಮಾಡುತ್ತಾರೆ. ಮೊದಲಿಗೇ ಪ್ರೇಕ್ಷಕನನ್ನು ಹಿಡಿದು ಕಟ್ಟಬಯಸುವ ಈ ಹತಾಶೆಯೇ ಕಡೆಗಾಲದ ರಿಯಲಿಸ್ಟಿಕ್ ಶೈಲಿಯ ಪ್ರಮುಖ ರೋಗ ಲಕ್ಷಣ. ಇಂಥ ಸ್ಥಿತಿಗೆ ನಮ್ಮ ರಂಗಭೂಮಿ ಬರಲು ಕಾರಣಗಳೇನು ಎಂದು ಹುಡುಕುತ್ತಾ ಹೋದರೆ ಆಧುನಿಕ ಕನ್ನಡ ರಂಗಭೂಮಿಯ ಮೂಲ ಮಾದರಿಗಳ ಕಡೆಗೆ ಬರುತ್ತೇವೆ. ನಮ್ಮಲ್ಲಿ ಅನೇಕ ದಶಕಗಳಿಂದ ಅಬಾಧಿತವಾಗಿ ಮುಂದು ವರಿದಿರುವ ಕೆಲವು ಪರಿಕಲ್ಪನೆಗಳ ಪರಿಣಾಮ ಇದು (ಎಂದಾದರೂ ನಕಲಿ ರಿಯಲಿಸಂ ತನ್ನ ಅತ್ಯುತ್ತಮ ಸ್ಥಿತಿಯಲ್ಲಿದೆ ಎಂಬ ಅನುಮಾನವೂ ಮುಂದಿನ ಟಿಪ್ಪಣಿಗಳಲ್ಲಿ ನನ್ನನ್ನು ಕಾಡಿದೆ.)

ನಮ್ಮ ಈಗಿನ ನಾಟಕದ ಮೂಲ ಮಾದರಿಗಳನ್ನು ಕಟ್ಟಿದವರು ಶ್ರೀರಂಗ ಮತ್ತು ಕೈಲಾಸಂ. ಅಲ್ಲಿಯತನಕದ ನಮ್ಮ ನಾಟಕದ ಮೂರು ಪ್ರಭೇಧಗಳಲ್ಲಿ—ಕ್ಲಾಸಿಕಲ್, ಜಾನಪದ, ರಿಚುಯಲಿಸ್ಟಿಕ್—ಲೋಕಧರ್ಮ ಮತ್ತು ನಾಟ್ಯಧರ್ಮ ಎರಡೂ ಪೂರ್ಣವಾಗಿ ಬೇರೆ ಬೇರೆ. ಲೋಕ ಸ್ವರೂಪವನ್ನು ಅದರ ದೈನಂದಿನ ಲಯಂಗಳಲ್ಲಿ, ನಿಜ ಬಣ್ಣಗಳಲ್ಲಿ, ವಿವರಗಳಲ್ಲಿ ಅನುಸರಿಸುವ ಪ್ರಯತ್ನ ವನ್ನು ಎಂದೂ ನಾಟ್ಯ ರೂಪ ಮಾಡುತ್ತಿರಲಿಲ್ಲ. ಎರಡರ ಶರತ್ತುಗಳು, ರೀತಿನೀತಿಗಳು ಸಂಪೂರ್ಣವಾಗಿ ಬೇರೆ ಬೇರೆ. ಆದರೆ ಶ್ರೀರಂಗ ಮತ್ತು ಕೈಲಾಸಂ ಇಬ್ಬರೂ ಪಾಶ್ಚಿಮಾತ್ಯ ರಂಗಭೂಮಿಯಿಂದ ಗಾಢವಾಗಿ ಪ್ರಭಾವಿತರಾದವರು. ಅದರಿಂದ ತಮ್ಮ ಮಾದರಿಗಳನ್ನು ಪಡೆದುಕೊಂಡವರು. ಲೋಕವನ್ನು, ಅಲ್ಲ ಸಮಾಜವನ್ನು ಅದರ ದೈನಂದಿನ ಲಯುಗಳಲ್ಲೆ ಹಿಡಿಯಬಯಸುವ ಹಠ ರಿಯಲಿಸಂನದು. ಸಮಾಜಕ್ಕೂ ಮೀರಿದ ಲೋಕ ಸಾಮಾನ್ಯವಾಗಿ ಅದರಲ್ಲಿ ನಾಪತ್ತೆ. ಶ್ರೀರಂಗ ಮತ್ತು ಕೈಲಾಸಂ ಇಬ್ಬರೂ ಲೋಕಧರ್ಮ ಮತ್ತು ನಾಟ್ಯಧರ್ಮಗಳನ್ನು ಸಮೀಕರಿಸಿ ನಾಟಕಮಾದರಿಯೊಂದನ್ನು ಕಟ್ಟಿದರು. ಅದಕ್ಕೆ ವಿಶಿಷ್ಟ ಬಗೆಯ ತೀವ್ರತೆ ಇತ್ತು, ತುರ್ತು ಇತ್ತು. ಲೋಕಧರ್ಮವನ್ನು ವಿಮರ್ಶಿಸುವ, ವ್ಯಾಖ್ಯಾನಿಸುವ ಅದರ ವಿವರಗಳನ್ನೇ ಅದೇ ಗತಿಗಳಲ್ಲಿ ಹಿಡಿಯುವ ನಾಟಕ ಅದು. ಇದು ಆಗ ಅತ್ಯಂತ ಶಕ್ತಿಶಾಲಿಯಾದ ಹೊಸಮಾದರಿಯಾಗಿತ್ತು. ಆಗಿನ ಕೆಲವು ಸಾಮಾಜಿಕ ವರ್ಗಗಳ ಸಂವೇದನೆಗೆ ಕಲಾನುಭವಕ್ಕೆ ಅದು ತೀರಾ ಹತ್ತಿರವಾಗಿತ್ತು. ನಮ್ಮ ಸಮಾಜದ ಬಹು ಮುಖ್ಯ ಪ್ರತಿಭೆ ರಿಯಲಿಸಂಗೋಸ್ಕರ ತಹತಹಿಸುತ್ತಿದ್ದ ಘಟ್ಟ ಅದು.

ಅದರ ಪರಿಣಾಮಗಳನ್ನು ಈಗ ನೆನೆಸಿಕೊಂಡರೆ ಅಷ್ಟೇನೂ ಸಂತೋಷವಾಗುವುದಿಲ್ಲ. ಆಶ್ಚರ್ಯದ ಸಂಗತಿ, ನಮ್ಮ ಆಧುನಿಕ ಕನ್ನಡ ನಾಟಕದ ಇಬ್ಬರು ಪ್ರವರ್ತಕರಾದ ಶ್ರೀರಂಗ ಮತ್ತು ಕೈಲಾಸಂ ಇಬ್ಬರಿಗೂ ನಮ್ಮ ಯಾವ ಸಾಂಪ್ರದಾಯಕ ರಂಗಭೂಮಿ ಗಳಲ್ಲಿಯೂ ಬೇರಿರಲಿಲ್ಲ, ನಂಬಿಕೆ ಇರಲಿಲ್ಲ. ನಮ್ಮ ಸಾಂಪ್ರದಾಯಕ ರಂಗಭೂಮಿಯ ಮುಖ್ಯ ಲಕ್ಷಣ ಎಂದರೆ ಅವು ಭ್ರಮಾತ್ಮಕ ಸ್ಥಿತಿಯ ನಿರ್ಮಾಣವನ್ನು ನಿರಾಕರಿಸುವಂತಹವು. ಡಾ. ಅಯ್ಯಪ್ಪ ಪಣಿಕ್ಕರರು 'ಜರ್ನಲ್ ಆಫ್ ಆರ್ಟ್ಸ್ ಅಂಡ್ ಐಡಿಯಾಸ್' ನಲ್ಲಿನ (1983) ಲೇಖನವೊಂದರಲ್ಲಿ ವಿವರವಾಗಿ ಚರ್ಚಿಸಿದ್ದಾರೆ). ನಟನಟಿಯರು ತಾವು ಪಾತ್ರವೊಂದನ್ನು ಅಭಿನಯಿಸಿ ತೋರಿಸುವಾಗ ತಮ್ಮ ಮತ್ತು ಆ ಪಾತ್ರದ ನಡುವಿನ ವ್ಯತ್ಯಾಸದ ಪಾತಳಿಯಲ್ಲೇ ಮುಂದು ವರಿಯುತ್ತಾರೆ. ಈ ರೀತಿಯ ರಂಗಭೂಮಿಯ ಹಿಂದೆ ಒಂದು ವಿಶಿಷ್ಟವಾದ ಲೋಕದರ್ಶನ ಇದೆ, ಕಲಾ ಮೀಮಾಂಸೆ ಇದೆ. ಇದರ ಜೊತೆಗೆ ಕಡೇ ಪಕ್ಷ ರಂಗಭೂಮಿಯ ಪ್ರಯೋಗದ ಹಂತದಲ್ಲಾದರೂ ಇಬ್ಬರು ನಾಟಕಕಾರರು ಸಂಬಂಧ ಹೊಂದಿರದೆ ಹೋದದ್ದು ವಿಷಾದನೀಯ. ಕೆಲವು ಕಡೆಗಳಲ್ಲಿ ಶ್ರೀರಂಗರು ಸಂಸ್ಕೃತ ನಾಟಕದ ಜೊತೆಗೆ ಸಂಬಂಧವನ್ನು ಬೆಳೆಸಲು ಪ್ರಯತ್ನಿಸಿದ ರಾವರೂ ಅದು ಬರೇ ಹೊರಗಿನದಾಗಿತ್ತು. ಅಲಂಕಾರಿಕವಾದದ್ದಾಗಿತ್ತು.

ಇದೆಲ್ಲದರ ಜೊತೆಗೆ ಕನ್ನಡದಲ್ಲಿ ರಿಯಲಿಸಂ ಪರಂಪರೆಗೆ ಸಂಬಂಧಿಸಿದಂತೆ ಇನ್ನೊಂದು ಕುತೂಹಲದ ಸಂಗತಿ ಇದೆ. ಅದು ಕನ್ನಡದಲ್ಲಿ ಮಹತ್ವದ ರಿಯಲಿಸ್ಟ್ ನಾಟಕವೊಂದು ಬರಲಿಲ್ಲ ಎಂಬುದು. ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋಗುವುದು ಈ ಲೇಖನದ ಮಿತಿಯಲ್ಲಿ ಆಗದ ಕೆಲಸ. ಆದರೆ, ಒಂದು ತಾತ್ವಿಕ ಊಹೆಯನ್ನು ಇಲ್ಲಿ ಮಂಡಿಸಬಹುದು. ರಿಯಲಿಸ್ಟ್ ಕೃತಿ ತನ್ನ ಶ್ರೇಷ್ಠತೆ ಸಾಧಿಸುವುದು ಒಂದು ನಿರ್ದಿಷ್ಟ ಚಾರಿತ್ರಿಕ ಅವಧಿಯ ಅನುಭವವನ್ನು ಅದರ ದೈನಂದಿನ ಲಯಗಳನ್ನು ಒಳಗೊಂಡ ರೂಪದಲ್ಲಿ ಹಿಡಿದಾಗ. ಆದರೆ, ಶ್ರೀರಂಗ, ಕೈಲಾಸಂರಲ್ಲಿ ಅಂಥ ಮಹತ್ವಾಕಾಂಕ್ಷೀ ರೂಪವನ್ನು ಕಾಣುವುದಿಲ್ಲ. ಶ್ರೀರಂಗರು ಬೇರೆ ಬೇರೆ ರೀತಿಯ ರೂಪಗಳ ಹುಡುಕುವಿಕೆಯಲ್ಲಿ ತೊಡಗಿಕೊಂಡು ಇಂಥ ಪ್ರಯತ್ನವನ್ನೆ ಬಿಟ್ಟರು. ಇನ್ನೂ ಕೈಲಾಸಂರ ನಾಟಕರೂಪ ಒಂದು ಸಂಪಾದಕೀಯದಂತೆ.

ಇದ್ದುದರಲ್ಲಿ ಆಧುನಿಕ ಕನ್ನಡ ನಾಟಕ ಇಂಥ ಮಹತ್ವದ ರಿಯಲಿಸ್ಟ್ ಕೃತಿಯ ಹತ್ತಿರಕ್ಕೆ ಹೋದದ್ದು ಜೋಶಿಯವರ 'ಕದಡಿದ ನೀರು'ವಿನಲ್ಲಿಯೇ.

ಮುಂದಿನ ಘಟ್ಟದಲ್ಲಿ ಕಂಬಾರ, ಕಾರ್ನಾಡರು ಕನ್ನಡ ನಾಟಕಪರಂಪರೆಯಲ್ಲಿ ಒಂದು ಹೊಸ ದಿಕ್ಕಿಗೆ ತಿರುಗಲು ಪ್ರಯತ್ನಪಟ್ಟರು. ಸಾಂಪ್ರದಾಯಿಕ ರಂಗಭೂಮಿಗೆ ಹತ್ತಿರವಿರುವ ನಾಟಕ ರೂಪವನ್ನು ನಾವು ಜೋಕುಮಾರಸ್ವಾಮಿ, ಹಯವದನಗಳಲ್ಲಿ ಕಾಣಬಹುದು. ನಿರ್ದೇಶಕ ಬಿ. ವಿ. ಕಾರಂತರ ನಾಟ್ಯಪ್ರತಿಭೆಯು ಕನ್ನಡದಲ್ಲಿ ಈ ರೀತಿಯ ಸಮಗ್ರ ನಾಟಕಪ್ರಕಾರದ ಹುಟ್ಟಿಗೆ ದೊಡ್ಡ ಕಾರಣ ಎಂಬುದನ್ನು ಈ ಹೊತ್ತಿನಲ್ಲಿ ನೆನೆಯಬೇಕಾಗುತ್ತದೆ. ಆದರೆ, ಕನ್ನಡ ನಾಟಕದಲ್ಲಿ ಮುಖ್ಯ ಮಾದರಿ ಎಂಬಂತೆ ಬೇರೂರಿದ್ದ ರಿಯಲಿಸಂನ ಗಾಢ ಆಕರ್ಷಣೆ ಈ ನಾಟಕಕಾರರನ್ನು ಬಿಡಲಿಲ್ಲ. ಬರೀ ರಂಜಕವಲಯದಲ್ಲೇ ಈ ಪ್ರಯತ್ನಗಳು ಉಳಿದುಬಿಟ್ಟವು. ನಾಟ್ಯಪ್ರತಿಭೆ ಮತ್ತು ತಾತ್ವಿಕ ಪ್ರತಿಭೆಗಳೆರಡೂ ಸಂಘರ್ಷಿಸಿ ಬೆರೆತ ನಾಟಕರೂಪವೊಂದು ಸಿದ್ಧವಾಗಲಿಲ್ಲ. ಕಂಬಾರರನ್ನೇ ನೋಡಿ ಅವರು ತಾತ್ವಿಕವಾಗಿ ತೀವ್ರರಾಗುವುದು ರಿಯಲಿಸ್ಟ್ ರೀತಿಯ ನಾಟಕದಲ್ಲೆ (ಹರಕೆಯ ಕುರಿ).

ಈ ಸಾಂಪ್ರದಾಯಕ ನಾಟಕದ ಬರಹಗಳ ಮುಖ್ಯ ಸಮಸ್ಯೆ ಎಂದರೆ, ಎಪಿಕ್ ರೂಪದ ಅತ್ಯಂತ ದೊಡ್ಡ ಸಮಸ್ಯೆ ಎಂದರೆ ಇಲ್ಲಿ ಇಮ್ಮಿಡಿಯಸಿ (ತತ್‌ಕ್ಷಣದ ತೀವ್ರತೆ) ಎಂಬುದನ್ನು ತರುವುದು ಸಾಧ್ಯವಿಲ್ಲ. ಎಲ್ಲವೂ ಇಲ್ಲಿ ವಿಸ್ತಾರವಾಗುತ್ತಾ, ನಂಬಿಸುತ್ತಾ ಅಸ್ವಾಭಾವಿಕವಾಗುತ್ತಾ ಹೋಗುತ್ತದೆ. ಒಂದು ರೀತಿಯ ಬಿಡುವೇ ಇಲ್ಲಿಯ ಮುಖ್ಯ ಪ್ರಾಣ. ಇಂಥದನ್ನು ಬರೀ ತಂತ್ರ ಎಂಬ ಬಾಹ್ಯಕಾರಣಕ್ಕೆ ಸ್ವೀಕರಿಸಿ ಬರೆಯುವಾಗ ಹುಟ್ಟುವ ನಾಟಕಕ್ಕೆ ಅನಿವಾರ್ಯವಾಗಿ ಒಂದು ಬಗೆಯ ಲಘುತನ ಬಂದುಬಿಡುತ್ತದೆ.

ಇದೇ ನಮ್ಮ ಕನ್ನಡ ನಾಟಕದ ಈಗಿನ ದೊಡ್ಡ ಸಮಸ್ಯೆ; ಬಹುಶಃ ಮೂಲಭೂತ ಸಮಸ್ಯೆ. ಅನೇಕ ರೀತಿಯ ಅಪಕ್ವ ನಿರ್ದೇಶಕರು ತಾತ್ವಿಕ ಪ್ರತಿಭೆಯೇ ಇಲ್ಲದ ರಂಗಕಮಿಟಿಗಳು ಮಾಡುವ ನಾಟಕಗಳ ಮೂಲಕ ರಿಯಲಿಸಂನ ರೋಗಗ್ರಸ್ಥ ಸ್ಥಿತಿ ನಮಗೆ ಚೆನ್ನಾಗಿ ಅನುಭವಕ್ಕೆ ಬಂದಿದೆ. ರಿಯಲಿಸಂನಲ್ಲಿ ದೊಡ್ಡ ನಾಟಕ ಹುಟ್ಟುವುದೋ ನೋಡಬೇಕು. ಇನ್ನೊಂದು ಕಡೆಯಲ್ಲಿ 'ಎಪಿಕ್' ರಂಗ ಭೂಮಿ ಅಥವಾ ಸಾಂಪ್ರದಾಯಕ ರಂಗಭೂಮಿ ತನ್ನ ಅತೀವ ವಸ್ತುನಿಷ್ಠ ರೂಪದ ಕಾರಣಕ್ಕಾಗಿ, ಇಮ್ಮಿಡಿಯಸಿಯ ಅಭಾವದ ಕಾರಣಕ್ಕಾಗಿ ಅತೃಪ್ತಿ ಹುಟ್ಟಿಸುತ್ತದೆ. ಬಂಗಾಳದ ನಾಟಕದಲ್ಲಿ ಬಾದಲ್‌ಸರ್ಕಾರರು ಈಚೆಗೆ ಈ ಸಮಸ್ಯೆಗೆ 'ಮಿಚೆಲ್' ನಂತಹ ನಾಟಕಗಳ ಮೂಲಕ ಪರಿಹಾರ ಕಂಡುಕೊಳ್ಳಲು ಯತ್ನಿಸಿದ್ದಾರೆ. ಅದಕ್ಕೆ ತೀವ್ರತೆ ಇದೆ, ತುರ್ತಿದೆ, ಅನುಭವ-ತತ್ವಗಳೆರಡರ ನಾಟಕೀಯ ಸಂಘರ್ಷ ಇದೆ. ಆದರೆ, ಒಂದೇ ಒಂದು ಮುಜುಗರದ ಸಂಗತಿ ಇಡೀ ಪ್ರಯೋಗಗಳ ಟೋನ್, ವಾತಾವರಣ ಪರಕೀಯ ಎಂಬಂತೆ ಕಾಣುತ್ತದೆ. ನಮ್ಮಲ್ಲೂ ಬೀದಿ ನಾಟಕಗಳಲ್ಲಿ ಸ್ತುತ್ಯಾರ್ಹ ಕೆಲಸ ಮಾಡಿದೆಯಾದರೂ, ಅದು ಅಲ್ಪ ತೃಪ್ತಿಯದಾಗಿಬಿಟ್ಟಿದೆ. ನಾಟಕರೂಪದ ಬಗ್ಗೆ ಮೂಲಭೂತವಾಗಿ ಚಿಂತಿಸಿ ಹೊಸ ರೂಪಗಳನ್ನು ಬೀದಿನಾಟಕ ಹುಡುಕಬೇಕಾಗಿದೆ ಅಂತೂ ಈ ಬಗೆಯ ಗೊಂದಲದ, ದುರ್ಬಲತೆಯ ವಾತಾವರಣದಲ್ಲಿ ಇದ್ದೇವೆ. ಥಿಯೇಟರಿನ ದೀಪವಾರಿದಾಗ ಏನೂ ಮಹತ್ವದ್ದು ರಂಗದ ಮೇಲೆ ಘಟಿಸುವುದಿಲ್ಲ ಎಂದು ಗೊತ್ತಿದ್ದರೂ ತಳಮಳದಿಂದ ಕುರ್ಚಿಗೆ ಅಂಟಿಕೊಂಡು ಕೂರುತ್ತೇವೆ. ಈ ಎಲ್ಲ ಅತಿ ಪರಿಚಿತತೆಯ ಬೇಸರದ ಮಧ್ಯೆ ಒಂದು ಮಹತ್ವದ ರಂಗಭೂಮಿ ಹುಟ್ಟೀತು ಎಂಬ ಆಸೆಯಿಂದ. ನಮ್ಮ ಸಮಕಾಲೀನ ಅನುಭವ ಗಳನ್ನು ನಮಗೆ ಹೊಸದು ಎಂಬಂತೆ ಹೇಳಿ ಹೊಸ ಸತ್ಯಗಳನ್ನು ಅನುಭವಕ್ಕೆ ತರಬಲ್ಲ ನಾಟಕಪ್ರತಿಭೆಗೆ ಕಾಯುತ್ತ ಥಿಯೇಟರಿ ನಲ್ಲಿದ್ದೇವೆ. ಇನ್ನು ನಾಟಕ ಶುರುವಾಗಬೇಕಾಗಿದೆ.

ಕರ್ನಾಟಕ ಆದಿವಾಸಿ ಜನಪದ ಕಲೆಗಳು

ಡಾ. ಜೀ. ಶಂ. ಪರಮಶಿವಯ್ಯ

ಭಾರತ, 'ಆದಿವಾಸಿ' ಜನಾಂಗಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪಡೆದ ದೇಶವಾಗಿದೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ಏಳರಷ್ಟು ಆದಿವಾಸಿಗಳಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಪ್ರೋಟೊ ಆಸ್ಟ್ರಾಯಿಡ್, ಮಂಗೋಲಿಡ್, ನೆಗ್ರಿಟೊ ಮತ್ತು ನೊರ್ಡಿಕ್ ವರ್ಗಗಳಿಗೆ ಸೇರಿದ ಆದಿವಾಸಿ ಗುಂಪುಗಳನ್ನು ಇಲ್ಲಿ ಗುರ್ತಿಸಲಾಗಿದೆ. ಈಶಾನ್ಯ ಭಾರತ ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುವ ಆದಿವಾಸಿ ಜನಾಂಗಗಳು ತಮ್ಮ ವೈವಿಧ್ಯಮಯ ಸಂಸ್ಕೃತಿಯಿಂದ ವಿದ್ವಾಂಸರ ಆಸಕ್ತಿಯನ್ನು ಕೆರಳಿಸಿದ್ದರೂ ಸರಿಯಾದ ಅಧ್ಯಯನಗಳು ಇನ್ನೂ ಪ್ರಕಟವಾಗಬೇಕಾಗಿದೆ. ಆದಿವಾಸಿಗಳ ಅಧ್ಯಯನದಲ್ಲಿ, ಪರಿವೀಕ್ಷಣೆಯಲ್ಲಿ





ಕಾಡುಕುರುಬರ ದೇವರ ಆವಾಹನೆ

ಭಾರತೀಯ ಮಾನವಶಾಸ್ತ್ರೀಯ ಪರಿವೀಕ್ಷಣಾ ಸಂಸ್ಥೆ ಸಾಕಷ್ಟು ಒಳ್ಳೆಯ ಕೆಲಸ ಮಾಡುತ್ತಿದೆ. ಕರ್ನಾಟಕದ ಆದಿವಾಸಿಗಳ ಬಗ್ಗೆಯೂ ಇಲ್ಲಿನ ವಿಶ್ವವಿದ್ಯಾನಿಲಯುಗಳು ಹಾಗೂ ಮೇಲೆ ಉಲ್ಲೇಖಿಸಿದ ಪರಿವೀಕ್ಷಣಾ ಸಂಸ್ಥೆಗಳು ಕೆಲಸ ಮಾಡುತ್ತಿದ್ದರೂ ಆದಿವಾಸಿ ಸಂಸ್ಕೃತಿಗಳನ್ನು ಕುರಿತ ಅಧ್ಯಯನ ಇನ್ನೂ ಹೆಚ್ಚು ಮೈಗೂಡಿಕೊಂಡಿಲ್ಲ.

ಕರ್ನಾಟಕದಲ್ಲಿ ಸುಮಾರು 74293 ಚ. ಮೈ. ಗಳಷ್ಟು ಅರಣ್ಯ ಪ್ರದೇಶ ಇದ್ದು ಇಲ್ಲೆಲ್ಲ 26 ಬಗೆಯ ಆದಿವಾಸಿ ಜನಾಂಗಗಳು ಹಂಚಿಹೋಗಿವೆ. ಇವುಗಳಲ್ಲಿ ಆದಿವಾಸಿ ಸ್ಥಿತಿಯಿಂದ ಸುಧಾರಣೆಗೊಳ್ಳುತ್ತಿರುವ ಲಂಬಾಣಿಗಳು, ಕಾಡುಗೊಲ್ಲರು. ಹಾಲಕ್ಕಿಗೌಡರು ಮುಂತಾದ ಜನಾಂಗಗಳನ್ನು ಕಾಣಬಹುದು. ಇನ್ನೂ ಶುದ್ಧ ಆದಿವಾಸಿ ಸ್ಥಿತಿಯಲ್ಲೇ ಉಳಿದ ಜನಾಂಗಗಳನ್ನು ಇಲ್ಲಿ ಪಟ್ಟಿ ಮಾಡ ಬಹುದು. (1) ಬೆಟ್ಟಕುರುಬರು (2) ಜೇನುಕುರುಬರು (3) ಮುಳ್ಳುಕುರುಬರು (4) ಸೋಲಿಗರು (5) ಎರವರು (6) ಹಸಲರ (7) ಇರುಳರು (8) ಕೊರಗರು (9) ಮಲೆಕುಡಿಯರು (10) ಸಿದ್ಧಿಯರು (11) ಗೊಂಡರು (12) ಮುಂಡರು ಮುಂತಾದ ಕೆಲವು ಮುಖ್ಯ ಆದಿವಾಸಿಗಳನ್ನು ಹೆಸರಿಸಬಹುದು.

ಕರ್ನಾಟಕದಲ್ಲಿ ಆದಿವಾಸಿಗಳ ಜೊತೆಗೆ ಅನೇಕ ಬಗೆಯ ಅಲೆಮಾರಿ ಜನಾಂಗಗಳೂ ಕಂಡು ಬರುತ್ತವೆ. ಹಕ್ಕಿಪಿಕ್ಕಿಯರು, ಕಿಳ್ಳೇಕ್ಯಾತರು ಬುಡುಬುಡುಕೆಯರು, ದೊಂಬಿದಾಸರು, ಕಿನ್ನರಿಜೋಗಿಗಳು, ಮುಂತಾದವರನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಅರೆನಾಗರಿಕ ಜನಾಂಗಗಳ ಸಂಪರ್ಕವನ್ನು ಹೊಂದಿದ ಈ ಬುಡಕಟ್ಟುಗಳು ಒಂದು ಸ್ಥಿರವಾದ ಪ್ರದೇಶದಲ್ಲಿ ಉಳಿಯದಿದ್ದರೂ ತಮ್ಮದೇ ಕಸುಬುಗಳಿಂದ ರೈತವರ್ಗವನ್ನು ಅವಲಂಬಿಸಿ ಜೀವಿಸುತ್ತಾರೆ. ಬಯಲು ನಾಡಿನಲ್ಲಿ ಇವರು ಸಂಚರಿಸುವುದು ಹೆಚ್ಚಾಗಿ ಕಂಡುಬರುತ್ತದೆ.

ಕಾಡುಕುರುಬರನ್ನು ಬೆಟ್ಟಕುರುಬ. ಜೇನುಕುರುಬ ಎಂದು ಎರಡು ವರ್ಗಗಳಲ್ಲಿ ಗುರುತಿಸಲಾಗುತ್ತದೆ. ಈ ಎರಡು ಜನಾಂಗಗಳೂ

ವೃತ್ತಿಯಿಂದ ಬೇರೆಯಾಗಿದ್ದರೂ ನೆಲೆಸಿರುವ ಪ್ರದೇಶ ಒಂದೇ ಆಗಿದೆ. ಕೊಡಗಿನ ವೀರರಾಜಪೇಟೆ, ಸೋಮವಾರಪೇಟೆ ಮತ್ತು ಮಡಿಕೇರಿ ತಾಲ್ಲೂಕುಗಳಲ್ಲಿಯೂ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿಯೂ ಕಂಡುಬರುತ್ತಾರೆ. ಕಾಡುಕುರುಬರಲ್ಲಿ ಬೆಟ್ಟಕುರುಬರು ಬೇಟೆಯಲ್ಲಿ ನಿಪುಣರು. 'ಕೆತ್ತು ಬೇಸಾಯ 'ವನ್ನೂ ಅವಲಂಬಿಸಿದ್ದಾರೆ. ಬಿದಿರಿನ ಕೆಲಸವನ್ನು ಬಲ್ಲ ಜನಾಂಗವಿದು. ಕುಕ್ಕೆ, ಮೊರ ಮೊದಲಾದವನ್ನೂ ತಯಾರಿಸಿ ಮಾರಾಟ ಮಾಡುತ್ತಾರೆ. ಜೇನುಕುರುಬರು ಜೇನಿನ ಬೇಟೆಗೆ ಹೆಸರಾದವರು. ಬಾಣ ಮತ್ತು ಬಲೆಗಳಿಂದ ಬೇಟೆ ಮಾಡುವ ಕಲೆಯಲ್ಲಿ ಇವರ ನೈಪುಣ್ಯವನ್ನು ಸಾಧಿಸಿದ್ದಾರೆ. ಗೆಡ್ಡೆಗೆಣಸುಗಳನ್ನು ಕೀಳುವುದು, ಗಿಡಮೂಲಿಕೆಗಳನ್ನು ಸಂಗ್ರಹಿಸುವುದು ಇವರ ಕಸುಬು. ಜೇನುಕುರುಬರು ಬೆಂಕಿಯ ಪಕ್ಕದಲ್ಲಿ ಮಲಗುವ ಅಭ್ಯಾಸ ಮಾಡಿಕೊಂಡಿದ್ದಾರೆ. ಮಳೆಗಾಲ, ಚಳಿಗಾಲ ಬೇಸಿಗೆಯಕಾಲ ಎನ್ನದೆ ಈ ಬೆಂಕಿ ಇರಲೇಬೇಕು. ಕಾಡುಪ್ರಾಣಿಗಳನ್ನು ನಿವಾರಿಸಲು ಮತ್ತು ಚಳಿಗಾಲ, ಮಳೆಗಾಲದಲ್ಲಿ ಚಳಿಯ ಕೊರೆತದಿಂದ ಪಾರಾಗಲು ಈ ಬೆಂಕಿ ನೆರವಾಗುತ್ತದೆ. ಅಲ್ಲಲ್ಲಿ ಚದುರಿದ ' ಹಾಡಿ 'ಗಳಲ್ಲಿ ಸಣ್ಣಸಣ್ಣ ಗುಂಪುಗಳಲ್ಲಿ ವಾಸಿಸುತ್ತಾರೆ.

ಮೈಸೂರು ಜಿಲ್ಲೆಯ ಪ್ರಮುಖ ಆದಿವಾಸಿಗಳಲ್ಲಿ ಸೋಲಿಗರು ಪ್ರಧಾನವರ್ಗವಾಗಿ ಕಂಡುಬರುತ್ತಾರೆ. ಬಿಳಿಗಿರಿರಂಗನ ಬೆಟ್ಟದ ಶ್ರೇಣಿ ಮತ್ತು ಮಲೆಯ ಮಾದೇಶ್ವರ ಬೆಟ್ಟದ ಶ್ರೇಣಿಯಲ್ಲಿ ಹಾಗೂ ಕೊಡಗಿನ ಕೆಲವು ಭಾಗಗಳಲ್ಲಿ ಇವರು ಕಂಡುಬರುತ್ತಾರೆ. ಗಂಡಸರು, ಹೆಂಗಸರು ಉದ್ದವಾಗಿ ಕೂದಲನ್ನು ಬೆಳೆಸಿ ಹಿಂದಕ್ಕೆ ಗಂಟುಕಟ್ಟಿಕೊಳ್ಳುವರು. ಹಿಂದೆ ಎಲೆ ಮತ್ತು ಹುಲ್ಲಿನಿಂದಲೇ ತಮ್ಮ ಮೈಯನ್ನು ಇವರು ಮರೆಮಾಡಿಕೊಳ್ಳುತ್ತಿದ್ದರು. ಈಗ ಹೆಂಗಸರು ಭುಜದ ಮೇಲೆ ಗಂಟುಹಾಕಿದ ಬಣ್ಣದ ಬಟ್ಟೆಗಳನ್ನೋ ಸೀರೆಗಳನ್ನೋ ಉಡುತ್ತಾರೆ. ಗಂಡಸರು ತುಂಡಂಗಿ ಮತ್ತು ತುಂಡುಪಂಚೆಗಳನ್ನು ಧರಿಸುತ್ತಾರೆ. ಸಣ್ಣಸಣ್ಣ ಗುಂಪುಗಳಲ್ಲಿ ವಾಸಿಸುವ ಇವರು ಸದಾ ಬೆಂಕಿಯನ್ನು ಹಾಕಿಕೊಂಡಿರುತ್ತಾರೆ. ಮರದ ಮೇಲೆ ಅಟ್ಟಣೆಗಳನ್ನು ಕಟ್ಟಿ ತಮ್ಮ ಬೆಳೆಯನ್ನು ರಕ್ಷಿಸಿಕೊಳ್ಳುವ





ಹಾಲಕ್ಕಿ ಹೆಂಗಸು

ಇವರು ಅಲ್ಲಿಯೂ ಮಣ್ಣಿನ ಸಹಾಯದಿಂದ ಬೆಂಕಿಯನ್ನು ಹಾಕಿಕೊಂಡಿರುತ್ತಾರೆ. ಆನೆಗಳ, ಹುಲಿಗಳ ನಡುವೆಯೇ ಬದುಕುವ ಇವರು ಅವುಗಳಿಂದ ಪಾರಾಗುವ ತಂತ್ರಗಳನ್ನು ಬಹಳ ಚೆನ್ನಾಗಿ ತಿಳಿದವರು.

ಕರ್ನಾಟಕದ ಇತರ ಆದಿವಾಸಿ ಜನಾಂಗಗಳಲ್ಲಿ ಎರವರು, ಸಿದ್ದಿಯರು, ಗೊಂಡರು, ಕೊರಗರು, ಲಂಬಾಣಿಗಳು, ಹಸಲರು ಮತ್ತು ಕಾಡುಗೊಲ್ಲರು ಮುಖ್ಯರಾದವರು. ಎರವರು ಕೊಡಗಿನಲ್ಲಿ ಕಂಡುಬರುತ್ತಾರೆ. ವೀರರಾಜಪೇಟೆ ತಾಲ್ಲೂಕಿನಲ್ಲಿ ಇವರು ವಿಶೇಷವಾಗಿ ನೆಲೆಸಿದ್ದಾರೆ. ಇವರ ಎತ್ತರ ಸಾಧಾರಣವಾಗಿದ್ದು ಬಣ್ಣ ಎಣ್ಣೆಗೆಂಪು. ಗುಂಗುರು ಕೂದಲು ಇವರಲ್ಲಿಯೂ ಸಾಧಾರಣ.

ಎರವರು ಒಕ್ಕೀಯ ಬತ್ತದ ವ್ಯವಸಾಯಗಾರರು. ಆದರೆ ಅವರು ಬೇರೆಯವರಿಗಾಗಿ ದುಡಿಯುತ್ತಾರೆ. ಮೀನುಬೇಟೆ, ಪ್ರಾಣಿಬೇಟೆಗಳಲ್ಲಿ ನಿಪುಣರು. ಸಂಜೆಯಾಗುವುದರೊಳಗೆ ಊಟಮಾಡಿ ಮುಗಿಸುವ ಪದ್ಧತಿ. ಇವರು ದೀಪವನ್ನು ಬಳಸುವುದು ತೀರವಿರಳ.

ಉತ್ತರ ಕನ್ನಡ ಜಿಲ್ಲೆಯ 'ಸಿದ್ಧಿ' ಜನರು ಆಫ್ರಿಕಾ ಬುಡಕಟ್ಟಿಗೆ ಸೇರಿದವರು. 'ಸಿದಿ' ಅಥವಾ 'ಕಾಫಿರ್'ಗಳೆಂದರೆ ಕೂಲಿಕಾರರು, ಗುಲಾಮರು ಎಂಬ ಅರ್ಥದಲ್ಲಿ ಸರ್ ಹರ್ಬರ್ಟ್ ರಿಸ್ಲೆ ಇವರನ್ನು ಕರೆದದ್ದುಂಟು. ಅರಬರೂ, ಡಚ್ಚರೂ, ಪೋರ್ಚುಗೀಸರೂ ಇವರನ್ನು ಆಫ್ರಿಕಾದ ಮೊಸಾಂಬಿಕ್‌ನಿಂದ ಭಾರತಕ್ಕೆ ಕರೆತಂದರೆಂದು ಹೇಳಲಾಗುತ್ತದೆ. ಇವರು ಐನೂರು ವರ್ಷಗಳ ಹಿಂದೆ ಭಾರತಕ್ಕೆ ಬಂದಿರಬಹುದೆಂದು ಅಂದಾಜು ಮಾಡಲಾಗಿದೆ. ಸಿದ್ಧಿಯರು ಉತ್ತರ ಕನ್ನಡ ಜಿಲ್ಲೆಯ ಸೂಪಾ, ಯಲ್ಲಾಪುರ, ಸಿರ್ಸಿ, ಅಂಕೋಲಾ ಮುಂತಾದ ಕಡೆಗಳ ದಟ್ಟವಾದ ಅರಣ್ಯಪ್ರದೇಶಗಳಲ್ಲಿದ್ದಾರೆ. ಪೋರ್ಚುಗೀಸರ ಸೈನ್ಯದೊಡನೆ ಗೋವಾಕ್ಕೆ ಬಂದ ಇವರು ಅಲ್ಲಿಂದ ತಪ್ಪಿಸಿಕೊಂಡು ಬಂದು ಸ್ಥಳೀಯ ಹೆಂಗಸರನ್ನು ಮದುವೆಯಾದಂತೆ ತಿಳಿದುಬರುತ್ತದೆ.

ಇತರ ಆದಿವಾಸಿ ಜನಾಂಗಗಳಂತೆ ಬೇಟೆ, ಜೇನು ತೆಗೆಯುವುದು. ಕಾಡಿನ ಸಾಮಗ್ರಿಗಳನ್ನು ಸಂಗ್ರಹಿಸುವುದು, ವ್ಯವಸಾಯ ಮುಂತಾದ ಕಸುಬುಗಳನ್ನು ಅವಲಂಬಿಸಿರುವ ಈ ಜನ ತುಂಬಾ ಶಕ್ತಿಶಾಲಿಗಳು.

ಭಟ್ಕಳ ತಾಲ್ಲೂಕಿನಲ್ಲಿ ಕಂಡುಬರುವ ಗೊಂಡರು ಮಧ್ಯಭಾರತದಲ್ಲಿನ ಗೊಂಡರ ಮೂಲ ಜನಾಂಗವಾಗಿ ಇರಬಹುದೆಂದು ಊಹಿಸ ಲಾಗಿದೆ. ಹೊನ್ನಾವರ ಮತ್ತು ಕುಮಟಾ ತಾಲ್ಲೂಕುಗಳೆರಡರಲ್ಲೂ ವ್ಯಾಪಿಸಿದ್ದಾರೆ. ಇವರಲ್ಲಿ ಹೆಗ್ಗದ್ದೆ ಮತ್ತು ಕುಟ್ಟಮಕ್ಕಿಗೊಂಡರು ಎಂದು ಎರಡು ವಿಭಾಗ ಮಾಡಿಕೊಳ್ಳುವುದುಂಟು.

ಕೊರಗರು ದಕ್ಷಿಣ ಕನ್ನಡ ಜಿಲ್ಲೆಯ ಕೆಲವೆಡೆಗಳಲ್ಲಿ ಕಂಡುಬರುತ್ತಾರೆ. ಕೊರಗ ಭಾಷೆ ದ್ರಾವಿಡ ಭಾಷಾವರ್ಗದಲ್ಲಿ ಒಂದಾಗಿದೆ. ದಕ್ಷಿಣದ ಕೊರಗರ ಭಾಷೆಯೂ ಉತ್ತರ ದ್ರಾವಿಡ ಭಾಷಾವರ್ಗಕ್ಕೆ ಸೇರಿದುದು ಎಂಬ ಅಂಶ ಗಮನಾರ್ಹ. ಬಹಳ ಹಿಂದೆ ದಕ್ಷಿಣ ಕನ್ನಡಕ್ಕೆ ಇವರು ವಲಸೆ ಬಂದಿರಬೇಕೆಂದು ಊಹಿಸಲಾಗಿದೆ. ವೇಷಭೂಷಣಗಳಿಗೆ ಇವರು ಸೊಪ್ಪುಸದೆಗಳನ್ನು ಮಾತ್ರ ಬಳಸು ತ್ತಿದ್ದರು. ಪೇಟೆಯ ಜನ ಇವರನ್ನು ಕೀಳಾಗಿ ಭಾವಿಸುತ್ತಿದ್ದ ಕಾಲವೂ ಇತ್ತು. ಇವರು ಪೇಟೆಯ ಕಡೆ ಬಂದಾಗ ನೆಲದ ಮೇಲೆ ಉಗಿಯುವಂತಿರಲಿಲ್ಲ. ಇದಕ್ಕಾಗಿ ಕೊರಳಲ್ಲಿ ಒಂದು ಬಿದಿರ ಹಂಡೆಯನ್ನು ಕಟ್ಟಿಕೊಂಡಿರಬೇಕಾಗುತ್ತಿತ್ತು.

ಕೊರಗರು ಒಳ್ಳೆಯ ಕುಶಲಕರ್ಮಿಗಳು. ಬಿಳಲಿನ ಬುಟ್ಟಿ ಮುಂತಾದ ವಸ್ತುಗಳನ್ನು ತಯಾರಿಸುವುದರಲ್ಲಿ ತುಂಬ ನಿಪುಣರು.

ಮಲೆಕುಡಿಯರು ಕೊಡಗಿನ ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಹಾಗೂ ದಕ್ಷಿಣ ಕನ್ನಡದ ಪುತ್ತೂರು, ಕಾರ್ಕಳ, ಬೆಳ್ತಂಗಡಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ವಾಸಿಸುತ್ತಾರೆ. ಇವರ ಮೂಲದ ಬಗ್ಗೆ ಯಾವುದೇ ಮಾಹಿತಿ ಇದುವರೆಗೆ ಲಭ್ಯವಾಗಿಲ್ಲ. ತಾವು ಕೊಡಗಿನ ಮೂಲನಿವಾಸಿಗಳೆಂದು ಹೇಳಿಕೊಳ್ಳುತ್ತಾರೆ. ಗೋದಾವರಿ ಜಿಲ್ಲೆಯಿಂದ ವಲಸೆಬಂದು ಫಲವತ್ತಾದ ಪಶ್ಚಿಮ ಘಟ್ಟಗಳಲ್ಲಿ ನೆಲಸಿದರೆಂಬ ವಾದವೂ ಇದೆ.

ಉತ್ತರ ಕನ್ನಡ ಜಿಲ್ಲೆಯ ಮತ್ತೊಂದು ವಿಶಿಷ್ಟ ಆದಿವಾಸಿ ಜನಾಂಗವೇ ಹಾಲಕ್ಕಿಗೌಡರು. ಘಟ್ಟದ ಕೆಳಗಿನ ತಾಲ್ಲೂಕುಗಳಲ್ಲಿ ವಾಸಿಸುವ ಇವರು ಸಣ್ಣಸಣ್ಣ 'ಕೊಪ್ಪ'ಗಳನ್ನು ಕಟ್ಟಿಕೊಂಡು ಸಂಘಜೀವಿಗಳಾಗಿ ಜೀವಿಸುತ್ತಾರೆ. ಇವರ ನಿವಾಸಸ್ಥಾನ ನದಿಗಳ ದಂಡೆ, ಬೆಟ್ಟಪ್ರದೇಶದ ಇಳಿಜಾರುಗಳು. ವ್ಯವಸಾಯ ಪ್ರಧಾನವಾದ ಜನಾಂಗವಿದು. ಹೆಂಗಸರು ದಟ್ಟವಾದ ಬಣ್ಣಬಣ್ಣದ ಮಣಿಸರಗಳಿಂದ ತಮ್ಮ ಎದೆಯನ್ನು ಮುಚ್ಚಿಕೊಳ್ಳುವುದು ವಿಶೇಷವೆಂದೇ ಹೇಳಬೇಕು. ಹಾಲಕ್ಕಿಗೌಡರು ತಲೆಯ ಮುಂಡಾಸು, ಹೆಗಲಮೇಲೆ ಕಂಬಳಿ, ಹಾಗೂ ಕೌಪೀನಧಾರಿಗಳಾಗಿರುತ್ತಾರೆ. ಅಪಾರ ಜನಪದ ಸಾಹಿತ್ಯ ಕಲೆಗಳು ಇವರಲ್ಲಿ ಕಂಡುಬರುತ್ತವೆ.

ಮೇಲೆ ಪರಿಚಯಿಸಿದ ಆದಿವಾಸಿಗಳು ಒಂದು ನಿರ್ದಿಷ್ಟ ಭೌಗೋಳಿಕ ಪರಿಸರವನ್ನು ಆಶ್ರಯಿಸಿ ಬದುಕುವವರು. ಇವರ ಸಂಖ್ಯೆ ಪರಿಮಿತವಾದುದು. ಕರ್ನಾಟಕದ ಲಂಬಾಣಿಗರು ಮತ್ತು ಕಾಡುಗೊಲ್ಲರನ್ನು ಇವರ ಗುಂಪಿಗೆ ಸೇರಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಇವರು ವಿಸ್ತಾರವಾದ ಪ್ರದೇಶಗಳಲ್ಲಿ ಹರಡಿಕೊಂಡಿದ್ದಾರೆ. ಅಪಾರ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಗ್ರಾಮೀಣ ಪರಿಸರದ ಮುಂದುವರಿದ ಸ್ಥಿತಿಗತಿಗಳು ಇವರಲ್ಲಿಯೂ ಗೋಚರಿಸತೊಡಗಿವೆ. ಕಾಡುಗೊಲ್ಲರು ಆದಿವಾಸಿ ಸ್ಥಿತಿಯ ನಂಬಿಕೆ, ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಉಳಿಸಿಕೊಂಡು ಬಂದಿದ್ದರೂ ಅವರ ಜೀವನವಿಧಾನಗಳಲ್ಲಿ ಬದಲಾವಣೆಗಳು ಕಂಡುಬರುತ್ತಿವೆ. ಕರ್ನಾಟಕದ ಆದಿವಾಸಿಗಳ ಅಧ್ಯಯನ ಇನ್ನೂ ಕ್ರಮಬದ್ಧವಾಗಿ ನಡೆಯಬೇಕಾಗಿರುವಂತೆಯೇ ಅವರ ಜನಪದ ಕಲೆಗಳ ಅಧ್ಯಯನವೂ ನಡೆಯಬೇಕಾಗಿದೆ. ಮಾನವಶಾಸ್ತ್ರೀಯ ದೃಷ್ಟಿಯಿಂದ ನಡೆದಿರುವ ಅಧ್ಯಯನ ಜಾನಪದ ಸಂಬಂಧವಾದ ಮಾಹಿತಿಗಳನ್ನು ಹೆಚ್ಚಾಗಿ ಒದಗಿಸುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯ ಪ್ರಕೃತ ಲೇಖಕನ ನೇತೃತ್ವದಲ್ಲಿ ಕೈಗೊಂಡ ಕೆಲವು ಪರಿವೀಕ್ಷಣಾ ಕಾರ್ಯಗಳಲ್ಲಿ ಆದಿವಾಸಿಗಳ ಅಪೂರ್ವ ಜನಪದ ಕಲೆಗಳು ಬೆಳಕಿಗೆ ಬಂದಿವೆ. ಅವುಗಳ ಸಕ್ರಮ ಅಧ್ಯಯನ ಇನ್ನೂ ನಡೆಯಬೇಕಾಗಿದೆ.

ಕಾಡುಮೇಡುಗಳಲ್ಲಿ ವಾಸವಾಗಿ ಅಲೆಮಾರಿ ಜೀವನ ನಡೆಸುವ ಬುಡಕಟ್ಟುಗಳಿಗೆ ಜನಪದ ಕಲೆ ಮತ್ತು ಸಾಹಿತ್ಯವನ್ನು ಬೆಳೆಸಲು ಬೇಕಾಗುವ ಸಾಮಾಜಿಕ ಬದುಕು ಕಡಿಮೆ. ರಾತ್ರಿ ತಮ್ಮ ಹಾಡುಗಳನ್ನೋ ಕಥೆಗಳನ್ನೋ ಹೇಳಿಕೊಂಡರೆ ಸಾಮೂಹಿಕವಾಗಿ ಕಲೆತು ಕಲೆಗಳನ್ನು ಹಂಚಿಕೊಳ್ಳುವ ಸಂದರ್ಭಗಳು ವಿರಳವೆ. ತಮ್ಮ ಕುಲದೇವತೆಯ ಹಬ್ಬಗಳಲ್ಲಿ, ಮದುವೆ ಮೊದಲಾದ ವಿಶಿಷ್ಟ ಸಂದರ್ಭಗಳಲ್ಲಿ ಅವರು ಕಲೆತು ತಮ್ಮ ಕಲೆಗಳನ್ನು ಪ್ರದರ್ಶಿಸಬೇಕು. ಜನಪದ ಕಲೆ ಸಾಹಿತ್ಯ ಗ್ರಾಮಾಂತರ ಪ್ರದೇಶದಲ್ಲಿ ಹುಲುಸಾಗಿ ಕಂಡುಬರುವಂತೆ ಇವರಲ್ಲಿ ಕಂಡುಬರದಿರುವುದಕ್ಕೆ ಕಾಡಿನ ಗರ್ಭದಲ್ಲಿ ಅಂಡಲೆಯುವ ಇವರ ಜೀವನ ವಿಧಾನವೇ ಕಾರಣ ಎನ್ನಬಹುದು. ಆದರೂ ಕೆಲವು ವಿಶಿಷ್ಟ ಸ್ವರೂಪದ ಕಲೆಗಳು ಉಳಿದು ಬಂದಿವೆ.

ಸೋಲಿಗರು ತಮ್ಮ ಕ್ಯಾತೇದೇವರ ಹಬ್ಬದಲ್ಲಿ ನಡೆಸುವ ಧಾರ್ಮಿಕ ಕುಣಿತದಲ್ಲಿ 'ಗೋರುಕನ ಕುಣಿತ' ಮತ್ತು 'ಓಲಗದ ಕುಣಿತ' ಎಂಬ ಎರಡು ಬಗೆಗಳುಂಟು. 'ಗೋರುಕನಾತೊ ಗೋರುಕ' ಎಂದು ಹೇಳಿಕೊಂಡು ಕುಣಿಯುವ ಗೋರುಕನ ಕುಣಿತದಲ್ಲಿ ಕಂಸಾಳೆಯನ್ನು ಬಳಸುತ್ತಾರೆ. ಹದಿನೈದು ಅಥವಾ ಇಪ್ಪತ್ತು ಜನ ಭಾಗವಹಿಸುವ ಈ ಕುಣಿತದಲ್ಲಿ ಐದು ಆರು ಜನ ಕಂಸಾಳೆಯನ್ನು ನುಡಿಸಿಕೊಂಡು ಸುತ್ತಲೂ ಕುಣಿದರೆ. ಒಬ್ಬ ಕೋಡಂಗಿ ಮೈಗೆ ಸೊಪ್ಪು ಕಟ್ಟಿಕೊಂಡು, ಮಸಿ ಬಳಿದುಕೊಂಡು, ಕೈಯಲ್ಲಿ ಕೋಲು ಹಿಡಿದು ಅವರ ಮುಂದೆ ಕುಣಿಯುವನು. ಓಲಗದ ಕುಣಿತದಲ್ಲಿ ಕಂಸಾಳೆಗೆ ಬದಲಾಗಿ ಒಂದು ಓಲಗವನ್ನು ಬಳಸುವರು. ವಿವಿಧ ಗತ್ತುಗಳಲ್ಲಿ ಹಬ್ಬದ ರಾತ್ರಿ ತಮ್ಮ ದೇವರ ಪ್ರೀತ್ಯರ್ಥವಾಗಿ ಮಾಡುವ ಈ ಕುಣಿತ ರಾತ್ರಿಯೆಲ್ಲಾ ಸಾಗುತ್ತದೆ. ಹೆಂಗಸರ ಹಾಡುಗಳ ವೈವಿಧ್ಯವೂ ಇದರ ಜೊತೆಗೆ ಸೇರುತ್ತದೆ.

ಕೊಡಗಿನ ಭಾಗದಲ್ಲಿ ನೆಲೆಸಿರುವ ಸೋಲಿಗರು ಹುಣಸೂರಿನ ಯಶೋಧರಪುರದ ಸೋಲಿಗರು. ತಮ್ಮನ್ನು ದೇವಸೋಲಿಗರೆಂದು ಕರೆದುಕೊಳ್ಳುವರು. ಕೊಡಗಿನ ಸೋಲಿಗರಲ್ಲಿ ವಿಶಿಷ್ಟ ಹಾಡುಗಾರಿಕೆಯ ಮೇಳವೊಂದು ಕಂಡುಬರುತ್ತದೆ. ಗಿರುಗಡ್ಡಿ ಮೇಳವೆಂದು ಹೆಸರಾಗಿರುವ ಈ ಮೇಳದಲ್ಲಿ 'ಗಿರುಗಡ್ಡಿ' ಎಂಬ ಪಿಟೀಲು ರೀತಿಯ ವಾದ್ಯವನ್ನು, ಪಕ್ಕವಾದ್ಯಗಳಾಗಿ ತಾಳ ದಮ್ಮಡಿಗಳನ್ನೂ ಬಳಸಿ ನಾಲ್ಕು ಅಥವಾ ಐದು ಜನ ಕಲೆತು ಕತೆಗಳನ್ನು ಹಾಡುತ್ತಾರೆ. ಬಿಡಿಹಾಡುಗಳನ್ನೂ ಹೇಳುತ್ತಾರೆ. ಇದೊಂದು ಅಪೂರ್ವವಾದ ಮೇಳವೆಂದೇ ಹೇಳಬೇಕು.

ಹುಣಸೂರು ತಾಲ್ಲೂಕು ಯಶೋಧರಪುರದ ಸೋಲಿಗರು ಬಯಲುಸೀಮೆಯ ಜನರಂತೆ ತಮ್ಮದೇ ಆದ ಜನಪದ ಸಾಹಿತ್ಯ ಮತ್ತು ಕಲೆಯನ್ನು ಅಭಿವೃದ್ಧಿ ಮಾಡಿಕೊಂಡಿದ್ದಾರೆ. ಅವರ ಕೋಲಾಟವೊಂದು ವಿಶೇಷ ರೀತಿಯಲ್ಲಿ ಉಳಿದುಬಂದಿದೆ. ಇಲ್ಲಿ ಹಾಡು ಹೇಳುವವರು ಹೆಂಗಸರು, ಕೋಲುಕುಟ್ಟುತ್ತ ಕುಣಿಯುವವರು ಗಂಡಸರು. ಕೋಲಾಟದ ಗತ್ತುಗಳು, ಬಳುಕುಗಳು ಆದಿವಾಸಿ ಕಲೆಯ ವೈಶಿಷ್ಟ್ಯಗಳಾಗಿವೆ.

ಸೋಲಿಗರು ಮಲೆಯ ಮಾದೇಶ್ವರ ಮತ್ತು ಬಿಳಿಗಿರಿರಂಗನ ಸಂಬಂಧವನ್ನು ಗುರುತಿಸಿಕೊಳ್ಳುತ್ತಾರೆ. ಮಲೆಯ ಮಾದೇಶ್ವರ ಸೋಲಿಗರ ಹೆಣ್ಣು ಶಂಕಮ್ಮನಿಗೆ ಮಕ್ಕಳ ಫಲವನ್ನು ಕೊಟ್ಟವನು. ಅವರಲ್ಲಿ ಕಾರಯ್ಯ ಮುಖ್ಯನಾದವನು. ಮಾದೇಶ್ವರರ ಮುಖ್ಯ ಭಂಟನಾಗಿ ಕಾರಯ್ಯ ಉಳಿದಿದ್ದಾನೆ. ಬಿಳಿಗಿರಿ ರಂಗ ಸೋಲಿಗರ ಹೆಣ್ಣು ಕುಸುಮಾಲೆಯನ್ನು ಉಪಪತ್ನಿಯಾಗಿ ಸ್ವೀಕರಿಸಿದವನು. ಈ ಎರಡು ಪ್ರಮುಖ ಘಟನೆಗಳಿಗೆ ಸಂಬಂಧಪಟ್ಟ ಅನೇಕ ಹಾಡುಗಳು ಸೋಲಿಗರಲ್ಲಿ ಪ್ರಚಲಿತವಿವೆ.

ಕಾಡುಕುರುಬರಲ್ಲಿ ಕೋಲಾಟ ಪ್ರಮುಖವಾಗಿ ಕಂಡುಬರುತ್ತದೆ. ಸೊಪ್ಪು ಸೆದೆಯನ್ನು ಕಟ್ಟಿಕೊಂಡು, ಉದ್ದವಾದ ಕಾಡುಕೋಲುಗಳನ್ನು ಹಿಡಿದು ಕಾಡುಕುರುಬರು ಗೆಜ್ಜೆ ಕಟ್ಟಿ ಕುಣಿಯುತ್ತಾರೆ. ಇವರ ಹಾಡುಗಳ ವೈವಿಧ್ಯವೂ ಗಮನಾರ್ಹವಾದುದೇ.

ಕೊಡಗಿನ ಕಾಡುಕುರುಬರು ಆಚರಿಸುವ ಕುಂಡೆಹಬ್ಬದಲ್ಲಿ ಅನೇಕ ಬಗೆಯ ಕುಣಿತಗಳು ಕಂಡುಬರುತ್ತವೆ. ಇವರಲ್ಲಿ ಅಯ್ಯಪ್ಪ ಸ್ವಾಮಿಗೆ ಕುದುರೆ ಕಟ್ಟುವ ಸಂಪ್ರದಾಯ ಮುಖ್ಯವಾದುದು. ಬಿದಿರಿನಿಂದ ತಯಾರಿಸಿದ ಕುದುರೆಗೆ ಬಣ್ಣಬಣ್ಣದ ಬಟ್ಟೆಗಳಿಂದ ಅಲಂಕಾರ ಮಾಡಲಾಗುತ್ತದೆ. ಮಡಿಯುಲ್ಲಿದ್ದ ಇಬ್ಬರು ಯುವಕರು ಅದನ್ನು ಕಟ್ಟಿಕೊಂಡು ಅಯ್ಯಪ್ಪಸ್ವಾಮಿಯ ಗುಡಿಯ ಬಳಿ ಬರುತ್ತಾರೆ. ಇಲ್ಲಿ ವಾದ್ಯ ಮತ್ತು ತಾಳದ ಗತ್ತಿಗೆ ತಕ್ಕಂತೆ ಇವರು ಕುಣಿಯುತ್ತಾರೆ.

ಭದ್ರಕಾಳಿಯ ಹಬ್ಬದಲ್ಲಿ ಮನೆಮನೆಯ ಮುಂದೆ ಹೋಗಿ ಹಾಡಿ ಕುಣಿಯುವ ಸಂಪ್ರದಾಯವೊಂದುಂಟು. ಕುದುರೆ ಕುಣಿತವನ್ನು ಕಾಡುಕುರುಬರು ಮಾಡಿದರೆ, ಈ ಕಲೆಯನ್ನು ಜೇನುಕುರುಬರು ನಿರ್ವಹಿಸುತ್ತಾರೆ. ಸ್ತ್ರೀಯರಂತೆ ವೇಷಧರಿಸಿ ಪುರುಷರು ಮುಖಕ್ಕೆ ಬೂದಿ ಬಳಿದುಕೊಂಡು, ಒಂದು ಕೈಯಲ್ಲಿ ಕಾಡುಸೋರೆಬುರುಡೆ, ಇನ್ನೊಂದು ಕೈಯಲ್ಲಿ ಮಾರುದ್ದ ದೊಣ್ಣೆ ಹಿಡಿದುಕೊಂಡು ಗುಂಪು ಗುಂಪಾಗಿ ಮನೆಮನೆಗೆ ಹೋಗಿ 'ಕುಂಡೆ ಕುಂಡೆ' ಎಂದು ಅಶ್ಲೀಲ ಪದಗಳನ್ನು ಹಾಡುತ್ತಾ ಕುಣಿಯುತ್ತಾರೆ. ಇವರನ್ನು 'ಕಳಿ

ಕಟ್ಟಿಕೊಂಡವ'ರು ಎನ್ನಲಾಗುತ್ತದೆ. ಇವರು ಎಷ್ಟೆಲ್ಲಾ ರೀತಿಯಲ್ಲಿ ಅಶ್ಲೀಲವಾಗಿ ಜನರನ್ನು ಬೈದರೂ ಯಾರೂ ಆಕ್ಷೇಪಿಸುವುದಿಲ್ಲ. ಮೇಲಾಗಿ ಉಡುಗೊರೆಗಳನ್ನು ನೀಡಿ ಬೀಳ್ಕೊಡುತ್ತಾರೆ.

ಕೊಡಗಿನ ನಿವಾಸಿಗಳಾದ ಎರವರು ತಮ್ಮದೇ ಆದ ಜನಪದ ಕಲೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಇವರದು ಲೌಕಿಕ ಕುಣಿತ. ತಮ್ಮ ತಮ್ಮ ಹಟ್ಟಿಗಳಲ್ಲೇ ಶ್ರಮ ಪರಿಹಾರಾರ್ಥವಾಗಿ ಸಂಜೆಯ ಮೇಲೆ ಇವರು ಕುಣಿಯುಂತ್ತಾರೆ. ಬೆಂಕಿಯು ಸುತ್ತ ಕುಣಿಯುವ ಈ ನೃತ್ಯದಲ್ಲಿ ಸ್ತ್ರೀಯರೂ ಭಾಗವಹಿಸುವುದು ಒಂದು ವಿಶೇಷ. ಮದುವೆ ಉತ್ಸವಗಳಲ್ಲಿಯೂ ಈ ಕುಣಿತ ಉಂಟು. ದುಡಿ ವಾದ್ಯದ ಜೊತೆಗೆ 'ಚೀನಿ' ಎಂಬ ಊದುವಾದ್ಯವನ್ನು ಇವರು ಊದುತ್ತಾರೆ.

ಎರವರಲ್ಲಿ ಅವರ ಸಾಂಸ್ಕೃತಿಕ ವೀರರನ್ನು ಕುರಿತ ಮಹಾಕಾವ್ಯವೊಂದನ್ನು ಹಾಡುವ ಸಂಪ್ರದಾಯವಿದೆ. ಈ ಕಾವ್ಯವನ್ನು ದುಡಿಯ ಮೇಲೆ ಹಾಡಲಾಗುತ್ತದೆ. 'ಪಟ್ಪೋತಿ' ಎಂಬ ಈ ಹೆಸರಿನ ಕಾವ್ಯವನ್ನು ಆದಷ್ಟು ಬೇಗ ಸಂಗ್ರಹಿಸುವ ಅವಶ್ಯಕತೆಯೂ ಇದೆ. ಸಿದ್ಧಿಯರು ಜಾತಿ ಹಬ್ಬದಲ್ಲಿ 'ಪುಗಡಿ' ಕುಣಿತವನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಕೊಂಕಣಿ ಹಾಡೊಂದನ್ನು ಹಾಡಲಾಗುತ್ತದೆ. ಸಿದ್ಧಿ ಹೆಂಗಸರು ಎರಡು ಕೈಗಳಲ್ಲೂ ಬರಿಗೊಡವೊಂದನ್ನು ಹಿಡಿದುಕೊಂಡು ಅದರ ಬಾಯಿಗೆ 'ಫೂ' ಎಂದು ಊದುತ್ತ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ. ಕೆಲವು ಬಾರಿ ಕೊಡವಿಲ್ಲದೆಯೂ ಬರಿಗೈಯನ್ನು ಒನೆಯುತ್ತ ಕುಣಿಯುತ್ತಾರೆ. ಗಂಡಸರು ಗುಮ್ಮಟೆ ವಾದ್ಯದ ಗತ್ತನ್ನು ಒದಗಿಸುತ್ತಾರೆ.

ಸಿದ್ಧಿಯರ ಮತ್ತೊಂದು ಕುಣಿತ 'ಢಮಾಯಿ' ಕುಣಿತ. ಢಮಾಯಿ ಒಂದು ಚರ್ಮವಾದ್ಯ. ಎರಡರಿಂದ ಮೂರು ಅಡಿ ಉದ್ದವಿರುವ ಈ ವಾದ್ಯವನ್ನು ಗಂಡಸರು ಪದ ಹೇಳುತ್ತ ಬಡಿದರೆ ಹೆಂಗಸರು ತಾವೂ ಪದ ಹೇಳುತ್ತಾ ಕುಣಿಯುತ್ತಾರೆ. ಈ ಹಾಡುಗಳು ಕನ್ನಡ, ಕೊಂಕಣಿ, ಮರಾಠಿಯಲ್ಲಿ ಇರುತ್ತವೆ. ಬೆಳಗಿನವರೆಗೂ ಢಮಾಯಿ ಕುಣಿತ ನಡೆಯುತ್ತದೆ.

ಕ್ರಿಸ್‌ಮಸ್ ದಿನಗಳಲ್ಲಿ ಕ್ರೈಸ್ತ ಸಿದ್ಧಿಯರು ವಿಶಿಷ್ಟ ವೇಷಗಳಿಂದ ಕೂಡಿದ ನೃತ್ಯ ಮಾಡುತ್ತಾರೆ. ಮೊಹರಂ ಹಬ್ಬದಲ್ಲಿ ಮುಸ್ಲಿಂ ಸಿದ್ಧಿಯರು 'ಅಲಗುಂ' ಕುಣಿತ ಮಾಡುತ್ತಾರೆ. ಜೇಡಿಮಣ್ಣನ್ನು ಮೈಗೆ ಬಳಿದುಕೊಳ್ಳುತ್ತ ಸೊಂಟಕ್ಕೆ ಕಟ್ಟಿದ ಗಂಟೆ ಸರದೊಡನೆ ತಲೆಗೆ ಬಿದಿರ ದಬ್ಬೆ ಮತ್ತು ಹುಲ್ಲಿನ ಸಾಧನ ಧರಿಸಿ ಚಾಟಿಯಿಂದ ಹೊಡೆದುಕೊಳ್ಳುತ್ತ ಕುಣಿಯುವ ಈ ನೃತ್ಯ ರೋಮಾಂಚನಕಾರಿ.

ಕೊರಗರಲ್ಲಿಯೂ ಕುಣಿತ ಹಾಡುಗಳಿಗೇನೂ ಕಡಿಮೆಯಿಲ್ಲ. ನವರಾತ್ರಿಯ ದಿನಗಳಲ್ಲಿ ಇವರು ಗುಂಪಾಗಿ ಕುಣಿಯುತ್ತಾರೆ. ಹೆಂಗಸರು ಈ ಕುಣಿತದಲ್ಲಿ ಭಾಗವಹಿಸುವುದಿಲ್ಲ. ಹೆಂಗಸರ ವೇಷಧರಿಸಿದ ಗಂಡಸರು ವಿವಿಧ ಗತ್ತಿನಲ್ಲಿ ಕುಣಿಯುತ್ತಾರೆ. ಈ ಕುಣಿತಕ್ಕೆ ಹಿನ್ನೆಲೆಯಾಗಿ ಬಳಸುವ ವಾದ್ಯ ಕೊಳಲು. 'ಈರಣ್ಣ' ಎಂಬ ಚರ್ಮವಾದ್ಯವನ್ನೂ "ಕರಂಡೆ" ಎಂಬ ಇನ್ನೊಂದು ಬಗೆಯ ಡೋಲನ್ನೂ ಇವರು ಬಳಸುತ್ತಾರೆ. ಕೊಯ್ಲು ಆರಂಭವಾದಾಗ ಡೋಲನ್ನು ಬಡಿಯುತ್ತ, ಕುಣಿಯುತ್ತ ಊರಾಡಲು ಬರುತ್ತಾರೆ. ಆಗ ಇವರಿಗೆ ಸಾಕಷ್ಟು ದವಸ ಧಾನ್ಯ ಉಡುಗೊರೆಗಳು ಸಿಗುತ್ತವೆ. ಇವರ ವೇಷ ಹಿನ್ನೆಲೆಗೆ ತಕ್ಕಂತೆ ವಿಚಿತ್ರವಾಗಿರುತ್ತದೆ. ಮೈಕೈಗೆ ಮಸಿ ಬಳಿದುಕೊಂಡು, ಅಡಕೆಯ ಮಟ್ಟಾಳೆಗಳನ್ನು ತಲೆಗೆ ಧರಿಸಿ, ದುಡಿಯ ನಾದಕ್ಕೆ ಹೆಜ್ಜೆಹಾಕುತ್ತಾರೆ. ಕೆಲವೆಡೆ ತಾಸೆ ಮತ್ತು ತಂಬರೆಗಳನ್ನು ಬಳಸುವುದುಂಟು.

ಉತ್ತರ ಕನ್ನಡದ ಗೊಂಡರು ಅಪೂರ್ವ ನೃತ್ಯಕ್ಕೆ ಹೆಸರಾದವರು. ದಕ್ಷಿಣ ಕನ್ನಡಧ ನಾಗಮಂಡಲ ನೃತ್ಯವನ್ನು ಇವರ ನೃತ್ಯ ಹೋಲುತ್ತದೆ. ಮಂಡಲಕುಣಿತ ಎಂದು ಹೆಸರಾಗಿರುವ ಇದು ಮಂಡಲಪೂಜೆಯ ಸಂದರ್ಭದಲ್ಲಿ ನಡೆಯುತ್ತದೆ. ಢಕ್ಕೆ ವಾದ್ಯದ ಹಿನ್ನೆಲೆಯಲ್ಲಿ ಇವರ ಕುಣಿತ ಆಕರ್ಷಕವಾಗಿರುತ್ತದೆ.

ಗೊಂಡರಲ್ಲಿ ಸುಂದರವಾದ ಸುಗ್ಗಿಕುಣಿತವು ಉಂಟು. ಶಿವರಾತ್ರಿಯ ರಾತ್ರಿಯಲ್ಲಿ ಆರಂಭವಾಗುವ ಈ ನೃತ್ಯ ದೀಪದ ಸುತ್ತು ನಡೆಯುತ್ತದೆ. ಕುಣಿತದವರು ಕಚ್ಚೆ ಹಾಕಿ ತಲೆಗೆ ರುಮಾಲು ಸುತ್ತಿ ಪ್ರತಿಯೊಬ್ಬರೂ ಕೈಯಲ್ಲಿ ಢಕ್ಕೆ ಹಿಡಿದು ವೃತ್ತಾಕಾರವಾಗಿ ಕುಣಿಯುತ್ತಾರೆ. ಇವರ ಜೊತೆಗೆ ಇಬ್ಬರು ಹೋಳಿಕಾಮರು ಇರುತ್ತಾರೆ. ಉದ್ದವಾದ ಕುರಿಯ ನಿಲುವಂಗಿಯನ್ನು ಇವರು ಧರಿಸಿರುತ್ತಾರೆ. ಅದಕ್ಕೆ ಚಚ್ಚೌಕನಾದ ಬಿಳಿಯ ಬಟ್ಟೆಗಳು. ಮುಖಕ್ಕೆ ಕಪ್ಪುಬಟ್ಟೆಯ ಮುಖವಾಡ. ಮೂಗಿನ ಬಳಿ ಉದ್ದವಾದ ಇಳಿಬಿಟ್ಟ ವಸ್ತ್ರ. 'ಕಾಮುನಜಲ್ಲಿ' ಎಂಬ ಹೆಸರಿನ ಉದ್ದನೆಯ ಕತ್ತಿಯ ಆಕಾರದ ಕೋಲನ್ನು ಇವರು ಕುಣಿಯುತ್ತಾರೆ.

ಹಾಲಕ್ಕಿಗೌಡರ 'ಗುಮ್ಟೆಪೌಂಗು' ಒಂದಂ ಉತ್ತಮ ಜನಪದ ಕಲೆ. ಬಿಡಿ ಹಾಡುಗಳನ್ನು, ಕಥನಗೀತೆಗಳನ್ನೂ, ಹಾಡುತ್ತ ಆರೇಳು ಮಂದಿ ಗುಮಟೆ ಎಂಬ ಮಣ್ಣಿನ ವಾದ್ಯವನ್ನು ಬಡಿಯುತ್ತಾರೆ. ಇದು ಉದ್ದವಾದ ವಾದ್ಯ. ಒಂದು ಕಡೆ ಕಿರಿದಾದ ತೆರೆದ

ಬಾಯಿ. ಇನ್ನೊಂದು ಕಡೆ ಅಷ್ಟೇ ಕಿರಿದಾದ ಬಾಯಿಗೆ ಮುಚ್ಚಿದ ಒಂದು ಚರ್ಮ. ಗುಮಟೆ ಪದಗಳು ವೈವಿಧ್ಯಮಯವಾಗಿ ಕಂಡುಬರುತ್ತವೆ. ಹಾಲಕ್ಕಿ ಹೆಂಗಸರು ಒಳ್ಳೆಯ ಹಾಡುಗಾರ್ತಿಯರು, ಕಥೆಗಾರ್ತಿಯರು.

ಹಾಲಕ್ಕಿಗೌಡರ ಸುಗ್ಗಿಕುಣಿತ ಕರ್ನಾಟಕದ ಜಾನಪದ ಕಲೆಗಳಲ್ಲೆಲ್ಲ ತುಂಬಾ ಜನಪ್ರಿಯವಾದುದು. ಇದು ಅವರ ಕೋಲಾಟವೂ ಹೌದು. ಸುಗ್ಗಿಯಲ್ಲಿ 20–30 ಜನ ಜೊತೆಯಾಗಿ ಊರಾಡಹೊರಡುತ್ತಾರೆ. ಆಗ ಅಪೂರ್ವವಾದ ವೇಷಗಳನ್ನು ತಯಾರಿಸಿ ಕೊಳ್ಳುತ್ತಾರೆ. ಪೇಟ ಮತ್ತು ತುರಾಯಿ ಇವರ ಮುಖ್ಯವಾದ ತಲೆಯ ಆಭರಣಗಳು. ಇದನ್ನು ಬೆಂಡಿನಿಂದ ಗುಡಿಗಾರರು ತಯಾರಿಸಿಕೊಡುತ್ತಾರೆ. ಕಡ್ಡಿಗಳ ತುದಿಗೆ ಬಣ್ಣಬಣ್ಣದ ಹೂವಿನ ರಚನೆಗಳನ್ನು ಮಾಡಿಕೊಳ್ಳುತ್ತಾರೆ. ಇವುಗಳ ಮೇಲೆ ನವಿಲು, ಗಿಳಿ ಮುಂತಾದ ಪಕ್ಷಿಗಳನ್ನು ಕೆತ್ತುತ್ತಾರೆ. ಯಕ್ಷಗಾನದ ವೇಷದಂತೆ ರುಮಾಲಿನ ಮುಂದೆ ಸಿರಿಮುಂಡಿ ಕಟ್ಟುತ್ತಾರೆ. ಬಣ್ಣದ ವಸ್ತ್ರದಲ್ಲಿ ಕಾಸೆಯನ್ನು ಹಾಕಿ ಭುಜದಿಂದ ಕೆಂಪುವಸ್ತ್ರವನ್ನು ಇಳಿಬಿಟ್ಟಿರುತ್ತಾರೆ. ನಿಲುವಂಗಿಯ ಮೇಲೆ ನಡುಪಟ್ಟಿಯನ್ನು ಕಟ್ಟಿ ಎರಡು ಬಗೆಗಳಲ್ಲಿ ಅಲಂಕಾರವಾಗಿ ಬಿಟ್ಟಿರುತ್ತಾರೆ. ಕೈಯಲ್ಲಿ ಬಣ್ಣದ ಕರವಸ್ತ್ರ, ನವಿಲುಗರಿಗಳ ಕುಂಚ ಶೋಭಿಸುತ್ತವೆ. ಕೋಲಿನಿಂದ ಆಡಿದರೆ 'ಕೋಲುಕುಣಿತ', ಕುಂಚವನ್ನು ಹಿಡಿದು ಕುಣಿದರೆ 'ಕುಂಚಕುಣಿತ', 'ಕಮಿ' ಎಂಬ ಹಾಡುಗಳನ್ನು ಹಾಡುತ್ತ ಊರಾಡುತ್ತಾರೆ.

ಕರ್ನಾಟಕದ ಆದಿವಾಸಿಗಳಲ್ಲಿ ಅಪೂರ್ವ ನೃತ್ಯಗಳು ಇನ್ನೂ ಉಳಿದುಬಂದಿವೆ. ಕುಣಿತವಿಲ್ಲದ ಆದಿವಾಸಿ ಸಮಾಜವಿಲ್ಲ. ಹಾಡಿಲ್ಲದ, ಕಥೆಯಿಲ್ಲದ ಜನಾಂಗವಿಲ್ಲ. ಆದಿವಾಸಿ ಕಲೆಗಳನ್ನು ಅವುಗಳ ಬೇರೆ ಬೇರೆ ಪ್ರಕಾರಗಳಲ್ಲಿ ಗುರುತಿಸುವ ಕೆಲಸ ತುರ್ತಾಗಿ ನಡೆಯಬೇಕು. ಅವರ ಕುಣಿತಗಳಿಗೆ ಸರಿಯಾದ ರೂಪವನ್ನು ಕೊಟ್ಟು ರಾಷ್ಟ್ರೀಯ ಕಲೆಗಳೆಂದು ಪರಿಗಣಿಸಿ ಗೌರವಿಸಬೇಕು. ಅವುಗಳಿಗೆ ಪ್ರಚಾರ ಮತ್ತು ಪುರಸ್ಕಾರಗಳ ಅವಶ್ಯಕತೆ ತುಂಬಾ ಇದೆ. ಆದಿವಾಸಿ ಸಂಸ್ಕೃತಿಯನ್ನು ಜಾನಪದ ದೃಷ್ಟಿಯಿಂದ ಆಳವಾದ ಅಧ್ಯಯನಕ್ಕೆ ಒಳಗುಪಡಿಸುವ ಕಾಲ ಈಗ ಸನ್ನಿಹಿತವಾಗಿದೆ. ಬದಲಾಗುತ್ತಿರುವ ಈ ದಿನಗಳಲ್ಲಿ ಅಳಿದು ಹೋಗುತ್ತಿರುವ ಸಂಸ್ಕೃತಿಗಳನ್ನು ಅಭ್ಯಸಿಸಿ ದಾಖಲು ಮಾಡದೆ ಹೋದರೆ ಕಾಲಗರ್ಭದಲ್ಲಿ ಅವೆಲ್ಲ ಕರಗಿಹೋಗಂತ್ತವೆ. ಅದರ ನಷ್ಟ ಅಪರಿಮಿತವಾದುದು. ಈ ಬಗ್ಗೆ ತೀವ್ರಕ್ರಮಗಳನ್ನು ಕೈಗೊಳ್ಳದಿದ್ದರೆ ಆ ನಷ್ಟದ ಹೊಣೆಗಾರರು ನಾವೇ ಆಗುತ್ತೇವೆ.

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ ;
ಮತಿಯಿಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ.
ಓ, ಬನ್ನಿ, ಸೋದರರೆ, ವಿಶ್ವಪಥಕೆ !

— ಕುವೆಂಪು

ಮೈಸೂರು ಶೈಲಿಯ ಭರತನಾಟ್ಯ

ಆರ್. ಎಸ್. ನಂದಕುಮಾರ್

ಈ ಶೀರ್ಷಿಕೆಯಲ್ಲಿ ಅಡಕವಾಗಿರುವ ಮೂರು ಸಂಗತಿಗಳನ್ನು ಮೊದಲೇ ವಿಶ್ಲೇಷಿಸಿ ಹೇಳಿಬಿಡಬೇಕು : (ಅ) ನಾಟ್ಯವೆಂದರೆ ಭರತನಾಟ್ಯವೊಂದೇ, ಬೇರೊಂದಿಲ್ಲ. (ಆ) ಈಗ ಪ್ರಯೋಗದಲ್ಲಿರುವ ಭರತನಾಟ್ಯದ ಈ ಹೆಸರು ಬಂದಿರುವುದು ಭರತಮುನಿಯಿಂದ ; ಏಕೆಂದರೆ ಅದನ್ನು ನಿರೂಪಿಸಿ, ವರ್ಣಿಸಿರುವುದು ಅವನೇ. (ಇ) ಈ ಭರತನಾಟ್ಯವು ಕರ್ಣಾಟಕಕ್ಕೆ ತಮಿಳುನಾಡಿನಿಂದ ಬಂದ ಬಳುವಳಿ ; ಇದಕ್ಕಿಂತ ಮುಂಚೆಯಾಗಲಿ, ನಂತರವಾಗಲಿ ಮೈಸೂರಿನಲ್ಲಿ ಅಥವಾ ಕರ್ಣಾಟಕದಲ್ಲಿ ಪ್ರತ್ಯೇಕವಾದ ನಾಟ್ಯಶೈಲಿ ಇರಲಿಲ್ಲ.

—ಇದು ಜನಸಾಮಾನ್ಯರಲ್ಲಿ ಬೇರೂರಿರುವ ಭಾವನೆ.

ಈ ಮೂರು ಭಾವನೆಗಳೂ ತಪ್ಪು ; ಶಾಸ್ತ್ರೀಯ ಪರಂಪರೆಯ ದೃಷ್ಟಿಯಿಂದ ಈ ನೃತ್ಯ–ನೃತ್ತರೀತಿಗೆ ನಾಟ್ಯವೆಂಬ ಹೆಸರು ಉಚಿತವಲ್ಲ ; ಇದಕ್ಕೆ ಭರತಮುನಿಯು ಸಾಮಾನ್ಯ ಕಾರಣ ; 'ಭರತ'ವೆಂಬ ವಿಶೇಷಣಕ್ಕೆ ಹೆಚ್ಚು ಅನ್ವಿತವಾದ ಬೇರೆ ಕಾರಣಗಳೂ ಇವೆ ; ಇಂದಿನ ಭರತನಾಟ್ಯವು ಭರತಮುನಿಪ್ರಣೀತವಾದುದಲ್ಲ. ಕರ್ಣಾಟಕದಲ್ಲಿಯೂ, ವಿಶೇಷವಾಗಿ ಮೈಸೂರಿನ ರಾಜಾಸ್ಥಾನ–ದೇವಸ್ಥಾನಗಳಲ್ಲಿಯೂ, ಕಡೆಯ ಪಕ್ಷ ಮುನ್ನೂರೈವತ್ತು ವರ್ಷಗಳ ಅರ್ವಾಚೀನ ನೃತ್ಯಪರಂಪರೆಯೂ ಕಛೇರಿಪದ್ಧತಿಯೂ ರೂಢಿಸಿದ್ದವು ; ಅದು ಕಡೆಯಪಕ್ಷ ನೂರು ನೂರೈವತ್ತು ವರ್ಷಗಳಿಂದಲೂ ಪುನಃ ಪರಿಷ್ಕಾರ–ಆವಿಷ್ಕಾರಗಳನ್ನು ಪಡೆದು ಇಂದಿನ ಅವಸ್ಥೆಯನ್ನು ಮುಟ್ಟಿದೆ ; ಇದು ಬೇರೆ ಪ್ರಾಂತೀಯ ಭರತನಾಟ್ಯ ಶೈಲಿಗಳಿಗಿಂತ ಕೆಲವು ಭಾಗಗಳಲ್ಲಿ ಭಿನ್ನವಾಗಿದ್ದು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿದೆ. ಇದಕ್ಕೆ ಮೈಸೂರು ಶೈಲಿಯೆಂಬ ಹೆಸರು ಈಗ ರೂಢಿಸಿದೆ.

ಇದನ್ನು ಪ್ರತಿಪಾದಿಸುವುದು ಈ ಲೇಖನದ ಉದ್ದೇಶ.

ನಾಟ್ಯವೆಂಬುದು ಆಂಗಿಕ, ಆಹಾರ್ಯ, ವಾಚಿಕ ಮತ್ತು ಸಾತ್ವಿಕಗಳೆಂಬ ನಾಲ್ಕೂ ಅಭಿನಯಪ್ರಕಾರಗಳನ್ನು ಒಳಗೊಂಡು ರಸಪ್ರತೀತಿಯನ್ನುಂಟುಮಾಡುವ ಕಲೆ ; ಅವುಗಳಲ್ಲಿ ನೃತ್ತ, ನೃತ್ಯಗಳೂ ಸೇರಿಕೊಂಡಿರಬಹುದಾದ ಸಂಯುಕ್ತಕಲೆ ; ಅಭಿನಯವೆಂದರೆ ನಟ/ನರ್ತಕ/ನರ್ತಕಿಯು ಮಾಡಬೇಕಾದ ಕ್ರಿಯೆ : ಕಾವ್ಯದಲ್ಲಿ ಪ್ರತೀತವಾಗುವ ರಸದ ವಿಭಾವಾದಿಗಳು ನಟನನ್ನು ಆಶ್ರಯಿಸಿ, ಅವನಲ್ಲಿರುವ ಈ ರಸಸಂವಾದವನ್ನು ಸಾಮಾಜಿಕನಲ್ಲಿಯೂ ಓತಪ್ರೋತವಾಗಿ ಉಂಟು ಮಾಡಲು ಅವನು/ಅವಳು ಮಾಡಬೇಕಾದ ಕ್ರಿಯೆಯೇ ಅಭಿನಯ. ರಸಸಂವಾದವೆಂದರೆ ಕಲೆಗಾರ–ರಸಿಕ ಸಾಮಾಜಿಕರಿಬ್ಬರಲ್ಲಿಯೂ ಒಮ್ಮೆಗೇ ಎರಡು ದಿಕ್ಕುಗಳಲ್ಲಿಯೂ ಹರಿಯುವ ರಸಪ್ರವಾಹ, ಹೃದಯಸಂವಾದ. ಇಂತಹ ರಸವು ಲಲಿತಕಲೆಗಳು ಸೌಂದರ್ಯವನ್ನು ಉತ್ಪಾದಿಸುವ ಸಂದರ್ಭದಲ್ಲಿ ತನಗೆ ತಾನೇ ಸ್ಫುರಿಸಿ ಒದಗುತ್ತದೆ. ನಾಟ್ಯಕ್ಕೆ ಉದಾಹರಣೆಯೆಂದರೆ ಹಳೆಯ ಕಾಲದ ನಾಟಕ : ಮಾತು, ಅಭಿನಯ, ಹಾಡು, ವಾದ್ಯ, ಕುಣಿತ, ವೇಷಭೂಷಣಗಳು, ರಂಗಸಜ್ಜಿಕೆ, ಪ್ರಸಾಧನ, ಲೋಕಾನುಚರಿತ ವರ್ಣನ–ಇವುಗಳನ್ನು ಒಳಗೊಂಡಂತಹ ಸಮುಚ್ಚಯ ಕಲೆ. ಭರತನಾಟ್ಯದಲ್ಲಿ ಇವುಗಳಲ್ಲಿ ಹಲವು ಇದ್ದರೂ ಅದರ ಪ್ರಧಾನ ಅಭಿವ್ಯಕ್ತಿ ಸಾಧನವೆಂದರೆ ಕುಣಿತ ; ಅದರಲ್ಲಿ ಅಂಗ–ಪ್ರತ್ಯಂಗಗಳ ವಿಕ್ಷೇಪದಿಂದ ಹುಟ್ಟುವ ಆಕೃತಿನಿಷ್ಠ ಸೌಂದರ್ಯವೇ ಮುಖ್ಯ ಉದ್ದೇಶ. ಮುದ್ರೆ, ನಿಲುವು, ಭಂಗಿ ಮುಂತಾದವುಗಳು ಅದರಲ್ಲಿ ವಾಚಿಕಾಭಿನಯಕ್ಕೆ ಪೋಷಕವಾಗಿದ್ದರೂ ಅವು ಗೌಣ ; ಮಾತಿನ ಅರ್ಥವನ್ನು ಪ್ರತೀತಗೊಳಿಸಿ ಪೋಷಿಸುವುದಲ್ಲದೆ ಸೌಂದರ್ಯಾಕೃತಿಯ ಸಾಕ್ಷಾತ್ಕರಣವೂ ಇಲ್ಲಿ ಅವುಗಳಿಗೆ ಮುಖ್ಯ ಗುರಿ.

ಭರತಮುನಿಯು ನಾಟ್ಯಶಾಸ್ತ್ರದಲ್ಲಿ ನಿರೂಪಿಸಿರುವ ಅಂಗ-ಪ್ರತ್ಯಂಗಗಳ ವಿಕ್ಷೇಪವೂ ಇತರ ಸಾಮಾನ್ಯ ವರ್ಣನೆಗಳೂ ಭಾರತದಲ್ಲಿ ಪ್ರಚಲಿತವಾಗಿರುವ ಸಮಸ್ತ ದೃಶ್ಯಕಲೆ (ನಾಟಕ, ನೃತ್ಯ, ನೃತ್ತ)ಗಳಿಗೂ ಸಾದಾರಣವೂ ಸಾಮಾನ್ಯವೂ ಆಗಿರುವ ಆಧಾರ; ಭರತ ನಾಟ್ಯದಲ್ಲಿಯೂ ಅಂತೆಯೇ; ಅದೊಂದರಲ್ಲಿ ಮಾತ್ರವೇ ಪ್ರಯುಕ್ತವಾಗುವಂತಹ ವಿಷಯಗಳು ನಾಟ್ಯಶಾಸ್ತ್ರದಲ್ಲಿ 'ಇರದುದು-ಇದ್ದರೆ-ಅತ್ಯಲ್ಪ. ಭರತನಾಟ್ಯವೆಂಬ ಹೆಸರು ಈ ಕಲೆಗೆ ಬಂದಿದ್ದಾದರೂ ಕನ್ನಡಿಗರಿಂದ. ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರ ದಾಸರು ತಮ್ಮ 'ಆಡಿದನೋ ರಂಗ ಅದ್ಭುತದಿಂದಲಿ' ಎಂಬ ಒಂದು ಪದದಲ್ಲಿ ಈ ಹೆಸರನ್ನು ಮೊಟ್ಟಮೊದಲಿಗೆ (ಕ್ರಿ.ಶ. ಹದಿನಾರನೆಯ ಶತಮಾನ) ಬಳಸಿದ್ದಾರೆ. ಭರತ ಎಂಬುದು ನಾಟ್ಯಶಾಸ್ತ್ರದ ಕರ್ತೃವಿಗೂ ಹೆಸರು; ಅದರಲ್ಲಿ ವರ್ಣಿಸಿ, ವಿವರಿಸಿರುವ ಕಲೆಗೂ ಹೆಸರು, ಅದನ್ನು ಪ್ರಯೋಗಿಸುವ ಕಲೆಗಾರನಿಗೂ ಹೆಸರು; ಭಾವ-ರಾಗ-ತಾಳ ಎಂಬ ಮೂರು ಶಬ್ದಗಳ ಮೊದಲನೆಯ ಅಕ್ಷರಗಳಿಂದ ಸಂಯೋಜಿತವಾಗಿದ್ದು ಅವುಗಳನ್ನು ಯಥೋಚಿತವಾಗಿ ಪ್ರತೀತಗೊಳಿಸುವ ಕಲೆಗೂ ಹೆಸರೇ. ಆದುದರಿಂದ ಇಂದಿನ ಭರತನಾಟ್ಯಕ್ಕೂ ಭರತಮುನಿಗೂ ನೇರವಾದ, ಅಧಿಕವಾದ ಸಂಬಂಧವಿಲ್ಲ.

ಕರ್ನಾಟಕದಲ್ಲಿ ನೃತ್ಯಕಲೆಯ ಪ್ರಾಚೀನತೆಯನ್ನು ಕುರಿತು ಇಲ್ಲಿ ಬರೆಯುವುದಿಲ್ಲ; ನಾಟ್ಯಕಛೇರಿ ಪದ್ಧತಿಯೊಂದು ಸಾವಿರ ವರ್ಷಗಳಿಗಿಂತ ಹಿಂದಿನಿಂದ ರೂಢಿಸಿತ್ತು; ನಿರ್ದಿಷ್ಟಾಕೃತಿಯು ಹಂದರಲ್ಲಿ ಕಾಲ, ದೇಶ, ಜನಾಭಿರುಚಿ, ಕಲಾವಿದರ ಪ್ರತಿಭೆ, ಸಂಪ್ರದಾಯಗಳಿಗೆ ಅನುಸಾರವಾಗಿ ಸೂಕ್ಷ್ಮವಾದ, ನಿರಂತರವಾದ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತ ವಿಕಾಸಗೊಂಡಿತ್ತು. ಇದು ಭರತಮುನಿಯು ನಾಟ್ಯಪ್ರಯೋಗದ ಪೂರ್ವಸಿದ್ಧತೆ ಮತ್ತು ಪೂರ್ವರಂಗವಿಧಿಗಳನ್ನು ವರ್ಣಿಸಿರುವಂತೆಯೇ ಇದ್ದು ಪ್ರಬಂಧಸಾಮಗ್ರಿ ಮತ್ತು ಪ್ರಯೋಗತಂತ್ರಗಳಲ್ಲಿ ವೈಶಿಷ್ಟ್ಯವನ್ನು ಸಾಧಿಸಿತ್ತು. ಹೀಗೆ, ಮೇಳಕಾರರು ವೇದಿಕೆಯನ್ನು ಏರಿ ಪೂರ್ವರಂಗ ವಿಧಿಯಲ್ಲಿ ಹೇಳಿರುವ ಪ್ರತ್ಯಾಹಾರ, ಅವತರಣ, ಆರಂಭ, ಆಶ್ರಾವಣ, ವಕ್ತ್ರಪಾಣಿ, ಪರಿಘಟ್ಟನ, ಸಂಘೋಟನ, ಮಾರ್ಗ ಆಸಾರಿತ, ಆಸಾರಿತ, ಗೀತವಿಧಿ ಎಂಬ ಹತ್ತು ಕ್ರಿಯೆಗಳನ್ನು ಆಚರಿಸುತ್ತಿದ್ದರು. ಈ ಹಿಮ್ಮೇಳದಲ್ಲಿ ಗಾಯಕರು, ತಾಳಧಾರಿ (ನಟ್ಟುವ), ಕೊಳಲು ವಾದಕ, ನಾಲ್ಕು ಬಗೆಯ ಮೃದಂಗವಾದಕರು, ನಾಲ್ಕು ಬಗೆಯ ಆವುಜಕಾರರು, ಕಹಳೆಯನ್ನೂದುವವರು, ಉಪಾಂಗಕಾರರು, ಮುಂತಾದವರು ಇರುತ್ತಿದ್ದರು.

ಈ ಸಿದ್ಧತೆಗಳಾದ ನಂತರ ಮುಖ್ಯಗಾಯಕರು ಶ್ರುತಿಯನ್ನು, ತಾಳವನ್ನು, ಅದರ ಹಸ್ತಕರಣಗಳನ್ನು ತೋರಿಸುತ್ತಿದ್ದರು. ಆಮೇಲೆ ಎಲ್ಲ ವಾದಕರೂ ಗಾಯಕರೂ ಸೇರಿಕೊಂಡು ಉದ್ಘೋಷವನ್ನುಂಟುಮಾಡುವ ಮೇಳಪ್ರಾಪ್ತಿಯಲ್ಲಿ ತೊಡಗುತ್ತಿದ್ದರು. ನಂತರ ಸೂತ್ರಧಾರ ಅಥವಾ ಭಾರತಿಕನು ರಂಗದಮೇಲೆ ಬಂದು ಪುಷ್ಪಾಂಜಲಿಕ್ರಮವನ್ನು, ಅಂದಿನ ನೃತ್ಯಕಛೇರಿಯ ವಿವರಗಳನ್ನು ತಿಳಿಸುತ್ತಿದ್ದನು. ಇದೇ ಕಾಲದಲ್ಲಿ ತೆರೆಯ ಮರೆಯಲ್ಲಿ ಪೂರ್ವರಂಗದ ಅಂಗವಾಗಿ ದೇವತಾಪ್ರೀತ್ಯರ್ಥವಾದ, ಶಾಂತಿಪುಷ್ಟಿಕ್ರಮಗಳ ವಿಧಿಗಳು ಜರಗುತ್ತಿದ್ದವು. ಇದರ ಕೊನೆಯ ಅಂಗವಾಗಿ ದಶಾವತಾರಗಳ ಸ್ತಬ್ಧ ಭಂಗಿಗಳನ್ನು ತೋರಿಸಲಾಗುತ್ತಿತ್ತು. ಈ ವೇಳೆಯಲ್ಲಿ, ಸೂತ್ರಧಾರನ ಪ್ರಸ್ತಾವನೆಯು ಮುಗಿಯುವವರೆಗೆ ನರ್ತಕಿಯು ಸುಂದರವಾದ ಆಹಾರ್ಯದಿಂದೊಪ್ಪುತ್ತ ತೆರೆಯ ಹಿಂದೆ ಅಂದವಾದ ಭಂಗಿಯಲ್ಲಿ ನಿಂತಿರುತ್ತಿದ್ದಳು. ಸೂತ್ರಧಾರನ ನಿರ್ಗಮನದ ವೇಳೆಗೆ ಸರಿಯಾಗಿ ಮುಖರಿ ಎಂಬ ಮುಖ್ಯ ಮೃದಂಗಕಾರನು ಸ್ವಂತಸೃಷ್ಟಿಯ ಪ್ರೌಢಸೊಲ್ಲುಗಳನ್ನು ರಚಿಸಿ ನುಡಿಸುತ್ತಿದ್ದನು. ಇದಕ್ಕೆ ತತ್ಕಾವಧಾನವೆಂಬ ಹೆಸರಿತ್ತು. ಇದರೊಡನೆ ಬೇರೆ ಬೇರೆ ವಾದ್ಯಗಳು ತಮಗೆ ಉಚಿತವಾದ ನುಡಿಕಾರಗಳಿಂದ ಒಂದೊಂದಾಗಿ ಸೇರಿಕೊಳ್ಳುತ್ತಿದ್ದವು. ಈಗ ಮುಖ್ಯಗಾಯಕನು ಗೀತ ಅಥವಾ ಆಲಾಪವೊಂದನ್ನು ಪೀಠಿಕಾರೂಪದಲ್ಲಿ ಪ್ರಸ್ತುತಪಡಿಸಿ, ಎಲ್ಲ ವಾದ್ಯಗಳು ಸಂಭ್ರಮ ರಭಸರವದ ಪರಾಕಾಷ್ಠೆಯಲ್ಲಿರುವಾಗ ರಂಗದ ಮೊದಲನೆಯ ತೆರೆ ಏಳುತ್ತಿತ್ತು; ತೆಳುವಾದ, ಪಾರದರ್ಶಕವಾದ ಜವನಿಕೆಯ ಹಿಂದೆ, ಪಂಜಿನ ಸಾಲುಗಳ ನಡುವೆ, ಚಿತ್ರಾರ್ಪಿತ ಸುಂದರ ವಿಗ್ರಹದಂತೆ ನರ್ತಕಿಯು ತ್ರಿಭಂಗಿಯಲ್ಲಿ ನಿಂತಿರುತ್ತಿದ್ದಳು. ಗಾಯಕವಾದಕ ಸಂದೋಹವು ನಾದಸಂಭ್ರಮವನ್ನು ಮತ್ತೊಮ್ಮೆ ಪರಾಕಾಷ್ಠೆಗೊಳಿಸಿದ ಕ್ಷಣಕ್ಕೆ ಸರಿಯಾಗಿ ಈ ಜವನಿಕೆಯು ಸರಿಯುತ್ತಿತ್ತು.

ನರ್ತಕಿಯ ವೇಷಭೂಷಣಗಳು ಹೇಗಿರುತ್ತಿದ್ದವು ? ಈ ಒಂದು ಚಿತ್ರವನ್ನು ನೋಡಿ : ಹಸಿರವಟ್ಟೆಯ ಕಾಲುಗುಪ್ಪಸ. ರತ್ನಕೀಲಿಸಿದ ಪೊಂಬರಹದ ಕಾಸೆ, ತ್ರಿಸರವಿರಾಜಿತ ಮುತ್ತಿನ ಮೊಲೆಕಟ್ಟೆಸೆದುದಾ ನರ್ತಕಿಗೆ: ನವರತ್ನ ಮಯಮಪ್ಪ ಕಂಠವಿಭೂಷಣ, ರವಿಯ ಮುದ್ರಿಕೆ, ಸೊಡಗ, ರವೆಯುದ ಕಡಗ ಕಂಕಣ ಮಣಿಕಾಂಚಿಗಳ್ ಅವಳಂಗದೊಳೊಪ್ಪಿದವು-ಇಂತಹ ನರ್ತಕಿಯು ಮೊದಲು ಪುಷ್ಪಾಂಜಲಿಯನ್ನೆಸಗಿ ಕೊಡಲೇ ಕರ್ಣಾಟಕಕ್ಕೆ ವಿಶಿಷ್ಟ ನೃತ್ತಪ್ರಕಾರವಾದ ಧ್ವಾಡ ಪ್ರಬಂಧವನ್ನು ಎತ್ತಿಕೊಳ್ಳುತ್ತಿದ್ದಳು. ಆಮೇಲೆ ತಾಂಡವ; ಸುಂದರವಾದ ಅಡವುಗಳನ್ನು ಒಳಗೊಂಡ ನೇರಿ, ಉರುಪು, ಶಬ್ದಪ್ರಬಂಧ; ಆಮೇಲೆ ಲಾಸ್ಯ; ನಂತರ ವರು : ಇವರಲ್ಲಿ ತಿರುಪು (ಭ್ರಮರೀ). ಲಾಗ (ಉತ್ಪ್ಲವನ)ಗಳನ್ನು ಅಳವಡಿಸಲಾಗುತ್ತಿತ್ತು. ನಂತರ ಪೆಕ್ಕಣ, ಪೇರಣಿ, ಗೊಂಡಲಿ ಮತ್ತು ರಾಸ ನೃತ್ಯಗಳು ಜರುಗುತ್ತಿದ್ದವು. ಸಭೆಗಳಲ್ಲಿ ಪಂಡಿತರಿಗಿಂತ ಪಾಮರರು ಹೆಚ್ಚಾಗಿದ್ದಿದ್ದರೆ ಕರ್ಣಾಟಕದೇಶಕ್ಕೆ ವಿಶಿಷ್ಟವಾದ ಮಾತಂಗಿ, ಶಬರಿ, ಯೋಗಿನಿ ಮುಂತಾದ ದೇಶೀನೃತ್ಯಗಳನ್ನೂ ಆಡುತ್ತಿದ್ದರು. ಅನ್ಯಪ್ರಾಂತಗಳಿಂದ ಆಮದಾದ ಚಿಂದು, ಚಿಕ್ಕಡಿ, ಕೌಲು,

ಗಜಲು, ಭೈತು, ತುರಿಗೆ, ಆಂದೋಲಿತ ಮುಂತಾದ ಪ್ರಬಂಧಗಳನ್ನೂ ನರ್ತಿಸಲಾಗುತ್ತಿತ್ತು. ಹಲವು ವೇಳೆ ಸುಳಾದಿನೃತ್ಯಗಳನ್ನು ನಡೆಸಲಾಗುತ್ತಿತು. ನಾಟ್ಯಕಛೇರಿಯ ಮುಕ್ತಾಯವನ್ನು ಜಾಗಟೆ ಅಥವಾ ಕಹಳೆಯಿಂದ ಸೂಚಿಸಲಾಗುತ್ತಿತ್ತು.

ಮೈಸೂರಿನ ಒಡೆಯರ ರಾಜವಂಶದ ಕೃಪಾಶ್ರಯದಲ್ಲಿ ನಾಟ್ಯವು ಅತ್ಯುಚ್ಛ್ರಾಯಗೊಂಡಿತು. ರಾಜವಡೆಯರು, ಚಿಕದೇವರಾಯ ವಡೆಯರು, ಕಂಠೀರವ ನರಸಿಂಹರಾಜವಡೆಯರು, ಇಮ್ಮಡಿ ಕೃಷ್ಣರಾಜವಡೆಯರು, ಖಾಸಾ ಚಾಮರಾಜವಡೆಯರು, ಮುಮ್ಮಡಿ ಕೃಷ್ಣರಾಜರು, ಚಾಮರಾಜರು, ನಾಲ್ವಡಿ ಕೃಷ್ಣರಾಜರು, ಜಯಚಾಮರಾಜರು ಇವರೆಲ್ಲ ನಾಟ್ಯಕಲೆಗೆ ಅಮಿತ ಪ್ರೋತ್ಸಾಹವನ್ನು ನೀಡಿದವರು. ಚಿಕದೇವರಾಯರ ಮಂತ್ರಿ ತಿರುಮಲಾರ್ಯನು ಚಿಕದೇವರಾಯ ಸಪ್ತಪದಿ ಮತ್ತೆ ಗೀತಗೋಪಾಲಗಳೆಂಬ ಕನ್ನಡದ ಪ್ರಪ್ರಥಮ ಗೇಯ–ನೃತ್ಯ ನಾಟಕಗಳನ್ನು ರಚಿಸಿದ್ದಾನೆ. ಚಿಕದೇವರಾಯ ಚರಿತದಲ್ಲಿ, ಈ ದೊರೆಯ ಆಸ್ಥಾನದಲ್ಲಿ ಸಂಗೀತ ನೃತ್ಯಗಳು ಪಡೆದಿದ್ದ ಉತ್ಕರ್ಷವನ್ನು ಹೃದಯಂಗಮವಾಗಿ ವಿವರಿಸಿದ್ದಾನೆ. ಈ ವೇಳೆಗಾಗಲೇ ನೃತ್ಯಕಛೇರಿಯ ಸಂಪ್ರದಾಯವೂ ಅದರಲ್ಲಿ ಪೌಢಪ್ರಯೋಗತಂತ್ರ ಕೌಶಲಗಳೂ ನೆಲೆಗೊಂಡಿದ್ದವೆಂಬುದು ಸ್ಪಷ್ಟವಾಗುತ್ತದೆ. ಕಂಠೀರವ ನರಸಿಂಹರಾಜರ ಆಳ್ವಿಕೆಯಲ್ಲಿ ರಾಜಧಾನಿಯಾದ ಶ್ರೀರಂಗಪಟ್ಟಣದ ಒಂದು ಅಗ್ರಹಾರವೇ ನಾಟ್ಯಕಲಾವತಂಸರ ಬೀಡಾಗಿತ್ತು. ಅವರ ಆಸ್ಥಾನದಲ್ಲಿ ಮೇಳ ಪ್ರಾಪ್ತಿಯ ನಂತರ ಪುಷ್ಪಾಂಜಲಿ, ನರಸಿಂಹಸ್ತುತಿ, ಗೀತ, ಪ್ರಬಂಧ, ರಂಭೆ, ಊರ್ವಶಿಯರ ನಾಟ್ಯ, ಜಕ್ಕಿಣಿ, ರಾಜಕೀರಗಳನ್ನುಳ್ಳ ನೃತ್ಯಕಛೇರಿಯ ಪದ್ಧತಿಯು ಏರ್ಪಟ್ಟಿತ್ತು.

ಮುಮ್ಮಡಿ ಕೃಷ್ಣರಾಜರ ಆಳ್ವಿಕೆಯು ಭರತನಾಟ್ಯಕ್ಕೆ ಸ್ವರ್ಣಯುಗವಾಯಿತು. ರಾಜಧಾನಿಯು ಇವರ ಕಾಲದಲ್ಲಿ ಮೈಸೂರಿಗೇ ಪುನಃ ವರ್ಗವಾಯಿತು. ಅವರ ಆಸ್ಥಾನವು ದೂರದೇಶಗಳಿಂದ ಪ್ರೋತ್ಸಾಹ, ಮನ್ನಣೆಗಳನ್ನು ಕೋರಿ ಬಂದಿದ್ದ ಹಲವು ಪ್ರಖ್ಯಾತ ಕಲಾವಿದರಿಂದ ಶೋಭಿಸುತ್ತಿತ್ತು. ತಂಜಾವೂರು ಸೋದರಚತುಷ್ಟಯರಲ್ಲಿ ಜ್ಯೇಷ್ಠನಾದ ಚಿನ್ನಯ್ಯನು ಅವರ ಆಸ್ಥಾನದಲ್ಲಿ ನಟ್ಟುವನಾಗಿದ್ದು ಪ್ರಭುಸ್ತುತಿ, ಪ್ರಭು ಅಂಕಿತಗಳುಳ್ಳ ಕೃತಿ, ವರ್ಣ, ತಿಲ್ಲಾನ, ಜಾವಳಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಜಾವಳಿಗಳೆಲ್ಲವೂ (ಇಮ್ಮಡಿ) ಚಾಮರಾಜವಡೆಯರ ಅಂಕಿತದಲ್ಲಿವೆ.

ಈ ಕಾಲದಲ್ಲಿ ಮೈಸೂರು ರಾಜ್ಯದಲ್ಲೆಲ್ಲ ಹರಡಿಹೋಗಿದ್ದು ಅಜ್ಞಾತವಾಗಿ ಉಳಿದಿದ್ದ ಹಲವಾರು ಭರತನಾಟ್ಯ ಕೇಂದ್ರಗಳು ಬೆಳಕು, ಪುರಸ್ಕಾರ, ಪ್ರೋತ್ಸಾಹಗಳನ್ನು ಕಂಡವು. ಅವುಗಳಲ್ಲಿ ಶ್ರೀರಂಗಪಟ್ಟಣ, ಹೊಸೂರು, ಬಳ್ಳಾಪುರ, ಬೆಂಗಳೂರು, ತಿರುಮಕೂಡಲು, ಮೂಗೂರು, ಮಳವಳ್ಳಿ, ಹಲಸೂರು, ಹಾಸನ, ಚಿಕ್ಕನಾಯಕನಹಳ್ಳಿ, ಹೊಳೆನರಸೀಪುರ, ಕೋಲಾರ ಚಿಕ್ಕಜಾಜೂರು, ನಾಗಮಂಗಲ, ಮುಳಬಾಗಿಲು, ಕಡೂರು, ಪೂವಲ್ಪಾಡಿಗಳನ್ನು ಮುಖ್ಯವೆಂದು ಹೆಸರಿಸಬಹುದು. ಇಲ್ಲಿ ಪರಂಪರಾನುಗತವಾಗಿ ನ್ಯಾಟಕಲೆಯನ್ನು ಮೈಗೂಡಿಸಿಗೊಂಡಿದ್ದ ಜ್ಯೇಷ್ಠ–ಶ್ರೇಷ್ಠ ನಾಟ್ಯಾಚಾರ್ಯರು ಸ್ವಂತಪ್ರಯೋಗದಿಂದಲೂ ಶಿಷ್ಯಸಂಕುಲದಿಂದಲೂ ಭರತವಿದ್ಯೆಯ ದೀಪ್ತಿಯನ್ನು ಕಾಪಿಡುತ್ತಿದ್ದರು. ಇವರು ಮೈಸೂರು ಸಂಸ್ಥಾನದ ಅಥವಾ ಪಾಳೆಯ ಪಟ್ಟುಗಳ ರಾಜದಾಸಿಯರಾಗಿಯೋ, ಸ್ಥಳೀಯ ದೇವಸ್ಥಾನಗಳಲ್ಲಿ ದೇವದಾಸಿಯರಾಗಿಯೋ, ಶ್ರೀಮಂತರಲ್ಲಿ ಅಲಂಕಾರದಾಸಿ ಯರಾಗಿಯೋ. ಇರುತ್ತಿದ್ದವರು. ಚಿಂತಾಮಣಿಯ ಸಮೀಪದ ಪೂವಲ್ಪಾಡಿಯೊಂದರಲ್ಲೇ ಹದಿನೆಂಟು–ಹತ್ತೊಂಭೊತ್ತನೆಯ ಶತ ಮಾನಗಳಲ್ಲಿ ಇನ್ನೂರಕ್ಕೂ ಹೆಚ್ಚಿನ ನಾಟ್ಯವಿಶಾರದೆಯರಿದ್ದರು. ಮುಳುಬಾಗಿಲಿನ ದೇವಸ್ಥಾನವೊಂದರಲ್ಲಿಯೇ ಹದಿನಾಲ್ಕು ದೇವದಾಸಿಯರಿದ್ದರು.

ಮೈಸೂರಿನಲ್ಲಿಯೂ ಮೇಲೆ ಹೇಳಿದ ಇತರೆಡೆಗಳಲ್ಲಿಯೂ ಪ್ರಸಿದ್ಧರಾಗಿದ್ದ ಕೆಲವು ನಟ್ಟುವರನ್ನು ಹೆಸರಿಸಬಹುದು : ಮೂಗೂರು ಸುಬ್ಬಣ್ಣ, ಮೂಗೂರು ಅಮೃತಪ್ಪ, ಕವೀಶ್ವರಗಿರಿಯಪ್ಪ. ದಾಸಪ್ಪ, ಕಿಟ್ಟಣ್ಣಪ್ಪ. ಸುಬ್ಬರಾಯಪ್ಪ. ಆರಣಿ ಅಪ್ಪಯ್ಯ. ಕೋಲಾರದ ಕಿಟ್ಟಪ್ಪ, ಪುಟ್ಟಪ್ಪ, ಗುಂಡಪ್ಪ ; ಮಹಾವಿದ್ವಾಂಸರುಗಳಾಗಿದ್ದ ಕಾಶೀಗುರು, ಚಂದ್ರಶೇಖರ ಶಾಸ್ತ್ರಿ, ಗಿರಿಭಟ್ಟರ ತಮ್ಮಯ್ಯ, ಶೃಂಗೇರಿ ಸುಬ್ರಹ್ಮಣ್ಯಶಾಸ್ತ್ರಿ, ಪನಸೇಕರಿ ವೆಂಕಟಸುಬ್ಬಾಭಟ್ಟ ಮುಂತಾದವರು ನಾಟ್ಯಗುರುಗಳೂ ವಾಗ್ಗೇಯಕಾರರೂ ಆಗಿದ್ದು ನರ್ತಕಿಯರಿಗೆ ಹೊಸಹೊಸ ಜಾವಳಿಗಳನ್ನೂ ಶ್ಲೋಕಗಳನ್ನೂ ರಚಿಸಿಕೊಡುತ್ತಿದ್ದುದಲ್ಲದೆ ಅಭಿನಯ ಶಾಸ್ತ್ರ, ಅಲಂಕಾರ ಶಾಸ್ತ್ರ ಗಳನ್ನು ಭೋಧಿಸುತ್ತಿದ್ದರು.

ವಂಶಪರಂಪರೆಯಿಂದಲೂ ಗುರುಪರಂಪರೆಯಿಂದಲೂ ನಾಟ್ಯಕಲೆಯನ್ನು ಕಳೆದ ನೂರೈವತ್ತು ವರ್ಷಗಳಿಂದೀಚೆಗೆ ಬೆಳಗಿದ ನರ್ತಕಿ ಯರಲ್ಲಿ ಮುಖ್ಯರೆಂದರೆ ಮೂಗೂರು ಅಮೃತಮ್ಮ, ಕೊಯಮತ್ತೂರು ತಾಯಿ, ಬಳ್ಳಾಪುರದ ಭವಾನಿ, ಹಲಸೂರು ಮರಿಯಾ ಸಾನಿ, ಹಲಸೂರು ವೆಂಕಟಸುಂದರಾಸಾನಿ, ಕೋಲಾರದ ನಾಗರತ್ನಮ್ಮ. ಬೆಂಗಳೂರು ನಾಗರತ್ನಮ್ಮ, ವರಾಲು, ಮೂಗೂರು ಪುಟ್ಟಮ್ಮ, ಚಿಕ್ಕದೇವಮ್ಮ, ಹಾಸನದ ಸುಂದರಮ್ಮ. ಬೈರಕೂರು ವೆಂಕಟಲಕ್ಷಮ್ಮ, ಕೊಣನೂರು ದೇವಿಯಮ್ಮ. ರಮಾ ಮಣಿ, ತ್ರಿಪುರಸುಂದರಮ್ಮ, ಜೀಜಮ್ಮ, ನರಸೀಪುರದ ಜಯಮ್ಮ, ಚಿಕ್ಕಜಾಜೂರು ಮರಿಯಮ್ಮ, ಚಂದ್ರಮ್ಮ, ಹಾಸನದ

ಗೌರಮ್ಮ, ನಂಜನಗೂಡು ಜೀಜಮ್ಮ, ರಾಜಮ್ಮ, ರಂಗಮ್ಮ, ನಾಗರತ್ನಮ್ಮ, ಮೂಗೂರು ಪುಟ್ಟಮ್ಮ, ಮೂಗೂರು ಮುನಿಯಮ್ಮ, ಮೂಗೂರು ಚಿನ್ನಮ್ಮ, ಕೊರಮರ ದೇವೇರಿ ಮತ್ತು ಆಕೆಯ ಮಗಳು ಚಂದ್ರವದನ (ಆಕೆಯ ಮಗಳು) ವ್ಯಾಸಮ್ಮ, ಮಡಿಕೇರಿಯ ರಮಾಮಣಿ, ಮಡಿಕೇರಿಯ ಚಿನ್ನಮ್ಮ, ಮೈಸೂರು ಕುಂಬಾರಗೇರಿಯ ಪಾಪದ ಕುಟ್ಟಮ್ಮ, ಕಾಳಮ್ಮನಗುಡಿ ಬೀದಿಯ ಪಾಪಮ್ಮ, ದೇವಲಕೋಟೆಯ ರಾಜಮ್ಮ, ಮತ್ತು ನರಸಮ್ಮ. ಸೇರುಕಡ್ಡೆ ಸುಬ್ಬಮ್ಮ, ತಿರುಮಕೂಡಲು ಸುಂದರಮ್ಮ ಹಾಗೂ ಕೀರಿಸರಸ್ವತಿ, ಚಂದ್ರಮುಖಿ, ಮೀನಾಕ್ಷಿ. ಲಲಿತ. ಮೀನಮ್ಮ. ಚಿಕ್ಕ ಚೌಡಮ್ಮ. ಕಮಲ. ಮೈಸೂರಿನ ಅಕ್ಕಮ್ಮಣ್ಣಿ, ಶಿವರಾಮ ಪೇಟೆಯ ಸೀತಮ್ಮ, ನೀಲಮ್ಮ, ಕಮಲಮ್ಮ, ಮೂಗೂರು ತಾಯಕ್ಕ. ಹಳೇ ಅಗ್ರಹಾರದ ತಾಯಕ್ಕ. ಪುಟ್ಟಕ್ಕಮ್ಮ ಇತ್ಯಾದಿ, ಇತ್ಯಾದಿ.

ಇಲ್ಲಿ ವಿಶೇಷವಾಗಿ ಉಲ್ಲೇಖಿತವಾಗಬೇಕಾದುದು ನಾಟ್ಯಸರಸ್ವತಿ ಜೆಟ್ಟಿತಾಯಮ್ಮ. ಜೆಟ್ಟಿ ವೃತ್ತಿಯ ದಾಸಪ್ಪನ ಮಗಳು. ಈಕೆ. ಕಂಚನಟ್ಟುವ ಸುಬ್ಬರಾಯಪ್ಪನಲ್ಲಿ ನಾಟ್ಯವಿದ್ಯೆಯನ್ನು, ಶೃಂಗೇರಿ ಸುಬ್ರಹ್ಮಣ್ಯ ಶಾಸ್ತ್ರಿಯಲ್ಲಿ ಸಂಸ್ಕೃತ. ಅಲಂಕಾರಶಾಸ್ತ್ರ. ಅಭಿನಯ ಶಾಸ್ತ್ರಗಳನ್ನೂ ಕಲಿತು ಮಹಾಪ್ರತಿಭೆಯಿಂದ ಬಾಳಿ ಬೆಳಗಿದಳು; ಚಾಮರಾಜವಡೆಯರ ಹಾಗೂ ಕೃಷ್ಣರಾಜವಡೆಯರ ಆಸ್ಥಾನದಲ್ಲಿ ನಾಟ್ಯಚೂಡಾಮಣಿಯಾಗಿದ್ದ ಈಕೆಯಿಂದ ರಂಗಮ್ಮ. ನೀಲಮ್ಮ. ನಾಗರತ್ನಮ್ಮ. ಎಸ್. ಎನ್. ಸ್ವಾಮಿ ಮುಂತಾದವರು ಅಂತೇವಾಸಿಗಳಾಗಿದ್ದರು. ಜೆಟ್ಟಿತಾಯಮ್ಮನವರ ಶಿಷ್ಯರಲ್ಲಿ ಶ್ರೇಷ್ಠರೆಂದರೆ ಡಾ. ಕೆ. ವೆಂಕಟಲಕ್ಷ್ಮಮ್ಮನವರು. ಅವರು ಇಂದು ಮೈಸೂರು ಶೈಲಿಗೆ ಹೊಸ ಚೇತನವನ್ನೂ ಹೊಸ ಆಯಾಮವನ್ನೂ. ದೇಶಾದ್ಯಂತ ಪ್ರಸಾರ ಪ್ರಸಿದ್ಧಿಗಳನ್ನೂ ತಂದುಕೊಡುತ್ತಿರುವ ಪ್ರತಿಭಾವಂತ ಹಿರಿಯ ಕಲಾವಿದೆ. ಈ ಪರಂಪರೆಯಲ್ಲಿ ರಸಾಭಿನಯವು ಪುನರುಜ್ಜೀವನಗೊಂಡು ಮೈಸೂರು ಶೈಲಿಗೆ ಒಂದು ವೈಶಿಷ್ಟ್ಯವನ್ನೂ ಪೃಥಕ್ಕರಣವನ್ನೂ ಸಾಧಿಸಿಕೊಡುವಷ್ಟರ ಮಟ್ಟಿಗೆ ಬೆಳೆಯಿತು. ಮೈಸೂರು ಶೈಲಿಗೆ ನೃತ್ತಾಂಗದ ಶ್ರೇಷ್ಠತೆಯನ್ನು ತಂದುಕೊಟ್ಟ ಮೂಗೂರು ಮನೆತನವನ್ನು ಇಲ್ಲಿ ನೆನೆಯಬೇಕು. ದೇವದಾಸಿಯರ ಈ ಮನೆತನದಲ್ಲಿ ಅಡವು–ತೀರ್ಮಾನಗಳು ಪ್ರೌಢಿಮೆ, ಸೌಂದರ್ಯ, ವೈವಿಧ್ಯ. ಬಾಹುಳ್ಯಗಳ ಪರಾಕಾಷ್ಠೆಯನ್ನು ಮುಟ್ಟಿದವು. ಆಂಗಿಕಾಭಿನಯಕ್ಕೆ ಶಿಸ್ತಿನ, ಅಚ್ಚುಕಟ್ಟಿನ. ಶಾಸ್ತ್ರೀಯತೆಯ ಆಯಾಮವು ಇವರಿಂದಾಗಿ ದೊರೆತವು. ಈ ಪರಂಪರೆಯಲ್ಲಿ ಇತ್ತೀಚಿನ ಶ್ರೇಷ್ಠ ಕಲಾವಿದೆಯೆಂದರೆ ಮೂಗೂರು ಜೀಜಮ್ಮ. ದುರ್ದೈವದಿಂದ ಈ ಮನೆತನದ ಬೆಳಕು ಇತ್ತೀಚೆಗೆ ನಂದಿಹೋಯಿತು.

ಎರಡು ವಿಶೇಷ ಸಂಗತಿಗಳನ್ನಿಲ್ಲಿ ಉಲ್ಲೇಖಿಸಬಹುದು: ಹಿಂದಿನ ಕಾಲದಿಂದಲೂ ನಾಟ್ಯವಿದ್ಯಾವೃದ್ಧರ ಒಂದು ಸಮಿತಿಯು ಏರ್ಪಡುತ್ತಿತ್ತು. ಇದಕ್ಕೆ ಸಮಾಜವೆಂದು ಹೆಸರು. ಹದಿನಾಲ್ಕನೆಯ ಶತಮಾನದಷ್ಟು ಹಿಂದೆಯೇ ಜಾಯಸೇನಾಪತಿಯು ತನ್ನ ನೃತ್ತರತ್ನಾವಲಿಯಲ್ಲಿ ಇದನ್ನು ಹೇಳಿದ್ದಾನೆ. ಸಮಾಜವು ಗ್ರಾಮಪಂಚಾಯತಿಯ ಹಾಗೆ; ನಾಟ್ಯವಿದ್ಯೆಯನ್ನು ಅವಲಂಬಸಿದ ಜಾತಿವಂತರ, ವೃತ್ತಿವಂತರ ಹಾಗೂ ನಾಟ್ಯಕಲೆಯ ಆಗುಹೋಗುಗಳನ್ನೂ ಕ್ಷೇಮಾಭ್ಯುದಯಗಳನ್ನೂ ಅದು ನಿರ್ಣಯಿಸಿ, ತೀರ್ಮಾನಗಳನ್ನು ಕಾರ್ಯಶೀಲಗೊಳಿಸಿ, ಉಸ್ತುವಾರಿ ನೋಡಿಕೊಳ್ಳುತ್ತಿತ್ತು. ವಿದ್ಯೆಯ. ಅದರ ಶಿಕ್ಷಣದ, ಅಥವಾ ಜಾತಿಗೆ ಸಂಬಂಧಿಸಿದ, ಶೀಲಸಂಹಿತೆ–ಆಚಾರಸಂಹಿತೆಗಳಲ್ಲಿ ವಿವಾದಗಳೆದ್ದಾಗ, ಈ ಮತ್ತಿತರ ಪ್ರಶ್ನೆಗಳನ್ನು ಈ ಹಿರಿಯರು ಸಮಾವೇಶಗೊಂಡು. ಪಕ್ಷ ಪ್ರತಿಪಕ್ಷಗಳನ್ನೂ ಸಾಕ್ಷಿಗಳನ್ನೂ ವಿಚಾರಿಸಿ ಬಹುಮತದ ಅಥವಾ ಸಮಾಜದ 'ಯಜಮಾನ'ರ ತೀರ್ಮಾನವನ್ನು ಕೈಗೊಳ್ಳಲಾಗುತ್ತಿತ್ತು. ಈ ತೀರ್ಮಾನವೇ ಅಂತಿಮವಾಗಿರುತ್ತಿತ್ತು. ಇದರಲ್ಲಿ ಕುಲಕಸುಬಿನ ಹಿರಿಯರು ಮಾತ್ರವಲ್ಲದೆ ಅದನ್ನು ಚೆನ್ನಾಗಿ ಬಲ್ಲ, ಅಭಿನಯ. ಅಲಂಕಾರ ಮುಂತಾದ ಶಾಸ್ತ್ರಗಳಲ್ಲಿ ಪರಿಣತರಾಗಿ ಅವುಗಳನ್ನು ನಟ್ಟುವ–ನರ್ತಕಿಯರಿಗೆ. ಹೇಳಿಕೊಡುತ್ತಿದ್ದ. ಅವರಿಗಾಗಿ ಶ್ಲೋಕಗಳನ್ನು ಹಾಡುಗಳನ್ನೂ ಹೇಳಿಕೊಡುತ್ತಿದ್ದ ಬೇರೆ ಜಾತಿಯ ಪಂಡಿತರೂ, ವಿಶೇಷವಾಗಿ ಬ್ರಾಹ್ಮಣರೂ ಸೇರಿರುತ್ತಿದ್ದರು. ಸಮಾಜದ ಯಜಮಾನರೊ. ಸದಸ್ಯರೊ. ಕುಲದವರೊ, ಕಸುಬಿನವರೊ. ವಿವಾದದ ಇತ್ಯರ್ಥವನ್ನು ಬಯಸುವ ಬೇರೆಯವರೋ ಅದರ ಅಧಿವೇಶನವನ್ನು ಕರೆಯಬಹುದಾಗಿತ್ತು. ಇಂತಹ ಒಂದು ಸಮಾಜವು ಈ ಶತಮಾನದ ಮೊದಲನೆಯ ಪಾದದವರೆಗೂ ಮೈಸೂರಿನಲ್ಲಿ ಜೀವಂತವಾಗಿ. ಕ್ರಿಯಾಶೀಲವಾಗಿತ್ತೆನ್ನುವುದು ಸ್ವಾರಸ್ಯ ಸಂಗತಿ. ಉತ್ತರಭಾರತದಲ್ಲಿ ಕಲಾಯಾತ್ರೆಯನ್ನು ಕೈಗೊಂಡಿದ್ದ ಮೈಸೂರಿನ ಒಬ್ಬ ನರ್ತಕಿಯ ಅಭಿನಯವನ್ನು ಮೆಚ್ಚಿ ಬರೋಡದ ಮಹಾರಾಜರು ಆಕೆಯ ಕಾಲಿಗೆ ಬಂಗಾರದ ಪೆಂಡೇರವನ್ನು ಹಾಕಿಸಿ ಗೌರವಿಸಿದರಂತೆ. ಪ್ರವಾಸ ಮುಗಿಸಿಬಂದು ಆಕೆ ಅದನ್ನು ಧರಿಸಿಯೇ ನರ್ತಿಸಿದಳು; ಆಕೆಯ ಯೋಗ್ಯತೆಯನ್ನು ನಿರ್ಣಯಿಸಿ ಹೇಳಬೇಕಾದುದು ಸಮಾಜ, ಬರೋಡದ ಮಹಾರಾಜರಲ್ಲ; ಪೆಂಡೇರವನ್ನು ಮೈಸೂರಿನಲ್ಲಿ ಧರಿಸಿ ನರ್ತಿಸಲು ಆಕೆಗೆ ಯೋಗ್ಯತೆಯಿದೆಯೆ ಎಂಬುದನ್ನು ವಿಚಾರಿಸಿ ನಿರ್ಧರಿಸಿ ಸಮಾಜವೇ ಹೇಳಲಿ ಎಂದು ಒಬ್ಬರು ಮಾಡಿದ ಕೋರಿಕೆಯ ಮೇರೆಗೆ ಸಮಾಜವು ಸಮಾವೇಶಗೊಂಡು ಪುರಸ್ಕೃತೆಯ ನೃತ್ಯವನ್ನು ವೀಕ್ಷಿಸಿ. ಪರಿಷ್ಕರಿಸಿ ಆಕೆಯು ಅದಕ್ಕೆ ಅರ್ಹಳೆಂದು ತೀರ್ಪು ಕೊಟ್ಟಿತಂತೆ. ಇಂತಹ ಇನ್ನೊಂದು ಸಂಗತಿಯು ತಿರುಮಕೂಡಲು ಸುಂದರಮ್ಮನನ್ನು ಕುರಿತುದು. ಆಕೆಯ ಸಂಸ್ಕೃತಜ್ಞಾನ. ಶಾಸ್ತ್ರಪಾಂಡಿತ್ಯ, ಪ್ರಯೋಗಪರಿಣತಿ. ಅಭಿನಯಕೌಶಲ ಮುಂತಾದವುಗಳನ್ನು ಗಮನಿಸಿ ಮೆಚ್ಚಿಕೊಂಡ ಸಮಾಜವು ಆಕೆಯ ಯಜ್ಞೋಪವೀತಕ್ಕೆ ಪರಸ್ಪರವಾದ ಬಂಗಾರದ ಉತ್ತರೋಪವೀತವನ್ನು ಧರಿಸಬಹುದೆಂದು ತೀರ್ಮಾನ ಮಾಡಿ ಪುರಸ್ಕರಿಸಿತು.

ಮೈಸೂರು ಶೈಲಿಯ ಭರತನಾಟ್ಯವು ತನ್ನನ್ನು ಕಛೇರಿ ಪದ್ಧತಿ, ಪ್ರಯೋಗತಂತ್ರ ಎಂಬೆರಡು ರೀತಿಗಳಲ್ಲಿ ಪೃಥಕ್ಕರಿಸಿಕೊಂಡಿದೆ.

ನಟ್ಟುವನೂ ಹಿಮ್ಮೇಳದವರೂ ರಂಗಪ್ರವೇಶವನ್ನು ಮಾಡಿದ ಮೇಲೆ ನಟ್ಟುವನು ಮಂಗಳಶ್ಲೋಕವನ್ನೂ ನಂತರ ಕಂಚಿನ ತಾಳಗಳಲ್ಲಿ ಜತಿಗಳನ್ನು ನುಡಿಸಿಕೊಳ್ಳುತ್ತ ತತ್ತಕಾರವನ್ನೂ ಪ್ರಸ್ತುತಪಡಿಸುತ್ತಿದ್ದನು. ಇದರಲ್ಲಿ ಎಲ್ಲ ವಾದ್ಯಗಳು ಸೇರಿರುತ್ತಿದ್ದವು; ಅಪರೂಪವಾಗಿ ತಾಳಮೃದಂಗಗಳು ಮಾತ್ರ ಇರುತ್ತಿದ್ದುದೂ ಉಂಟು. ರಾಜಾಸ್ಥಾನದಲ್ಲಿ ನಾಟ್ಯಕಛೇರಿಯಾಗುವಾಗ ಇವರೆಲ್ಲರೂ ತಲೆಗೆ ಪಾಗನ್ನೂ ಮೈಯಲ್ಲಿ ಕಶೆಯ ನಿಲುವಂಗಿಯನ್ನೂ ಕಚ್ಚೆಪಂಚೆ ಅಥವಾ ಇಜಾರಗಳನ್ನು ಸೊಂಟದಲ್ಲಿ ನಡುಪಟ್ಟಿಯನ್ನೂ ಧರಿಸುತ್ತಿದ್ದರು. ಇವರು ರಂಗದಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಅವರು ನರ್ತಕಿಯ ಹಿಂದುಗಡೆಗೆ ಎಡಬಲಭಾಗಗಳ ನಿರ್ದಿಷ್ಟ ಸ್ಥಾನಗಳಲ್ಲಿ ತಮ್ಮ ತಮ್ಮ ವಾದ್ಯಗಳ ಸಮೇತವಾಗಿ ನಿಂತುಕೊಂಡು ಆಕೆಯ ಚಲನೆಗೆ ಅನುಸಾರವಾಗಿ ತಾವೂ ಅಲ್ಪವಾಗಿ ಹಿಂದು ಮುಂದಕ್ಕೆ ಚಲಿಸುತ್ತಿದ್ದರು. ಮೃದಂಗವಾದಕರು ತಮ್ಮ ವಾದ್ಯವನ್ನು ಹೆಗಲುಪಟ್ಟಿಯಿಂದ ಸೊಂಟದ ಮಟ್ಟಕ್ಕೆ ನೇತುಹಾಕಿ ಕೊಳ್ಳುತ್ತಿದ್ದರು. ಎರಡೂ ಪಕ್ಕಗಳಲ್ಲಿ ಪಂಜಿನವರು ಉರಿಯುವ ಪಂಜುಗಳನ್ನು ಹಿಡಿದು, ಆಗಾಗ ರಾಳವನ್ನು ಸಿಂಪಡಿಸುತ್ತ ನರ್ತಕಿಯ ಚಲನವಲನಗಳಿಗೆ ಅನುಗುಣವಾಗಿ ಚಲಿಸುತ್ತಿದ್ದರು. ಕೆಲವು ಕಾಲದ ನಂತರ, ಎತ್ತರವಾದ ದೀಪಸ್ತಂಭಗಳನ್ನು ನಿಯತ ಸ್ಥಾನಗಳಲ್ಲಿಟ್ಟು ದೊಡ್ಡ ದೊಡ್ಡ ಬತ್ತಿಗಳನ್ನು ಉರಿಸಲಾಗುತ್ತಿತ್ತು. ನಾಲ್ವಡಿ ಕೃಷ್ಣರಾಜರ ಆಸ್ಥಾನದಲ್ಲಿ ವಿದ್ಯುದ್ದೀಪಗಳು ಬಂದ ಮೇಲೆ ಪಂಜಿನವರ ಕರ್ತವ್ಯವು ಮೊದಲು ಔಪಚಾರಿಕವಾಗಿ ಕಾಲಕ್ರಮದಲ್ಲಿ ನಿಂತುಹೋಯಿತು.

ತತ್ತಕಾರವಾದ ಮೇಲೆ ಗಣೇಶ ವಂದನೆಯನ್ನು ಇದೇ ಮೇಳವು ಸೇರಿ ಮಾಡುತ್ತಿತ್ತು. ಜೆಟ್ಟಿತಾಯಮ್ಮನವರು ಈ ಭಾಗ ದಲ್ಲಿ ಮೈಸೂರು ವಾಸುದೇವಾಚಾರ್ಯರು ರಚಿಸಿಕೊಟ್ಟ ವಾಮನಸ್ತುತಿಯನ್ನೂ ತಮ್ಮ ಕುಲದೈವವಾದ ಹಯಗ್ರೀವರ ಸ್ತುತಿ ಯನ್ನೂ ಸೇರಿಸುತ್ತಿದ್ದರು. ಈ ಪಾತ್ರದ (ನರ್ತಕಿಯ) ಪ್ರವೇಶವಾಗುತ್ತಿತ್ತು. ಆಕೆ ರಂಗವನ್ನು ಬಳಸಿ ಬಂದು ರಂಗಭೂಮಿ, ಸಭಾಪತಿ, ಮತ್ತು ಸಭ್ಯರಿಗೆ ವಂದಿಸಿ ನಟ್ಟುವ ತಾಳಧಾರಿ, ಮೃದಂಗವಾದಕ ನಂತರ ವಾದಕರು ಈ ಕ್ರಮದಲ್ಲಿ ಬಲವಂದು ನಮಸ್ಕರಿಸಿ ರಂಗ ಮಧ್ಯದಲ್ಲಿ ತಟ್ಟು ಮುಗಿದು ಉಚಿತವೂ ಮನೋಹರವಾದ ಸ್ಥಾನಕದಲ್ಲಿ ನಿಲ್ಲುತ್ತಿದ್ದಳು. ಈಗ ರಂಗಾಧಿದೇವತೆಯ ಸ್ತುತಿಯೂ ನಂತರ ಪ್ರಭುಸ್ತುತಿಯನ್ನೊಳಗೊಂಡ ಚೂರ್ಣಿಕೆಯೂ ನಡೆಯುತ್ತಿದ್ದವು. ಇವುಗಳಿಗೆ ಹಸ್ತಗಳು, ಶಿರಸ್ಸು, ಗ್ರೀವಾ, ದೃಷ್ಟಿ- ಇಷ್ಟರ ಅಭಿನಯವು ಮಾತ್ರ ಯಥೋಚಿತವಾಗಿ, ಅಲ್ಪಪ್ರಮಾಣದಲ್ಲಿ ಏರ್ಪಡುತ್ತಿತ್ತು. ಮೈಸೂರು ಶೈಲಿಗೆ ಚೂರ್ಣಿಕೆಯ ಪ್ರದೇಶವು ಜೆಟ್ಟಿತಾಯಮ್ಮನವರಿಂದ ಆಯಿತೆಂದು ಸಾಮಾನ್ಯವಾಗಿ ಭಾವನೆಯಿದೆ. ಆದರೆ ಅವರು ಹುಟ್ಟುವುದಕ್ಕಿಂತ ಮುಂಚಿನಿಂದಲೂ ಮೈಸೂರು ಆಸ್ಥಾನದಲ್ಲಿ ಚೂರ್ಣಿಕೆಯು ಪ್ರಯುಕ್ತವಾಗುತ್ತಿತ್ತೆಂದು ತಿಳಿದುಬರುತ್ತದೆ.

ನಂತರ ಪುಷ್ಪಾಂಜಲಿಯು ನೆರವೇರುತ್ತಿತ್ತು. ಇದು ಅಲಪ್ಪುವಿಗೆ ಪರಸ್ಪರವಾದ ಪ್ರಬಂಧ; ಇಂತಿಂತಹ ಹೂಗಳೇ ಪುಷ್ಪಾಂಜಲಿಗೆ ಯೋಗ್ಯವೆಂಬ ವಿಧಿಯಿರುತ್ತಿತ್ತು. ಈ ಭಾಗದಲ್ಲಿ ತಾಳವಾದನವು ಹಿಂದೆ ಇರುತ್ತಿರಲಿಲ್ಲ; ಮೈಸೂರು ಶೈಲಿಯು ಇದನ್ನು ಸೇರಿಸಿ ಕೊಂಡಿತು. ನಂತರ ಜತಿಸ್ವರ, ವರ್ಣ, ಶಬ್ದ, ಕೌತ, ತಿಲ್ಲಾನ ಇತ್ಯಾದಿ ನೃತ್ತಪ್ರಧಾನವಾದ ಪ್ರಬಂಧಗಳಿರುತ್ತಿದ್ದವು. ಉತ್ತರಾರ್ಧದಲ್ಲಿ ರಸಾಭಿನಯವೇ ಪ್ರಧಾನವಾದ ಅಂಶ; ಇದೇ ಮೈಸೂರು ಶೈಲಿಗೆ ಕಿರೀಟಪ್ರಾಯವಾದುದು. ಇದರಲ್ಲಿ ಪದ, ಜಾವಳಿ, ಅಷ್ಟಪದಿ ಗಳಿಗೆ ಅಭಿನಯವು ನಡೆಯುತ್ತಿತು; ನಂತರ ಶ್ಲೋಕಪಂಚಕಕ್ಕೆ ಅಭಿನಯಶ್ಲೋಕಗಳನ್ನು ಕೃಷ್ಣಕರ್ಣಾಮೃತ, ರಾಮಕರ್ಣಾಮೃತ, ಅಮರು, ಮುಕುಂದಮಾಲಾ, ಭರ್ತೃಹರಿಯ ಶೃಂಗಾರಶತಕ ಮುಂತಾದವುಗಳಿಂದಲೂ ಬಿಡಿಯ ಮುಕ್ತಕಗಳಿಂದಲೂ ಆಯ್ಕೆ ಮಾಡಲಾಗುತ್ತಿತ್ತು; ಒಮ್ಮೊಮ್ಮೆ ವಿದ್ವಾಂಸರು, ವಾಗ್ಗೇಯಕಾರರು ತಮ್ಮದೇ ಶ್ಲೋಕಗಳನ್ನು ನಿರ್ಮಿಸಿಕೊಡುತ್ತಿದ್ದುದೂ ಉಂಟು. ಇದಾದ ಮೇಲೆ ದಶಾವತಾರದ ಅಭಿನಯ; ಕಛೇರಿಯು ಮಂಗಳದಿಂದ ಮುಕ್ತಾಯಗೊಳ್ಳುತ್ತಿತ್ತು.

ಮೈಸೂರು ಶೈಲಿಯ ಭರತನಾಟ್ಯವನ್ನು ಪುನರುಜ್ಜೀವಿಸುವ ಪ್ರಯತ್ನವು ಕರ್ಣಾಟಕದಲ್ಲಿ ಈಗೀಗ ನಡೆಯುತ್ತಿರುವುದು ಶ್ಲಾಘನೀಯ ವಾಗಿದೆ. ಬೆಂಗಳೂರಿನಲ್ಲಿ ಈ ಶೈಲಿಯ ಕಾರ್ಯಾಗಾರವನ್ನು ಕೇಂದ್ರ ಸಂಗೀತ ನಾಟಕ ಅಕಾಡೆಮಿಯೂ ನೂಪುರ ಸಂಸ್ಥೆಯೂ ಏರ್ಪಡಿಸಿವೆ. ಕರ್ಣಾಟಕ ಸಂಗೀತ ನೃತ್ಯ ಅಕಾಡೆಮಿಯ ಮೈಸೂರು ಪ್ರಾದೇಶಿಕ ಸಂಶೋಧನ ಮತ್ತು ಅಭಿವೃದ್ಧಿ ಕೇಂದ್ರವು ಈಗ ಸುದೀರ್ಘವಾದ ಕಮ್ಮಟವನ್ನು ಅದಕ್ಕೆ ಸೇರಿದಂತೆ ವಿಶೇಷೋಪನ್ಯಾಸ–ಪ್ರಾತ್ಯಕ್ಷಿಕೆಗಳ ಮಾಲೆಯನ್ನು ಏರ್ಪಡಿಸಿ ನಡೆಸುತ್ತಿದೆ; ಅಲ್ಲದೆ, ಈ ಶೈಲಿಯ ಪುನರ್‌ರಚನೆ ಮತ್ತು ಸಂಶೋಧನೆಗಳಿಗೆಂದು ಕೆಲವು ಯೋಜನೆಗಳನ್ನು ಹಾಕಿಕೊಂಡು ಮುಂಬರುವ ದಿನ ಗಳಲ್ಲಿ ನಡೆಸಲಿದೆ.

[ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಪ್ರಯೋಗ, ಪರಂಪರೆಗಳ ಭಾಗದಲ್ಲಿ ಡಾ। ಶ್ರೀಮತಿ ವೆಂಕಟಲಕ್ಷಮ್ಮನವರಿಂದ ಮುಖತಃ ತಿಳಿದ ವಿಷಯಗಳನ್ನೂ, ಇತಿಹಾಸದ ಭಾಗದಲ್ಲಿ ಡಾ। ರಾ. ಸತ್ಯನಾರಾಯಣರವರ ಉಪನ್ಯಾಸಗಳು, ಲೇಖನಗಳು, ಗ್ರಂಥಗಳು ಮತ್ತು ಮುಖತಃ ತಿಳಿದ ಸಂಗತಿಗಳನ್ನೂ ಬಳಸಿಕೊಂಡಿದ್ದೇನೆ. ಇವರಿಬ್ಬರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.]

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯ

ಜಿ.ಟಿ. ನಾರಾಯಣರಾವ್

ವಿಜ್ಞಾನದ ವಿವಿಧ ಪ್ರಕಾರಗಳಲ್ಲಿ ವಿಶೇಷ ಪರಿಣತಿ ಇರದ ಆದರೆ ಅವುಗಳಲ್ಲಿ ಆಸಕ್ತರಾದ ವಾಚಕರಿಗೆ ಅದರ ಸಂಕೀರ್ಣ ಪರಿಕಲ್ಪನೆಗಳನ್ನು ಸ್ಪಷ್ಟ ಮತ್ತು ಆಕರ್ಷಕ ಶೈಲಿಯಲ್ಲಿ ತಿಳಿಯಪಡಿಸುವ ವಾಙ್ಮಯಪ್ರಕಾರಕ್ಕೆ ಜನಪ್ರಿಯ ವಿಜ್ಞಾನವಾಙ್ಮಯ ವೆಂದು ಹೆಸರು. ಇದರ ಕರ್ತೃವಿನಲ್ಲಿ ಇರಬೇಕಾದ ಮುಖ್ಯ ಗುಣಗಳು ಮೂರು: ಒಂದು, ತನ್ನ ಅಧ್ಯಯನವಸ್ತುವಿನಲ್ಲಿ ಆಳವಾದ ಪರಿಶ್ರಮ; ಎರಡು, ತನ್ನ ಸಂವಹನ ಮಾಧ್ಯಮದ ಮೇಲೆ ಪೂರ್ಣ ಪ್ರಭುತ್ವ; ಮೂರು, ಈ ಕೆಲಸದ ಬಗ್ಗೆ ಪೂರ್ಣ ವಿಶ್ವಾಸ.

ಮೊದಲನೆಯದಾಗಿ ವಿಷಯ. ಇದನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ ಇದರ ಎತ್ತರ ಬಿತ್ತರ ಅರಿತವ ಮಾತ್ರ ತನ್ನ ಓದುಗರ ಮಟ್ಟವನ್ನು ಅನುಲಕ್ಷಿಸಿ ಎಷ್ಟು ಮತ್ತು ಹೇಗೆ ಹೇಳಬೇಕು ಎಂಬ ವಿವರಗಳ ಬಗ್ಗೆ ನಿಶ್ಚಿತ ನಿಲವು ತಳೆಯಬಲ್ಲ. ಉದಾಹರಣೆಗೆ "ಕಸ್ತೂರಿ" ಪತ್ರಿಕೆಯ ಓದುಗರಿಗಾಗಿ "ಬೆಳಕು" ಎಂಬ ವಿಷಯದ ಮೇಲೆ ಐದು ಪುಟಗಳ ಲೇಖನ ಬರೆಯುವುದು ನಮ್ಮ ಉದ್ದೇಶವೆಂದು ಭಾವಿಸೋಣ. ಈ ಲೇಖನದಲ್ಲಿ ಬೆಳಕಿನ ಶಕ್ತಿ ಸ್ವರೂಪ, ವೇಗ ವೈಚಿತ್ರ್ಯ, ಮಾಧ್ಯಮರಹಿತ ಚಲನೆ ಮುಂತಾದ ಗುಣಗಳನ್ನು ವಿವರಿಸುವುದು ಎಷ್ಟು ಮುಖ್ಯವೋ ಕಣ-ತರಂಗ ದ್ವೈತವಿಚಾರ, ರೋಹಿತ ವೈಶಿಷ್ಟ್ಯ, ಫೋಟಾನಿನ ತೂಕ ಮುಂತಾದ ಬಿಡಿ ವಿವರಗಳನ್ನು ಬಿಡುವುದು ಕೂಡ ಅಷ್ಟೇ ಮುಖ್ಯ. ತಾಕತ್ತಿನ ತಾಣದಿಂದ ಬರೆಯಲು ಸಮರ್ಥನಾದವನಿಗೆ ಮಾತ್ರ ಎಷ್ಟು ಇಡುವುದು ಎಷ್ಟು ಬಿಡುವುದು ಎಂಬ ತಾರತಮ್ಯ ವಿವೇಕ ಇರುತ್ತದೆ. ಇವನ ಬರವಣಿಗೆಯಲ್ಲಿ ವಿಜ್ಞಾನದ ಪರಿಕಲ್ಪನೆ ಸ್ಪಷ್ಟವಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಈ ಅದಟು ಇರದಾತನ ಲೇಖನ ಬರಿದೆ ಜಾಳು ಜಾಳು. ಇದರಲ್ಲಿಯ ಜ್ಞಾನಶೂನ್ಯತೆಯ ತೆರಪನ್ನು ಅಕ್ರಿಯಾತ್ಮಕ ಪದಗಳ ದಂಡು ಆಕ್ರಮಿಸಿರುತ್ತದೆ.

ಎರಡನೆಯದಾಗಿ ಸಂವಹನ ಮಾಧ್ಯಮ, ಅಂದರೆ ಭಾಷೆ. ಜನಪ್ರಿಯ ವಾಙ್ಮಯದ ಕರ್ತೃವಿಗೆ ಭಾಷೆಯ ಮೇಲೆ ಸೃಷ್ಟಿ ಶೀಲ ಲೇಖಕನಿಗಿರುವುದಕ್ಕಿಂತ ಹೆಚ್ಚಿನ ಪ್ರಭುತ್ವವಿರಬೇಕು. ಏಕೆಂದರೆ ಸೃಷ್ಟಿಶೀಲ ಲೇಖಕ ತನ್ನ ಅನುಭವದ ಪ್ರತಿಬಿಂಬನಕ್ಕೆ ಲಭ್ಯ ಪದಗಳ ಬಂಡವಾಳವನ್ನು ಅವಲಂಬಿಸಿದರೆ ಸಾಕು. ನೆಲದಿಂದ ಉಪಯುಕ್ತ ಮಣ್ಣು ಬಗೆದು ಹದಕೊಟ್ಟು ತರಾವರಿ ಮಡಕೆ ಕುಡಿಕೆ ತಯಾರಿಸುವ ಕುಂಬಾರನ ಕೆಲಸದಂತೆ ಇವನದು. ಇಲ್ಲಿ ಅನುಭವ ಮತ್ತು ಪ್ರತಿಭೆ ಪ್ರಧಾನ. ಮೂಕಶೋಕ ಗೇಯ ಶ್ಲೋಕವಾದಾಗ ಆದಿಕವಿ ಹೊಸಪದ ಸೃಷ್ಟಿಸಲಿಲ್ಲ, ಲಭ್ಯ ಪದಗಳಿಗೆ ಹೊಸ ಅರ್ಥ ತುಂಬಿದ. ಜನಪ್ರಿಯ ವಾಙ್ಮಯದ ಕರ್ತೃ ವಾದರೋ ಈ ಕೆಲಸದ ಜೊತೆಗೆ ಹೊಸ ಪದಗಳನ್ನು ಟಂಕಿಸಿ ಅಮೂರ್ತ ವೈಜ್ಞಾನಿಕ ಪರಿಕಲ್ಪನೆಗೆ ಮೂರ್ತ ಭಾಷಾರೂಪ ಕೊಡಬೇಕಾಗುತ್ತದೆ. ಉದಾಹರಣೆಗೆ ಮುಂದಿನ ಎರಡು ವಾಕ್ಯಗಳನ್ನು ಗಮನಿಸಿ:

1 ಚಂದ್ರನ ಮೇಲೆ ಮೊತ್ತಮೊದಲು ಕಾಲಿಟ್ಟ ನೀಲ್ ಆರ್ಮ್‌ಸ್ಟ್ರಾಂಗ್ ಉದ್ಗರಿಸಿದ ನುಡಿ: "ಇದು ಒಬ್ಬ ವ್ಯಕ್ತಿಗೆ ಪುಟ್ಟ ಹೆಜ್ಜೆ. ಆದರೆ ಮಾನವ ಜನಾಂಗಕ್ಕೆ ಹನುಮಂತ ನೆಗೆತ." ಇಲ್ಲಿ "ಹನುಮಂತ ನೆಗೆತ" ಎನ್ನುವ ಪದಯುಗ್ಮ ಸೃಷ್ಟಿಶೀಲ ಬರವಣಿಗೆಗೆ ನಿದರ್ಶನ.

2 "ಏಕಾಣುಜೀವಿ ಒಡೆದು ಎರಡಾಗುವ ಪ್ರಕ್ರಿಯೆಗೆ ವಿದಳನೆ ಎಂದು ಹೆಸರು." ಇಲ್ಲಿ "ಏಕಾಣುಜೀವಿ" ಮತ್ತು "ವಿದಳನೆ" ಎನ್ನುವ ಪದಗಳು ನೂತನ ಸೃಷ್ಟಿಗಳು.

ಆದ್ದರಿಂದ ಜನಪ್ರಿಯ ವಾಙ್ಮಯ ಕರ್ತೃವಿಗೆ ಅನುಭವ ಮತ್ತು ಪ್ರತಿಭೆ ಜೊತೆಗೆ ಭಾಷಾಜ್ಞಾನ ಕೂಡ ಆವಶ್ಯಕ ಪರಿಕರ. ಇದರ ಅಭಾವದಲ್ಲಿ "ಎಂಡೋಕ್ರೈನ್" ಪದ ಕನ್ನಡದಲ್ಲಿ "ಒಳಸುರಿಕ"ವಾದರೆ ''ಪರಾಕಾಷ್ಠೆ''ಯ ವಿರುದ್ಧಾರ್ಥ ಪದ "ಪ್ರತೀಕಾಷ್ಠೆ"ಯಾಗುತ್ತದೆ. ವಾಕ್ಯ ರಚನೆಯಂತೂ ತೀರ ಅ–ಕನ್ನಡ ಮತ್ತು ಅಸ್ಪಷ್ಟವಾಗುತ್ತದೆ.

ಮೂರನೆಯದಾಗಿ ಜನಪ್ರಿಯ ವಾಙ್ಮಯ ಕರ್ತೃವಿಗೆ ತನ್ನ ಕೆಲಸದ ಬಗ್ಗೆ ಧರ್ಮಪ್ರಚಾರಕನ ಅಚಲವಿಶ್ವಾಸ ಅಗತ್ಯ. ವಿಜ್ಞಾನ ವಿಷಯಗಳಲ್ಲಿ ಉತ್ತಮ ಪಾಂಡಿತ್ಯವಿರುವ ಮತ್ತು ಕನ್ನಡ ಭಾಷೆಯಲ್ಲಿ ವಿಶೇಷ ಪ್ರಾವೀಣ್ಯವಿರುವ ಅನೇಕ ಮಂದಿ ವಿದ್ವಾಂಸರಿದ್ದಾರೆ. ಆದರೆ ಕನ್ನಡದಲ್ಲಿ ಜನಪ್ರಿಯ ವಾಙ್ಮಯದ ಸೃಷ್ಟಿ ಕುರಿತಂತೆ ಇವರು ಏನೋ ಒಂದು ತರಹದ ಕೀಳರಿಮೆಯಿಂದ ಇಲ್ಲವೇ ವಿಜ್ಞಾನಭಾರತಿಗೆ ಎಲ್ಲಿ ಮೈಲಿಗೆಯಾಗಿಬಿಡುವುದೋ ಎನ್ನುವ ಆತಂಕಭಾವದಿಂದ ಬಾಧಿತರಾಗಿರುವಂತೆ ತೋರುತ್ತದೆ. ಪ್ರಪಂಚ ಭಾಷೆಯಾದ ಇಂಗ್ಲಿಷಿನಲ್ಲಿ ಇವರು ಜನಪ್ರಿಯ ವಾಙ್ಮಯ ರಚಿಸಿ ಯಶಸ್ವಿಗಳಾಗಲಾರರು. ಆದರೆ ಕನ್ನಡದಲ್ಲಿ ಸೃಷ್ಟಿಸಿ ಜ್ಞಾನದಾನಮಾಡಿ ಕೃತಕೃತ್ಯರಾಗಬಲ್ಲರು. ಇದಕ್ಕೆ ಛಲಬೇಕು. ಈ ಮಾಧ್ಯಮವನ್ನು ಕುರಿತ ನಂಬಿಕೆ ಬೇಕು. ಈಗ ಕೀರ್ತಿಶೇಷರಾಗಿರುವ ಬೆಳ್ಳಾವೆ ವೆಂಕಟನಾರಾಯಣಪ್ಪ, ನಂಗಪುರಂ ವೆಂಕಟೇಶ ಅಯ್ಯಂಗಾರ್, ಆರ್.ಎಲ್. ನರಸಿಂಹಯ್ಯ, ಸಿ.ಎನ್. ಶ್ರೀನಿವಾಸ ಅಯ್ಯಂಗಾರ್ ಮೊದಲಾದ ವಿದ್ವಾಂಸರು ಇಂಥ ಛಲವಂತರು. ಇವರು ತಮ್ಮ ಅಧ್ಯಯನದ ವಿಷಯಗಳಲ್ಲಿ ಉನ್ನತವರ್ಗದ ವಿದ್ವಾಂಸರಾಗಿದ್ದು ಅಂತಾರಾಷ್ಟ್ರೀಯ ಖ್ಯಾತಿವೇತ್ತರಾಗಿದ್ದಾಗಲೇ ಕನ್ನಡದಲ್ಲಿ ಜನಪ್ರಿಯ ವಾಙ್ಮಯ ರಚಿಸಿ ನೂತನ ಮಾರ್ಗವನ್ನು ನಿರ್ಮಿಸಿದರು ಕೂಡ. ಇವರಿಗೆ ಈ ಮಾಧ್ಯಮದ ಸಾಧ್ಯತೆ ಮತ್ತು ಉಪಯುಕ್ತತೆ ಬಗ್ಗೆ ಇದ್ದ ದೃಢ ಭರವಸೆ ಅಲ್ಲವಾಗಿದ್ದರೆ ಈ ಕೈಂಕರ್ಯ ಕೈಗೂಡುತ್ತಿರಲಿಲ್ಲ.
ಹೀಗೆ ತ್ರಿಗುಣಾವಿಷ್ಟ ಲೇಖಕನಾದವ ಜನಪ್ರಿಯ ವಾಙ್ಮಯ ರಚಿಸಿದಾಗ ಅದು ಉದ್ದಿಷ್ಟ ವಾಚಕರನ್ನು ತಲಪುತ್ತದೆ, ಅದರ ವಾಚನ ಅವರ ಜ್ಞಾನದ ಮಟ್ಟವನ್ನು ಎತ್ತರಿಸುತ್ತದೆ, ಮತ್ತು ಅವರ ಪೈಕಿ ಕೆಲವರ ಭವಿಷ್ಯವನ್ನಾದರೂ ಬದಲಾಯಿಸುತ್ತದೆ. ಇಂಗ್ಲಿಷಿನಲ್ಲಿ ಈ ಮಟ್ಟದ ಲೇಖಕರ ಸಾಲಿಗೆ ಕಳೆದ ತಲೆಮಾರಿನ ಜೇಮ್ಸ್ ಜೀನ್ಸ್, ಜಾರ್ಜ್ ಗ್ಯಾಮೊ, ಆಲ್ಬರ್ಟ್ ಐನ್‌ಸ್ಟೈನ್ ಮೊದಲಾದವರೂ ಈ ತಲೆಮಾರಿನ ಐಸಾಕ್ ಆಸಿಮಾವ್, ಕಾರ್ಲ್ ಸಗಾನ್, ರಿಚೀ ಕಾಲ್ಡರ್ ಮೊದಲಾದವರೂ ಸೇರಿದ್ದಾರೆ.

ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಏನಾಗಿದೆ ಎನ್ನುವುದನ್ನು ಪರಿಶೀಲಿಸೋಣ.

1917ನೆಯ ಇಸವಿಯಲ್ಲಿ "ಕರ್ಣಾಟಕ ವಿಜ್ಞಾನ ಪ್ರಚಾರಿಣೀ ಸಮಿತಿ"ಯ ನೇತೃತ್ವದಲ್ಲಿ "ವಿಜ್ಞಾನ" ಎನ್ನುವ ಮಾಸಪತ್ರಿಕೆ ಪ್ರಾರಂಭವಾದಾಗ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯ ಅಧಿಕೃತವಾಗಿ ಜನಿಸಿತೆಂದು ಹೇಳಬಹುದು. ಈ ಪತ್ರಿಕೆಯ ಸಂಪಾದಕರಾದ ಬೆಳ್ಳಾವೆ ವೆಂಕಟನಾರಾಯಣಪ್ಪ ಮತ್ತು ನಂಗಪುರಂ ವೆಂಕಟೇಶ ಅಯ್ಯಂಗಾರ್ ತಮ್ಮ ಧ್ಯೇಯವನ್ನು ಹೀಗೆ ನಿರೂಪಿಸಿದ್ದರು : "ಈಗ ಸುಮಾರು ಅರವತ್ತು ಎಪ್ಪತ್ತು ವರ್ಷಗಳಿಂದಲೂ ಆಂಗ್ಲ ವಿದ್ಯಾಭ್ಯಾಸವು ನಮ್ಮ ದೇಶದಲ್ಲಿ ದಿನೇ ದಿನೇ ಅಭಿವೃದ್ಧಿಯಾಗುತ್ತಿದ್ದರೂ ವಿಜ್ಞಾನದ ವಿಷಯದಲ್ಲಿ ಮಾತ್ರ ವಿಶೇಷ ಶ್ರದ್ಧೆಯು ತೋರಿಬಂದಿಲ್ಲ, ಈ ಭಾಗದಲ್ಲಿ ಈಗೀಗ ಕಣ್ಣು ಬಿಡುತ್ತಿದ್ದೇವೆ. ಜನಸಾಮಾನ್ಯರಲ್ಲೆಲ್ಲಾ ಈ ವಿಜ್ಞಾನವನ್ನು ಹರಡಿದ ಹೊರತು ದೇಶವು ಅಭಿವೃದ್ಧಿಸ್ಥಿತಿಗೆ ಬರಲಾರದು. ಆಂಗ್ಲಭಾಷೆಯಲ್ಲಿ ವಿಜ್ಞಾನಪರಿಶ್ರಮವುಳ್ಳ ದೇಶಾಭಿಮಾನಿಗಳು ಸಾವಕಾಶಮಾಡದೆ ಈ ಕೆಲಸವನ್ನು ಮಾಡಲು ತೊಡಗಬೇಕೆಂದು ನಮ್ಮ ಪ್ರಾರ್ಥನೆ."

"ವಿಜ್ಞಾನ" ಪತ್ರಿಕೆಗೆ ಆರಂಭದಿಂದಲೇ ಬಾಲಗ್ರಹಾರಿಷ್ಟ : ಲೇಖಕರ ಮತ್ತು ಚಂದಾದಾರರ ಕೊರತೆ. ಸರ್ಕಾರದ ಕೂರ್ಮಧಾರಣೆಯಾಗಲಿ ಹಿರಿಬಂಡವಾಳದ ಆರ್ಥಿಕ ರಕ್ಷಣೆಯಾಗಲಿ ಇರದಿದ್ದ ಈ ಪತ್ರಿಕೆ ಬೇಗನೆ ಕಣ್ಮುಚ್ಚಿತು. ಆದರೆ ಜನಪ್ರಿಯ ಲೇಖನಗಳೂ ಪುಸ್ತಕಗಳೂ ಅಲ್ಲಿ ಇಲ್ಲಿ ಈಗ ಆಗ ಪ್ರಕಟವಾಗಲು ಯೋಗ್ಯ ಅವಕಾಶವನ್ನು ಮಾತ್ರ ಇದು ಒದಗಿಸಿಕೊಟ್ಟಿತ್ತು. ಹೀಗೆ ಸಾಗಿಬಂದ ಜನಪ್ರಿಯ ವಾಹಿನಿಯ ಹರಿವಿನಲ್ಲಿ 1981ರ ತನಕದ ಸುಮಾರು ಏಳು ದಶಕಗಳ ಅವಧಿಯಲ್ಲಿ ಎದ್ದುಕಾಣುವ ಮುಖ್ಯ ಬಿಂದುಗಳಿವು :

ಎಸ್. ಎನ್. ನರಹರಯ್ಯನವರ "ಖಗೋಳಶಾಸ್ತ್ರ" ಗ್ರಂಥವನ್ನು ಪ್ರಕಟಿಸುವುದರೊಂದಿಗೆ (1924) ಮೈಸೂರು ವಿಶ್ವವಿದ್ಯಾನಿಲಯ ವಿಜ್ಞಾನ ವಾಙ್ಮಯ ಪ್ರಚಾರಕ್ಕೆ ಇಳಿಯಿತು. ಮುಂದೆ ಪ್ರಚಾರ ಪುಸ್ತಕ ಮಾಲೆ ಮುಂತಾದ ಮಾಲೆಗಳ ಮೂಲಕ,

ಅಂತೆಯೇ "ಪ್ರಬುದ್ಧ ಕರ್ನಾಟಕ" ಎಂಬ ತ್ರೈಮಾಸಿಕವ ಮತ್ತು 1969ರಿಂದೀಚೆಗೆ "ವಿಜ್ಞಾನ ಕರ್ನಾಟಕ" ಎಂಬ ತ್ರೈಮಾಸಿಕದ ಮೂಲಕ ಈ ವಿಶ್ವವಿದ್ಯಾನಿಲಯ ಪರಿಣತರಿಂದ ಅನೇಕ ವಿಷಯಗಳ ಮೇಲೆ ಪುಸ್ತಕ, ಲೇಖನ, ಅನುವಾದ ಮುಂತಾದವನ್ನು ಬರೆಸಿ ಪ್ರಕಟಿಸಿ ಜನಪ್ರಿಯ ವಾಙ್ಮಯ ಸೃಷ್ಟಿಗೆ ಸಮರ್ಥ ವೇದಿಕೆ ಒದಗಿಸಿಕೊಟ್ಟಿದೆ. ರಾಜ್ಯದಲ್ಲಿಯ ಇತರ ಮೂರು ವಿಶ್ವವಿದ್ಯಾಲಯಗಳೂ (ಕರ್ನಾಟಕ, ಕೃಷಿ, ಬೆಂಗಳೂರು) ಇದೇ ಕೆಲಸ ಮಾಡುತ್ತ ಬಂದಿವೆ. ಮದ್ರಾಸು ವಿಶ್ವವಿದ್ಯಾಲಯ ಕೂಡ ಸೇವೆ ಸಲ್ಲಿಸಿದೆ.

ಶಿವರಾಮಕಾರಂತರು 1930ರ ದಶಕದಲ್ಲಿ "ಬಾಲಪ್ರಪಂಚ"ದ ಮೂರು ಸಂಪುಟಗಳನ್ನು ಪ್ರಕಟಿಸಿದರು. ಇವುಗಳಲ್ಲಿ ವಿಜ್ಞಾನ ವಿಷಯಗಳಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆತಿದೆ. 1959–64ರ ಅವಧಿಯಲ್ಲಿ ಅವರು "ವಿಜ್ಞಾನ ಪ್ರಪಂಚ"ದ ನಾಲ್ಕು ಸಂಪುಟಗಳನ್ನು ಪ್ರಕಟಿಸಿದರು. ಸರ್ಕಾರದ ನೆರವಿನಿಂದ ಇವು ತದ್ವತ್ತು ಪುನರ್ಮುದ್ರಣ ಕೂಡ ಕಂಡಿವೆ (1979-80). ನಿರಂಜನರ ಹಿರಿತನದಲ್ಲಿ ಮತ್ತು ಅಡ್ಯನಡ್ಕ ಕೃಷ್ಣಭಟ್ಟರ ವಿಜ್ಞಾನ ಸಂಪಾದಕತ್ವದಲ್ಲಿ "ಜ್ಞಾನಗಂಗೋತ್ರಿಯ" ಏಳು ಸಂಪುಟಗಳು 1970–74ರ ಅವಧಿಯಲ್ಲಿ ಪ್ರಕಟವಾದುವು. ಈ ಪೈಕಿ ಮೂರು ಸಂಪುಟಗಳು ವಿಜ್ಞಾನ ವಿಷಯಗಳಿಗೇ ಮೀಸಲು. ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಖಾಸಗಿ ಪ್ರಕಾಶನ ಸಂಸ್ಥೆಗಳು ಶಾಲಾವಿದ್ಯಾರ್ಥಿಗಳಿಗೆ ಪಠ್ಯ ಹಾಗೂ ಉಪಪಠ್ಯ ಪುಸ್ತಕಗಳಾಗುವಂತೆ ಸಾಕಷ್ಟು ಪ್ರಕಟಣೆಗಳನ್ನು ಹೊರತಂದಿವೆ. "ಕನ್ನಡ ವಿಶ್ವಕೋಶ" ಯೋಜನೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಈ ತನಕ ಹನ್ನೊಂದು ಸಂಪುಟಗಳನ್ನೂ "ವಿಷಯ ವಿಶ್ವಕೋಶ ಯೋಜನೆ"ಯಲ್ಲಿ ಒಂದು ಸಂಪುಟವನ್ನೂ ಪ್ರಕಟಿಸಿದೆ (1985). ಇವುಗಳಲ್ಲಿ ಜನಪ್ರಿಯ ವಾಙ್ಮಯಕ್ಕೆ ಸಾಕಷ್ಟು ಪ್ರಾತಿನಿಧ್ಯ ಉಂಟು.

ಸಮೂಹ ಮಾಧ್ಯಮಗಳಾದ ಆಕಾಶವಾಣಿ, ದೂರದರ್ಶನ ಮತ್ತು ವೃತ್ತಪತ್ರಿಕೆಗಳಲ್ಲಿ ಜನಪ್ರಿಯವಾಙ್ಮಯ ಸ್ಥಾನ ಪಡೆದಿದೆ. ಇದಕ್ಕಾಗಿಯೇ ಮೀಸಲಾದ ಎರಡು ಮಾಸಪತ್ರಿಕೆಗಳಿವೆ: "ಜನಪ್ರಿಯ ವಿಜ್ಞಾನ" (ಬೆಂಗಳೂರು ವಿಶ್ವವಿದ್ಯಾಲಯ). "ಬಾಲವಿಜ್ಞಾನ" (ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು). ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿರುವ "ವಿಜ್ಞಾನ ಕರ್ನಾಟಕ"ವೆಂಬ ತ್ರೈಮಾಸಿಕ ತೀರ ಅನಿಯತಕಾಲಿಕವಾಗಿ ಬೆಳಕು (?) ಕಾಣುತ್ತಿದೆ.

ಈ ಪ್ರಮುಖ ಮೈಲುಗಲ್ಲುಗಳ ಜೊತೆಗೆ ಉಲ್ಲೇಖಿಸಬೇಕಾದದ್ದು ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನಗ್ರಂಥಗಳ ಪ್ರಕಟಣೆಗೋಸ್ಕರ ಕೇಂದ್ರ ಸರ್ಕಾರ ನೀಡಿದ ಧನಸಹಾಯ. ಇದರ ಪ್ರಕಾರ ಕರ್ನಾಟಕ ರಾಜ್ಯ 1968ರಲ್ಲಿ ಒಂದು ಕೋಟಿ ರೂಪಾಯಿ ಪಡೆಯಿತು. ರಾಜ್ಯಸರ್ಕಾರ ಈ ಮೊಬಲಗನ್ನು ನಾಲ್ಕು ವಿಶ್ವವಿದ್ಯಾಲಯಗಳಿಗೆ ಸಮವಾಗಿ ಹಂಚಿಬಿಟ್ಟಿತು. ಆಗ ವಿಜ್ಞಾನ ಗ್ರಂಥಗಳ ಪ್ರಕಟಣೆಗೆ ಹೆಚ್ಚು ನೂಕುಬಲ ಒದಗಿ ಅವು ಅಧಿಕ ಸಂಖ್ಯೆಯಲ್ಲಿ ಬೆಳಕು ಕಂಡವು. ಲೇಖಕರಿಗೆ ಆ ತನಕ ದೊರೆಯದಿದ್ದಷ್ಟು ಸಂಭಾವನೆ ಸಿಕ್ಕಿತು. ಹಲವಾರು ಬಹುಮಾನ ಯೋಜನೆಗಳು ಕೂಡ ಅಸ್ತಿತ್ವಕ್ಕೆ ಬಂದು ಗ್ರಂಥ ಪ್ರಕಟಣೆ ಲೇಖಕರಿಗೆ ಪ್ರತಿಷ್ಠಾಸೂಚಕವಾಯಿತು.

ಅಂದ ಮೇಲೆ 1985ರಲ್ಲಿಯ ಪರಿಸ್ಥಿತಿ ಏನು? ಸೂತ್ರರೂಪದಲ್ಲಿ ಹೇಳುವುದಾದರೆ ಗಾತ್ರವೇರಿದೆ, ಗುಣ ಕುಸಿದಿದೆ. ಗಾತ್ರ ಏರಲು ಕಾರಣ ಲೇಖಕರಿಗೆ ಆರ್ಥಿಕಾದಾಯ ಹಾಗೂ ಅವರ ಪ್ರತಿಷ್ಠೆಯ ಉತ್ಕರ್ಷ, ಮತ್ತು ಪ್ರಕಾಶಕರಿಗೆ ಆರ್ಥಿಕ ಹೊಣೆಯಿರದ ಪ್ರಕಟಣ ಸ್ವಾತಂತ್ರ್ಯ. ಗುಣ ಕುಸಿಯಲು ಕಾರಣ ಈ ಪ್ರಬಂಧದ ಆರಂಭದಲ್ಲಿ ವಿವರಿಸಿದಂತೆ ಲೇಖಕರಲ್ಲಿ ಮೂರು ಗುಣಗಳ ಪೈಕಿ ಒಂದು ಗುಣದ ಅಥವಾ ಹೆಚ್ಚು ಗುಣಗಳ ಗೈರುಹಾಜರಿ.

ಹೀಗಾಗಿ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯವೆಂದರೆ ಇಂದಿಗೂ ಕೀರ್ತಿಶೇಷ ಆರ್. ಎಲ್. ನರಸಿಂಹಯ್ಯನವರ ಹೆಸರೇ ಮೊದಲು ನಮ್ಮ ನೆನಪಿಗೆ ಬರುವುದಾಗಿದೆ. 1952ರಲ್ಲಿ ಪ್ರಕಟವಾದ ಅವರ ಗ್ರಂಥ "ಜಗತ್ತುಗಳ ಹುಟ್ಟುಸಾವು" ಎಂಬುದಕ್ಕೆ ಸಹಗಲೆಣೆಯಾಗುವ ಇನ್ನೊಂದು ಗ್ರಂಥ ಈ ತನಕ ಬಂದಿಲ್ಲ. "ವಿಜ್ಞಾನ ಪ್ರಪಂಚ"ದ ನಾಲ್ಕು ಸಂಪುಟಗಳನ್ನೂ "ಹಸುರುಹೊನ್ನು" ಮತ್ತು "ಮನಮಂಥನ" ಗ್ರಂಥಗಳನ್ನೂ ಕೂಲಂಕಷವಾಗಿ ಅಭ್ಯಸಿಸಿ ಮತ್ತು ಇವುಗಳಿಗೆ ಮಾರುಕಟ್ಟೆಯಲ್ಲಿ ದೊರೆತಿರುವ ಪ್ರಚಾರ ಗಮನಿಸಿ ಈ ಹೇಳಿಕೆ ಮಂಡಿಸುತ್ತಿದ್ದೇನೆ. ಗ್ರಂಥದ ಗುಣ ನಿರ್ಣಾಯಕ ಮಾನಕ ಮಾರುಕಟ್ಟೆ ವಹಿವಾಟು ಆಗಲೇಬೇಕೆಂದಿಲ್ಲವಷ್ಟೆ. ನಮ್ಮ ಸಾರಸ್ವತ ಸಂಪತ್ತಿನಿಂದ ಪೋಷಿತವಾದ ಮತ್ತು ನಮ್ಮ ಸಂಸ್ಕೃತಿಯಿಂದ ಪ್ರಭಾವಿತವಾದ ಪರಿಪುಷ್ಟ ಕನ್ನಡದಲ್ಲಿ ಆಧುನಿಕ ವಿಜ್ಞಾನದ ಪರಿಕಲ್ಪನೆಗಳನ್ನು ಅಧಿಕಾರಯುತವಾಗಿ, ಸ್ಪಷ್ಟವಾಗಿ ಮತ್ತು ಆಕರ್ಷಕವಾಗಿ ಆರ್ ಎಲ್ ಎನ್ ವಿವರಿಸಿದ್ದಾರೆ. ಅವರ ತರುವಾಯದ ದಿನಗಳಲ್ಲಿ ಜನಪ್ರಿಯ ವಾಙ್ಮಯ ಅನುಸರಿಸಿದ ಹಾದಿಯಿಂದ ನಾವು ಕಲಿಯಬಹುದಾದ ಪಾಠ ಬಹುತೇಕ ನಿಷೇಧಾತ್ಮಕವಾದದ್ದು: ಭಾವ-ಭಾಷೆ ಬಾಂಧವ್ಯದ ಎರಕ ಒಡೆದುಹೋದರೆ ವಾಙ್ಮಯದ ಗತಿ ಏನಾದೀತೆಂಬುದಕ್ಕೆ ವಿಪುಲ ನಿದರ್ಶನಗಳನ್ನು ಇಲ್ಲಿ ಕಾಣಬಹುದು. ಖಚಿತವಲ್ಲದ ವಿಷಯವನ್ನು ಅಡಕವಲ್ಲದ ಕನ್ನಡದಲ್ಲಿ ಗೀಚಿ, ಈ ಬರಡು ಬರವಣಿಗೆಯನ್ನು

ಸರಳಸುಂದರ ನಿರೂಪಣೆಯೆಂದು ಭ್ರಮಿಸುವ ನಾರ್ಸಿಸನ್ ಕಾಂಪ್ಲೆಕ್ಸ್ ಅಥವಾ ಸ್ವರತ ಪ್ರವೃತ್ತಿ ಇಲ್ಲವೇ ಬೋಳೆತನ ಬಹುತೇಕ ಲೇಖಕರಲ್ಲಿ ಬೆಳೆದುಬಂದಿರುವುದು ಅವರ ಕೃತಿಗಳಲ್ಲಿ ಎದ್ದುಕಾಣುತ್ತದೆ. ಹೀಗಾಗಿ ಇಂದಿಗೂ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯಕ್ಕೆ ಶಿಷ್ಟಶೈಲಿಯೊಂದು ರೂಪುಗೊಂಡಿಲ್ಲ. ಈ ಮಾತಿನ ಯಾಥಾರ್ಥ್ಯ ಅರಿವಾಗಬೇಕಾದರೆ ಯಾವುದೇ ಒಂದು ವಿಜ್ಞಾನ ವಿಷಯ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಹೇಗೆ ಬಿತ್ತರಿಸಲ್ಪಟ್ಟಿದೆ ಎಂಬುದನ್ನು ಹೋಲಿಸಿನೋಡಬೇಕು. ಕನ್ನಡದಲ್ಲಿಯ ನಿರೂಪಣೆ ತೃಪ್ತಿಕರವಾಗಿಲ್ಲದಿರುವುದರ ಕಾರಣ ಕನ್ನಡ ಭಾಷೆಯ ದೌರ್ಬಲ್ಯವಲ್ಲ, ತನ್ಯತಾರಾಹಿತ್ಯವಲ್ಲ, ಪದದಾರಿದ್ರ್ಯವಲ್ಲ, ಬದಲು ಲೇಖಕರ ಅನರ್ಹತೆ, ಉಡಾಫೆ, ಔದಾಸೀನ್ಯ.

ಕನ್ನಡದಲ್ಲಿ ಪ್ರಕಟವಾಗಿರುವ ಜನಪ್ರಿಯ ವಾಙ್ಮಯದ ಬಗ್ಗೆ ವಿಶೇಷ ಹೆಮ್ಮೆ ಏನೂ ತಳೆಯುವಂತಿಲ್ಲ, ಈ ಹತಾಶ ಪರಿಸ್ಥಿತಿ ತೊಲಗಿ ಉಜ್ವಲ ಪ್ರಕಾಶ ಬೆಳಗಬೇಕಾದರೆ ಸಂಬಂಧಿಸಿದವರು ಕೆಲವು ವಿಧಿ ನಿಯಮಗಳನ್ನು ಪಾಲಿಸುವುದು ಅತ್ಯವಶ್ಯ. ಅವೇನೆಂದು ಸ್ಥೂಲವಾಗಿ ಹೇಳಿ ಈ ಪ್ರಬಂಧವನ್ನು ಮುಗಿಸುತ್ತೇನೆ :

ಲೇಖಕ ತಾಕತ್ತಿನ ತಾಣದಿಂದ ಬರೆಯಬೇಕು. ತಾನು ಬರೆಯಲಿರುವ ವಿಷಯದಲ್ಲಿ ಆಳವಾದ ಅಧ್ಯಯನಮಾಡಿ, ಅಧುನಾತಮ ಮಾಹಿತಿ ಸಂಗ್ರಹಿಸಿ, ಬಳಿಕ ತನ್ನ ಓದುಗರ ಆವಶ್ಯಕತೆ ಗಮನಿಸಿ, ಲೇಖನದ ಮಾನಸಿಕ ಪ್ರತಿರೂಪ ರಚಿಸಿ, ಅದಕ್ಕೆ ಭಾಷಾರೂಪ ನೀಡಬೇಕು ಈ ಸೃಷ್ಟಿಶೀಲ ಕ್ರಿಯೆಯಲ್ಲಿ ತೊಡಗಲಾಗದವ ಈ ಕೆಲಸಕ್ಕೆ ಕೈಹಾಕದಿರುವುದೇ ಲೇಸು. "ಕನ್ನಡದಲ್ಲಿ, ಕಂಡುಬರುವ ತೆರಪನ್ನು ತುಂಬಲು ಮತ್ತು ನನ್ನ ಆನಂದವನ್ನು ಇತರರೊಡನೆ ಹಂಚಿಕೊಳ್ಳಲು ನಾನು ಮಾಡಿರುವ ಅಳಿಲಸೇವೆ" ಎನ್ನುವ ಬೂಟಾಟಿಕೆಯ ವಿನಯದಿಂದ ಈ ಕ್ಷೇತ್ರ ಉದ್ಧಾರವಾಗುವುದಿಲ್ಲ.

ಕೂಗಿ ಕೂಗಿ ರಾಗ, ಬಡಿದು ಬಡಿದು ತಾಳ ಎನ್ನುವ ಗಾದೆ ಉಂಟು. ಹಾಗೆಯೇ ಗೀಚಿ ಗೀಚಿ ಶೈಲಿ. ನಮ್ಮ ಬಹು ಮಂದಿ ಲೇಖಕರು 'ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ'ಯವನ ಗೋತ್ರಜರು. ಕುಮಾರವ್ಯಾಸನ ಜನ್ಮದತ್ತ ಪ್ರತಿಭೆ ಇರದ ಇವರು ಜಳ್ಳನ್ನು ಕಾಳೆಂದು ಭ್ರಮಿಸುವುದು ಸಹಜವೇ. ಆದರೆ ಓದುಗ ಈ ಪಂಥಕ್ಕೆ ಸೇರಿದವನಲ್ಲವಷ್ಟೆ. ಅನೇಕ ಲೇಖಕರು, ಅವರು ಹುಟ್ಟಾ ಕನ್ನಡಿಗರೇ ಆಗಿದ್ದು ಕನ್ನಡವೇ ತಾಯ್ನುಡಿಯಾಗಿದ್ದವರಾದರೂ, ಕನ್ನಡವನ್ನು ಶಾಸ್ತ್ರೀಯವಾಗಿಯಾಗಲಿ ಗಂಭೀರ ವಾಗಿಯಾಗಲಿ ಅಭ್ಯಸಿಸದೆ, ತಮ್ಮ ರಿಕ್ತಪದಾಶಯದ ನೆರವಿನಿಂದಲೇ ಸಂಕೀರ್ಣ ವಿಷಯಗಳನ್ನು ನಿರ್ವಹಿಸುವುದು ನೋಡುವಾಗ ಅವರ ಬೌದ್ಧಿಕ ಪ್ರಾಮಾಣಿಕತೆಯ ಬಗ್ಗೆ ಮೂಲಭೂತ ಸಂದೇಹಗಳು ಮೊಳೆಯುತ್ತವೆ. ಇಂಥ ದೀನ ಪರಿಸ್ಥಿತಿ ಕನ್ನಡಕ್ಕೆ ಒದಗ ಬೇಕಾಗಿಲ್ಲ.

ಇಂದಿನ ಹತಾಶಪರಿಸ್ಥಿತಿಗೆ ಇನ್ನೊಂದು ಮುಖ ಉಂಟು. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯ ಇಂದು ಯಾವ ಓದುಗನಿಗೆ ತಾನೆ ನಿಜವಾಗಿ ಬೇಕಾಗಿದೆ ? ಕನ್ನಡದ ಜನಪ್ರಿಯ ದೈನಿಕ, ಸಾಪ್ತಾಹಿಕ ಮತ್ತು ಮಾಸಿಕ ಪತ್ರಿಕೆಗಳಲ್ಲಿ ವಿಜ್ಞಾನ ಲೇಖನಗಳಿಗೆ ಮೀಸಲಾಗಿರುವ ಸ್ಥಳಾವಕಾಶವನ್ನೂ ಅವುಗಳ ಗುಣಮಟ್ಟವನ್ನೂ ಗಮನಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಶಾಲೆಗಳಲ್ಲಿ ಕನ್ನಡ ಮಾಧ್ಯಮ ಕಡ್ಡಾಯವಾಗಿ ಇರುವೆಡೆಗಳಲ್ಲಿ (ಧೃತ)ರಾಷ್ಟ್ರೀಕೃತ ಪುಸ್ತಕಗಳ ಮೂಲಕ ಮಕ್ಕಳಿಗೆ ದೊರೆಯುವ ವಿಜ್ಞಾನವಾಙ್ಮಯ ಮೂರನೆಯ ದರ್ಜೆಯ ಭಾಷೆಯಲ್ಲಿ ಮೈದಳೆದಿರುವ ಎರಡನೆಯ ದರ್ಜೆಯ ವಸ್ತು. ಇದು ಮಕ್ಕಳಿಗೆ ಬೇಡ ವಾದ ಹೊರೆಯಾಗಿರುವುದೂ ಉಪಾಧ್ಯಾಯರಿಗೆ ಕತ್ತರಿಸಲಾಗದ ಪೊರೆಯಾಗಿರುವುದೂ ನಿರೀಕ್ಷಿತವೇ. ವಿದ್ಯಾರ್ಥೀತರ ವಾಚಕ ರಲ್ಲಿ ಇಂಗ್ಲಿಷ್ ಬಲ್ಲವರಿಗೆ ಮಿದುಳಿಗೆ ಒಂದಿಷ್ಟೂ ತ್ರಾಸಕೊಡದೆ ಓದಿಸಿಕೊಂಡು, ಓಡಿಸಿಕೊಂಡು ಕೂಡ, ಹೋಗುವ ರಮ್ಯ ಕಥಾನಕಗಳೂ ರಾಜಕೀಯ ದೊಂಬರಾಟಗಳೂ ಸಮೃದ್ಧವಾಗಿ ದೊರೆಯುವಾಗ ವಿಜ್ಞಾನ ವಿಚಾರಗಳಲ್ಲಿ ತಲೆ ಚಿಟ್ಟು ಹಿಡಿಸಿ ಕೊಳ್ಳುವ ಆವಶ್ಯಕತೆಯಾದರೂ ಏನು ? ಅರ್ಥಾತ್ ವಿಜ್ಞಾನವಾಙ್ಮಯಕ್ಕೆ ಕನ್ನಡದಲ್ಲಿ ಬೇಡಿಕೆ ಇಲ್ಲ. ಅಂದ ಮೇಲೆ ಇದರ ಗುಣ ಮಟ್ಟ ಮಾರುಕಟ್ಟೆಯ ಬೇಡಿಕೆ ಪೂರೈಕೆ ನಿಯಮಾನುಸಾರ ನಿರ್ಣೀತವಾಗುವುದು ಕಂಡಂತೆಯೇ ಇದೆ. ಜೊತೆಗೆ ಸರಕಾರದ ಅಯಾಚಿತ ಸಹಾಯಧನ, ಸಗಟು ಖರೀದಿ, ರಾಷ್ಟ್ರೀಕರಣ ಮುಂತಾದ ಕೃತಕ ಪೋಷಕಗಳು ಸಮೃದ್ಧವಾಗಿ ಒದಗುವಾಗ ಗುಣ ಮಟ್ಟ ಇನ್ನಷ್ಟು ಕುಸಿದಿರುವುದು ಆಶ್ಚರ್ಯವಲ್ಲ.

ಕನ್ನಡ ನಾಡಿನಲ್ಲಿ ಎಲ್ಲ ಚಟುವಟಿಕೆಗಳೂ—ಆಡಳಿತ, ಶಿಕ್ಷಣ, ಸಾರ್ವಜನಿಕ ಸಂಪರ್ಕ, ವ್ಯವಹಾರ—ಕನ್ನಡದಲ್ಲೇ ನಡೆಯಬೇಕೆಂದು ವಿಧಿಸಿ ಆಗ ಎದುರಾಗುವ ಸಮಸ್ಯೆಗಳನ್ನು ವಿಜ್ಞಾನದ ವಸ್ತುನಿಷ್ಠ ತಲದಲ್ಲಿ ಸ್ವೀಕರಿಸಿ ಪರಿಹರಿಸುವುದೊಂದೇ ಜನಪ್ರಿಯ ವಾಙ್ಮಯದ ಮಟ್ಟವನ್ನು ಏರಿಸಲು ಇರುವ ಮಾರ್ಗ.

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ

ಜಿದೂರಂಗ

ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ಸುಮಾರು (೮೬ ಮೈಲಿಗಳ) ದೂರದಲ್ಲಿ ಮದ್ದಾನೆಯೊಂದು ತನ್ನ ಕಾಲು, ಸೊಂಡಿಲುಗಳನ್ನು ಚಾಚಿ ಮಲಗಿದಂತಿರುವ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ವಿಶೇಷ ಸದ್ದುಗದ್ದಲಗಳಿಲ್ಲದೆ, ನಿದ್ರಿಸುತ್ತಿರುವ ಮಗುವಿನಂತೆ ಮೈಸೂರು ಪಟ್ಟಣ ಹರಡಿಕೊಂಡಿದೆ. ಇಲ್ಲಿ ಹಿಂದೆ ಬಹು ಪುರಾತನ ಕಾಲದಲ್ಲಿ ಮಹಿಷಾಸುರನೆಂಬ ದುಷ್ಟರಾಕ್ಷಸ ಆಳುತ್ತಿದ್ದನೆಂದೂ ಅವನ ಕಾಟವನ್ನು ತಾಳಲಾರದೆ ಜನರು ತಹತಹಿಸುತ್ತಿದ್ದಾಗ ಶ್ರೀ ದುರ್ಗಾ ಅಥವಾ ಚಾಮುಂಡಾಂಬಿಕೆಯು ಸಿಂಹವಾಹಿನಿಯಾಗಿ ಅವತರಿಸಿ ಆ ರಾಕ್ಷಸನನ್ನು ಸಂಹಾರ ಮಾಡಿದಳೆಂದೂ ಒಂದು ದಂತಕತೆ ಜನಜನಿತವಾಗಿದೆ. ಅಂದಿನಿಂದ ಮಹಿಷಾಸುರನ ಊರು, ಜನರ ಬಾಯಲ್ಲಿ ಮಹೀಶೂರು ಆಗಿ, ಅನಂತರ ಮೈಸೂರು ಆಗಿ ಮಾರ್ಪಟ್ಟಿದೆ. ವಿಜಯನಗರ ಸಾಮ್ರಾಜ್ಯಕ್ಕೆ ಅಧೀನರಾದ ಒಡೆಯರುಗಳಿಗೆ ಬಹು ಹಿಂದಿನಿಂದಲೂ ಮೈಸೂರು ಪಟ್ಟಣ ರಾಜಧಾನಿಯಾಗಿತ್ತು. ರಕ್ಕಸತಂಗಡಿ ಯುದ್ಧದಲ್ಲಿ ಆ ಸಾಮ್ರಾಜ್ಯಸೂರ್ಯ ಅಸ್ತಂಗತನಾದಾಗ ಮೈಸೂರಿನ ಅರಸರೂ ಸ್ವತಂತ್ರರಾಗಿ ಆಳಲು ಆರಂಭಿಸಿದರು. ಆದರೆ ೧೮ನೇ ಶತಮಾನದಲ್ಲಿ ಕೆಲವು ಕಾಲ ಮೈಸೂರಿನ ಪ್ರಾಧಾನ್ಯ ಅಳಿಸಿ ಹೋಗಿ ರಾಜಧಾನಿಯು ಶ್ರೀರಂಗಪಟ್ಟಣಕ್ಕೆ ವರ್ಗವಾಯಿತು. ಒಡೆಯರ ಸೈನ್ಯದಲ್ಲಿ ನೌಕರಿಯಲ್ಲಿದ್ದ ಹೈದರನೂ ಅನಂತರ ಅವನ ಮಗ ಟಿಪ್ಪುಸುಲ್ತಾನನೂ ಅವರ ಒಡೆತನವನ್ನು ಕಸಿದುಕೊಂಡು ಶ್ರೀರಂಗಪಟ್ಟಣಕ್ಕೆ ರಾಜಧಾನಿಯನ್ನು ವರ್ಗಾಯಿಸಿ ಅಲ್ಲಿಂದಲೇ ಪ್ರಭುತ್ವ ನಡೆಸಲಾರಂಭಿಸಿದರು. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪುವು ಬ್ರಿಟಿಷರೊಡನೆ ಕಾಳಗ ಮಾಡುತ್ತಾ ಮಡಿದಾಗ, ಮೈಸೂರು ರಾಜ್ಯದ ಆಡಳಿತವನ್ನು ಬ್ರಿಟಿಷರು ಹಿಂದೆ ಆಳ್ವಿಕೆ ನಡೆಸುತ್ತಿದ್ದ ರಾಜವಂಶಕ್ಕೆ ವಹಿಸಿಕೊಟ್ಟರು. ಆಗ ಆ ರಾಜವಂಶದವರು ಮೈಸೂರು ಪಟ್ಟಣವನ್ನೇ ಮತ್ತೆ ರಾಜಧಾನಿಯಾಗಿ ಮಾಡಿಕೊಂಡರು.

ಇಂದು ಮೈಸೂರು ಪಟ್ಟಣಕ್ಕೆಲ್ಲ ಭೂಷಣಪ್ರಾಯವಾದುದು ಇಲ್ಲಿಯ ಮಹಾರಾಜರ ಅರಮನೆ. ದೊಡ್ಡಕೆರೆ ಮೈದಾನದ ಮುಂಭಾಗದಲ್ಲಿ ಸುಂದರವಾದ ಕೋಟೆಯಿಂದ ಆವೃತವಾದ ಈ ಅರಮನೆಯ ಕಟ್ಟಡದ ಕೆಲಸ ೧೮೯೭ರಲ್ಲಿ ಪ್ರಾರಂಭವಾಗಿ ಮುಕ್ತಾಯಗೊಳ್ಳಲು ಸುಮಾರು ಐದು ವರ್ಷಕಾಲ ಹಿಡಿಯಿತು. ಇದರ ಉದ್ದ ೨೪೫ ಅಡಿಗಳು, ಅಗಲ ೧೫೬ ಅಡಿಗಳು, ಎತ್ತರ ೧೪೫ ಅಡಿಗಳು. ಇದನ್ನು ಕಟ್ಟಿಸಲು ತಗುಲಿದ ವೆಚ್ಚ ಸುಮಾರು ೪೧೫ ಲಕ್ಷ ರೂಪಾಯಿಗಳು. ಮೊದಲನೇ ಅಂತಸ್ತಿನಲ್ಲಿರುವ ದರ್ಬಾರು ಹಾಲಿನಲ್ಲಿ ಹಿಂಬದಿಯ ಗೋಡೆಯಲ್ಲಿ ಉದ್ದಕ್ಕೂ ಸ್ವತಃ ರವಿವರ್ಮರೇ ಇಲ್ಲಿಗೆ ಬಂದು ರಚಿಸಿದ ದೊಡ್ಡ ದೊಡ್ಡ ಚಿತ್ರಗಳಿವೆ. ಈ ಕಟ್ಟಡವು ಬಣ್ಣಬಣ್ಣದ ಕಲ್ಲಿನಿಂದ ಕಟ್ಟಲ್ಪಟ್ಟಿದೆ. ಸುಂದರವಾದ ಎತ್ತರವಾದ ಚಿನ್ನಮುಲಾಮಿನ ಕಂಬಗಳಿಂದಲೂ ಬಣ್ಣಬಣ್ಣದ ಚಿತ್ರಗಳಿಂದಲೂ ಅಲಂಕೃತವಾದ ಕಲ್ಯಾಣಮಂಟಪ, ವಿನಾಯಕನ ತೊಟ್ಟಿ, ಗೊಂಬೆ ತೊಟ್ಟಿ, ಆಯುಧಶಾಲೆ ಇತ್ಯಾದಿಗಳಿಂದ ಮೆರೆಯುವ ಈ ಕಟ್ಟಡದ ರಚನೆಯಲ್ಲಿ ಇಂಡೋ–ಸಾರಸೆನಿಕ್ ಮತ್ತು ಹೊಯ್ಸಳ ಸಂಪ್ರದಾಯವೆರಡನ್ನೂ ವಿಶೇಷವಾಗಿ ಅನುಸರಿಸಿದೆ. ವಿಶ್ವದ ಅನೇಕ ತಜ್ಞರು 'ಭಾರತದ ಆಧುನಿಕ ಅರಮನೆಗಳಲ್ಲಿ ಅತ್ಯಂತ ಸುಂದರವಾದುದು' ಎಂದು ಇದನ್ನು ಮನಸಾರೆ ಮೆಚ್ಚಿಕೊಂಡಿರುವರು.

ಚಾಮುಂಡಿಬೆಟ್ಟದ ಸಮೀಪದಲ್ಲಿರುವ ಲಲಿತ ಮಹಲ್ ಅರಮನೆ, ಬೆಟ್ಟದ ಮೇಲಿರುವ ರಾಜೇಂದ್ರ ವಿಲಾಸ, ಕೇಂದ್ರ ಆಹಾರ ಸಂಶೋಧನಾಲಯವಿರುವ ಚೆಲುವಾಂಬಾ ಅರಮನೆ, ಮೈಸೂರು ವಿಶ್ವವಿದ್ಯಾನಿಲಯದ (ಮಾನಸಗಂಗೋತ್ರಿ) ಆವರಣ

ದಲ್ಲಿರುವ ಜಯಲಕ್ಷ್ಮೀವಿಲಾಸ ಅರಮನೆ, ರಂಗಾಚಾರ್ಲು ಮೆಮೋರಿಯಲ್ ಹಾಲ್, ಜಗನ್ಮೋಹನ್ ಬಂಗಲೆ, ಅಠಾರಾ ಕಚೇರಿ, ಇವೇ ಮೊದಲಾದ ಭಾರಿ ಕಟ್ಟಡಗಳು ಮೈಸೂರು ಪಟ್ಟಣಕ್ಕೆ ಭವ್ಯತೆಯನ್ನಿತ್ತಿವೆ. ಇಂಥ ಕಟ್ಟಡಗಳೇ ಅಲ್ಲದೆ, ವಿಶಾಲ ವಾದ ರಸ್ತೆಗಳನ್ನೂ ಹೂಗಿಡಗಳಿಂದ ಸಮೃದ್ಧವಾದ ನಿಶಾತ್ ಬಾಗ್, ಕರ್ಜನ್‌ಪಾರ್ಕ್‌ಗಳಂತಹ ಉದ್ಯಾನಗಳನ್ನೂ ನಿರ್ಮಿಸಿ ನಾಲ್ಮಡಿ ಕೃಷ್ಣರಾಜರು ತಮ್ಮ ಕಾಲದಲ್ಲಿ ಮೈಸೂರಿಗೆ ಅತ್ಯಂತ ಸುಂದರವಾದ ಒಂದು ಹೊಸ ಸ್ವರೂಪವನ್ನೇ ತಂದುಕೊಟ್ಟರು. ಇಲ್ಲಿರುವ ಮೃಗಾಲಯು ವೈವಿಧ್ಯತೆಯಿಂದ ಕೂಡಿದ್ದು ವರ್ಷವಿಡೀ ಲಕ್ಷಾಂತರ ಪ್ರೇಕ್ಷಕರನ್ನು ಆಕರ್ಷಿಸುತ್ತದೆ. ಜಗನ್ಮೋಹನ ಬಂಗಲೆಯಲ್ಲಿ ಒಂದು ಚಿತ್ರಶಾಲೆಯೂ ಜೊತೆಗೆ ಒಂದು ವಿವಿಧ ವಸ್ತುಗಳ ಸಂಗ್ರಹಾಲಯವೂ ಇವೆ. ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟನಲ್ಲಿ ವಿವಿಧ ಕುಶಲ ಕಲೆಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ಕೊಡಲಾಗುತ್ತಿರುವುದಲ್ಲದೆ ಸುಂದರವಾದ ಕಲಾವಸ್ತುಗಳನ್ನೂ ನಿರ್ಮಾಣಮಾಡಲಾಗುತ್ತಿದೆ. ಮೈಸೂರಿಗೆ ಬರುವ ಪ್ರತಿಯೊಬ್ಬನೂ—ಅದರಲ್ಲೂ ಪ್ರತಿ ವಿದೇಶೀಯನೂ- ಅಲ್ಲಿಗೆ ತಪ್ಪದೆ ಭೇಟಿಯಿತ್ತು ದಂತ, ಶ್ರೀಗಂಧ, ಶಿಲೆ, ಲೋಹ ಇತ್ಯಾದಿಗಳಿಂದ ಅಲ್ಲಿ ತಯಾರಾಗುವ ಸುಂದರ ಕಲಾಕೃತಿಗಳನ್ನು ಕೊಳ್ಳುವುದುಂಟು. ಅಲ್ಲದೆ ತೇಗ, ಕರೀಮರ ಮುಂತಾದ ಮರಗಳಿಂದಲೂ ಬೆತ್ತದಿಂದಲೂ ಅಲ್ಲಿ ತಯಾರಾಗುವ ಅಲಂಕಾರ, ಉಪಯುಕ್ತತೆ ಇವೆರಡರಲ್ಲೂ ಹೆಸರುಗಳಿಸಿರುವ ಕುರ್ಚಿ, ಮೇಜು, ಪೀಠೋಪಕರಣ ಇತ್ಯಾದಿ ವಸ್ತುಗಳಿಗೂ ಸಾರ್ವತ್ರಿಕವಾಗಿ ವಿಶೇಷ ಬೇಡಿಕೆ ಇದೆ. ಮೈಸೂರಿನ ದಕ್ಷಿಣಕ್ಕಿರುವ ಶ್ರೀಗಂಧದ ಎಣ್ಣೆಯ ಕಾರ್ಖಾನೆಯಲ್ಲಿ ತಯಾರಾಗುವ ಗಂಧದ ಎಣ್ಣೆಯೂ ಪ್ರಸಿದ್ಧಿ ಪಡೆದಿದ್ದು ದೇಶ ವಿದೇಶಗಳಲ್ಲಿ ಮಾರಾಟವಾಗುತ್ತಿದೆ. ಇಲ್ಲಿನ ಸಿಲ್ಕ್‌ಫ್ಯಾಕ್ಟರಿಯಲ್ಲಿ ತಯಾರಾಗುವ ರೇಷ್ಮೆ ಸೀರೆಗಳಂತೂ ವಿಶ್ವಾದ್ಯಂತ ಮನ್ನಣೆ ಪಡೆದಿದೆ. ವಿದೇಶಗಳ ಸ್ತ್ರೀಯರು ಭಾರತದ ನಾರಿಯರಂತೆ ಸೀರೆಗಳನ್ನುಡಲು ವಿಶೇಷವಾಗಿ ಬಯಸು ತ್ತಾರೆ.

ಮೈಸೂರಿಗೆ ಆಗ್ನೇಯಕ್ಕೆ ಇರುವ ಚಾಮುಂಡಿಬೆಟ್ಟವಂತೂ ಈ ಪಟ್ಟಣಕ್ಕೆ ಪರಮಶೋಭೆಯನ್ನು ಕೊಟ್ಟಿದೆ. ಮೈಸೂರಿ ನಲ್ಲಿ ನಿಂತು ನೋಡುವವರಿಗೆ ಆಕಾಶಕ್ಕೆ ಅಂಟಿದಂತೆ ಕಾಣುವ ಇಡೀ ಬೆಟ್ಟದ ಚೆಲುವು ಚಿತ್ತಾಕರ್ಷಕವಾಗಿರುತ್ತದೆ. ರಾತ್ರಿಯ ವೇಳೆಯಂತೂ ಅದರ ಶಿರೋಭಾಗದಲ್ಲಿ ಬೆಳಕಿನ ಮಾಲೆಹಾಕಿದಂತಿರುವ ವಿದ್ಯುದ್ದೀಪಗಳ ಸಾಲು ನೋಡಲು ಅತ್ಯಂತ ಸುಂದರ. ಹಾಗೆಯೇ ಬೆಟ್ಟದ ಮೇಲೆ ನಿಂತು ರಾತ್ರಿಯ ವೇಳೆ ಮೈಸೂರನ್ನು ವೀಕ್ಷಿಸುವ ಪ್ರೇಕ್ಷಕನಿಗಂತೂ ಮಹದಾನಂದವಾಗುತ್ತದೆ. ಇಡೀ ಪಟ್ಟಣ ಬಣ್ಣಬಣ್ಣದ ಅಗಣಿತ ವಿದ್ಯುದ್ದೀಪಗಳಿಂದ ತುಂಬಿಕೊಂಡು ಬಾನೇ ಕೆಳಗೆ ಬಿದ್ದು ಅಲ್ಲಿನ ನಕ್ಷತ್ರಗಳೆಲ್ಲ ಚೆಲ್ಲಾಪಿಲ್ಲಿ ಯಾಗಿ ಮೈಸೂರು ಪಟ್ಟಣದ ಮೇಲೆ ಚೆಲ್ಲಿ ಹೋಗಿರುವುದೇನೊ ಎನ್ನುವ ಭ್ರಾಮಕ ಕೌತುಕವನ್ನು ಪ್ರೇಕ್ಷಕನೆದೆಯಲ್ಲಿ ಹುಟ್ಟಿಸು ತ್ತದೆ. ಬೆಟ್ಟದ ಒಂದು ಕೊನೆಗಿರುವ ಲಲಿತಾದ್ರಿಯಂತೂ ನೈಸರ್ಗಿಕವಾದ ಒಂದು ಸೌಂದರ್ಯಧಾಮವೇ ಆಗಿದೆ. ಅಲ್ಲಿ ನಿಂತು ಮೈಸೂರನ್ನು ನೋಡುವುದೂ ಒಂದು ಅಪೂರ್ವ ಅನುಭವವೇ ಸರಿ. ಬೆಟ್ಟದ ಮೇಲಿರುವ ಚಾಮುಂಡೇಶ್ವರಿಯ ದೇವಸ್ಥಾನಕ್ಕೆ ಹಿಂದೂ ಯಾತ್ರಿಕರು ಪ್ರತಿದಿನವೂ ಹೋಗುತ್ತಲೇ ಇರುತ್ತಾರೆ. ಮೇಲೆ ಹೋಗಲು ಉತ್ತಮವಾದ ಟಾರು ರಸ್ತೆಯಿರುವುದ ರಿಂದ ಕೇವಲ ಯಾತ್ರಿಕರೇ ಅಲ್ಲದೆ ವಿನೋದ, ವಿಹಾರಗಳಿಗಾಗಿ ಅಲ್ಲದೆ ಮೋಟಾರು, ಬಸ್ಸುಗಳಲ್ಲಿ ಹೋಗುವ ಪ್ರವಾಸಿಗರೂ ಇರುತ್ತಾರೆ. ನಡೆದು ಹೋಗುವೆನೆನ್ನುವವರು ಸರಿಸುಮಾರು ಒಂದು ಸಾವಿರ ಮೆಟ್ಟಲುಗಳನ್ನು ಏರಿ ಹೋಗಬೇಕು. ಹಾಗೆ ಏರಿ ಹೋಗುವಾಗ ಬೆಟ್ಟದ ನಡುವೆ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ನಂದಿ ಕಣ್ಣಿಗೆ ಬೀಳುವುದು. ಇದು ಒಂದೇ ಶಿಲೆಯಿಂದ ಕೆತ್ತಲ್ಪಟ್ಟಿದೆ, ಈ ನಂದಿ ತನ್ನ ಮೂರು ಕಾಲುಗಳನ್ನೂ ಮಡಿಸಿ ವಿಶ್ರಾಂತಿ ಪಡೆಯುತ್ತಿರುವಂತೆ ಆರಾಮವಾಗಿ ಮಲಗಿದ್ದರೂ ಒಂದು ಕಾಲನ್ನು ಮಾತ್ರ ಕೆರೆದು ಗೊರಸನ್ನು ನೆಲದ ಮೇಲಿಟ್ಟಿದೆ. ಆ ಕಾಲು ಸಂದಿನಿಂದ ಒಬ್ಬ ಮನುಷ್ಯ ತೊಂದರೆಯಿಲ್ಲದೆ ತೂರಿ ಹೋಗಬಹುದು. ಚಾಮುಂಡೇಶ್ವರಿಯದು ದ್ರಾವಿಡ ಶಿಲ್ಪವಿರುವ, ಹಳೆಯ ದೇವಸ್ಥಾನ. ಇಲ್ಲಿ ವರ್ಷಕ್ಕೊಮ್ಮೆ ನವರಾತ್ರಿಯಾದ ಕೆಲವು ದಿನಗಳಲ್ಲಿ ರಥೋತ್ಸವ ನಡೆಯುತ್ತದೆ. ತುಂಬಾ ಜನ ಸೇರುತ್ತಾರೆ. ಅದಾದ ಮೂರು ಅಥವಾ ನಾಲ್ಕು ದಿನಗಳಲ್ಲಿ ರಾತ್ರಿಯ ವೇಳೆ ಸುತ್ತಲೂ ವಿದ್ಯುದ್ದೀಪಗಳಿಂದ ಅಲಂಕೃತವಾದ ದೇವೀಕೊಳದಲ್ಲಿ, ತೆಪ್ಪದ ಮೇಲೆ, ಬಗೆ ಬಗೆಯ ಹೂವು ಮತ್ತು ವಿದ್ಯುದ್ದೀಪಗಳಿಂದ ಸಿಂಗರಿಸಿದ ಮಂಟಪದಲ್ಲಿ, ಸಿಂಹವಾಹನೆಯಾದ ಅಮ್ಮನವರ ಉತ್ಸವಮೂರ್ತಿ ಯನ್ನು ಕುಳ್ಳಿರಿಸಿ ತೆಪ್ಪೋತ್ಸವ ನಡೆಯುತ್ತದೆ. ಮಂಟಪದಲ್ಲಿ ಮೂರ್ತಿಯ ಮುಂದೆ ಪ್ರಸಿದ್ಧ ಸಂಗೀತಗಾರರು ಕುಳಿತು ಶ್ರದ್ಧಾ ಭಕ್ತಿಗಳಿಂದ ದೇವಿಗೆ ತಮ್ಮ ಸಂಗೀತದ ನಿವೇದನೆ ಮಾಡುವರು. ಇದು ದೇವತೆಗಳೂ ನೋಡಲು ಆಸೆಪಡುವಂತಹ ದೃಶ್ಯ. ಇದನ್ನು ವೀಕ್ಷಿಸಲೂ ಬಹುಮಂದಿ ನೆರೆಯುವರು.

ಮೈಸೂರಿನ ಹೆಸರೆತ್ತಿದೊಡನೆಯೇ ಯಾರಿಗಾದರೂ ದಸರಾ ಉತ್ಸವವು ನೆನಪಿಗೆ ಬರುವುದು ಸಹಜವೇ. ಹಿಂದಿನಿಂದಲೂ ಮೈಸೂರಿನ ರಾಜರುಗಳಿಂದ ಇದು ಬಹು ವಿಜೃಂಭಣೆಯಿಂದ ಆಚರಿಸಲ್ಪಡುತ್ತಿದೆ. ಹಿಂದೆ ವಿಜಯನಗರದ ದೊರೆಗಳೂ ಹೀಗೆಯೇ ವೈಭವದಿಂದ ಈ ಹಬ್ಬವನ್ನು ಆಚರಿಸುತ್ತಿದ್ದರಂತೆ. ಅದೇ ಸಂಪ್ರದಾಯವನ್ನೇ ಮೈಸೂರಿನ ರಾಜರೂ

ಬಿಡುತ್ತಿದ್ದಾರೆ. ಮೈಸೂರಿನಲ್ಲಿ 'ನವರಾತ್ರಿ' ಎಂದು ಕರೆಯಲ್ಪಡುವ ಈ ಹಬ್ಬದ ದಿನಗಳಲ್ಲಿ ಒಂಭತ್ತು ದಿನಗಳಲ್ಲೂ ಅರಮನೆಯಲ್ಲಿ ಮಹಾರಾಜರು (ಈಗ ಗವರ್ನರು) ದೀಕ್ಷಿತರಾಗಿ ಪೂಜೆ, ಪುರಸ್ಕಾರ, ದರ್ಬಾರು ನಡೆಸುವರು. ಆ ದಿನಗಳಲ್ಲಿ ರಾತ್ರಿಯ ವೇಳೆ ಅರಮನೆಯ ಹೊರಗೋಡೆಯ ತುಂಬ ಇರುವ ಎಲ್ಲಾ ವಿದ್ಯುದ್ದೀಪಗಳನ್ನೂ ಹಚ್ಚುವುದರಿಂದ ಕಿನ್ನರ ಲೋಕವೇ ಹಠಾತ್ತನೆ ನಮ್ಮ ಕಣ್ಮುಂದೆ ಪ್ರತ್ಯಕ್ಷವಾದಂತೆ ಭಾಸವಾಗುವುದು. ಆಮೇಲೆ ಹತ್ತನೆಯ ದಿನ ಸಾಲಂಕೃತವಾದ ಪಟ್ಟದಾನೆಯ ಮೇಲೆ ಕುಳಿತು ಅರಮನೆಯಿಂದ ಊರಿನ ಹೊರಗಿರುವ ಬನ್ನೀಮಂಟಪಕ್ಕೆ ಮೆರವಣಿಗೆಯಲ್ಲಿ ಹೋಗುವರು. ಕಾಲಾಳುಗಳು, ಕುದುರೆ ಸವಾರರು, ಅಂಬಾರಿ ಆನೆಗಳು, ಪಾಶ್ಚಾತ್ಯ ಮತ್ತು ಕರ್ನಾಟಕ ಸಂಗೀತಗಳ ವಾದ್ಯಗೋಷ್ಠಿಯವರು, ಓಲಗದವರು, ಮಹಾರಾಜರ ಅಂಗರಕ್ಷಕ ಪಡೆ, ಪೋಲೀಸ್ ಮತ್ತಿತರ ಅಧಿಕಾರಿವರ್ಗ, ಪುರಪ್ರಮುಖರು, ಒಂಟೆಗಾಡಿ, ಕುದುರೆಗಾಡಿ, ಆನೆ ಗಾಡಿ, ಪಂಚಕಳಶದ ಗಾಡಿಗಳು, ಬಿರುದಾವಳಿಗಳನ್ನು ಹೊತ್ತವರು, ಬೆಳ್ಳಿಕಟ್ಟಿಗೆಯವರು—ಇವರೆಲ್ಲರ ವರ್ಣರಂಜಿತ ಉಡುಗೆ ತೊಡಿಗೆಗಳಿಂದ ಮೆರವಣಿಗೆಗೆ ವಿಶೇಷ ಕಳೆ ಬರುವುದು. ಈ ವರ್ಣಮಯ 'ಜಂಬೂಸವಾರಿ'ಯನ್ನು ನೋಡಿ ನಮ್ಮ ಮೈಸೂರಿನವರಷ್ಟೇ ಅಲ್ಲ ಭಾರತದ ಬೇರೆ ಬೇರೆ ಭಾಗದಿಂದ ನೋಡಲು ಬಂದವರಷ್ಟೇ ಅಲ್ಲ, ವಿದೇಶಗಳ ಜನರೂ ಕೂಡ ಈ ವೈಭವೋಪೇತ ದೃಶ್ಯಾವಳಿಗಳನ್ನು ಕಂಡು ನಿಬ್ಬೆರಗಿನಿಂಥ ಪರವಶರಾಗುತಾರೆ. ಹಳ್ಳಿಗಾಡಿನ ನಮ್ಮ ಮುಗ್ಧ ಬಾಂಧವರಿಗಂತೂ ಜಂಬೂ ಸವಾರಿ 'ಇಂದ್ರನ ಐಭೋಗವನ್ನೇ' ನೆನಪಿಗೆ ತರುವಂಥದು. ಈ ನವರಾತ್ರಿಯ ದಿನಗಳಲ್ಲಿ (ಅನಂತರವೂ ಕೆಲವು ದಿನ) ದಸರಾ ವಸ್ತುಪ್ರದರ್ಶನವು ವಸ್ತುಪ್ರದರ್ಶನಾಲಯದಲ್ಲಿ ನಡೆಯುವುದು. ಜೊತೆಗೆ ಅಖಿಲ ಭಾರತ ಕಲಾಪ್ರದರ್ಶನ ಸ್ಪರ್ಧೆಯೂ ನಡೆಯುವುದು.

ಮೈಸೂರಿಗೆ ಉತ್ತರ ಭಾಗದಲ್ಲಿ ಸುಮಾರು ಹನ್ನೆರಡು ಮೈಲಿ ದೂರದಲ್ಲಿ ಕಾವೇರಿ ನದಿಗೆ ಒಂದು ಅಣೆಕಟ್ಟು ಕಟ್ಟಲಾಗಿದೆ. ಹಿಂದೆ ಟಿಪ್ಪುಸುಲ್ತಾನನೂ ಸ್ವಲ್ಪ ದೂರ ಅಣೆಕಟ್ಟು ಕಟ್ಟಿಸಿ, ಅನಂತರ ಅದೇನೋ ಕಾರಣ ಅದನ್ನು ಮುಂದುವರಿಸದೆ ನಿಲ್ಲಿಸಿದ ಜಾಗದಲ್ಲೇ ಸರ್ ಎಂ. ವಿಶ್ವೇಶ್ವರಯ್ಯನವರು ಅಣೆಕಟ್ಟು ನಿರ್ಮಾಣ ಕಾರ್ಯದಲ್ಲಿ ಯಶಸ್ಸು ಪಡೆದರು. 'ಕೃಷ್ಣರಾಜಸಾಗರ ಅಣೆಕಟ್ಟು' ಎಂದು ನಾಲ್ಮಡಿ ಕೃಷ್ಣರಾಜರ ಹೆಸರನ್ನೇ ಅದಕ್ಕಿಟ್ಟರು. ಅನಂತರ ಆ ಅಣೆಕಟ್ಟಿನ ಕೆಳಗೆ ಒಂದು ಸುಂದರ ಉದ್ಯಾನದ ನಿರ್ಮಾಣವಾಯಿತು. ಶ್ರೀ ಕೃಷ್ಣನ ಕಾಲದ ಬೃಂದಾವನದಷ್ಟೇ ಇದೂ ಸಹ ಮನಮೋಹಕ ಪ್ರದೇಶವೆಂದು ಇದಕ್ಕೂ 'ಬೃಂದಾವನ' ವೆಂದೇ ನಾಮಕರಣ ಮಾಡಲಾಯಿತು. ಈ ಉದ್ಯಾನದ ಸೊಗಸನ್ನು ವರ್ಣಿಸಲಸದಳ. ಈ ಅಂತಸ್ತುಗಳ ಉಪವನದಲ್ಲಿ ನೀರಿನ ಓಟ ಮೆಟ್ಟಲು ಮೆಟ್ಟಲಾಗಿ ಇಳಿದು ಬರುವಾಗ ಬೇರೆ ಬೇರೆ ಬಣ್ಣದ ವಿದ್ಯುದ್ದೀಪಗಳ ಬೆಳಕಿನಿಂದ ಬೆಳಗಲಾಗಿದೆ. ಕೃಷ್ಣನನ್ನು ಸಂದರ್ಶಿಸಿದ ಗೋಪಿಕಾ ಸ್ತ್ರೀಯರ ವದನಾರವಿಂದಗಳಲ್ಲಿ ಆನಂದರಸವೇ ಬುಗ್ಗೆ ಬುಗ್ಗೆಯಾಗಿ ಚಿಮ್ಮುವಂತೆ ಇಲ್ಲಿನ ಚಿಲುಮೆಗಳೂ ಬುಗ್ಗೆ ಬುಗ್ಗೆಯಾಗಿ ಮೇಲೇರಿ ಬರುವ ತಮ್ಮೊಳಗಿನ ನೀರನ್ನೆಲ್ಲ ಉತ್ಸಾಹದಿಂದ ದಶದಿಕ್ಕುಗಳಿಗೂ ಚಿಮ್ಮುತ್ತದೆ. ಈ ಚಿಲುಮೆ ಒಂದನ್ನೊಂದನ್ನೂ ಹಸುರು. ಕೆಂಪು, ಕಿತ್ತಲೆ, ನೀಲಿ ಮುಂತಾದ ಒಂದೊಂದೇ ಬಣ್ಣದ ಪ್ರಕಾಶಮಾನವಾದ ವಿದ್ಯುತ್ ಪ್ರಭೆಯಿಂದ ಬೆಳಗಲಾಗಿದೆ. ನೀರಿನ ಕಾಲುವೆಯ ಉದ್ದಕ್ಕೂ ನಾನಾ ಆಕೃತಿಯ ಪಾತಿಗಳಲ್ಲಿ ಅನೇಕ ಜಾತಿಯ ಅನೇಕ ಬಣ್ಣಗಳ ಹೂಗಿಡಗಳಿವೆ, ಮಿಕ್ಕೆಡೆಗಳಲ್ಲಿ ಹುಲ್ಲು ಹಸುರಿನ ರತ್ನಗಂಬಳಿ ಹಾಸಿದೆ. ಅಲ್ಲಲ್ಲಿ ಲತಾಗೃಹಗಳಿವೆ. ಮಂಟಪಗಳಿವೆ. ಸೊಂಪಾಗಿ ಬೆಳೆದ ಗಿಡ ಮರಗಳಿವೆ. ಅವುಗಳಿಗೂ ವಿದ್ಯುತ್ತಿನ ರಂಗುರಂಗಿನ ಮೋಡಿಯನ್ನು ತೋಡಿಸಲಾಗಿದೆ. ನೂರು ಬಗೆಯ ಚೆಲುವು, ನೂರು ಬಗೆಯ ಆಕರ್ಷಣೆ ಒಮ್ಮೆ ಈ ಉದ್ಯಾನದಲ್ಲಿ ಕಾಲಿಟ್ಟ ಮೇಲೆ ಬದುಕಿನ ಕಾಷ್ಟವ್ಯಸನಗಳೆಲ್ಲ ಮರೆತೇ ಹೋಗುವವು; ಹೃದಯವು ಹಕ್ಕಿ ಗರಿಯಂತೆ ಹಗುರವಾಗಿ ಆಕರ್ಷಣೆ ಎಳೆದತ್ತ ನಿರಾಯಾಸವಾಗಿ ತೇಲಿ ಹೋಗುವುದು. ಈ ಉದ್ಯಾನದ ಬೆಡಗೂ ಸಹ ಜಗತ್ತಿನ ಮೂಲೆ ಮೂಲೆಗೂ ತನ್ನ ಕೀರ್ತಿಯನ್ನು ಪಸರಿಸಿದೆ. ಮಧ್ಯೆ ಹರಡಿದ ನೀರಿನಲ್ಲಿ ಕೈಯಿಂದ ಹುಟ್ಟುಹಾಕುವ ಮತ್ತು ಯಂತ್ರ ಚಾಲಿತ ದೋಣಿಗಳಲ್ಲಿ ವಿಹಾರ ಮಾಡುವ ಸೌಕರ್ಯವನ್ನು ಏರ್ಪಡಿಸಲಾಗಿದೆ. ಬೃಂದಾವನ ಉದ್ಯಾನದ ಮೇಲ್ಭಾಗದಲ್ಲಿ ಒಂದು ದಿಬ್ಬದ ಮೇಲೆ ಕೃಷ್ಣರಾಜಸಾಗರ ಹೋಟೆಲಿನ ಭವ್ಯಕಟ್ಟಡವಿದೆ. ಅದರಲ್ಲಿ ಸುಸಜ್ಜಿತವಾದ ಆಧುನಿಕ ಕೊಠಡಿಗಳು ಅಭ್ಯಾಗತರಿಗೆ ಸಕಲ ಸೌಕರ್ಯಗಳನ್ನೂ ಒದಗಿಸಿಕೊಡುತ್ತದೆ. ಅಲ್ಲಿಂದ ಸುರುಳಿ ಬಿಚ್ಚಿದಂತೆ ಸುತ್ತಲಿನ ಗ್ರಾಮ ಪ್ರದೇಶವೆಲ್ಲವೂ ದೃಷ್ಟಿಗೆ ಗೋಚರವಾಗುತ್ತದೆ. ಈಜುವುದಕ್ಕೂ ಮೀನು ಹಿಡಿಯುವುದಕ್ಕೂ ವ್ಯವಸ್ಥೆ ಇರುವುದರಿಂದ ಅಪೇಕ್ಷೆ ಪಡುವವರು ಇದರ ಸದುಪಯೋಗ ಪಡೆದುಕೊಳ್ಳಬಹುದು. ಪಕ್ಕದಲ್ಲೇ ಟೂರಿಸ್ಟ್ ರೆಸ್ಟ್‌ಹೌಸ್ ಒಂದನ್ನು ಹೊಸದಾಗಿ ಕಟ್ಟಿದ್ದಾರೆ. ಬುಧವಾರ, ಶನಿವಾರ, ಭಾನುವಾರಗಳಲ್ಲಿ ಈ ಉಪವನದಲ್ಲಿ ವಿದ್ಯುದ್ದೀಪದ ಅಲಂಕಾರ ಮಾಡಲಾಗುವುದು.

ಮೈಸೂರು ಪಟ್ಟಣವು ತಾನು ರಾಜಧಾನಿಯಾಗಿದ್ದ ಕಾಲದ, ಸ್ವಾಭಿಮಾನ, ಗಾಂಭೀರ್ಯ, ವೈಭವ, ಕಲಾ ಸಂಪನ್ನತೆ ಎಲ್ಲ ಗುಣಗಳನ್ನೂ ಇನ್ನೂ ಹಾಗೆಯೇ ಉಳಿಸಿಕೊಂಡಿದೆ. ಇಲ್ಲಿ ಜೊತೆಗೆ ವಿಶ್ವವಿದ್ಯಾನಿಲಯವೂ ಇರುವುದರಿಂದ ಪ್ರಶಾಂತತೆ ಈ ಪಟ್ಟಣದ ಜೀವಾಳವಾಗಿದೆ. ಭಾರಿ ಉದ್ಯಮಗಳಾವುವೂ ಇಲ್ಲದಿರುವುದರಿಂದ ಇಲ್ಲಿ ಹೆಚ್ಚಾದ ಸದ್ದುಗದ್ದಲಗಳಿಲ್ಲ. ಯಾವ ವಿಚಾರವೇ ಆದರೂ ನರಗಳನ್ನು ಕೊಲ್ಲುವ ಆತುರವಿಲ್ಲ. ಸಮಾಧಾನ, ಶಾಂತಿ, ತೃಪ್ತಿ ಇವು ಇಲ್ಲಿಯ ಜನರ ಸ್ವಭಾವ.

ರಾಜಾಶ್ರಯವಿದ್ದುದರಿಂದ ಹಿಂದಿನಿಂದಲೂ ಈ ಪಟ್ಟಣದಲ್ಲಿ ಕಲೆಗೆ ಅತಿಶಯವಾದ ಪ್ರೋತ್ಸಾಹ ಸಿಕ್ಕಿತು. ಸಂಗೀತವೆ ? ನಾಟಕವೆ ? ಚಿತ್ರಕಲೆಯೇ ? ನಾಟ್ಯವೆ ?—ಈ ಎಲ್ಲ ಕಲೆಗಳಲ್ಲೂ ಮೈಸೂರು ಮುಂದೆ ನಡೆದಿತ್ತು. ಶೇಷಣ್ಣನವರು ವೀಣೆ ನುಡಿಸುವುದರಲ್ಲಿ ನಿಸ್ಸೀಮರೆನಿಸಿದರೆ, ಬಾಯಿ ಹಾಡುಗಾರಿಕೆಯಲ್ಲಿ ವಾಸುದೇವಾಚಾರ್ಯರೂ, ಬಿಡಾರಂ ಕೃಷ್ಣಪ್ಪನವರೂ 'ಭೇಷ್' ಎನಿಸಿಕೊಂಡರು. ಚಿತ್ರಕಲೆಯಲ್ಲಿ ವೆಂಕಟಪ್ಪನವರದು ದೊಡ್ಡ ಹೆಸರು. ಮೈಸೂರು ಸಂಪ್ರದಾಯದ ನಾಟ್ಯದಲ್ಲಿ ಜಟ್ಟಿತಾಯಕ್ಕ ಪ್ರವೀಣೆ. ಇನ್ನು ನಾಟಕದ ವರದಾಚಾರ್ಯರ ಅಭಿನಯ ಸಾಮರ್ಥ್ಯದ ಬಗ್ಗೆ ಕೇಳದವರಾರು ? ಈ ಎಲ್ಲ ಕಲೆಗಳ ಪರಿಮಳದ ಜೊತೆಗೆ ಮೈಸೂರು ಮಲ್ಲಿಗೆ, ದಶಾಂಗ, ಶ್ರೀಗಂಧದ ಹುಡಿ, ಅಗರಬತ್ತಿಗಳ ಪರಿಮಳವೂ ಸೇರಿ ಮೈಸೂರಿನ ಗಾಳಿಯೂ ಸಹ ಸುಗಂಧಮಯವಾಗಿ ಚಲಿಸುತ್ತದೆ—ಎಂದು ರಸಿಕರೊಬ್ಬರು ಆಡಿದ ಮಾತಿನಲ್ಲಿ ತಥ್ಯಾಂಶವಿಲ್ಲದಿಲ್ಲ. ಮೈಸೂರಿನ ಶುಚಿ, ಊಟದ ರುಚಿ—ಇವನ್ನೂ ಅನೇಕರು ಮೆಚ್ಚಿಕೊಂಡಿದ್ದಾರೆ. ಈ ಕಾರಣಗಳಿಂದಲೇ ಇರಬೇಕು. ಇಲ್ಲಿಗೆ ಬರುವ ಪ್ರವಾಸಿಗರು ತೌರು ಮನೆಗೆ ಹೋದ ಹೆಣ್ಣು ಮಕ್ಕಳಂತೆ ಅನೇಕ ದಿನ ಇಲ್ಲಿಯೇ ಉಳಿದು ಬಿಡುತ್ತಾರೆ !

ಮೈಸೂರಿಗೆ ೮೦ ಮೈಲಿಗಳ ಸುತ್ತಳತೆಯಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಅವುಗಳನ್ನು ಅತಿ ಪ್ರಯಾಸವಿಲ್ಲದೆ ಸಂದರ್ಶನ ಮಾಡುವ ಅವಕಾಶ ಮೈಸೂರು ಪಟ್ಟಣಕ್ಕೆ ಬರುವ ಪ್ರವಾಸಿಗನಿಗೆ ಲಭಿಸುತ್ತದೆ: ಮೈಸೂರಿಗೆ ಸುಮಾರು ೧೦ ಮೈಲಿ ದೂರದಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಹೋಗುವ ರಸ್ತೆಯಲ್ಲಿ ಇತಿಹಾಸ ಪ್ರಸಿದ್ಧವಾದ ಶ್ರೀರಂಗಪಟ್ಟಣವಿದೆ. ಈ ದ್ವೀಪ ನಗರದ ಮುಖ್ಯಗುಡಿ ಶ್ರೀರಂಗನಾಥ ದೇವರದು. ಇದು ಗೌತಮ ಕ್ಷೇತ್ರವಾಗಿತ್ತೆಂದು ಐತಿಹ್ಯವಿದೆ. ವಿಶಿಷ್ಟಾದ್ವೈತ ತತ್ವ ಪ್ರತಿಪಾದಕರಾದ ಪೂಜ್ಯ ಶ್ರೀ ರಾಮಾನುಜಾಚಾರ್ಯರು ದಕ್ಷಿಣದ ತಮಿಳು ದೇಶದ ಶೈವ ರಾಜರ ಉಪಟಳವನ್ನು ತಾಳಲಾರದೆ ಕರ್ಣಾಟಕಕ್ಕೆ ಓಡಿಬಂದಾಗ ದ್ವಾರಸಮುದ್ರದ ಹೊಯ್ಸಳ ಬಿಟ್ಟಿದೇವನ ಆಶ್ರಯ ದೊರಕುವವರೆಗೆ ಶ್ರೀರಂಗಪಟ್ಟಣದಲ್ಲೇ ತಂಗಿದ್ದರು. ಶಾಸನಗಳ ಆಧಾರದಿಂದ ಈ ದೇವಾಲಯವನ್ನು ಕಟ್ಟಿದ ಕಾಲ ಸುಮಾರು ಕ್ರಿ.ಶ. ೧೨೦೦ ಎಂದು ತಿಳಿದು ಬರುತ್ತದೆ, ದಕ್ಷಿಣ ಭಾರತದಲ್ಲಿ ಈ ರಂಗನಾಥಸ್ವಾಮಿಯ ಮೂರು ದೇವಸ್ಥಾನಗಳಿವೆ—ಶ್ರೀರಂಗಪಟ್ಟಣ, ಶಿವನಸಮುದ್ರದಲ್ಲಿ, ಶ್ರೀರಂಗದಲ್ಲಿ, ಶ್ರೀರಂಗಪಟ್ಟಣದಲ್ಲಿ ಇರುವ ಸ್ವಾಮಿ ಆದಿರಂಗ, ಶಿವನಸಮುದ್ರದಲ್ಲಿರುವುದು ಮಧ್ಯರಂಗ, ಶ್ರೀರಂಗದಲ್ಲಿರುವುದು ಅಂತ್ಯರಂಗ. ಭಕ್ತಾದಿಗಳು ಪುಣ್ಯತಿಥಿಗಳಲ್ಲಿ ಕಾವೇರಿಯಲ್ಲಿ ಮಿಂದು ಮಡಿಯುಟ್ಟು ರಂಗನಾಥನ ಪೂಜೆಗಾಗಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಧಾವಿಸಿ ಬರುವರು. ಎರಡಾಗಿ ಕವಲೊಡೆದ ಕಾವೇರಿ ಪುನಃ ಸ್ವಲ್ಪ ದೂರದಲ್ಲಿ ಕೂಡಿಕೊಂಡುದರ ಪರಿಣಾಮವಾಗಿ ಈ ದ್ವೀಪ ರೂಪುಗೊಂಡಿತು. ಕಾವೇರಿ ತಾಯಿಯೇ ವಾತ್ಸಲ್ಯದಿಂದ ತನ್ನೆರಡೂ ಬಾಹುಗಳನ್ನು ಚಾಚಿ ಈ ಪಟ್ಟಣಕ್ಕೆ ಪ್ರಕೃತಿದತ್ತವಾದ ರಕ್ಷಣೆ ಕೊಟ್ಟಿದ್ದಾಳೆ. ಬಹುಶಃ ಈ ಕಾರಣಕ್ಕಾಗಿಯೇ ಟಿಪ್ಪೂ ಸುಲ್ತಾನನು ಒಡೆಯರಿಗೆ ರಾಜದಾನಿಯಾಗಿದ್ದ ಮೈಸೂರನ್ನು ತ್ಯಜಿಸಿ ಶ್ರೀರಂಗಪಟ್ಟಣವನ್ನೇ ತನ್ನ ರಾಜಧಾನಿಯಾಗಿ ಮಾಡಿಕೊಂಡು, ಸುತ್ತಲೂ ಬಲವಾದ ಕೋಟೆಕೊತ್ತಲುಗಳನ್ನು ಕಟ್ಟಿಸಿರಬೇಕು. ಹೈದರ್ ಮತ್ತು ಟಿಪ್ಪು ಇಬ್ಬರೂ ಮೈಸೂರಿನ ಎಲ್ಲೆಗಳನ್ನು ತಮ್ಮ ದಂಡೆಯಾತ್ರೆಗಳ ಮೂಲಕ ಮುಂದುವರಿಸುತ್ತಿದ್ದ ಕಾಲಕ್ಕೆ ಬ್ರಿಟಿಷರೂ ಕ್ರಮಕ್ರಮವಾಗಿ ಬಲಗೊಳ್ಳುತ್ತಿದ್ದರು. ಬ್ರಿಟಿಷರೇ ಭಾರತದ ನಿಜವಾದ ಶತ್ರುಗಳು ಎಂದು ಮನಗಂಡು ಹೈದರನು ಎಷ್ಟು ಎಚ್ಚರಿಸಿದರೂ ನಿಜಾಮನಾಗಲಿ ಮರಾಠರ ಪೇಶ್ವೆಯಾಗಲಿ ಒಂದುಗೂಡಿ ಬ್ರಿಟಿಷರನ್ನು ಎದುರಿಸಲು ಸಹಾಯ ಮಾಡಲಿಲ್ಲ. ಹೈದರನೊಬ್ಬನೇ ಬ್ರಿಟಿಷರೊಡನೆ ಹೋರಾಡಬೇಕಾಯಿತು. ಮದ್ರಾಸಿನ ಮೇಲೆ ದಂಡೆತ್ತಿ ಹೋಗುತ್ತಿರುವಾಗ ದಾರಿಯಲ್ಲೇ ಅವನು ಮೃತನಾದನು. ಆಗ ಮಂಗಳೂರಿನ ಪ್ರದೇಶದಲ್ಲಿದ್ದ ಟಿಪ್ಪು ಪೂರ್ಣಯ್ಯನವರ ನೆರವಿನಿಂದ ತಂದೆಯ ಅಂತ್ಯಕ್ರಿಯೆ ನಡೆಸಿ ಅನಂತರ ರಣೋನ್ಮುಖನಾಗಿ ಬ್ರಿಟಿಷರ ಮೇಲೆ ಹುಲಿಯಂತೆ ಬಿದ್ದು ಅವರನ್ನು ಸೋಲಿಸಿದನು. ಆದರೆ ಮರಾಠರೂ ನಿಜಾಮನೂ ಅವನಿಗೆ ವಿರುದ್ಧವಾಗಿ ಬ್ರಿಟಿಷರ ಪಕ್ಷ ಸೇರಿದ್ದರಿಂದ ಮುಂದೆ ಅವನು ಸೋಲನ್ನು ಅನುಭವಿಸಬೇಕಾಯಿತು. ೧೭೯೨ರಲ್ಲಿ ಕಾರನ್‌ವಾಲೀಸನು ಮರಾಠರು ಮತ್ತು ನಿಜಾಮರ ಸೈನ್ಯಗಳೊಡನೆ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಅರ್ಧ ರಾಜ್ಯವನ್ನೇ ಬಿಟ್ಟುಕೊಡಬೇಕಾಯಿತು. ಆದರೆ ಅಭಿಮಾನಧನನಾದ ಟಿಪ್ಪೂ ಬ್ರಿಟಿಷರನ್ನು ಹೇಗಾದರೂ ಮಾಡಿ ಮಟ್ಟಹಾಕಬೇಕೆಂದು ಫ್ರೆಂಚರ ನೆಪೋಲಿಯನ್ ಬೊನಪಾರ್ಟ್‌ನೊಡನೆ ಸಂಧಾನ ನಡೆಸಲಾರಂಭಿಸಿದನು. ಆದರೆ ಅವನಿಗೆ ದೈವ ವ್ಯತಿರಿಕ್ತವಾಗಿತ್ತು. ನೈಲ್ ಕಾಳಗದಲ್ಲಿ ನೆಪೋಲಿಯನ್ ಸೋತುದರಿಂದ ಟಿಪ್ಪೂವಿಗೆ ಯಾರ ಸಹಾಯವೂ ಸಿಗುವ ಆಶಾಕಿರಣವೇ ಕಾಣದ ಏಕಾಂಗಿಯಾದನು. ಕ್ರಿ.ಶ. ೧೭೯೯ರಲ್ಲಿ ಭಾರಿ ಬ್ರಿಟಿಷ್ ಸೈನ್ಯವು ಲಾರ್ಡ್ ವೆಲ್ಲೆಸ್ಲಿಯ ಸೇನಾಧಿಪತ್ಯದಲ್ಲಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿತು. ಜೊತೆಗೆ ಮರಾಠರ ನಿಜಾಮರ ಸೈನ್ಯವೂ ಕೂಡಿ ಕೊಂಡುದರಿಂದ ಟಿಪ್ಪೂ ನಿಸ್ಸಹಾಯಕನಾದನು. ಆದರೂ ಮಹಾ ಪರಾಕ್ರಮದಿಂದ ಹೋರಾಡುತ್ತ ಯುದ್ಧ ಭೂಮಿಯಲ್ಲೇ ವೀರನಂತೆ ಮಡಿದನು. ಈ ಕದನದಲ್ಲಿ ರಾಜಧಾನಿಯಾಗಿ ಮೆರೆಯುತ್ತಿದ್ದ ಶ್ರೀರಂಗಪಟ್ಟಣವು ತನ್ನ ಸೌಭಾಗ್ಯವನ್ನೆಲ್ಲ ಕಳೆದುಕೊಂಡು ಕಳಾಹೀನವಾಯಿತು. ಬ್ರಿಟಿಷರು ಟಿಪ್ಪೂವಿನ ಮೇಲಣ ರೋಷವನ್ನು ಶ್ರೀರಂಗಪಟ್ಟಣದ ಮೇಲೆ ತೀರಿಸಿಕೊಂಡರು. ಅಲ್ಲಿದ್ದ ಟಿಪ್ಪೂವಿನ ಅರಮನೆಯನ್ನು ನಾಶಮಾಡಿದರು. ಆದರೆ ಕೋಟೆಯ ಹೊರಗೆ ಕಾವೇರಿ ನದೀ ತೀರದಲ್ಲಿರುವ ಟಿಪ್ಪು ವಿಶ್ರಾಂತಿಗೆಂದು ಕಟ್ಟಿಸಿದ ಅರಮನೆ ಮಾತ್ರ ಹಾಗೆಯೇ

ವಾಕಿದಿದೆ. ಇದು ಎತ್ತರವಾಗಿ ಜಗಲಿಯ ಮೇಲೆ ಕಟ್ಟಲ್ಪಟ್ಟಿದೆ. ಇದರ ಮುಂಭಾಗದಲ್ಲಿ ಎತ್ತರವಾಗಿರುವ ಕಂಬಗಳಿಂದ ಕೂಡಿದ ಕೈಸಾಲೆ ಇದೆ. ನಾಲ್ಕು ದಿಕ್ಕುಗಳಲ್ಲಿಯೂ ಉಪ್ಪರಿಗೆಗೆ ಹತ್ತಿಹೋಗಲು ಮೆಟ್ಟಿಲುಗಳು ಕಟ್ಟಲ್ಪಟ್ಟಿವೆ. ಉಪ್ಪರಿಗೆಯಲ್ಲಿ ಸುಲ್ತಾನನ ಕೋಣೆ ಹಾಗೂ ಅವನ ಜನಾನಾಕ್ಕೆ ಸೇರಿದ ಹೆಂಗಸರ ಕೋಣೆಗಳು ಇವೆ. ದೊಡ್ಡ ದರ್ಬಾರು ಸಭಾಂಗಣಗಳ ಮೇಲೆ ಬಾಹಿರ ಮೊಗಸಾಲೆಯಿದೆ. ಸುಲ್ತಾನನ ದರ್ಬಾರು ಅಲ್ಲಿಂದಲೇ ನಡೆಯುತ್ತಿತ್ತು. ಕೈಸಾಲೆಯ ಗೋಡೆಗಳ ಮೇಲೆಲ್ಲಾ ವರ್ಣರಂಜಿತ ಚಿತ್ರಗಳು ತುಂಬಿವೆ. ಆ ಚಿತ್ರಗಳು ಸುಲ್ತಾನನ ರಾಜ್ಯಭಾರ ಕಾಲದಲ್ಲಿ ನಡೆದ ಮುಖ್ಯ ಘಟನೆಗಳನ್ನೂ ಯುದ್ಧ ಸಂಗತಿಗಳನ್ನೂ ಪ್ರತಿಬಿಂಬಿಸುತ್ತವೆ. ಗೋಡೆಗಳ ಒಳಭಾಗದ ಕಂಬಗಳು ಮತ್ತು ಛಾವಣಿಯ ಕೆಳಭಾಗಗಳು ತರತರಹದ ಬಣ್ಣ ಮತ್ತು ಚಿನ್ನದ ಮುಲಾಮಿನಿಂದ ಸಿಂಗರಿಸಲ್ಪಟ್ಟಿವೆ. ಅರಮನೆಯ ಸುತ್ತಲೂ ರಮಣೀಯವಾದ ತೋಟ. ಅರಮನೆಯ ಮುಂಭಾಗ ಮತ್ತು ಹಿಂಭಾಗಗಳಲ್ಲಿ ನೀರು ಹರಿಯುವ ಕಾಲುವೆಯೂ ಕಾರಂಜಿಗಳೂ ಇವೆ. ಟಿಪ್ಪುವಿಗೆ ಸೇರಿದ ಕೆಲವು ಪದಾರ್ಥಗಳನ್ನಿಟ್ಟಿರುವ ಒಂದು ವಸ್ತು ಪ್ರದರ್ಶನಾಲಯವಿದೆ. (ದರಿಯಾದೌಲತ್ ಎಂದರೆ 'ಸಂಪತ್ತಿನ ನದಿ' ೧೭೮೪ರಲ್ಲಿ ಈ ಅರಮನೆ ಕಟ್ಟಲ್ಪಟ್ಟಿತು). ಇಂಗ್ಲಿಷ್ ಖೈದಿಗಳನ್ನು ಇಡುತ್ತಿದ್ದ ಕೋಣೆಗಳು ಕತ್ತಲು ಕತ್ತಲಾಗಿ ನೋಡುವವರಿಗೆ ಭಯ ಹುಟ್ಟಿಸುವಂತಿವೆ. ಶ್ರೀರಂಗಪಟ್ಟಣದ ಹತ್ತಿರವಿರುವ ಗಂಜಾಮಿನಲ್ಲಿ ನಿರ್ಮಿಸಲಾಗಿರುವ ಗುಂಬಜ್ ಕಟ್ಟಡವು ವಾಸ್ತುಶಿಲ್ಪದಲ್ಲಿ ಸಾಧಾರಣವಾಗಿದ್ದರೂ ದರಿಯಾ ದೌಲತ್ತಿನಂತೆ ಇದೂ ಸಹ ಸುಂದರವಾದ ಉಪವನದ ನಡುವೆ ಇರುವುದರಿಂದ ಅಂದವಾಗೇ ಕಾಣುತ್ತದೆ. ಶ್ರೀರಂಗಪಟ್ಟಣದ ಕೋಟೆಯೊಳಗೆ ೧೭೮೭ರಲ್ಲಿ ಕಟ್ಟಿದ ಜುಮ್ಮಾ ಮಸೀದಿ ಇದೆ. ಇದು ಹಿಂದೆ ಅದೇ ಜಾಗದಲ್ಲಿದ್ದ ದೇವಾಲಯವೊಂದನ್ನು ಕೆಡವಿ, ಅದರ ಸಾಮಾನುಗಳಿಂದಲೇ ನಿರ್ಮಿಸಲ್ಪಟ್ಟದ್ದು. ಇದರ ಎರಡು ಕೊನೆಗಳಲ್ಲಿಯೂ ಬಹು ಎತ್ತರವಾದ ಮಿನಾರುಗಳಿವೆ. ಇಟ್ಟಿಗೆ ಗಾರೆಗಳಿಂದ ಕಟ್ಟಲ್ಪಟ್ಟ ಈ ಮಿನಾರುಗಳು ನೋಡುವುದಕ್ಕೂ ಸುಂದರ.

ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಹೋಗುವ ಪ್ರವಾಸಿಗರು ಪಶ್ಚಿಮವಾಹಿನಿಯ ಸಮೀಪದಲ್ಲಿ ಶ್ರೀರಂಗಪಟ್ಟಣಕ್ಕೆ ಕೇವಲ ಒಂದು ಮೈಲಿ ದೂರದಲ್ಲಿರುವ ರಂಗನತಿಟ್ಟನ್ನು ನೋಡುವುದೊಳಿತು. ಇಂತಹ ಪಕ್ಷಿಗಳ ಆಶ್ರಯಸ್ಥಾನವು ಭಾರತದಲ್ಲೇ ಅತಿ ವಿರಳವೆಂದು ಹೇಳಬೇಕು. ಮೊಸಳೆಗಳಿಂದ ನಿಬಿಡವಾದ ಕಾವೇರಿ ನದಿಯ ಈ ಪ್ರದೇಶದಲ್ಲಿ ಅಲ್ಲಲ್ಲಿ ಪುಟ್ಟ ಪುಟ್ಟ ದ್ವೀಪಗಳಿವೆ. ಇವುಗಳಲ್ಲೇ ಎತ್ತರವೂ ಗಂಭೀರವೂ ಜನಸಂಚಾರಿಯೂ ಆದ, ಬೆಳ್ಳಕ್ಕಿ ಜಾತಿಗೆ ಸೇರಿದ ವಿಧ ವಿಧದ ಕೊಕ್ಕರೆ ಅಥವಾ ಬಕ ಪಕ್ಷಿಗಳು ವಾಸಿಸುತ್ತವೆ. ಪ್ರಮುಖವಾಗಿ ಹೆರನ್ ಹಕ್ಕಿಗಳು ಅಂದರೆ ಉದ್ದ ಕಾಲಿನ ಒಂದು ಜಾತಿಯ ಕ್ರೌಂಚ ಪಕ್ಷಿಗಳು ಮರಿ ಮಾಡಿ ಅಭಿವೃದ್ಧಿಯಾಗುವ ಜಾಗ. ಮುಂಗಾರು ಮಳೆಯ ಆಗಮನದ ಮೇಲೆಯೇ ಇವುಗಳು ಮೊಟ್ಟೆಯಿಟ್ಟು ಮರಿ ಮಾಡುವ ಕಾಲ ನಿರ್ಧಾರವಾಗುವುದು. ಸಾಧಾರಣವಾಗಿ ಜೂನ್ ತಿಂಗಳಿನಿಂದಲೇ ಹಕ್ಕಿಗಳು ಆಗಮಿಸಲಾರಂಭಿಸುತ್ತವೆ. ಜುಲೈ ತಿಂಗಳ ಉತ್ತರಾರ್ಧ ಮತ್ತು ಆಗಸ್ಟು ತಿಂಗಳಿನ ವೇಳೆಗೆ ಮರಿಮಾಡುವ ಕ್ರಿಯೆ ಪೂರ್ಣಗೊಂಡಿರುತ್ತದೆ.

ಮೈಸೂರು ಪಟ್ಟಣಕ್ಕೆ ದಕ್ಷಿಣದಲ್ಲಿ ಪವಿತ್ರ ಶೈವಕ್ಷೇತ್ರವಾದ ನಂಜನಗೂಡು ಸುಮಾರು ಹನ್ನೆರಡು ಮೈಲಿ ದೂರದಲ್ಲಿದೆ. ಕಪಿನಿ ನದಿಯ ದಂಡೆಯ ಮೇಲಿದೆ ಊರು. ನಂಜುಂಡೇಶ್ವರನ ಗೂಡು (ಗುಡಿ) ಎನ್ನುವುದರಿಂದಲೇ ಈ ಊರಿಗೆ ಪ್ರಾಮುಖ್ಯತೆ ಬಂದಿದೆ. ಈ ದೇವರು ಎಂದರೆ ಜನಕ್ಕೆ ಬಹಳ ಭಕ್ತಿ. ಎಂತಹ ಕಾಹಿಲೆಯನ್ನೂ 'ನಮ್ಮಪ್ಪ ಹಕೀಂ ನಂಜುಂಡ ಗುಣ ಪಡಿಸುವನು' ಎಂದೇ ಅವರ ನಂಬಿಕೆ. ಜನರ ನಂಬಿಕೆಯನ್ನು ಪುಷ್ಟೀಕರಿಸುವಂತೆ ಒಂದು ಐತಿಹ್ಯವೂ ಜನಜನಿತವಾಗಿದೆ. ಟಿಪ್ಪುಸುಲ್ತಾನನ ಪಟ್ಟದ ಆನೆಗೆ ಕಣ್ಣು ಬೇನೆಯಾಗಿ ಏನೇನು ಚಿಕಿತ್ಸೆ ನಡೆಸಿದರೂ ಗುಣವಾಗದಿರಲು ಆಸ್ತಿಕರೊಬ್ಬರ ಮಾತಿನಂತೆ ಅದನ್ನೂ ನಂಜನಗೂಡಿಗೆ ಕಳುಹಿಸಿಕೊಟ್ಟನೆಂತಲೂ ದೇವರ ತೀರ್ಥ ಗಂಧಗಳ ಲೇಪನದಿಂದ ಎರಡೇ ದಿನದಲ್ಲಿ ಆನೆ ಎಂದಿನಂತೆ ಗುಣ ಹೊಂದಿತೆಂತಲೂ ವಿಸ್ಮಿತನಾದ ಸುಲ್ತಾನ 'ಹಕೀಮ ನಂಜುಂಡ'ನಿಗೆ ದತ್ತಿ ಬಿಟ್ಟಿರುವನೆಂತಲೂ ಪ್ರತೀತಿ. ಇಲ್ಲಿ ಕೆಲವು ಧರ್ಮಶಾಲೆಗಳಿವೆ. ಒಂದು ಪ್ರವಾಸಿ ಬಂಗಲೆಯೂ ಇದೆ. ವರ್ಷೇ ವರ್ಷೇ ಇಲ್ಲಿ ನಡೆಯುವ ರಥೋತ್ಸವಕ್ಕೆ ಅನೇಕ ಮಂದಿ ಹೋಗುತ್ತಾರೆ.

ನಂಜನಗೂಡಿನಿಂದ ಬಿಳಿಗಿರಿ ರಂಗನ ಬೆಟ್ಟ ೩೮ ಮೈಲಿ ದೂರ. ಇದು ಸುಮಾರು ೫೦೯೧ ಅಡಿ ಎತ್ತರವಿರುವುದರಿಂದಲೂ ಇವರ ತಪ್ಪಲು ತೇಗ, ಹೊನ್ನೆ, ಗಂಧ, ಬಿದಿರು, ಮತ್ತಿ ಮುಂತಾದ ಮರಗಳ ಅತಿ ನಿಬಿಡವಾದ ಕಾಡುಗಳನ್ನು ಹೊಂದಿರುವುದರಿಂದಲೂ ಈ ಕಾಡುಗಳು ಹುಲಿ, ಆನೆ, ಕಾಡುಕೋಣ ಮುಂತಾದ ಪ್ರಾಣಿಗಳ ನಿವಾಸಸ್ಥಾನವಾಗಿರುವುದರಿಂದಲೂ ಈ ವೈಷ್ಣವ ಬೆಟ್ಟವು ನೀಲಗಿರಿ, ನಂದಿಗಳಂತೆ ಒಂದು ಆಹ್ಲಾದಮಯ ಗಿರಿಧಾಮವಾಗಲು ಸಕಲ ಯೋಗ್ಯತೆಗಳನ್ನೂ ಪಡೆದಿದೆ. ಪ್ರಕೃತಿ ಸೊಬಗಿನಲ್ಲಿ ಅವುಗಳನ್ನೂ ಒಂದು ಕೈ ಮೀರಿಸುವುದೆಂದರೂ ಸರಿಯೇ. ಅದರಲ್ಲೂ ದೇವಾಲಯದ ಪಕ್ಕದ ಎತ್ತರದ ಪ್ರದೇಶದಲ್ಲಿ ನಿಂತು ನೋಡಿದರೆ ನಮ್ಮ ಕಣ್ಮುಂದೆಯೇ ಪ್ರಪಾತದ ಕೆಳಗೆ ಮೆಟ್ಟಿಲು ಮೆಟ್ಟಲಾಗಿ ಇಳಿದು, ಬೆಳೆದು ನಿಂತಿರುವ ಆ ಮಹಾರಣ್ಯವನ್ನು ಮೂಕವಿಸ್ಮಿತರಾಗಿ ನೋಡುತ್ತಿರುವಂತೆಯೇ ಪ್ರಪಾತದ ಆಳದಲ್ಲಿ ಪುಣ್ಯವಿದ್ದರೆ ಒಮ್ಮೊಮ್ಮೆ ಒಂದು ಸಲಗನೋ ಒಂದು ಕಾಡುಕೋಣನೋ ಕಣ್ಣಿಗೆ ಬೀಳುವುದೂ ಉಂಟು. ಓಹ್, ಅದೊಂದು ಮೈನವಿರೇಳುವ ದೃಶ್ಯ !

ಇಂಥ ಕಡೆ ಪ್ರವಾಸಿಬಂಗಲೆಯೊಂದಿದ್ದರೂ ಊಟದ ವ್ಯವಸ್ಥೆ ಇಲ್ಲದಿರುವುದರಿಂದ ಸಧ್ಯಕ್ಕೆ ಪ್ರವಾಸಿಗರು ತಾವೇ ಅನಿವಾರ್ಯವಾಗಿ ಊಟದ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ. ಇಲ್ಲಿನ ಆದಿವಾಸಿಗಳಾದ ಸೋಲಿಗರಿಗೆ ಈ ಬಿಳಿಗಿರಿ ರಂಗನಲ್ಲಿ ಬಹಳ ಭಕ್ತಿ. ಈ ದೇವರನ್ನು ಅವರು 'ಭಾವ' ಎಂದು ಸಂಬೋಧಿಸುವರು. ಇದಕ್ಕೊಂದು ಐತಿಹ್ಯವಿದೆ. ಸೋಲಿಗರ ಕುಲದ ಯಜಮಾನನ ಹೆಸರು ಬೊಮ್ಮೇಗೌಡ ಅವನ ಏಳು ಜನ ಹೆಣ್ಣು ಮಕ್ಕಳಲ್ಲಿ ಕೊನೆಯವಳಾದ ಕುಸುಮಾಲೆಯೇ ಎಲ್ಲರಿಗಿಂತಲೂ ಚೆಲುವೆ. ಇವಳು ಮಹಾಭಕ್ತೆ. 'ದೇವರೇ ನನ್ನನ್ನು ವರಿಸು' ಎಂದು ಆ ಬಿಳಿಗಿರಿ ರಂಗನಲ್ಲಿ ಅವಳು ಮೊರೆಯಿಟ್ಟಳು. ಅವಳ ಭಕ್ತಿಗೆ ದೇವರು ಮೆಚ್ಚಿ, ಅವಳನ್ನು ವರಿಸಿದ್ದಲ್ಲದೆ, ತನ್ನ ಊಳಿಗಕ್ಕೆ ಸೋಲಿಗರನ್ನೇ ನೇಮಿಸಿಕೊಂಡನು. ಅಂದರೆ—ಪ್ರಕೃತಿಯ ನಲವಿಗೆ ಪುರುಷ ಒಲಿದಂತಾಯಿತಲ್ಲವೆ ?...ಅಂದರೆ—ಅಂತಹ ನೈಸರ್ಗಿಕ ಚೆಲುವಿನ ಮುಂದೆ ಭಗವಂತನು ಮಣಿದಂತಾಯಿತಲ್ಲವೆ ?

ಶ್ರೀರಂಗಪಟ್ಟಣ ತಾಲ್ಲೂಕಿನ ಸುಪ್ರಸಿದ್ಧ ಪವಿತ್ರ ಕ್ಷೇತ್ರ ಯದುಗಿರಿ ಬೆಟ್ಟದ ಮೇಲುಗಡೆ ಕಟ್ಟಿರುವುದರಿಂದ ಇದು ಮೇಲುಕೋಟೆ; ಶ್ರೀವೈಷ್ಣವರ ಕೇಂದ್ರವಾದ ಇದು ಮೈಸೂರು ಪ್ರದೇಶದ ಉಳಿದೆಲ್ಲ ಕ್ಷೇತ್ರಗಳಿಗಿಂತಲೂ ಶ್ರೇಷ್ಠವಾದದ್ದು ಎನ್ನುವ ಅರ್ಥದಲ್ಲಿ! ಮೈಸೂರು ಪಟ್ಟಣದಿಂದ ಇಲ್ಲಿಗೆ ೩೪ ಮೈಲಿಗಳ ಅಂತರ. ೧೨ನೇ ಶತಮಾನದ ಆದಿ ಭಾಗದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಮಂಡಿಸಿದ ಆಚಾರ್ಯ ಶ್ರೀರಾಮಾನುಜರು ಶೈವರಾದ ಚೋಳ ರಾಜರ ಕಾಟ ಸಹಿಸಲಾರದೆ ಶ್ರೀರಂಗಪಟ್ಟಣಕ್ಕೆ ಓಡಿ ಬಂದರು. ಆಗ ಹೊಯ್ಸಳೇಶ್ವರ ಬಿಟ್ಟಿದೇವನು ಈ ಆಚಾರ್ಯರಿಂದ ಪ್ರಭಾವಿತನಾಗಿ ಜೈನ ಧರ್ಮವನ್ನು ಬಿಟ್ಟು ಶ್ರೀ ವೈಷ್ಣವ ಧರ್ಮವನ್ನು ಅಂಗೀಕರಿಸಿದನು. ಅಂದಿನಿಂದ ಅವನು ವಿಷ್ಣುವರ್ಧನನಾದನು. ಶ್ರೀ ರಾಮಾನುಜಾಚಾರ್ಯರು ಸುಮಾರು ೧೪ ವರ್ಷಗಳ ದೀರ್ಘಕಾಲ ಮೇಲುಕೋಟೆಯಲ್ಲೇ ನೆಲೆಸಿದ್ದರು. ಇಲ್ಲಿಯ ವೈಷ್ಣವ ದೇವಾಲಯದಿಂದ ಚೆಲುವರಾಯ ಸ್ವಾಮಿಯ ಸುಂದರ ವಿಗ್ರಹವನ್ನು ದೆಹಲಿಯ ಸುಲ್ತಾನನು ತನ್ನದೊಂದು ದಂಡಯಾತ್ರೆಯಲ್ಲಿ ದೆಹಲಿಗೆ ಕೊಂಡೊಯ್ದು ತನ್ನ ಮಗಳು ಬೀಬಿ ನಚ್ಚಿಯಾರಳಿಗೆ ಕೊಟ್ಟನೆಂದೂ ಈ ಸಮಾಚಾರ ತಿಳಿದ ಆಚಾರ್ಯರು ದೆಹಲಿಗೆ ಹೋಗಿ ಅರಮನೆಯಲ್ಲಿ ನಿಂತು ಸ್ತೋತ್ರ ಮಾಡಿದಾಗ ಆ ವಿಗ್ರಹವು ನಚ್ಚಿಯಾರಳ ಕೈಯಿಂದ ಇವರ ಕೈಗಳಿಗೆ ಬಂದು ಸೇರಿತೆಂದೂ ಅದನ್ನಿವರು ತಂದು ಮೇಲುಕೋಟೆಯಲ್ಲಿ ಪುನಃ ಪ್ರತಿಷ್ಠೆ ಮಾಡಿದರೆಂದೂ ವಿರಹವನ್ನು ತಾಳಲಾರದ ನಚ್ಚಿಯಾರಳು ಒಡನೆಯೇ ಕುದುರೆಯನ್ನೇರಿ ಇವರನ್ನು ಹಿಂಬಾಲಿಸಿ ಮೇಲುಕೋಟೆಗೆ ಬಂದಳೆಂದೂ ಪ್ರತಿಷ್ಠಿತವಾಗಿದ್ದ ಮೂರ್ತಿಯಲ್ಲಿ ಅವಳ ಆತ್ಮ ಲೀನವಾಗಿ ಹೋಯಿತೆಂದೂ ಐತಿಹ್ಯವಿದೆ. ಬೆಟ್ಟದ ಮೇಲ್ಭಾಗದಲ್ಲಿ ಶ್ರೀನರಸಿಂಹ ದೇವರ ದೇವಾಲಯವಿದೆ. ಈ ಮೇಲುಕೋಟೆಯಲ್ಲಿ ಪ್ರತಿ ಮಾರ್ಚಿ ಅಥವಾ ಏಪ್ರಿಲ್ ತಿಂಗಳಲ್ಲಿ ನಡೆಯುವ ವೈರಮುಡಿ ಉತ್ಸವವು ಅತಿ ವೈಭವದಿಂದ ಆಚರಿಸಲ್ಪಡುತ್ತದೆ. ವೈರಮುಡಿ ಎಂದರೆ ಉತ್ಸವದೇವರಿಗೆ ವಜ್ರದ ಕಿರೀಟದ ಅಲಂಕಾರ ಮಾಡುವುದು. ಇದೇ ಇಲ್ಲಿಯ ಭಾರಿ ಉತ್ಸವ. ಇದರಲ್ಲಿ ಸಹಸ್ರ ಸಹಸ್ರ ಸಂಖ್ಯೆಯ ಭಕ್ತಾದಿಗಳು ಸೇರುತ್ತಾರೆ. ಮೈಸೂರಿನ ರಾಜ ಒಡೆಯರು ಇಲ್ಲಿನ ಬ್ರಾಹ್ಮಣ ಮನೆತನಗಳಿಗೆ ಭೂದಾನ ಮಾಡಿದ್ದಾರೆ. ಟಿಪ್ಪುಸುಲ್ತಾನನು ಕೆಲವು ಆನೆಗಳನ್ನು ಈ ಚೆಲುವರಾಯ ದೇವಸ್ಥಾನಕ್ಕೆ ದಾನಕೊಟ್ಟಿರುವ ಬಗ್ಗೆ ಶಾಸನಾಧಾರವಿದೆ.

ಮೈಸೂರಿನಿಂದ ಉದಕಮಂಡಲಕ್ಕೆ ಹೋಗುವ ದಾರಿಯಲ್ಲಿ (ಸುಮಾರು ೫೦ ಮೈಲಿ) ಬಂಡಿಪುರದ ವನ್ಯಮೃಗಾಶ್ರಯವಿದೆ. ಇದನ್ನು ವೇಣುಗೋಪಾಲ ವನ್ಯಮೃಗಾಶ್ರಯವೆಂದೂ ಕರೆಯುವರು. ಈ ವಿಸ್ತಾರವಾದ ಅರಣ್ಯೋದ್ಯಾನದಲ್ಲಿ ಆನೆಗಳನ್ನಾಗಲಿ ಜೀಪನ್ನಾಗಲೀ ಬಾಡಿಗೆಗೆ ಗೊತ್ತುಮಾಡಿಕೊಂಡು ಸುತ್ತಾಡಿ, ವನ್ಯಮೃಗಗಳ ಸಂದರ್ಶನ ತೆಗೆದುಕೊಳ್ಳಬಹುದು. ಆನೆಗಳು ಹಿಂಡು ಹಿಂಡಾಗಿ ಅಲೆಯುವುದನ್ನು ಸಾಮಾನ್ಯವಾಗಿ ನಾವು ನೋಡಬಹುದು. ಅದೃಷ್ಟವಿದ್ದರೆ ಹುಲಿ ಎದುರಾದರೂ ಆಗಬಹುದು. ಮೈಸೂರಿಗೆ ನೈಋತ್ಯಕ್ಕೆ ಸುಮಾರು ೩೫ ಮೈಲಿ ದೂರದಲ್ಲಿ ಆಗಿಂದಾಗ ಆನೆ ಹಿಡಿಯುವ 'ಖೆಡ್ಡ' ನಡೆಯುವುದು. ಇದೊಂದು ಅತ್ಯಂತ ಸ್ವಾರಸ್ಯಕರವಾದ ಕಾರ್ಯಕ್ರಮ. ಇದನ್ನೂ ನೋಡಲು ದೇಶ ವಿದೇಶಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಜನ ನೆರೆಯುವರು. ಮೈಸೂರಿನ ಆಗ್ನೇಯಕ್ಕೆ ೨೦ ಮೈಲಿಗಳಲ್ಲಿ ಕಾವೇರಿ, ಕಪಿಲಾ ಮತ್ತು ಸ್ಫಟಿಕ ಸರೋವರಗಳ ಸಂಗಮ ಸ್ಥಳವಾದ ತಿರುಮಕೂಡಲು ನರಸೀಪುರವಿದೆ. ಅಗಸ್ತ್ಯರು ಪ್ರತಿಷ್ಠೆ ಮಾಡಿದರೆಂದು ಹೇಳಲಾದ ಇಲ್ಲಿನ ಸೈಕತಲಿಂಗದ ಚಿಪ್ಪು ಎದ್ದಿರುವ ಮೇಲುಭಾಗದಲ್ಲಿ ಸದಾ ನೀರು ತುಂಬುತ್ತಿರುವುದು ಒಂದು ವಿಶೇಷ. ಅಲ್ಲಿಂದಲೇ ಉದ್ಧರಣೆಯಿಂದ ಭಕ್ತಾದಿಗಳಿಗೆಲ್ಲ ತೀರ್ಥ ವಿನಿಯೋಗ! ನೀರು ತೆಗೆದಂತೆ ಮತ್ತೆ ಲಿಂಗದ ಶಿರದ ಮೇಲೆ ಪುನಃ ತುಂಬಿಕೊಳ್ಳುವುದು. ಇಲ್ಲಿರುವ ಇನ್ನೊಂದು ಗುಡಿಯಲ್ಲಿ ಗುಂಜಾನರಸಿಂಹ ದೇವರು ಒಂದು ಗುಲಗಂಜಿ ಹಿಡಿದು ಮಹಿಮೆಯಲ್ಲಿ ಕಾಶಿಗಿಂತಲೂ ಈ ಕ್ಷೇತ್ರವು ಇಷ್ಟು ತೂಕ ಹೆಚ್ಚು ಎಂದು ಹೇಳುತ್ತಿರುವಂತಿದೆ.

ಕರ್ಣಾಟಕದ ಶಿಲಾಶಿಲ್ಪ ವೈಭವದ ತುತ್ತತುದಿಯನ್ನು ತಿರುಮಕೂಡಲು ನರಸೀಪುರಕ್ಕೆ ಸುಮಾರು ೪ ಮೈಲಿ ದೂರದಲ್ಲಿರುವ ಸೋಮನಾಥಪುರದಲ್ಲಿ ಕಾಣಬಹುದು. ಹೊಯ್ಸಳ ದೊರೆ ಮೂರನೆಯ ನರಸಿಂಹನ ಮಂತ್ರಿ ಸೋಮದಂಡನೆಂಬುವನು ೧೨೬೮ರಲ್ಲಿ ತನ್ನ ಹೆಸರಿನಲ್ಲಿ ಸೋಮನಾಥಪುರ ಅಗ್ರಹಾರವನ್ನೂ ಈ ಸುಂದರ ಗುಡಿಯನ್ನೂ ಕಟ್ಟಿಸಿದನೆಂದು ಪ್ರದೇಶದಲ್ಲಿರುವ

ಒಂದು ಶಾಸನದಿಂದ ತಿಳಿದುಬರುತ್ತದೆ. ಎತ್ತರದ ಪ್ರಾಕಾರದ ಗೋಡೆ ಅದಕ್ಕೆ ಹೊಂದಿಕೊಂಡಂತೆ ಒಳಗಡೆಗೆ ಈಗ ಯಾವ ವಿಗ್ರಹಗಳೂ ಇಲ್ಲದೆ ಬರಿದಾದ ೬೪ ಕೈಸಾಲೆ ಮಂಟಪಗಳು. ಪೂರ್ವಕ್ಕೆ ಮಹಾದ್ವಾರವಿರುವ ಪ್ರಾಕಾರದೊಳಗೆ ಸುಮಾರು ೨೧೫ ಅಡಿ ಉದ್ದವೂ ೧೭೭ ಅಡಿ ಅಗಲವೂ ಇರುವ ವಿಸ್ತಾರವಾದ ಪ್ರಾಂಗಣ. ಅದರ ನಡುವೆ ಮೂರು ಅಡಿ ಎತ್ತರದ ನಕ್ಷತ್ರಾಕಾರದ ಜಗಲಿ. ಅದರ ಮೇಲೆ ಗುಡಿ, ಜಗಲಿಯ ಪ್ರತಿ ಮೂಲೆಗೂ ಗುಡಿಯನ್ನು ಹೊತ್ತಂತೆ ಇರುವ ಆನೆಗಳು, ಆನೆಗಳ ನಡುವೆ ಅಲ್ಲಲ್ಲಿ ಜಗಲಿಗೆ ಒರಗಿನಿಂತ ವಿಗ್ರಹಗಳು. (ಈಗ ಇವುಗಳಲ್ಲಿ ಉಳಿದಿರುವುದು ೧೨ ಆನೆ ಮತ್ತು ೧೨ ವಿಗ್ರಹಗಳು !) ಜಗಲಿಯ ಪೂರ್ವಕ್ಕೆ ಗುಡಿಯ ಪ್ರದೇಶಕ್ಕೆ ಮೆಟ್ಟಿಲುಗಳು. ಮೆಟ್ಟಿಲಿನ ಅಕ್ಕಪಕ್ಕಕ್ಕೆ ಎರಡು ಗೂಡು. ಮೆಟ್ಟಿಲೇರಿ ಹೋದರೆ ಮೂರು ಗರ್ಭಗುಡಿಗಳಿರುವ ಅವುಗಳ ಮೇಲೆ ಅಂದವಾದ ಮೂರು ಗೋಪುರಗಳಿರುವ ತ್ರಿಕೂಟಾಚಲ ದೇವಾಲಯ. ಮೂರು ಗರ್ಭಗುಡಿಗಳಲ್ಲದೆ ಗುಡಿಯೊಳಗೆ ನವರಂಗವೂ ಒಂದು ಮುಖಮಂಟಪವೂ ಇರುವುವು. ಆದರೆ ಇವೆರಡರ ಮಧ್ಯೆ ಯಾವ ಅಡ್ಡ ಗೋಡೆಯೂ ಇಲ್ಲ. ಹೊರಭಾಗದಲ್ಲಿ ನಕ್ಷತ್ರಾಕಾರವಿರುವ ಒಂದೊಂದು ಗರ್ಭಗುಡಿಯ ಮುಂದೆಯೂ ಒಂದೊಂದು ಸುಕನಾಸಿ ಮುಖಮಂಟಪದ ಸುತ್ತಲೂ ಜಾಲಂಧ್ರಗಳು.

ಗುಡಿಯೂ ಸಹ ನಕ್ಷತ್ರಾಕಾರವಾಗಿದ್ದು ಅದರ ಸುತ್ತ ಸುಮಾರು ನಾಲ್ಕು ಅಡಿ ಎತ್ತರದವರೆಗೂ ಅಡ್ಡಗಲವಾಗಿ ಒಂದರ ಮೇಲೊಂದರಂತೆ ಬಹು ಸುಂದರವಾದ ಚಿತ್ರಫಲಕಗಳಿವೆ. ಕೆಳಗಿನಿಂದ ಉತ್ಸಾಹದಿಂದ ವಿವಿಧ ಭಂಗಿಗಳಲ್ಲಿ ಮುನ್ನುಗ್ಗುತ್ತಿರುವ ಆನೆಗಳ ಸಾಲು ಆರಂಭವಾಗುವುದು. ಅದರ ಮೇಲೆ ರಾವುತರ ಸಾಲು. ಅದಕ್ಕೂ ಮೇಲೆ ಹಬ್ಬಿದ ಬಳ್ಳಿಗಳು. ಅನಂತರ ರಾಮಾಯಣ, ಮಹಾಭಾರತ, ಭಾಗವತಗಳ ಕಥಾಪ್ರಸಂಗಗಳು ನಿರೂಪಿತವಾಗಿದೆ. ಇವುಗಳ ಮೇಲೆ ಮಕರಗಳ ಸಾಲು. ಅದಕ್ಕೂ ಮೇಲೆ ಮುದ್ದಾದ ಹಂಸಗಳ ಸಾಲು. ನವರಂಗದ ಗೋಡೆಗಳಲ್ಲಿ ಮಾತ್ರ ಹಂಸಗಳಿಲ್ಲ. ಸಣ್ಣ ಸಣ್ಣ ಕಂಬಗಳೂ ಅವುಗಳ ಮಧ್ಯೆ ವಿಶೇಷವಾಗಿ ವಿಷ್ಣುವಿನ ಅವತಾರಗಳಿಗೆ ಸಂಬಂಧಪಟ್ಟ ದೇವತಾ ವಿಗ್ರಹಗಳೂ ಇರುವುವು ಈ ಸಾಲಿನ ಮೇಲೆ ಗೋಪುರಗಳ ಸಾಲು. ಅವುಗಳ ನಡು ನಡುವೆ ಸಿಂಹಗಳು. ಈ ಶಿಲಾಫಲಕಕ್ಕೂ ಜಾಲಂಧ್ರಕ್ಕೂ ಮಧ್ಯೆ ಒಂದು ಕಪೋಂಜನ. ಇದರಲ್ಲಿ ಕಂಬಗಳ ನಡುವೆ ಸಣ್ಣ ಸಣ್ಣ ವಿಗ್ರಹಗಳು. ಈ ವಿಗ್ರಹಗಳ ಮೇಲೆ ಮತ್ತು ಕೆಳಗೆ ಬಳ್ಳಿಗಳು, ಹೂದೋರಣಗಳು. ಇವುಗಳಲ್ಲಿ ಕೆಲವು ಪ್ರಹ್ಲಾದನ ಕಥೆಯನ್ನು ಉಸುರಿದರೆ ಇನ್ನು ಕೆಲವು ಮಿಥುನ ವಿಗ್ರಹಗಳು. ಗರ್ಭಗುಡಿಯ ಸುತ್ತ ಚಿತ್ರ ಫಲಕದ ಮೇಲೆ ಅತ್ಯಂತ ಮನೋಹರವಾದ ಚಿತ್ರವಿಚಿತ್ರದ ಪ್ರಭಾವಳಿಗಳಿರುವ ೧೧೪ ಸ್ತ್ರೀ ವಿಗ್ರಹಗಳು, ೮೦ ಪುರುಷ ವಿಗ್ರಹಗಳು, ಹೀಗೆ ಒಟ್ಟು ೧೯೪ ದೊಡ್ಡ ವಿಗ್ರಹಗಳಿವೆ. ವಿಗ್ರಹಗಳಲ್ಲಿ ಮುಖ್ಯವಾದುವೆಂದರೆ ನರಸಿಂಹ ದೇವರು, ವರಾಹ, ಹಯಗ್ರೀವ, ವೇಣುಗೋಪಾಲ, ಪರವಾಸುದೇವ, ಬ್ರಹ್ಮ, ಶಿವ, ಗಣಪತಿ, ಇಂದ್ರ, ಮನ್ಮಥ. ಸೂರ್ಯ, ಗರುಡ. ಲಕ್ಷ್ಮೀ. ಸರಸ್ವತಿ, ಮತ್ತು ಮಹಿಷಾಸುರ ಮರ್ದಿನಿ. ಈ ಒಂದೊಂದು ವಿಗ್ರಹವನ್ನೂ ಇಲ್ಲಿನ ಶಿಲ್ಪಿವರೇಣ್ಯರು ಒಂದೊಂದು ರತ್ನದಂತೆ ಶಿಲ್ಪಿಸಿರುವರು. ಜೊತೆಗೆ ಲಕ್ಷ್ಮಿ ಮತ್ತು ನಾರಾಯಣರನ್ನು ಹೆಗಲ ಮೇಲೆ ಹೊತ್ತಿರುವ ಗರುಡ ಮತ್ತು ಶಚೀ ದೇವಿಯೊಡ ಗೂಡಿ ಐರಾವತದ ಮೇಲೆ ಕುಳಿತ ದೇವೇಂದ್ರ–ಇವೆರಡು ಶಿಲ್ಪಗಳಂತೂ ಮತ್ತೆ ಮತ್ತೆ ನೋಡಬೇಕು ಎನಿಸುವಂಥವು. ಇವುಗಳ ಮೇಲೆ ಸಣ್ಣ ಗೋಪುರಗಳು. ಅನಂತರ ಗುಡಿಯ ಸುತ್ತಲೂ ಲೋವೆಕಲ್ಲು. ಅದರ ಮೇಲೆ ಮುಖ ಮಂಟಪಕ್ಕೆ ಸೇರಿದಂತೆ ಚಿಕ್ಕ ಚಿಕ್ಕ ಮೂರ್ತಿಗಳು ಮತ್ತು ಸಿಂಹಲಲಾಟಗಳು.

ಮೇಲಿರುವ ಮೂರು ಗೋಪುರಗಳೂ ಅತ್ಯಂತ ಸುಂದರ. ಹೊಯ್ಸಳ ರೂವಾರಿಗಳು ಇವುಗಳ ಮೇಲೆ ಚಿನ್ನ ಬೆಳ್ಳಿಗಳಲ್ಲಿ ಮಾಡು ವಂತಹ ಕುಸುರಿ ಕೆಲಸವನ್ನು ಬಿತ್ತರಿಸಿರುವರು. ಇವುಗಳ ಮುಂಭಾಗದಲ್ಲಿ ಮಾಮೂಲಾಗಿರುವ ಸಳನ ಪ್ರತಿಮೆಗೆ ಬದಲಾಗಿ ಒಳಗಿರುವ ದೇವರ ಬಹು ಸುಂದರ ವಿಗ್ರಹವಿರುವುದು. ಗೋಪುರಗಳ ಮೇಲೆ ಅಂದವಾದ ಕಳಶಗಳಿದ್ದುವಂತೆ. (ಈಗಿರುವವು ಈಚಿನವು). ಜಗಲಿಯಿಂದ ಗುಡಿಯ ಮೇಲುಗಡೆಗೆ ೩೨ ಅಡಿ ಎತ್ತರ, ಅಷ್ಟೆ, ಅಷ್ಟರೊಳಗೇ ಗುಡಿಯ ಹೊರ ಮೈಯೆಲ್ಲಾ ನಯ ನಾಜೂಕಿನ ಅತಿ ಮುದ್ದಾದ ಶಿಲ್ಪವೈಖರಿಯ ಅಮರ ಸೃಷ್ಟಿಯಾಗಿದೆ. ಮುಖಮಂಟಪದ ಒಳಗಡೆಗೆ ಸುತ್ತ ಎತ್ತರ ವಾದ ಜಗಲಿ. ನವರಂಗದಲ್ಲಿ ಚಕ್ರಕ್ಕೆ ಕೊಟ್ಟು ಕಡೆದು ನಯ ಮಾಡಿರುವಂತೆ ನಯವಾದ ಅತ್ಯಂತ ಚೆಲುವಾಗಿ ಕಂಡರಿಸಿದ ಕಂಬ ಗಳಿವೆ. ಅವುಗಳಿಗೆ ನುಣುಪಾದ ಕನ್ನಡಿಯಂತಹ ಹೊಳಪು. ಪೀಠಗಳಿಗೆ ಸ್ವಲ್ಪ ಮೇಲೆ ಚತುರಸ್ರಾಕಾರವಾಗಿದ್ದು ಆಮೇಲೆ ವರ್ತುಲಾಕಾರವಾಗಿಯೋ ನಕ್ಷತ್ರಾಕಾರವಾಗಿಯೋ ಇರುವುವು. ಅರ್ಧಗೋಳಾಕಾರವಾಗಿರುವ ಭುವನೇಶ್ವರಿಗಳು ನವರಂಗದಲ್ಲಿ ೬ ಮುಖಮಂಟಪದಲ್ಲಿ ೯, ಹೀಗೆ ಒಟ್ಟು ಹದಿನೈದಿವೆ. ಇವೆಲ್ಲವೂ ಸುಮಾರು ೩ ಅಡಿ ಆಳವಾಗಿ ಕೊರೆದಿರುವ ಚಿತ್ರಕೆಲಸ ಗಳಿಂದ ತುಂಬಿಹೋಗಿವೆ. ಈ ಭುವನೇಶ್ವರಿಗಳು ಒಂದರಂತೆ ಇನ್ನೊಂದು ಕಾಣುವುದಿಲ್ಲ. ಒಂದೊಂದಕ್ಕೂ ಒಂದು ನವೀನ ರೀತಿ, ಇವುಗಳಲ್ಲಿ ಬೆಳಕು ಸಹ ನುಸುಳಲು ಸಾಧ್ಯವಿಲ್ಲದ ಸಂದುಗೊಂದುಗಳಲ್ಲಿ ಚತುರ ರೂವಾರಿಗಳು ಅನರ್ಘ್ಯವಾದ ಕುಸುರಿ ಕೆಲಸದ ಅತ್ಯಾಶ್ಚರ್ಯಕರ ಶಿಲ್ಪಾಕೃತಿಗಳನ್ನು ಸೃಷ್ಟಿಸಿರುವರು. ದೋಷದ ಪಿತವೂ ನಿರ್ದುಷ್ಟವೂ ಆದ ಇಲ್ಲಿನ ಶಿಲ್ಪ ಕೃತಿಗಳನ್ನು ನೋಡಿದಾಗ ಇಲ್ಲಿನ ರೂವಾರಿಗಳು ಇವುಗಳನ್ನು ಬಿಡಿಸಲು ಅದೆಷ್ಟು ಸೂಕ್ಷ್ಮವಾದ ಆಯುಧಗಳನ್ನು ಉಪಯೋಗಿಸಿರಬೇಕು ಎಂದು

ವಿಸ್ಮಯಪಡುವಂತಾಗುತ್ತದೆ. ಗರ್ಭಗುಡಿ ಮತ್ತು ಸುಕನಾಸಿಯ ಬಾಗಿಲವಾಡಗಳು ಶ್ರೇಷ್ಠತರವಾದ ಚಿತ್ರಕೆಲಸಗಳಿಂದ ನಿಬಿಡವಾಗಿದೆ. ಅವುಗಳ ಕೆಳಗೆ ಸುಂದರ ದ್ವಾರಪಾಲಕರು, ಮಧ್ಯದ ಗರ್ಭಗುಡಿಯ ದ್ವಾರಮುಖದ ಮೇಲೆ ಒಂದು ವಿಷ್ಣು ವಿಗ್ರಹ, ಅದು ಕುಳಿತ ಪೀಠದ ಸುತ್ತಲೂ ದಶಾವತಾರ, ಮತ್ತು ಒಂದು ಪುಟ್ಟ ಆನೆ. ಸುಕನಾಸಿಯ ದ್ವಾರಮುಖದ ಮೇಲುಗಡೆ ಪರವಾಸುದೇವ ಮೂರ್ತಿಯೂ ಅದರ ಕೆಳಗೆ ಕೇಶವ ವಿಗ್ರಹವೂ ಇರುವುವು. ಉತ್ತರದ ಗರ್ಭಗುಡಿಯಲ್ಲಿ ೧½ ಅಡಿ ಎತ್ತರದ ಪೀಠದ ಮೇಲೆ ನಿಂತಿರುವ ೬ ಅಡಿ ಎತ್ತರದ ಸುಂದರವಾದ ಜನಾರ್ದನ ವಿಗ್ರಹ. ಇದಕ್ಕೊಂದು ಸೊಗಸಿನ ಪ್ರಭಾವಳಿ, ಅದರಲ್ಲಿ ದಶಾವತಾರ ಚಿತ್ರಗಳನ್ನು ಕೆತ್ತಲಾಗಿದೆ. ನಾಲ್ಕು ಕೈಗಳಲ್ಲೂ ಶಂಖ, ಚಕ್ರ, ಗದಾ, ಪದ್ಮಗಳು. ಸ್ವಾಮಿಯ ಎರಡು ಪಕ್ಕಗಳಲ್ಲೂ ದೇವಿಯರ ವಿಗ್ರಹಗಳು. ದಕ್ಷಿಣ ದಿಕ್ಕಿನ ಗರ್ಭಗುಡಿಯಲ್ಲಿ ಇದೇ ರೀತಿ ಪೀಠದ ಮೇಲೆ ಹೊನ್ನೆ ಮರದ ಕೆಳಗೆ, ನಿಂತಿರುವ ಆಳೆತ್ತರದ ವೇಣುಗೋಪಾಲನ ಮನೋಹರ ಮೂರ್ತಿ. ಸ್ವಾಮಿಯ ಕಾಲಿನ ಬಳಿ ಆಚೀಚೆಗೆ ಇಬ್ಬರು ದೇವಿಯರು. ಸ್ವಾಮಿಯು ಇರುವ ಎರಡೇ ಕೈಗಳಲ್ಲಿ ವೇಣುವನ್ನು ಹಿಡಿದು ನುಡಿಸುತ್ತಿರುವನು. ಮೂರ್ತಿಯ ಕೆಳಭಾಗದಲ್ಲಿ ಒಬ್ಬ ದನಗಾಹಿಯೂ, ತಮ್ಮ ಕೊರಳೆತ್ತಿ ಮನಸ್ಸೆಲ್ಲ ವೇಣುವಿನ ದಿವ್ಯಗಾನದಲ್ಲಿ ತನ್ಮಯಗೊಂಡಂತೆ ಆಲಿಸುತ್ತಿರುವ ಗೋವುಗಳು ಮತ್ತು ಋಷಿಗಳ ಪ್ರತಿಮೆಗಳು. ಮಧ್ಯದ ಗರ್ಭಗುಡಿಯಲ್ಲಿ ಪ್ರಸನ್ನ ಚೆನ್ನಕೇಶವನ ದಿವ್ಯಮೂರ್ತಿ ಇದ್ದಿತಂತೆ. ಜನಾರ್ದನ ಮತ್ತು ವೇಣುಗೋಪಾಲ ಮೂರ್ತಿಗಳ ಅಂಗವಿನ್ಯಾಸ, ಆಭರಣಗಳ ಔಚಿತ್ಯ ಮತ್ತು ಮನಮೋಹಕ ಭಂಗಿಗಳ ವಿಲಾಸಗಳನ್ನೂ ಸೌಂದರ್ಯವನ್ನೂ ಗಮನಿಸಿದಾಗ ಪ್ರಧಾನಮೂರ್ತಿಯ ದಿವ್ಯರೂಪವು ಅದೆಷ್ಟು ಮೋಹಕವಾಗಿದ್ದಿರಬೇಕೆಂದು ಊಹಿಸಬಹುದಾಗಿದೆ.

ಒಟ್ಟಿನಲ್ಲಿ ಮೃದುವಾದ ಬಳಪದ ಕಲ್ಲಿನ ಲೋಕೋತ್ತರವಾದ ಈ ಸೋಮನಾಥ ದೇವಾಲಯವು ಜೀವಕಳೆಯಿಂದ ತುಂಬಿ ಉಸಿರಾಡುತ್ತಿರುವ ಶಿಲ್ಪಗಳಿಂದ ಶ್ರೀಮಂತವಾಗಿದೆ. ಒಂದು ಸುಂದರ ಭಾವಗೀತೆಯಂತೆ ಮನೋಜ್ಞವಾಗಿದೆ. ಇಲ್ಲಿರುವ ಲಾಲಿತ್ಯ, ಸೊಬಗು ರೂಪುರೇಖಾ ಸ್ಪಷ್ಟತೆ, ವಿನ್ಯಾಸಗಳ ಸಿರಿ, ಅವಯವ ಸಂಯೋಜನೆ ಮತ್ತು ಲಾವಣ್ಯಗಳು ಈ ದೇವಾಲಯವನ್ನು ಕರ್ನಾಟಕದಲ್ಲೇ ಏಕೆ ಭಾರತದಲ್ಲೇ ಒಂದು ಅನರ್ಘ್ಯ ವಾಸ್ತು ರತ್ನವನ್ನಾಗಿ ಮಾಡಿವೆ. ಇದರ ಸಂದರ್ಶನ ಪಡೆಯಲು ಹೋಗುವ ಪ್ರವಾಸಿಗರು ಈ ಕಲೆಯ ಬಲೆಯಲ್ಲಿ ಮೋಹ ಪರವಶರಾಗಿ ಅಲ್ಲಿಯೇ ಸುಮ್ಮನೆ ನೋಡುತ್ತ ನಿಲ್ಲುವಂತಾಗುವುದು. ಸೋಮನಾಥಪುರದಿಂದ ಪೂರ್ವಕ್ಕೆ ೧೫ ಮೈಲಿ ಹೋದರೆ ಕಾವೇರಿ ನದಿಯು ಎರಡು ತೋಳುಗಳು ಬಳಸಿ ಆಗಿರುವ ಮೂರು ಮೈಲಿ ಉದ್ದ, ಮುಕ್ಕಾಲು ಮೈಲಿ ಅಗಲವಿರುವ "ದ್ವೀಪ ಪಟ್ಟಣ" ಶಿವಸಮುದ್ರವಿದೆ. ಇಲ್ಲಿ ಹಳೆಯ ಮೈಸೂರಿಗೆ ಪ್ರಥಮವಾಗಿ ಬೆಳಕು ಹರಿಸಿದ ಜಲವಿದ್ಯುತ್ ಯೋಜನೆಯಿದೆ. ४೦೦ ಅಡಿ ಕೆಳಗೆ ಭಾರತದಲ್ಲೇ ಮೊಟ್ಟಮೊದಲು ಸ್ಥಾಪಿತವಾದ ಜಲ-ವಿದ್ಯುತ್ ಕೇಂದ್ರವಿದು. ಶ್ರೀರಂಗನಾಥಸ್ವಾಮಿಯ ಗುಡಿಯಿದ್ದು ಈ ಕ್ಷೇತ್ರವು 'ಮಧ್ಯರಂಗ' ಎಂದು ಪ್ರಸಿದ್ಧವಾಗಿದೆ. (ಶ್ರೀರಂಗಪಟ್ಟಣದ ಸ್ವಾಮಿಯು 'ಆದಿರಂಗ' ಮತ್ತು ಶ್ರೀರಂಗದ ದೇವರು 'ಅಂತ್ಯರಂಗ') ಇತಿಹಾಸಪ್ರಸಿದ್ಧವಾದ ಈ ಸ್ಥಳವು ಇಬ್ಬರು ಹೆಂಗಸರ (ಗಂಗ-ರಾಜಕುಮಾರಿಯರ) ಸೊಕ್ಕಿನಿಂದ ಒಂದು ಮನೆತನವೇ ನಾಶವಾದ ಕಥೆಯನ್ನು ಮೌನವಾಗಿ ಉಸುರುತ್ತದೆ. ಈ ದ್ವೀಪದ ಬಳಿಯಿರುವ ಗಗನಚುಕ್ಕಿ ಮತ್ತು ಭರಚುಕ್ಕಿಯ ಜೋಡಿ ಜಲಪಾತಗಳು ಇಲ್ಲಿನ ಅತ್ಯಂತ ರಮಣೀಯ ಆಕರ್ಷಣೆಗಳು. ದಟ್ಟವಾದ ಕಾಡು ಮತ್ತು ಹಸುರು ತುಂಬಿದ ಕಣಿವೆಗಳಿರುವ ಸಾಲು ಸಾಲು ಬೆಟ್ಟಗಳ ಈ ಪ್ರದೇಶದಲ್ಲಿ ಈ ಎರಡು ಜಲಪಾತಗಳೂ ಕೋಡು ಬಂಡೆಗಳ ಮೇಲೆ ಭೋರ್ಗರೆಯುತ್ತ, ಅತ್ಯಂತ ರಭಸದಿಂದ ಸುಮಾರು ३೦೦ ಅಡಿ ಎತ್ತರದಿಂದ ಪಾತಾಳಕ್ಕೆ ಉರುಳುವ ದೃಶ್ಯವು ಪ್ರೇಕ್ಷಕರಿಗೆ ಒಂದು ಹಬ್ಬದಂತಿದೆ.

ಶಿವಸಮುದ್ರದಿಂದ ಕರ್ನಾಟಕದ ಅತಿ ಪುರಾತನ ರಾಜವಂಶಗಳಲ್ಲೊಂದಾದ ಗಂಗರ ರಾಜಧಾನಿ ತಲಕಾಡಿಗೆ ಹದಿನೈದೇ ಮೈಲಿ. ತಲ ಮತ್ತು ಕಾಡ ಇಬ್ಬರು ಕಿರಾತರಿಗೆ ಇಲ್ಲಿ ಮೋಕ್ಷ ದೊರೆತುದರಿಂದ ಇದಕ್ಕೆ 'ತಲಕಾಡು' ಎಂದು ಹೆಸರಾಯಿತು. 'ಮನುಮಾಂಧಾತೃ ಸಮಾನರಾದ' ರಾಜರು ವೈಭವದಿಂದ ರಾಜ್ಯವಾಳಿದ ಈ ಪಟ್ಟಣಕ್ಕೆ ಹಿಂದೆ ದಲವನಪುರ ಎಂಬ ಹೆಸರೂ ಇದ್ದಿತು. ೧೧ನೇ ಶತಮಾನದ ಆದಿಯಲ್ಲಿ ಚೋಳರು ಗಂಗರನ್ನು ಗೆದ್ದು ತಲಕಾಡನ್ನಾಕ್ರಮಿಸಿ ಅದಕ್ಕೆ ರಾಜರಾಜಪುರವೆಂಬ ಹೊಸ ಹೆಸರನ್ನಿಟ್ಟರು. ಒಂದು ಶತಮಾನದ ತರುವಾಯ ಹೊಯ್ಸಳ ವಿಷ್ಣುವರ್ಧನನು ಮೈಸೂರು ದೇಶದಿಂದಲೇ ಚೋಳರನ್ನೋಡಿಸಿ ತಲಕಾಡನ್ನು ಅವರಿಂದ ವಶಪಡಿಸಿಕೊಂಡನು. ೧೬३೪ರಲ್ಲಿ ಮೈಸೂರಿನ ರಾಜಒಡೆಯರು ವಿಜಯನಗರದ ಪ್ರತಿನಿಧಿ ಶ್ರೀರಂಗರಾಯನಿಂದ ಇದನ್ನು ಗೆದ್ದು ಮೈಸೂರು ಆದಿಪತ್ಯಕ್ಕೆ ಸೇರಿಸಿಕೊಂಡರು. ಆಗ ಶ್ರೀರಂಗರಾಯನ ಪತ್ನಿಯಾದ ಅಲಮೇಲಮ್ಮನು ಅವರು ದೇವಿಗಾಗಿ ಕೇಳಿದ ಒಡವೆಗಳು ರಾಜಒಡೆಯರೇ ಅಪಹರಿಸಲು ಮಾಡಿದ ಹೂಟವೆಂದು ಭಾವಿಸಿ, ಒಡವೆಗಳೊಡನೆ ಮಾಲಂಗಿ ಮಡುವಿನ ಬಳಿಸಾರಿ 'ತಲಕಾಡು ಮರಳಾಗಲಿ ಮಾಲಂಗಿ ಮಡುವಾಗಲಿ, ಮೈಸೂರು ದೊರೆಗೆ ಮಕ್ಕಳಿಲ್ಲದೆ ಹೋಗಲಿ' ಎಂದು ಶಪಿಸಿ ನೀರಿಗೆ ದುಮುಕಿ ಪ್ರಾಣತ್ಯಾಗ ಮಾಡಿದಳು. ಪಕ್ಕದಲ್ಲಿ ಹರಿಯುವ ಕಾವೇರಿ ನದಿಯು ತಂದೆರಚುವ ಸುಮಾರು ಒಂದು

ಮೈಲಿ ಹರಡಿರುವ ಮರಳಿನ ಬೆಟ್ಟಗಳಡಿಯಲ್ಲಿ ಹಳೇ ತಲಕಾಡು ಹೂತು ಹೋಗಿದೆ. ಈಚೆಗೆ ಹೂತು ಹೋಗಿದ್ದ ಕೆಲವು ದೇವಾಲಯಗಳನ್ನು ಹೊರಕ್ಕೆ ಕಾಣುವಂತೆ ಮರಳನ್ನು ತೋಡಿ ತೆಗೆಯಲಾಗಿದೆ. ಈ ಪ್ರದೇಶದಲ್ಲಿ ಪೂರ್ತಿಯಾಗಿ ಹೂತು ಹೋಗಿರುವ ದೇವಾಲಯಗಳ ಸಂಖ್ಯೆ ಮೂವತ್ತಾದರೂ ಆಗುತ್ತದೆನ್ನುವರು. ಗಜಾರಣ್ಯ ಕ್ಷೇತ್ರವೆಂದು ಪ್ರಸಿದ್ಧವಾದ ಈ ಪ್ರದೇಶದಲ್ಲಿ ವೈದ್ಯೇಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ ಮತ್ತು ಮುಡುಕುತೊರೆಯ ಮಲ್ಲಿಕಾರ್ಜುನ—ಹೀಗೆ ಐದು ಲಿಂಗಗಳಿವೆ. ಈ ಪಂಚಲಿಂಗಗನ್ನು ಕಾರ್ತಿಕ ಮಾಸದಲ್ಲಿ ಐದು ಸೋಮವಾರಗಳು ಬಂದಾಗ ದರ್ಶನ ಮಾಡಿದರೆ ಮಹಾಪುಣ್ಯ ಪ್ರಾಪ್ತಿ ಎಂದು ಸನಾತನಿಗಳು ನಂಬುವರು. ಈ ಕೂಟ ಹನ್ನೆರಡು ವರ್ಷಗಳಿಗೊಮ್ಮೆ ಸೇರುವಂಥದು. ಆಗ ಇಲ್ಲಿ ಭಾರಿ ಉತ್ಸವ ನಡೆಯುವುದು. ಲಕ್ಷಗಟ್ಟಲೆ ಯಾತ್ರಿಕರು ಇಲ್ಲಿ ನೆರೆಯುವರು. ಬರುವ ಡಿಸೆಂಬರ್ ತಿಂಗಳು ೧೨ನೇ ತಾರೀಖಿನಲ್ಲಿ ಆ ಪುಣ್ಯ ದಿನ ಅನೇಕ ವರ್ಷಗಳಾದ ಮೇಲೆ ಪುನಃ ಪ್ರಾಪ್ತವಾಗಲಿದೆ. ಅಂದೇ ಇಲ್ಲಿ ಸಂಭ್ರಮದ ಪಂಚಲಿಂಗ ದರ್ಶನ. ತಲಕಾಡಿನಲ್ಲಿ ಹಾಲಿ ಇರುವ ದೇವಾಲಯಗಳಲ್ಲಿ ಎರಡು ಬಹು ಮುಖ್ಯವಾದುವು-ವೈದ್ಯೇಶ್ವರವು ಶ್ರೇಷ್ಠ ಕಲೆಯನ್ನು ಪ್ರದರ್ಶಿಸುವುದು. ಇಲ್ಲಿರುವ ಹತ್ತು ಅಡಿ ಎತ್ತರದ ಭಾರಿ ದ್ವಾರಪಾಲಕರು ಬಹುಶಃ ಭಾರತದಲ್ಲೇ ಅಪರೂಪವೆನ್ನಬಹುದು. ತೊಡೆಯ ಮೇಲೆ ದೇವಿಯಿರುವ ಶಕ್ತಿ ಗಣಪತಿಯು ಅತಿ ಸುಂದರವಾಗಿದ್ದು ಅಪೂರ್ವವಾದುದೂ ಆಗಿದೆ. ಈ ಗುಡಿಯ ಇನ್ನೊಂದು ವಿಶೇಷವೆಂದರೆ ಹೊರ ಭಾಗದಲ್ಲಿ ಜೋತುಬಿದ್ದಿರುವ ಕಗ್ಗಲ್ಲಿನ ದೊಡ್ಡ ಬಳೆಗಳ ಸರಪಣಿ! ಚೋಳರಿಂದ ತಲಕಾಡನ್ನು ಸ್ವಾಧೀನಪಡಿಸಿಕೊಂಡ ವಿಜಯದ ಸಂಕೇತವಾಗಿ, ೧೧೧೭ರಲ್ಲಿ ಹೊಯ್ಸಳ ವಿಷ್ಣುವರ್ಧನನು ಕೀರ್ತಿನಾರಾಯಣ ದೇವಾಲಯವನ್ನು ಕಟ್ಟಿಸಿದನು. ಈ ಗುಡಿಯೊಳಗೆ ಎತ್ತರದ ವೇದಿಕೆಯ ಮೇಲೆ ಎಂಟು ಅಡಿ ಎತ್ತರದ ಭವ್ಯೋನ್ನತವಾದ ಕೀರ್ತಿನಾರಾಯಣ ವಿಗ್ರಹವಿದೆ. ಇಲ್ಲಿರುವ ಕೆಲವು ಮೇಲ್ಛಾವಣಿಗಳು ಮೇಲ್ತರಗತಿಯ ಚಿತ್ರಶಿಲ್ಪವನ್ನು ಹೊಂದಿವೆ. ಇಂತಹ ಉತ್ಕೃಷ್ಟ ದೇವಾಲಯವೂ ಸಹ ಯಾವಾಗಲೂ ಮರಳಿನಿಂದ ಮುಚ್ಚಲ್ಪಟ್ಟಿರುತ್ತದೆ. ಪಂಚಲಿಂಗದರ್ಶನ ಕಾಲದಲ್ಲಿ ಮಾತ್ರ ಮುಂಭಾಗದಲ್ಲಿ ಸ್ವಲ್ಪ ಮರಳು ತೆಗೆಯುವ ಪ್ರಯತ್ನ ಹಾಗೂ ಹೀಗೂ ನಡೆಯುತ್ತದೆ. ಅನಂತರ ಯಥಾಸ್ಥಿತಿ, ಪೂರ್ವೇತಿ ಪೂರ್ವಃ.

ಇಂದು ನಮ್ಮ ಪ್ರವಾಸೋದ್ಯಮವಾದರೂ ಇಂಥದೇ ಒಂದು ದುಸ್ಥಿತಿಯನ್ನು ಅನುಭವಿಸುತ್ತಿದೆ. ತಲಕಾಡಿನ ಐತಿಹಾಸಿಕ, ಪೌರಾಣಿಕ, ಕಲಾತ್ಮಕ ಸೌಂದರ್ಯಗಳ ಮೇಲೆ ಮರಳಿನ ರಾಶಿರಾಶಿ ಮುಚ್ಚಿರುವಂತೆ ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳ ಮೇಲೂ ಇಂದು ಅನಾದರಣೆಯ, ಅಲಕ್ಷ್ಯದ 'ಮರಳು' ಹೇರಿಕೊಂಡಿದೆ. ಅದನ್ನು ಪೂರ್ಣವಾಗಿ ತೋಡಿದಾಗ ಮಾತ್ರ ಮರಳಿನ ಕೆಳಗಿರುವ ಬೆಲೆ ಬಾಳುವ ಹರಳು ಗೋಚರವಾದೀತು! ಆಗ ಫಳಫಳ ಹೊಳೆಯುವ ಇಲ್ಲಿನ ಹರಳುಗಳನ್ನು ನೋಡಿ ತಣಿಯಲು ಭಾರತಾದ್ಯಂತ ಮಾತ್ರವಲ್ಲದೆ ವಿಶ್ವದ ಮೂಲೆ ಮೂಲೆಗಳಿಂದ ಲಕ್ಷೋಪ ಲಕ್ಷ ಸಂಖ್ಯೆಯಲ್ಲಿ ಪ್ರವಾಸಿಗರು ಧಾವಿಸಿ ಬಂದಾರು! ಆಗ-ಇಂದು ಬಡವಾಗಿರುವ ನಮ್ಮ ಕೋಶವು ತುಂಬದೇ ಇದ್ದೀತೆ?

ಹೆಣ್ಣೊ, ಗಂಡೋ?—ಹೆತ್ತಮೇಲೆ ಹೆಸರಿಡಬಹುದು.
ಹುಟ್ಟಬಾರದು ಹೇಳಿಕೊಟ್ಟ ಮಾತು,
ಧೃತಿಗೆಟ್ಟ ಮಾತು. ಬೆಳೆಯಲಿ ತನ್ನತನದ ಮಗು;
ಕಣ್ಣು ಮಿಂಚಲಿ ತಾಯ ಹಾಲ ಕುಡಿದು.

— ಕೆ. ಎಸ್. ನರಸಿಂಹಸ್ವಾಮಿ

ಸಂಸ್ಕೃತ ಸುಭಾಷಿತಗಳು

ಅನು : ಸಿ. ಪಿ. ಕೆ.

೧

ತಂಪ್ಪುಮಾನಸವುಳ್ಳ ನರನಿಗೆ ಸಕಲ ಸಂಪತ್ತಿರುವುದು :
ಕಾಲೊಳೆಕ್ಕಡ ಧರಿಸಿದವನಿಗೆ ಭೂಮಿಯೇ ಚರ್ಮಾವೃತ !

೨

ಸ್ನೇಹ ಘಟಿಸದೆ ಇರುವುದೊಳ್ಳಿತು,
ಘಟಿಸಿ ಒಡೆದರೆ ಕಷ್ಟವು ;
ಕಣ್ಣುಗಳು ಹೋದವನ ದುಃಖವು
ಹುಟ್ಟುಕುರುಡನಿಗಿಲ್ಲವು.

೩

ಯಾರು ಹರಯದಿ ಶಾಂತನಾತನೆ ಶಾಂತನೆಂದಾನರಿವೆನು ;
ಮುಂದೆ ಧಾತುಗಳೆಲ್ಲ ಕುಗ್ಗಲು ಶಮವದಾರಿಗೆ ಹುಟ್ಟದು ?

೪

ಶಕ್ತನಾದರು ಕೂಡ ಶಕ್ತಿಯನು ಪ್ರಕಟಿಸಿದ
ಮನುಜನು ತಿರಸ್ಕಾರವನು ಪಡೆವನು :
ಮರದೊಳಡಗಿದ ಬೆಂಕಿಯನು ದಾಟುವುದು ಸುಲಭ ;
ಉರಿವ ಬೆಂಕಿಯನೆಂತು ದಾಟಬಹುದು ?

೫

ಯಾರು ಚೆಲುವನೊ ಅವನ ಹೆಂಡತಿ ಕುರೂಪಿ ;
ಯಾರು ಚೆಲುವೆಯೊ ಅವಳ ಪತಿ ರೂಪಹೀನ ;
ಇಬ್ಬರೊಳು ಚೆಲುವಿದ್ದರಲ್ಲಿ ದಾರಿದ್ರ್ಯ–
ವಿಧಿಯೆಸಗುತಿಹ ಲೀಲೆಗಳು ಬಹು ವಿಚಿತ್ರ !

೬

ಪುರುಷಕಾರವೇ ಕ್ಷೇತ್ರ, ದೈವವೇ ಬೀಜ ;
ಕ್ಷೇತ್ರ–ಬೀಜ ಸಮಾಗಮದಿ ಬೆಳೆಯು ಹುಲುಸು.

೭

ಕುಲದ ಹಿತಕಾಗಿ ವ್ಯಕ್ತಿಯನು ಬಿಡಬೇಕು ;
ಗ್ರಾಮಹಿತಕಾಗಿ ಆ ಕುಲವ ಬಿಡಬೇಕು ;
ಜನಪದದ ಹಿತಕಾಗಿ ಗ್ರಾಮ ಬಿಡಬೇಕು ;
ಆತ್ಮ ಹಿತಕಾಗಿ ಪೃಥ್ವಿಯನು ಬಿಡಬೇಕು.

೮

ವಾಸಿಪುವು ಅರಮನೆಯ ಒಳಭಾಗದಲಿ ಬೆಕ್ಕು, ನಾಯಿ ;
ಆನೆಯನು ಹೊರಗೆ ಕಟ್ಟಿದ ಮಾತ್ರಕದು ಹಗುರವಹುದೆ ?

೯

ವಿದ್ಯೆಯಿಲ್ಲದ ಜೀವಿತವು ವ್ಯರ್ಥ, ನಾಯ ಬಾಲದೊಲು :
ಮುಚ್ಚದದು ಗುಹ್ಯವನು, ಓಡಿಸದು ಕಾಡುನೊಣಗಳನು !

೧೦

ಬಿದ್ದರೂ ಮೇಲೇಳುವನು ಆರ್ಯನಾದವನು ಚೆಂಡಿನಂತೆ ;
ಆದರೆ ಅನಾರ್ಯನೋ ಬಿದ್ದೆ ಬೀಳುವನು ಮಣ್ಣುಂಡೆಯಂತೆ.

೧೧

ಪ್ರೀತಿ ಸಖ್ಯನ ಮಾಡಲಾಗದು ದುಷ್ಟ ಜನಗಳ ಸಂಗಡ :
ಕೆಂಡ ಬಿಸಿಯಾಗಿರಲು ಸುಡುವುದು, ಆರಿದರೆ ಮಸಿ ಬಳಿವುದು !

೧೨

ಕಾಲಿಂದ ತುಳಿದಾಗ ದೂಳು ಮೇಲಕ್ಕೆದ್ದು ತಲೆಯ ನಡುರುವುದು ;
ಅವಮಾನವಾದರೂ ತೆಪ್ಪಗಿಹ ನರನಿಗಿಂತಾ ದೂಳೇ ಮೇಲು.

೧೩

ಸತತ ಅರ್ಥಾಗಮನ, ರೋಗವಿಲ್ಲದವಸ್ಥೆ,
ಪ್ರಿಯಳಾದ, ಪ್ರಿಯವನಾಡುವ ಹೆಂಡತಿ,
ಮೀರಿ ನಡೆಯದ ಪುತ್ರ, ಉಪಯುಕ್ತವಹ ವಿದ್ಯೆ–
ಈ ಆರು ಜೀವಲೋಕದ ಸುಖಗಳು.

೧೪

ಅನುಕೂಲೆಯಾದವಳು, ವಿಮಲಾಂಗಿಯಾದವಳು,
ಕುಲಜೆಯಾದವಳಂತು ಕುಶಲೆಯಾದವಳು,
ಶೀಲಸಂಪನ್ನೆ–ಈ ಐದು ಲತ್ವಗಳ ಸತಿ
ಪುರುಷ ಪುಣ್ಯೋದಯದಿ ದೊರಕಬಹುದು.



ದರಿಯಾದೌಲತ್ ಅರಮನೆ– ಶ್ರೀರಂಗಪಟ್ಟಣ

